ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 16 ಭಾನುವಾರ 2023

ಸಂಪುಟ: 44 | ಸಂಚಿಕೆ: 1

ಪುಟಗಳು: 12+XII+VIII ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಎಲೆಕ್ಟ್ರಿಕ್ ಅಂಗಡಿಗೆ ಬಂದು) ಒಂದು ಕಪ್ಪು ಬಲ್ಬ್ ಕೊಡಿ.
ಅಂಗಡಿಯಾತ : ಕಪ್ಪು ಬಲ್ಬಾ! ಅದ್ಯಾಕೆ ಸಾರ್?
ಗಿರಾಕಿ : ಮಧ್ಯಾಹ್ನದ ಹೊತ್ತಲ್ಲಿ ಕತ್ತಲು ಮಾಡಿಕೊಂಡು ಮಲಗೋ ಮಜಾನೆ ಬೇರೆ ಗುರು!

ಮೈಸೂರು ಮಿತ್ರ

ಭಾನುವಾರ, 16 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅಪವಾದಗಳಿಗೆ ಅತ್ಯುತ್ತಮ ಉತ್ತರ ಮೌನ –ಬೆನ್ ಜಾನ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾಯಿ ಇದ್ದರೆ ತವರೆಚ್ಚು, ತಂದೆ ಇದ್ದರೆ ಬಳಗ ಹೆಚ್ಚು

ಸಂಪಾದಕೀಯ

ಧನ್ಯೋಸ್ಮಿ

ಪ್ರಿಯ ಓದುಗರೆ,

ನಿಮ್ಮ 'ಮೈಸೂರು ಮಿತ್ರ' ಇಂದಿಗೆ 43 ವಸಂತಗಳನ್ನು ಪೂರೈಸಿ 44ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾನೆ. ಈ ಸುಸಂದರ್ಭದಲ್ಲಿ ನಿಮಗೆ ನಮ್ಮ ಕೃತಜ್ಞತೆಗಳು.

ನಿಮ್ಮ ತುಂಬು ಪ್ರೋತ್ಸಾಹದಿಂದಲೇ ಜಿಲ್ಲಾ ಪತ್ರಿಕೆಯಾಗಿದ್ದ 'ಮೈಸೂರು ಮಿತ್ರ' ಈಗ ದಕ್ಷಿಣ ಕರ್ನಾಟಕದಲ್ಲಿ ಜನಪ್ರಿಯ ಹಾಗೂ ಅತ್ಯಧಿಕ ಪ್ರಸರಣವುಳ್ಳ ಪ್ರಾದೇಶಿಕ ಪತ್ರಿಕೆಯಾಗಿ ರಾರಾಜಿಸುತ್ತಿದೆ. ಮುಂದೆಯೂ ನಿಮ್ಮಿಂದ ಇದೇ ರೀತಿಯ ಸಹಕಾರ, ಅಭಿಮಾನವನ್ನು ಬಯಸುತ್ತೇವೆ.

'ಮೈಸೂರು ಮಿತ್ರ' 44ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸಂದರ್ಭದಲ್ಲಿ 32 ಪುಟಗಳ ವರ್ಣರಂಜಿತ ವಿಶೇಷಾಂಕವನ್ನು ಹೊರತರುತ್ತಿದ್ದೇವೆ. ಈ ಸಂದರ್ಭದಲ್ಲಿ ನಮಗೆ ಶುಭ ಕೋರಿ ಜಾಹೀರಾತು ನೀಡಿ ಸಹಕರಿಸಿದ ಜಾಹೀರಾತುದಾರರಿಗೂ ಕೃತಜ್ಞತೆಗಳು.

ಒಂದು ಸಂಸ್ಥೆಯ 44 ವರ್ಷಗಳ ಸೇವಾ–ಸಾಧನೆಯ ಹಾದಿ ಸುಲಭವೇನು ಅಲ್ಲ. ಸಾಕಷ್ಟು ಅಡೆತಡೆಗಳಿದ್ದೇ ಇರುತ್ತವೆ. ಅವುಗಳನ್ನು ದಾಟಿ ದಿಟ್ಟತನದಿಂದ ಮುಂದೆ ಸಾಗಿದರಷ್ಟೇ ಸಾಧನೆ ಶಿಖರ ಏರಲು ಸಾಧ್ಯ. ಹಾಗಾಗಿಯೇ ಈ ನಮ್ಮ 44ರ ಶಿಬಿರಾರೋಹಣಕ್ಕೆ ಸಾಥ್ ನೀಡಿದ ಎಲ್ಲರನ್ನೂ ಮತ್ತೊಮ್ಮೆ ಸ್ಮರಿಸಿಕೊಳ್ಳುತ್ತೇವೆ.

ಕಳೆದ ನಾಲ್ಕು ವರ್ಷಗಳ ಹಿಂದೆ ವಿಶ್ವದಲ್ಲಿ ಆವರಿಸಿದ ಕೊರೊನಾ ಸೋಂಕು ಎಲ್ಲಾ ಕ್ಷೇತ್ರದಲ್ಲೂ ಅಲ್ಲೋಲಕಲ್ಲೋಲವನ್ನೇ ಉಂಟುಮಾಡಿತ್ತು. ಮೂರು ವರ್ಷವಂತೂ ಜನರು ಜೀವ ಉಳಿಸಿಕೊಳ್ಳುವುದಕ್ಕಾಗಿಯೇ ಹೋರಾಡಬೇಕಾದಂತಹ ಪರಿಸ್ಥಿತಿ ಉಂಟಾಗಿತ್ತು. ಸದ್ಯ ಒಂದು ವರ್ಷದಿಂದೀಚೆಗೆ ಪರಿಸ್ಥಿತಿ ಸುಧಾರಿಸಿದೆ. ಆದರೆ ಆತಂಕ ಪೂರ್ಣ ದೂರವಾಗಿಲ್ಲ.

'ಮಿತ್ರ'ನ ಈ ವಾರ್ಷಿಕೋತ್ಸವ ವೇಳೆ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ನಡೆಯುತ್ತಿದೆ. ನಾವಂತೂ ಪ್ರತಿ ಪ್ರಜಾಪ್ರಭುತ್ವ ಉತ್ಸವದಲ್ಲಿ ಮುಂಚೂಣಿಯಲ್ಲಿದ್ದೇವೆ. ಇದರ ಹೊಣೆ ಹೊತ್ತಂತಹ ಆಡಳಿತ ಯಂತ್ರ, ಚುನಾವಣಾ ಆಯೋಗಕ್ಕೆ ಒತ್ತಾಸೆಯಾಗುವುದರ ಜೊತೆಗೆ ಮತದಾರರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ.


ನಾವು ಕಾನೂನಿನ ಆಳ್ವಿಕೆಗೆ ಒಳಪಟ್ಟಿರುವುದರಿಂದ, ಇಂತಹ ಕಾನೂನು ರೂಪಿಸುವವರನ್ನು ಚುನಾವಣೆಗಳಲ್ಲಿ ಆಯ್ಕೆ ಮಾಡುವಾಗ ಮತದಾರ ಅತ್ಯಂತ ಜವಾಬ್ದಾರಿಯಿಂದ ವರ್ತಿಸಬೇಕು. ಯಾವ ಅಪೇಕ್ಷೆ–ಆಮಿಷಕ್ಕೆ ಒಳಗಾಗದೇ ಪ್ರಾಮಾಣಿಕವಾಗಿ ತನ್ನ ಹಕ್ಕು ಚಲಾಯಿಸುವ ಮೂಲಕ ತನ್ನ ಆಳುವ ಉತ್ತಮ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಿದೆ. ಆ ಮೂಲಕ ಒಂದು ಉತ್ತಮ ಹಾಗೂ ಜನಪರ ಸರ್ಕಾರ ಅಸ್ತಿತ್ವಕ್ಕೆ ಬರಬೇಕೆಂಬುದು ಪ್ರತಿಯೊಬ್ಬರ ಮಹದಾಸೆಯಾಗಿದೆ.


ಕೊನೆಯದಾಗಿ 'ಮೈಸೂರು ಮಿತ್ರ'ನ ಈ ಸುದೀರ್ಘ ಪಯಣದಲ್ಲಿ ಜೊತೆಯಲ್ಲಿ ಸಾಗಿಬಂದಂತಹ ಎಲ್ಲರಿಗೂ ಅತೀ ಮುಖ್ಯವಾಗಿ ಪ್ರತಿನಿತ್ಯ ಬಿಸಿಲು, ಮಳೆ, ಚಳಿ ಅನ್ನದೇ ಪತ್ರಿಕೆಯನ್ನು ಓದುಗರ ಮನೆ ಮನೆಗೆ ತಲುಪಿಸುತ್ತಿರುವ ಪತ್ರಿಕಾ ವಿತರಕರಿಗೂ ನಮ್ಮ ಅನಂತಾನಂತ ವಂದನೆಗಳು. –ಸಂಪಾದಕ

'ಮೈಸೂರು ಮಿತ್ರ' ಅಭಿಮಾನಿ ದೇವರ ಒಂದು ನೆನಪು, ಆಶಯ, ಆಶೀರ್ವಾದ


ಕಳೆದ ಫೆಬ್ರವರಿ ತಿಂಗಳಲ್ಲಿ ನನ್ನ ಮನೆಯ ವಿಳಾಸಕ್ಕೆ ನನಗೊಂದು ಪೋಸ್ಟ್ ಕಾರ್ಡ್ ಬಂತು. ಅದರಲ್ಲಿ ಬರೆದವರ ಹೆಸರಾಗಲಿ, ಬರೆದ ತಾರೀಖಾಗಲಿ ಇರಲಿಲ್ಲ. ಆಶ್ಚರ್ಯವೆಂದರೆ ಅವರು ಅವರನ್ನು 'ಮೈಸೂರು ಮಿತ್ರ'ನ ಅಭಿಮಾನಿ ದೇವರು ಎಂದು ಕರೆದುಕೊಂಡಿರುವುದು. "ಮಿತ್ರನಿಲ್ಲದೇ ನಮ್ಮ ದಿನಚರಿಯೇ ಇಲ್ಲ" ಎನ್ನುತ್ತಾರೆ. ಒಂದು ಸಣ್ಣ ಪ್ರಾದೇಶಿಕ ಪತ್ರಿಕೆಗೆ ಇದಕ್ಕಿಂತ ಹೆಚ್ಚಿನ ಮೆಚ್ಚಿಗೆ ಬೇಕೆ? ಎಂದೆನಿಸಿತು. ಪತ್ರವನ್ನು ಓದಿದ ನಾನು ಒಂದು ಕ್ಷಣ ಭಾವುಕನಾದೆ.


ಈ ಓದುಗ ನಮ್ಮ ಸಹೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್'ನಲ್ಲಿ ವಿಕ್ರಂ ಮುತ್ತಣ್ಣ ಬರೆಯುವ ಅಂಕಣವನ್ನು ಕೂಡ ಆಗಾಗ್ಗೆ ಓದುತ್ತಾರಂತೆ. ಇವರ ಈ ಚುಟುಕು ಪತ್ರವನ್ನು ಓದಿದಾಗ ಅದೇಕೋ ಕವಿ ಶಿವರುದ್ರಪ್ಪನವರ ಜನಪ್ರಿಯ ಕವಿತೆ 'ಎದೆ ತುಂಬಿ ಹಾಡಿದೆನು' ನೆನಪು ಬಂತು. ಈ ಪತ್ರವನ್ನು ಓದಿ ಎದೆ ತುಂಬಿಸಿಕೊಂಡೆ ಎಂದು ಹೇಳಲೆ? ಈ ಪೋಸ್ಟ್ ಕಾರ್ಡ್‌ನಲ್ಲಿರುವ ಬರವಣಿಗೆ ಬಿಡಿ ಬಿಡಿಯಾಗಿ ಓದಲು ಸುಲಭವಾಗಿರುವುದರಿಂದ ನಾನು ಅದನ್ನು ಇಲ್ಲಿ ಯಥಾವತ್ತಾಗಿ ಅದರ ಎರಡು ಮುಖಗಳನ್ನು ಪ್ರಕಟಿಸುತ್ತಿದ್ದೀನಿ.






–ಕೆ.ಬಿ. ಗಣಪತಿ
ಮೈಸೂರು ಸಂಸ್ಥಾಪಕ–ಸಂಪಾದಕ
ತಾ. 14.4.2023 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್'





'ಮೈಸೂರು ಮಿತ್ರ'ನ ಇದೇ ಅಭಿಮಾನಿಯ ಮತ್ತೊಂದು ಪತ್ರವನ್ನೂ ಇಲ್ಲಿ ಪ್ರಕಟಿಸುತ್ತಿದ್ದೇವೆ



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಕರ್ನಾಟಕದಲ್ಲಿ ಈಗ ಪ್ರಜಾಪ್ರಭುತ್ವದ ಸಂಭ್ರಮ, ಬನ್ನಿ ನಾವೆಲ್ಲರೂ ಪಾಲ್ಗೊಳ್ಳೋಣ...

ಕಾಂಗ್ರೆಸ್



ಸಿದ್ದರಾಮಯ್ಯ



ಡಿ.ಕೆ.ಶಿವಕುಮಾರ್

ಬಿಜೆಪಿ




ಬಿ.ಎಸ್.ಯಡಿಯೂರಪ್ಪ



ಬಸವರಾಜ ಬೊಮ್ಮಾಯಿ

ಜೆಡಿಎಸ್



ಹೆಚ್.ಡಿ.ದೇವೇಗೌಡ



ಹೆಚ್.ಡಿ.ಕುಮಾರಸ್ವಾಮಿ

> **"ಈಗ ಹಳೆಯ ನೆನಪುಗಳನ್ನು ಬಿಚ್ಚಿಟ್ಟರೆ ತಪ್ಪಾಗಲಾರದು ಎಂದು ಭಾವಿಸುತ್ತೇನೆ. ಕಳೆದ 2018ರ ಚುನಾವಣಾ ಫಲಿತಾಂಶ ಯಾವೊಂದು ಪಕ್ಷಕ್ಕೂ ಪೂರ್ಣ ಬಹುಮತ ಸಿಕ್ಕದೆ, ಫಲಿತಾಂಶ ಅತಂತ್ರ ಪರಿಸ್ಥಿತಿಗೆ ಕಾರಣವಾಗಿತ್ತು. ಈಗ ಬಂದಿರುವ ಚುನಾವಣೆಯಲ್ಲೂ ಅದೇ ಪರಿಸ್ಥಿತಿಯಾದರೆ ಮುಂದೇನು?**

ದೇಶದ ಚುನಾವಣಾ ಆಯೋಗ (Election Commission of India), ರಾಜ್ಯದ 2023ರ ವಿಧಾನಸಭಾ ಚುನಾವಣೆಯ ಪಂಚಾಂಗವನ್ನು ಪ್ರಕಟಿಸಿದೆ. ಇದು ಐದು ವರ್ಷಕ್ಕೊಮ್ಮೆ 'ಆಚರಿಸುವ' ನಮ್ಮ ಪ್ರಜಾಪ್ರಭುತ್ವ (Democratic) ದೇಶದ ಹಬ್ಬವೆಂದೇ ಹೇಳಬಹುದು. ಇನ್ನೇನು ಕಾನೂನಿನನ್ವಯ ಚುನಾವಣಾ ನೀತಿ ಸಂಹಿತೆ (Code of Conduct) ಜಾರಿಗೆ ಬಂದೇ ಬಿಟ್ಟಿದೆ. ಅದು ಏನು ಹೇಳುತ್ತೆ? ಒಂದು ರೀತಿಯಲ್ಲಿ ಅದು 12ನೇ ಶತಮಾನದ ಚಿಂತಕ, ಸಮಾಜ ಸುಧಾರಕ ಜಗಜ್ಯೋತಿ ಬಸವಣ್ಣನವರು ಸರಳವಾದ ನೈತಿಕತೆಯ ಜೀವನ ನಡೆಸುವ ಬಗ್ಗೆ ಹೇಳಿದ ವಿಷಯವನ್ನೇ ಹೇಳುತ್ತದೆ ಎನ್ನಬಹುದು. **'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲ ಸಂಗಮನೊಲಿಸುವ ಪರಿ..."**

ಚುನಾವಣಾ ನೀತಿ ಸಂಹಿತೆ ಎಂದರೆ ಚುನಾವಣಾ ಪ್ರಕ್ರಿಯೆ ನಡೆಯುವ ದಿನಗಳಲ್ಲಿ ರಾಜಕೀಯ ಪಕ್ಷಗಳು, ರಾಜಕೀಯ ನಾಯಕರು, ರಾಜಕೀಯ ಕಾರ್ಯಕರ್ತರು, ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಭಾಗವಹಿಸುವವರು ಹಾಗೂ ಮತದಾರ ದೇವರುಗಳು ಯಾವ ರೀತಿಯಲ್ಲಿ ನೈತಿಕತೆಯಿಂದ, ಸದಾಚಾರದಿಂದ, ದೇಶದ ಕಾನೂನಿಗನುಗುಣವಾಗಿ ನಡೆದುಕೊಳ್ಳಬೇಕು ಎಂಬ ನಿಯಮ, ನಿಬಂಧನೆಗಳು. ಈ ನಿಯಮಗಳನ್ನು ಮುರಿದರೆ ಬೀಳುತ್ತದೆ ಕಾನೂನಿನ ಬರೆ, ಎಚ್ಚರ. ಚುನಾವಣಾ ಪಂಚಾಂಗ ಪ್ರಕಟಿಸಿದ ಕ್ಷಣದಿಂದಲೇ ಈ ನೀತಿ ಸಂಹಿತೆ ಜಾರಿಗೆ ಬಂದಿರುತ್ತದೆ. ಉದಾಹರಣೆಗೆ, ನ್ಯಾಯಾಲಯ ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿಯವರನ್ನು ಅಪರಾಧಿ ಎಂದು ಪರಿಗಣಿಸಿ ಅವರಿಗೆ ಶಿಕ್ಷೆಯನ್ನು ವಿಧಿಸಿದ ತಕ್ಷಣವೇ ಅವರು ಲೋಕಸಭಾ ಸದಸ್ಯತ್ವವನ್ನು ಕಳೆದುಕೊಂಡ ಹಾಗೆ!

ಅದೇನೇ ಇರಲಿ, ನಮಗೆ ಗೊತ್ತಿರುವ ಹಾಗೆ ಈ ಚುನಾವಣೆ ನಮ್ಮನ್ನು ಮುಂದಿನ ಐದು ವರ್ಷಗಳವರೆಗೆ ಆಳುವವರು ಯಾರು ಎನ್ನುವುದನ್ನು ನಿರ್ಣಯಿಸುತ್ತದೆ. ಅದಾಗಲೇ ರಾಜ್ಯದಲ್ಲಿ ಮೂರು ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಚುನಾವಣಾ ಕಾರ್ಯಪ್ರವೃತ್ತರಾಗಿ ವರ್ಷದ ಮೇಲಾಗಿದೆ. ಇಲ್ಲಿ ಒಂದು ಅನುಭವದ ಮಾತು: **ಹೇಳಿ–ಕೇಳಿ ಐದು ವರ್ಷಗಳಲ್ಲಿ ಕೇವಲ ಒಂದೇ ಒಂದು ದಿನ, ಅಂದರೆ ಮತ ಮಾರಾಟವೋ ಅಥವಾ ದಾನವೋ ಮಾಡುವ ದಿನವಾದರೂ ನಾವು ಈ ದೇಶದ ಪ್ರಭುಗಳಾಗಬಾರದೇ?** ಅರ್ಥವಾಯಿತೆ ಮತದಾರ ಪ್ರಭುಗಳೇ? ವ್ಯಾಪಾರದಲ್ಲಿ (Marketing) ಒಂದು ಅಪವಾದವಿರುತ್ತೆ. ಅದೇನೆಂದರೆ 'ಮಾರಿ ಪರಾರಿಯಾಗು' (Sell and Run). ಅಂದರೆ ಉತ್ತಮ ಅಥವಾ ಕಳಪೆ ಮಾಲನ್ನು ಮಾರಿಯಾದ ಮೇಲೆ ಅದಕ್ಕೆ ಬೇಕಾಗುವ ನಂತರದ ಸೇವೆ–ನೆರವನ್ನು ಕೊಡುತ್ತೇವೆ ಎಂದು ವಾಗ್ದಾನ ಹಾಗೂ ವಾರಂಟೀ ಕಾರ್ಡ್ ಕೊಟ್ಟರೂ, ಗ್ರಾಹಕನನ್ನು ಆ ವ್ಯಾಪಾರಿ ಮರೆತೇ ಬಿಡುವುದು. ಅದೇ ರೀತಿ, ಈ ರಾಜಕಾರಣಿಗಳು ಮತದಾರ ಪ್ರಭುವಿನ ಮತ ಸಿಕ್ಕಿ ಶಾಸಕನಾದ ತಕ್ಷಣ ಮತದಾರನನ್ನು ಮರೆತು, 'ನಾನು, ನನಗೆ, ನಮ್ಮವರಿಗೆ' ಎಂಬ ಧೋರಣೆಯಿಂದ ಒಬ್ಬ ಆಧುನಿಕ ರಾಜಕುಮಾರನಂತೆ ಐಷಾರಾಮಿ ಜೀವನ ನಡೆಸುವುದು. **ವಿಪರ್ಯಾಸವೆಂದರೆ ಮತದಾರ ಪ್ರಭುಗಳು ಈ ಶಾಸಕ ಮಾಡಿದ ಪಾಪಗಳನ್ನೆಲ್ಲಾ ಮರೆತು, ಪುನಃ ಅದೇ ಶಾಸಕನಿಗೆ ಮತ ಹಾಕಿ ಗೆಲ್ಲಿಸುವುದು!**

ಈಗ ಹಳೆಯ ನೆನಪುಗಳನ್ನು ಬಿಚ್ಚಿಟ್ಟರೆ ತಪ್ಪಾಗಲಾರದು ಎಂದು ಭಾವಿಸುತ್ತೇನೆ. ಕಳೆದ 2018ರ ಚುನಾವಣಾ ಫಲಿತಾಂಶ ಯಾವೊಂದು ಪಕ್ಷಕ್ಕೂ ಪೂರ್ಣ ಬಹುಮತ ಸಿಕ್ಕದೆ, ಫಲಿತಾಂಶ ಅತಂತ್ರ ಪರಿಸ್ಥಿತಿಗೆ ಕಾರಣವಾಗಿತ್ತು. ಈಗ ಬಂದಿರುವ ಚುನಾವಣೆಯಲ್ಲೂ ಅದೇ ಪರಿಸ್ಥಿತಿಯಾದರೆ ಮುಂದೇನು? ಹಿಂದೆ 2018ರಲ್ಲಿ ಏನಾಯ್ತು ಎಂಬುದು ನಮಗೆಲ್ಲರಿಗೂ ಗೊತ್ತೇ ಇದೆ. ಆದರೂ ಅದನ್ನಿಲ್ಲಿ ಸೂಕ್ಷ್ಮವಾಗಿ ಪುನರಾವರ್ತನೆ ಮಾಡುವೆ. **ಏಕೆಂದರೆ ಅದು ನಮಗೆ ನಮ್ಮ ಇಂದಿನ ರಾಜಕಾರಣಿಗಳ ಮನಸ್ಥಿತಿ, ಅಧಿಕಾರದ ಮದ ಹಾಗೂ ಧನದಾಹವನ್ನು ತಿಳಿಸಿಕೊಡುತ್ತದೆ.**

ಕಳೆದ ಐದು ವರ್ಷಗಳಲ್ಲಿ (2018–2023) ನಾವು ಎರಡು ಸರಕಾರವನ್ನು ಹಾಗೂ ಮೂವರು ಮುಖ್ಯಮಂತ್ರಿ ಮಹಾಶಯರನ್ನು ನೋಡಿದ್ದೇವೆ. ಅವರ ಆಡಳಿತವನ್ನು ಅನುಭವಿಸಿದ್ದೇವೆ. ಅದಕ್ಕೂ ಮೊದಲು (2013–2018) ಒಬ್ಬನೇ ಮುಖ್ಯಮಂತ್ರಿ, ಒಂದೇ ಪಕ್ಷದ ಸರಕಾರವಿದ್ದರೂ ರಾಜ್ಯದಲ್ಲಿ ಅಶಾಂತಿ ತಾಂಡವವಾಡುತ್ತಿತ್ತು. ಪಕ್ಷಪಾತ, ಭೇದಭಾವದಿಂದ ಮೇಲ್ವರ್ಗ ಹಾಗೂ ಮಧ್ಯಮ ವರ್ಗದ ಜನ ಬೇಸತ್ತು ಹೋಗಿದ್ದರು. ಕಾನೂನು ವ್ಯವಸ್ಥೆ ಎಲ್ಲರಿಗೂ ಒಂದೇ ಸರಿಸಮಾನವಾಗಿರಲಿಲ್ಲ. ಕೆಲವು ಆಯ್ದ ಜನಾಂಗದವರನ್ನು ಓಲೈಸುವ ಮಾದರಿ ಇತ್ತು. ಆದುದರಿಂದ ಮತ ಶಕ್ತಿ ಹೊಂದಿರುವ ಈ ಪ್ರಜಾಪ್ರಭುತ್ವದ ಪ್ರಭುಗಳು ಈ ಬಾರಿ 'ಯಾರು ಹಿತವರು ನಮಗೆ, ಈ ಮೂರು ಪಕ್ಷಗಳಲ್ಲಿ' ಎಂದು ಆಳವಾಗಿ ಯೋಚಿಸಬೇಕಾಗಿದೆ.

ಕಳೆದ 2018ರಲ್ಲಿ ನಮಗೆ ಸಿಕ್ಕಿದ್ದು ಕಾಂಗ್ರೆಸ್, ಜೆಡಿಎಸ್ ಸಮ್ಮಿಶ್ರ ಸರಕಾರ, ಸಹಜವಾಗಿ ಸಮ್ಮಿಶ್ರ ಮಂತ್ರಿ ಮಂಡಳ. ಜೆಡಿಎಸ್‌ನಲ್ಲಿದ್ದದ್ದು 37 ಶಾಸಕರಾದರೆ, ಕಾಂಗ್ರೆಸ್ಸಿನಲ್ಲಿ 80 ಶಾಸಕರಿದ್ದರು, (ಬಿಜೆಪಿಗೆ 100). ಆದರೆ ಅದೇನೋ ಸೋನಿಯಾ ಗಾಂಧಿಯವರೇ ಖುದ್ದಾಗಿ ಜೆಡಿಎಸ್‌ನ ಸರ್ವೋಚ್ಚ ನಾಯಕ ಹೆಚ್.ಡಿ.ದೇವೇಗೌಡರೊಂದಿಗೆ ವ್ಯವಹಾರ ನಾಡಿ, ಜೆಡಿಎಸ್ ಪಕ್ಷದವರೇ ಮುಖ್ಯಮಂತ್ರಿ ಆಗಬೇಕು ಎಂದು ಫರ್ಮಾನು ಮಾಡಿದ್ದಕ್ಕೋಸ್ಕರ ಒಪ್ಪಿ ಹೆಚ್.ಡಿ. ಕುಮಾರಸ್ವಾಮಿಯವರನ್ನು ಮುಖ್ಯಮಂತ್ರಿ ಮಾಡಿದರಂತೆ. ಆದರೆ ಕರ್ನಾಟಕದ ಕಾಂಗ್ರೆಸ್ ಶಾಸಕರಿಗೂ, ಅವರ ಮುಖ್ಯಮಂತ್ರಿ ಆಕಾಂಕ್ಷಿಯಾದ ಸಿದ್ದರಾಮಯ್ಯನವರಿಗೂ ಇದು ಬಿಲ್‌ಕುಲ್ ಒಪ್ಪಿಗೆಯಾಗಲಿಲ್ಲ. ಸಹಜವಾಗಿ ಸೋನಿಯಾ ಗಾಂಧಿಯವರ ಮುಂದೆ ತಮ್ಮ ವಿರೋಧವನ್ನು ಹೇಳಿಕೊಳ್ಳುವ ಧೈರ್ಯ ಯಾವೊಬ್ಬ ಕಾಂಗ್ರೆಸ್ಸಿಗನಿಗೂ ಇರಲಿಲ್ಲ ಎಂದು ಕಾಣುತ್ತದೆ. ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿಯೇ ಬಿಟ್ಟರು. ತಾಜ್ ವೆಸ್ಟೆಂಡ್ ಪಂಚತಾರಾ ಹೋಟೆಲ್‌ನಲ್ಲಿ ತಮ್ಮ ಅನಧಿಕೃತ ಕಚೇರಿ ತೆರೆದೇ ಬಿಟ್ಟರು. ಕಾಂಗ್ರೆಸ್ಸಿಗರು ತೆಪ್ಪಗಾದರು.

ಹೌದಾ? ಇಲ್ಲ ಬಿಡಿ. ಒಳಗೊಳಗೆ ತಂತ್ರ ರೂಪಿಸಿ ಕಾಂಗ್ರೆಸ್ಸಿನವರೇ ಬಿಜೆಪಿಗೆ ಅವರ ರಾಜಕೀಯ ಭವಿಷ್ಯದ ಬ್ರಹ್ಮಾಸ್ತ್ರವಾದ 'ಆಪರೇಷನ್ ಕಮಲ' ವನ್ನು ಪ್ರಯೋಗಿಸಲು ಅನುವು ಮಾಡಿ ಕೊಟ್ಟರು ಎಂದು ಸಾರ್ವಜನಿಕವಾಗಿ ಜನರು ಮಾತನಾಡುತ್ತಿದ್ದರು. ದಿನ ಉರುಳಿದಂತೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಕೆಲವು ಶಾಸಕರು, ತಮ್ಮದೇ ಕಾರಣ ಕೊಟ್ಟು, ಬಿಜೆಪಿ ಕಡೆಗೆ ದೌಡಾಯಿಸಿದರು. ಈ ಬಂಡು ಕೋರ ಶಾಸಕರು ನಂತರ ಉಪ ಚುನಾವಣೆಯಲ್ಲಿ ಗೆದ್ದೂ (!?) ಬಂದರು. ಕಾಂಗ್ರೆಸ್ಸಿನ ಅಧಿನಾಯಕಿ ಸೋನಿಯಾ ಹಾಗೂ ಜೆಡಿಎಸ್‌ನ ಅಧಿನಾಯಕ ದೇವೇಗೌಡರ ಸಮ್ಮಿಶ್ರ ಸರಕಾರ ಕುಸಿದು ಬಿದ್ದು ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಿತು. ಆ ರಾಜಕೀಯ ಪರಿವರ್ತನ ದಿನವೆಂದರೆ ಜುಲೈ 2019. ಮತ್ತೊಮ್ಮೆ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾದರು. ಅವರ ಜೀವನದಲ್ಲಿ ಅದು ನಾಲ್ಕನೇ ಬಾರಿ ಇರಬೇಕು, (ಅದು ಕಡೇ ಬಾರಿಯೂ ಹೌದು ಎನ್ನಬಹುದು). ಏನೂ ಅಧಿಕಾರವಿಲ್ಲದೆ ವ್ಯಾಕುಲತೆಗೊಳಗಾಗಿದ್ದಂತೆ ಇದ್ದ ಸಿದ್ದರಾಮಯ್ಯನವರ ಮುಖ ಅರಳಿತು. ಅವರು ವಿರೋಧ ಪಕ್ಷದ ನಾಯಕರಾಗಿ ಸರಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಹಾಗೂ ಸಂವಿಧಾನಿಕ ಅಧಿಕಾರವನ್ನು ಪಡೆದುಕೊಂಡರು.

ಆದರೆ ಬಿಜೆಪಿಯ ಈ 'ಡಬಲ್ ಇಂಜಿನ್'– ಅರ್ಥಾತ್ ಕೇಂದ್ರದಲ್ಲೂ ಬಿಜೆಪಿ, ರಾಜ್ಯದಲ್ಲೂ ಬಿಜೆಪಿ–ಸರಕಾರ ಪ್ರಧಾನಮಂತ್ರಿ ಮೋದಿಯವರ ಆಶಯಕ್ಕೆ ಸರಿಯಾಗಿ ಸ್ಪಂದಿಸಲಿಲ್ಲ. ಕೇಂದ್ರದಲ್ಲಿ ಬಿಜೆಪಿ ಸರಕಾರ ಭ್ರಷ್ಟಾಚಾರರಹಿತವಾಗಿಯೂ, ಎಲ್ಲಾ ಜನ ಸಮುದಾಯದೊಂದಿಗೆ ಸಾರ್ವಜನಿಕ ಅಭ್ಯುದಯ (ಸಬ್ ಕಾ ಸಾಥ್, ಸಬ್ ಕಾ ವಿಕಾಸ್) ಎಂಬ ಧ್ಯೇಯದೊಂದಿಗೆ ಕೆಲಸ ಮಾಡಿದರೆ, ಇಲ್ಲಿ 'ನಾನು, ನನಗಾಗಿ, ನನ್ನ ಬಂಧುಗಳಿಗಾಗಿ' ಎನ್ನುವ ಧೋರಣೆಯಿಂದ ಭ್ರಷ್ಟಾಚಾರ ವ್ಯಾಪಕವಾಗಿ ಆಡಳಿತದ ಎಲ್ಲಾ ಖಾತೆಗಳಲ್ಲೂ ಹರಡಿ ಸರಕಾರಕ್ಕೆ ಮುಖಭಂಗವಾಯಿತು. ಅಧಿಕಾರ–ಅಂತಸ್ತು, ಸ್ಥಾನಮಾನಗಳಿಗಾಗಿ ಶಾಸಕರಲ್ಲೂ ಆಂತರಿಕ ಕಲಹ ಏರ್ಪಟ್ಟು ಅದು ರಾಜ್ಯ–ರಾಷ್ಟ್ರಕ್ಕೆಲ್ಲಾ ಹರಡಿತು.

ಇದಕ್ಕೇನು ಪರಿಹಾರ? ಇನ್ನೆರಡು ವರ್ಷದಲ್ಲಿ 2023ರ ವಿಧಾನಸಭಾ ಚುನಾವಣೆ ಎದುರಿಸಬೇಕು ಎಂಬ ಮುಂದಾಲೋಚನೆಯಿಂದ, ಬಿಜೆಪಿ ಹೈಕಮಾಂಡ್ ಒಂದು ನಿರ್ಧಾರಕ್ಕೆ ಬಂತು. ಬಿ.ಎಸ್.ಯಡಿಯೂರಪ್ಪನವರಿಗೆ ಹೇಗೂ ಪ್ರಾಯ 75 ಆಗಿದೆ. (ಬಿಜೆಪಿ ಸ್ವಯಂಪ್ರೇರಣೆಯಿಂದ ಒಂದು ಕಟ್ಟಳೆಯನ್ನು ಮಾಡಿಕೊಂಡಿದೆ. ಅದೇನೆಂದರೆ 75 ವರ್ಷ ವಯಸ್ಸಾದ ಮೇಲೆ ಹಿರಿಯ ನಾಯಕರಿಗೆ ಸರಕಾರದಲ್ಲಿ ಅಧಿಕಾರ ಕೊಡುವುದಿಲ್ಲ, ಅವರನ್ನು ಪಕ್ಷದ ಮಾರ್ಗದರ್ಶಕರಾಗಿ (Mentor) ಗೌರವಿಸುವುದು). ಹೇಗೂ, ಎರಡು ವರ್ಷ, ಜುಲೈ 26, 2019ರಿಂದ ಜುಲೈ 28, 2021, ಮುಖ್ಯಮಂತ್ರಿಯೂ ಆಗಿದ್ದಾರೆ. ಇನ್ನು ಸಾಕು. ಬಿಜೆಪಿಗೆ ಅವರು ಬೇಕು ಎನ್ನಿಸಲಿಲ್ಲ. ಆದರೆ ಮಗ ಬಿ.ವೈ. ವಿಜಯೇಂದ್ರನ ಬಗ್ಗೆ ಒಳಒಪ್ಪಂದ ಆಗಿರಬಹುದು. ಅದೇನೇ ಇರಲಿ, ಬಿಜೆಪಿ ಹೈಕಮಾಂಡ್ ಯಡಿಯೂರಪ್ಪನವರ ಆಪ್ತ ಬಳಗದ ಬಸವರಾಜ ಬೊಮ್ಮಾಯಿ ಅವರನ್ನು ರಾಜ್ಯದ ಮುಖ್ಯಮಂತ್ರಿಯಾಗಿ ಜುಲೈ 2021 ರಂದು ಮಾಡಿಯೇ ಬಿಟ್ಟರು.

ಭ್ರಷ್ಟಾಚಾರ ಹಾಗೂ ಕೆಲವು ಆಡಳಿತ ನಿರ್ಣಯಗಳನ್ನು ನೋಡಿದಾಗ ಹಳೇ ಚಾಳಿ ಮುಂದುವರಿದಂತೆ ಕಂಡು ಬರುತ್ತಿತ್ತು. ಕೇವಲ ಅಲ್ಪಸಂಖ್ಯಾತ ಜನಾಂಗದವರ ವಿಷಯವನ್ನು ಮುಂದಿಟ್ಟು ಚುನಾವಣೆ ಎದುರಿಸುವುದು ಎಂದರೆ ಅರ್ಥವಿಲ್ಲ.

ಈ ವಿಷಯದಲ್ಲಿ ಕಾಂಗ್ರೆಸ್ (2013–2018) ಆಡಳಿತವೂ ಕೂಡ ಮೆಚ್ಚುವಂತದ್ದಾಗಿರಲಿಲ್ಲ. ಹೇಳಿ–ಕೇಳಿ ಕಾಂಗ್ರೆಸ್ ಪಕ್ಷ ಸರಕಾರ ನಡೆಸಿದ ರೀತಿ–ರಿವಾಜು, ದರ್ಪ, ಮುಖ್ಯಮಂತ್ರಿಯ ಅಹಂ, ಸರ್ಕಾರದಲ್ಲಿ ಭ್ರಷ್ಟಾಚಾರ ಇನ್ನೂ ನೆನಪಿನಲ್ಲಿದೆ. ಅಲ್ಪಸಂಖ್ಯಾತರನ್ನು ಓಲೈಸಲು ಏನೆಲ್ಲ ಭೇದ–ಭಾವ ಕಾಂಗ್ರೆಸ್ ಸರಕಾರ ಮಾಡಿಲ್ಲ? ಬಹು ಸಂಖ್ಯಾತ ಜನರ ಭಾವನೆಗೆ ಅತೀವ ನೋವನ್ನುಂಟು ಮಾಡಿದ ನಿರ್ಣಯಗಳು, ಘಟನೆಗಳು, ಹಿಂಸಾಚಾರ, ದಂಗೆ ನಡೆದಿಲ್ಲವೇ? ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಎಂಬಂತಿದೆ ಈ ರಾಜಕೀಯ ಪಕ್ಷಗಳು ನಡೆಸುವ ಆಡಳಿತದ ರೀತಿ–ರಿವಾಜು.

ಮೊದಲಿನ 2018ರ ಸಮ್ಮಿಶ್ರ ಸರಕಾರವನ್ನು ರಾಜಕೀಯ ನಾಯಕರು ಅಸ್ಥಿರಗೊಳಿಸಿದ ಕಾರಣ ಬಿದ್ದು ಹೋಯ್ತು. ಹಾಗೆ ನೋಡಿದರೆ ಕರ್ನಾಟಕಕ್ಕೆ ಈ ರೀತಿಯ ಅಸ್ಥಿರತೆಯ ಸರಕಾರಗಳು, ಪಕ್ಷ ಒಂದೇ ಆದರೂ ಕೂಡ, ಬಂದಿರುವುದನ್ನು ಪದೇ ಪದೇ ನೋಡುತ್ತಾ ಬಂದಿದ್ದೇವೆ. ರಾಜ್ಯ ರಾಜಕಾರಣದಲ್ಲಿ ಅಗ್ರಸ್ಥಾನದಲ್ಲಿದ್ದ ಕಾಂಗ್ರೆಸ್‌ಗೆ ದುಸ್ಥಿತಿ ಹಾಗೂ ಅಸ್ಥಿರತೆಯು ಬರಲಾರಂಭಿಸಿದ್ದು ಕಾಂಗ್ರೆಸ್ ಪ್ರಧಾನಮಂತ್ರಿ ರಾಜೀವ್ ಗಾಂಧಿ ಕಾಂಗ್ರೆಸ್‌ನ ಲಿಂಗಾಯತ ಸಮುದಾಯದ ದಕ್ಷ ಸುಭದ್ರ ಆಡಳಿತಗಾರ, ಪ್ರಾಮಾಣಿಕ ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿ ಪದವಿಯಿಂದ ಇಳಿಸಿ ಬಿಟ್ಟ ದಿನದಿಂದ (1990). **ಇದರ ಪರಿಣಾಮವಾಗಿ ಕಾಂಗ್ರೆಸ್ ಪಕ್ಷ ಬಹುಸಂಖ್ಯಾತ ಲಿಂಗಾಯತರ ಮತ ಬ್ಯಾಂಕ್‌ನ್ನು ಕಳೆದುಕೊಂಡಿತು. ಆ ಅವಕಾಶವನ್ನು ಬಿಜೆಪಿಯವರು, ಪೂರ್ಣ ಪ್ರಮಾಣದಲ್ಲಿ ಪಡೆದುಕೊಂಡರು.**

ಇದರ ಮಧ್ಯೆ ಜೆಡಿಎಸ್ ಪಕ್ಷ ಚುನಾವಣೆಯಲ್ಲಿ ಮೂರನೇ ಸ್ಥಾನದಲ್ಲಿದ್ದು, ಅದರ ನಾಯಕ ಹೆಚ್.ಡಿ. ಕುಮಾರಸ್ವಾಮಿ ಸರಕಾರ ರಚನೆಯಲ್ಲಿ 'ಕಿಂಗ್–ಮೇಕರ್' ಪಾತ್ರಧಾರಿಯಾದರು. ಎರಡು ಸಂದರ್ಭದಲ್ಲಿ ತಾವೇ ಮುಖ್ಯಮಂತ್ರಿ ಆದದ್ದೂ ಉಂಟು.

ಆದುದರಿಂದ, ಇತ್ತೀಚಿನ ಎಲ್ಲಾ ರೀತಿಯ ರಾಜಕೀಯ ವಿದ್ಯಮಾನಗಳನ್ನು ಪರಿಶೀಲಿಸಿದರೆ, ಮುಂದೆ ಈ ಚುನಾವಣೆಯಲ್ಲಿ ಏನಾಗಬಹುದು ಎಂದು ಊಹಿಸಬಹುದು. ಈ ಬಾರಿ ಬಹುಶಃ ನಮಗೆ ಸ್ಥಿರವಾದ ಸರಕಾರ ಸಿಗಲಿಕ್ಕಿಲ್ಲ. ನಮಗೆ ಪುನಃ ಚಿಂದಿಯಾದ (Fragmented) ಅನಿಶ್ಚಿತ ಚುನಾವಣಾ ಫಲಿತಾಂಶವೇ ಲಭಿಸಬಹುದು. **ಅದೃಷ್ಟವಶಾತ್, ನಮ್ಮ ಎಲ್ಲಾ ರಾಜಕೀಯ ಪಕ್ಷಗಳಿಗೆ ಈ ರೀತಿಯ ಫಲಿತಾಂಶಕ್ಕೆ ಯಾವ ರೀತಿ ಹೊಂದಿಕೊಳ್ಳಬಹುದು ಎಂಬುದರ ಬಗ್ಗೆ ಅನುಭವವಿದೆ!**

ಈಗ ಕರ್ನಾಟಕಕ್ಕೆ ಬೇಕಾಗಿರುವುದು ಒಂದು ಉತ್ತಮವಾದ ಆಡಳಿತವನ್ನು ಕೊಡಬಲ್ಲ ಸುಸ್ಥಿರ ಸರಕಾರ. ಕಾನೂನು ಸುವ್ಯವಸ್ಥೆಯನ್ನು ತ್ವರಿತವಾಗಿ ಕೊಡಬಲ್ಲ ಸರಕಾರ. ಭ್ರಷ್ಟಾಚಾರರಹಿತ ಸರಕಾರ. ಅದಕ್ಕೆ ಬೇಕು ಸ್ಥಿರತೆ (Stability) ಇರುವ ಸರಕಾರ. ಒಬ್ಬ ಪ್ರಾಮಾಣಿಕ, ದಕ್ಷ, ದೂರದೃಷ್ಟಿ ಇರುವಂತಹ (Visionary) ಮುಖ್ಯಮಂತ್ರಿ. ಅಂಥವರು ಇಂದು ಇದ್ದಾರಾ?

ನಾವು ನೆನಪಿಸಿಕೊಳ್ಳಬೇಕು. ನಮ್ಮ ಕರ್ನಾಟಕ ಆರ್ಥಿಕವಾಗಿ ದೇಶದ ಬಹುಮುಖ್ಯವಾದ ರಾಜ್ಯ. ಮಹಾರಾಷ್ಟ್ರ, ತಮಿಳುನಾಡು ಹಾಗೂ ಉತ್ತರಪ್ರದೇಶಗಳ ನಂತರ ನಮ್ಮ ಕರ್ನಾಟಕವು ನಮ್ಮ ದೇಶಕ್ಕೆ 8 ಪರ್ಸೆಂಟ್‌ಗಿಂತ ಹೆಚ್ಚು ಜಿಡಿಪಿ (GDP) ಕೊಡುತ್ತಿದೆ. ಕರ್ನಾಟಕವು ದೇಶದ ಪ್ರಸಿದ್ಧ ಹಾಗೂ ಅತೀ ಮುಖ್ಯವಾದ ಉದ್ಯಮಗಳಿಗೆ ಖ್ಯಾತಿ ಪಡೆದಿದೆ. ಆದುದರಿಂದ ರಾಜ್ಯದಲ್ಲಿ ಒಂದು ಸ್ಥಿರವಾದ (Stable) ಸರಕಾರ ಮುಂದಿನ ಐದು ವರ್ಷಕ್ಕೆ ಬೇಕೇ ಬೇಕು.

ಕೊನೆಯ ಮಾತು: ಈ ಚುನಾವಣೆಯಲ್ಲಿ ಈ ಮೂರು ಮುಖ್ಯ ಪಕ್ಷಗಳಲ್ಲಿ ಪ್ರತಿಯೊಂದು ಪಕ್ಷದಲ್ಲೂ ಇಬ್ಬರು ಅಧಿನಾಯಕರಿದ್ದಾರೆ. ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್, ಬಿಜೆಪಿಯಲ್ಲಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಮತ್ತೆ ಜೆಡಿಎಸ್‌ನಲ್ಲಿ ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ. ಇವರ ನಾಯಕತ್ವದಲ್ಲಿ ಈ ಚುನಾವಣೆಯನ್ನು ಇವರು ಪ್ರಾಮಾಣಿಕವಾಗಿ ಶಾಂತಿಯಿಂದ ನೈತಿಕತೆಯಿಂದ, ಕಾನೂನುಬದ್ಧವಾಗಿಯೂ ನಡೆಸಿಕೊಡಬೇಕು. ಅವರೆಲ್ಲರೂ ಆದರ್ಶ ಜನ ಸೇವಕರಂತೆ ಚುನಾವಣೆಯಲ್ಲಿ ಭಾಗವಹಿಸಿ ಜನರಿಗೆ ನೆಮ್ಮದಿಯನ್ನು ಕೊಡಬೇಕು.

ಅಮೇರಿಕದ ಅಧ್ಯಕ್ಷ ಜೆರಾಲ್ಡ್ ಫೋರ್ಡ್ ಅವರು 1974ರಲ್ಲಿ ಪತ್ರಿಕಾಗೋಷ್ಠಿ ಕರೆಯುತ್ತಾರೆ. ಆಗ ಒಬ್ಬ ಪತ್ರಕರ್ತ ಒಂದು ಪ್ರಶ್ನೆ ಕೇಳುತ್ತಾನೆ: **ಅಧ್ಯಕ್ಷರೆ, ನೀವು ನಿಮ್ಮ ಆಡಳಿತಾಧಿಕಾರಿಗಳಿಂದ ಯಾವ ಗುಣಮಟ್ಟದ ಸೇವೆಯನ್ನು ಅಪೇಕ್ಷಿಸುವಿರಿ?**

ಅದಕ್ಕೆ ಥಟ್ಟನೆ ಅಧ್ಯಕ್ಷರು ಉತ್ತರಿಸುತ್ತಾರೆ: **ನಾನು ಮಾಡುವ ಗುಣಮಟ್ಟದ ಕೆಲಸವೇ ಅವರಿಗೆ ಆದರ್ಶ.**

ಈ ಚುನಾವಣೆಯಲ್ಲಿ ಹಾಗೂ ಚುನಾವಣೆಯ ನಂತರ ನಾವು ನಮ್ಮ ನಾಯಕರಿಂದ ಇಂತಹ ಆದರ್ಶದ ಸೇವೆಯನ್ನು ನಿರೀಕ್ಷಿಸಬಹುದೆ?

ಜೈಹಿಂದ್, ಜೈ ಕರ್ನಾಟಕ

voice
@starofmysore.com

* * *



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 16 ಭಾನುವಾರ 2023

ಸಂಪುಟ: 44 | ಸಂಚಿಕೆ: 1 | ಪುಟಗಳು: 12+XII +VIII

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871



ಒಳಪುಟಗಳಲ್ಲಿ

- ಚುನಾವಣೆ–ಎಸ್.ಎಲ್.ಭೈರಪ್ಪ
- ಮೈಸೂರು ರಾಜಪರಂಪರೆ ಸಂರಕ್ಷಣೆ
- ಮಹಿಳಾ ಸ್ನೇಹಿ ಸಖಿ ಪಿಂಕ್ ಮತಗಟ್ಟೆ
- ಮತ'ದಾನ' ಮಾಡದೆ, 'ಮಾರಾಟಕ್ಕಿಟ್ಟ' ಮತದಾರ
- 'ಪ್ರಜಾಪ್ರಭುತ್ವವೋ.. ಪುರುಷ ಪ್ರಭುತ್ವವೋ...'
- ಪ್ರಥಮ ಚುನಾವಣೆಯ ಸವಿನೆನಪು
- ಚಿತ್ರಕಲೆ ಚತುರ ಡಾ.ವಿಠ್ಠಲರೆಡ್ಡಿ ಚುಳಕಿ

ಕೆಬಿಜೆಯವರ
ಭೂಮಂತ್ರ.. ಭೂಮಂತ್ರ...



ಕರ್ನಾಟಕದಲ್ಲಿ ಈಗ ಪ್ರಜಾಪ್ರಭುತ್ವದ ಸಂಭ್ರಮ, ಬನ್ನಿ ನಾವೆಲ್ಲರೂ ಪಾಲ್ಗೊಳ್ಳೋಣ...

■ ಪುಟ–4



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಕಾಂಗ್ರೆಸ್ಸಿಗರೆ, ಭಾರತೀಯ ಮತದಾರರ ಮನಗೆಲ್ಲಿ; ಪಾಶ್ಚಿಮಾತ್ಯ ದೇಶಗಳದ್ದಲ್ಲ

■ ಪುಟ–7



ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್, ಜೆಡಿಎಸ್‌ನ ಕೆ.ಮಹದೇವ್, ಜಿ.ಡಿ.ಹರೀಶ್‌ಗೌಡ ಸೇರಿ

17 ಮಂದಿ ನಾಮಪತ್ರ ಸಲ್ಲಿಕೆ

ಮೈಸೂರು ಜಿಲ್ಲೆಯಲ್ಲಿ ಇದುವರೆಗೆ ನಾಮಪತ್ರ ಸಲ್ಲಿಸಿದವರ ಸಂಖ್ಯೆ 33ಕ್ಕೆ ಏರಿಕೆ

ಮೈಸೂರು, ಏ.15(ಆರ್‌ಕೆ)–ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧೆ ಬಯಸಿ ಎರಡನೇ ದಿನವಾದ ಶನಿವಾರ ಪಿರಿಯಾಪಟ್ಟಣದಿಂದ ಜೆಡಿಎಸ್ ಶಾಸಕ ಕೆ.ಮಹದೇವ್, ಹುಣಸೂರಿನಿಂದ ಕಾಂಗ್ರೆಸ್ ಶಾಸಕ ಹೆಚ್.ಪಿ.ಮಂಜುನಾಥ್, ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಸೇರಿದಂತೆ 17 ಮಂದಿ ನಾಮಪತ್ರ ಸಲ್ಲಿಸಿದರು.

ಪಿರಿಯಾಪಟ್ಟಣ ತಾಲೂಕು ಕಚೇರಿಯಲ್ಲಿ ಜಾತ್ಯಾತೀತ ಜನತಾ ದಳದ ಅಭ್ಯರ್ಥಿಯಾಗಿ ಚುನಾವಣಾಧಿಕಾರಿಗಳಿಗೆ ಕೆ.ಮಹದೇವ್ ಅವರು ತಮ್ಮ ಉಮೇದುವಾರಿಕೆ ಸಲ್ಲಿಸಿದರೆ, ಹುಣಸೂರು ತಾಲೂಕು ಕಚೇರಿಯಲ್ಲಿ ಕಾಂಗ್ರೆಸ್‌ನಿಂದ ಹೆಚ್.ಪಿ.ಮಂಜುನಾಥ್, ಜೆಡಿಎಸ್‌ನಿಂದ ಜಿ.ಡಿ.ಹರೀಶ್‌ಗೌಡ ಅವರು (2 ನಾಮಪತ್ರ) ಶನಿವಾರ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ. ಉಳಿದಂತೆ ● 7ನೇ ಪುಟಕ್ಕೆ





ಹುಣಸೂರಲ್ಲಿ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ, ಕಾಂಗ್ರೆಸ್ ಅಭ್ಯರ್ಥಿ ಹೆಚ್.ಪಿ.ಮಂಜುನಾಥ್, ಪಿರಿಯಾಪಟ್ಟಣದಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವು ಶನಿವಾರ ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್ 43 ಅಭ್ಯರ್ಥಿಗಳ ಮೂರನೇ ಪಟ್ಟಿ ಪ್ರಕಟ

ಚಾಮರಾಜ ಹರೀಶ್‌ಗೌಡ, ಕೆಆರ್ ಸೋಮಶೇಖರ್ ಸ್ಪರ್ಧೆ


ಸಿದ್ದರಾಮಯ್ಯರ ಎರಡನೇ ಕ್ಷೇತ್ರ ಎಂದೇ ಪರಿಗಣಿತ ಕೋಲಾರದಲ್ಲಿ ಕೊತ್ತೂರು ಮಂಜುನಾಥ್ ಕಣಕ್ಕೆ

ಬೆಂಗಳೂರು, ಏ.15(ಕೆಎಂಶಿ)– ರಾಜ್ಯ ವಿಧಾನ ಸಭಾ ಚುನಾವಣೆಗೆ ಕಾಂಗ್ರೆಸ್ 43 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿ, 3ನೇ ಪಟ್ಟಿ ಬಿಡುಗಡೆ ಮಾಡಿದ್ದು, ಮೈಸೂರಿನ ಚಾಮರಾಜ ಕ್ಷೇತ್ರದಿಂದ ಕೆ.ಹರೀಶ್‌ಗೌಡ, ಕೃಷ್ಣರಾಜದಿಂದ ಎಂ.ಕೆ.ಸೋಮಶೇಖರ್ ಅವರಿಗೆ ಟಿಕೆಟ್ ನೀಡಲಾಗಿದೆ.

ವರುಣಾ ವಿಧಾನಸಭಾ ಕ್ಷೇತ್ರದ ಜೊತೆಗೆ ಕೋಲಾರ ಕ್ಷೇತ್ರದಿಂದಲೂ ಸ್ಪರ್ಧೆ ಬಯಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ. ಕೋಲಾರದಿಂದ ಮಾಜಿ ಶಾಸಕ ಕೊತ್ತೂರು ಮಂಜುನಾಥ್‌ಗೆ ಟಿಕೆಟ್ ನೀಡಲಾಗಿದೆ. ಬಿಜೆಪಿ ಹಾಗೂ ಜೆಡಿಎಸ್‌ಗೆ ರಾಜೀನಾಮೆ ನೀಡಿ, ಇತ್ತೀಚೆಗಷ್ಟೇ ಕಾಂಗ್ರೆಸ್ ಸೇರಿದ್ದ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿಗೆ ಅಥಣಿ ಕ್ಷೇತ್ರದಿಂದಲೂ, ಶಿವಲಿಂಗೇಗೌಡ ಅವರಿಗೆ ಅರಸೀಕೆರೆಯಿಂದ ಕಣಕ್ಕಿಳಿಯಲು ಪಕ್ಷ ಅವಕಾಶ ಮಾಡಿಕೊಟ್ಟಿದೆ. ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಮೈತ್ರಿ ● 7ನೇ ಪುಟಕ್ಕೆ




ಕೆ.ಹರೀಶ್‌ಗೌಡ



ಎಂ.ಕೆ.ಸೋಮಶೇಖರ್



ಕೆ.ಎಂ.ಉದಯ್



ಕೆ.ಎಂ.ಶಿವಲಿಂಗೇಗೌಡ

ಪಕ್ಷಕ್ಕೂ ನನಗೂ ತಾಯಿ ಮಗನ ಸಂಬಂಧ: ಎಂದಿಗೂ ಬಿಜೆಪಿ ಬಿಡಲ್ಲ

ಶಾಸಕ ರಾಮದಾಸ್ ಸ್ಪಷ್ಟನೆ



ಮೈಸೂರು, ಏ.15– ಪಕ್ಷ ಹಾಗೂ ನನ್ನ ನಡುವೆ ತಾಯಿ ಮಗನ ಸಂಬಂಧವಿದ್ದು, ಯಾವುದೇ ಕಾರಣಕ್ಕೂ ಬಿಜೆಪಿ ಬಿಡುವುದಿಲ್ಲ ಎಂದು ಘೋಷಿಸಿದ ಶಾಸಕ ಎಸ್.ಎ.ರಾಮದಾಸ್, ತಮ್ಮ ಕ್ಷೇತ್ರದ ಜನರ ಅಭಿವೃದ್ಧಿಗಾಗಿ ಕೆಲವು ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಕೊನೆಯ ಬಾರಿಗೆ ನನಗೆ ಮತ್ತೊಮ್ಮೆ ಟಿಕೆಟ್ ನೀಡಿ ಎಂದು ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿರುವುದಾಗಿ ತಿಳಿಸಿದರು.

2 ಪಟ್ಟಿಗಳಲ್ಲೂ ಅವರ ಹೆಸರು ಪ್ರಕಟವಾಗದ ಹಿನ್ನಲೆಯಲ್ಲಿ ಕಾರ್ಯಕರ್ತರ ಒತ್ತಡದ ಮೇರೆಗೆ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ಇಂದು ಮೈಸೂರಿಗೆ ರಾಮದಾಸ್ ಹಿಂತಿರುಗಿದಾಗ ಅವರ ವಿದ್ಯಾರಣ್ಯಪುರಂ ಕಚೇರಿ ಎದುರು ಜಮಾಯಿಸಿದ್ದ ಸಾವಿರಾರು ಕಾರ್ಯಕರ್ತರು ಭಾವನಾತ್ಮಕವಾಗಿ ರಾಮದಾಸ್ ಅವರನ್ನು ನಿರ್ಧಾರ ತಿಳಿಸುವಂತೆ ಒತ್ತಾಯಿಸಿದರು. ಕೆ.ಆರ್.ಕ್ಷೇತ್ರದಲ್ಲಿ ರಾಮದಾಸ್ ಟಿಕೆಟ್ ವಂಚಿತರಾಗಿದ್ದಾರೆ ಎಂದು ಹರಡಿದ್ದ ವದಂತಿ ಹಿನ್ನಲೆಯಲ್ಲಿ ಕಾರ್ಯಕರ್ತರ ಆಕ್ರೋಶ ಮುಗಿಲು ಮುಟ್ಟಿತ್ತು. ಹಲವರು ಪಕ್ಷೇತರವಾಗಿ ಸ್ಪರ್ಧಿಸುವಂತೆ ಒತ್ತಾಯಿಸಿದರೆ, ಮತ್ತಷ್ಟು ಮಂದಿ ಕಣ್ಣೀರಿಟ್ಟರು.

ಇದರಿಂದ ಭಾವುಕರಾದ ರಾಮದಾಸ್ ಮಾತನಾಡಿ, ನನಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ನೀವು ದೊಡ್ಡವರು ಎಂದು ಭಾವಿಸುವವನು ನಾನು. ಪಕ್ಷ ನನ್ನ ತಾಯಿ ಇದ್ದಂತೆ. 30 ವರ್ಷ ಕಾಲ ಒಂದು ಕುಟುಂಬದಂತೆ ಇದ್ದಂತಹ ಪಕ್ಷ ಅಥವಾ ವ್ಯವಸ್ಥೆಯಿಂದ ಹೊರ ಬರುವುದು ಅಷ್ಟು ಸುಲಭದ ಮಾತಲ್ಲ. ನಿಮ್ಮ ಒತ್ತಡಕ್ಕೆ ಮಣಿದು ದೆಹಲಿಗೆ ಹೋಗಿ ಬಂದಿದ್ದೇನೆ. ಕ್ಷೇತ್ರ ಮನೆ ಇಲ್ಲದವರಿಗೆ 10 ಸಾವಿರ ಮನೆ ಕೊಡಬೇಕಾಗಿತ್ತು. ಈಗ 5 ಸಾವಿರ ಮನೆ ನಿರ್ಮಾಣವಾಗುತ್ತಿದೆ. ಇನ್ನುಳಿದವರಿಗೂ ಕೊಡಬೇಕು. ಇಲ್ಲಿನ ಯುವಕ–ಯುವತಿಯರನ್ನು ದೊಡ್ಡ ವ್ಯಕ್ತಿಗಳಾಗಿ ಮಾಡುವ ನಿಟ್ಟಿನಲ್ಲಿ ನನ್ನದೇ ಆದ ಯೋಜನೆ ರೂಪಿಸಿಕೊಂಡಿದ್ದೇನೆ. ಇದು ನನ್ನ ಕೊನೆಯ ಚುನಾವಣೆ. ಮತ್ತೆ ಯಾವುದೇ ಚುನಾವಣೆಯಲ್ಲೂ ಸ್ಪರ್ಧಿಸುವುದಿಲ್ಲ. ನನಗೆ ಮತ್ತೊಂದು ಅವಕಾಶ ಕೊಡಿ ಎಂದು ವರಿಷ್ಠರಲ್ಲಿ ಮನವಿ ಮಾಡಿದ್ದೇನೆ ಎಂದರು.

ವರಿಷ್ಠರಿಗೆ ಕಾಲಾವಕಾಶ ಕೊಡಬೇಕು: ಆಗಲೂ ಕೂಡ ಪಕ್ಷೇತರವಾಗಿ ಸ್ಪರ್ಧಿಸುವಂತೆ ಕೂಗು ಎದ್ದಾಗ, ವರಿಷ್ಠರಲ್ಲಿ ಮನವಿ ಮಾಡಿದ ನಂತರ ಅವರಿಗೆ ನಾವು ಕಾಲಾವಕಾಶ ಕೊಡಬೇಕು. ಇನ್ನೂ ಕೆ.ಆರ್. ಕ್ಷೇತ್ರದ ಅಭ್ಯರ್ಥಿ ತೀರ್ಮಾನವಾಗಿಲ್ಲ. 2000ನೇ ವರ್ಷದಿಂದ ನನಗೆ ಸತತವಾಗಿ ಇದೇ ರೀತಿಯ ಪರೀಕ್ಷೆಗಳು ಬಂದೊದಗುತ್ತಿದೆ. ಯಡಿಯೂರಪ್ಪ ಮತ್ತು ಬೊಮ್ಮಾಯಿ ಅವರ ಅವಧಿಯಲ್ಲಿ ಮೂರು ಬಾರಿ ಮಂತ್ರಿ ಸ್ಥಾನ ತಪ್ಪಿತು. ಸತತವಾಗಿ ಅಪಮಾನಗಳಾದರೂ, ತಾಯಿ ಸಮಾನವಾದ ಪಕ್ಷವನ್ನು ಬಿಡದೇ ನಾನು ಸಹಿಸಿಕೊಂಡು ಬಂದಿದ್ದೇನೆ 30 ವರ್ಷದಿಂದ ನಾವು ಕಟ್ಟಿದ ಪಕ್ಷವಿದು. ವರಿಷ್ಠರು ಏನು ತೀರ್ಮಾನ ಕೈಗೊಳ್ಳುತ್ತಾರೋ, ಸಹನೆಯಿಂದ ಕಾಯೋಣ ಎಂದರು.

ಅದೇ ವೇಳೆ ಕಳೆದ 30 ವರ್ಷದಿಂದ ನನ್ನನ್ನು ಬೆಳೆಸಿಕೊಂಡು ಬಂದಿರುವವರು ನೀವು. ನಾನು ಯಾವುದೇ ಕಾರಣಕ್ಕೂ ಕಾರ್ಯಕರ್ತರನ್ನು ಬಿಡುವವನಲ್ಲ. ಏನೇ ಆಗಲಿ ನೀವು ಹೇಳಿದಂತೆ ಕೇಳುತ್ತೇನೆ. ನಾನು ನನ್ನ ಬೆಳವಣಿಗೆಗೆ ಕಾರಣರಾದ ಎಲ್ಲರೊಂದಿಗೂ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕಿದೆ. ಕಾರ್ಯಕರ್ತರು ಸಹನೆಯಿಂದ ಇರಬೇಕು ಎಂದು ಮನವಿ ಮಾಡಿದರು.

ದೊಡ್ಡ ಪಕ್ಷದ ನಾಯಕರು ಕರೆದರು: ಬೇರೆ ದೊಡ್ಡ ಪಕ್ಷದ ನಾಯಕರು ನನಗೆ ಕರೆ ಮಾಡಿ ಪಕ್ಷಕ್ಕೆ ಬರುವಂತೆ ಆಹ್ವಾನಿಸಿದರು. ಬೇರೆ ಪಕ್ಷದಲ್ಲಿದ್ದರೂ ನನ್ನ ಮೇಲೆ ಗೌರವ ಹಾಗೂ ವಿಶ್ವಾಸವಿಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞತೆ ಸಲ್ಲಿಸಿದ ನಾನು, 'ನಿಮ್ಮ ಕೆಲಸವನ್ನು ನೀವು ಮುಂದುವರೆಸಿ. ನಾನು ಯಾವುದೇ ಕಾರಣಕ್ಕೂ ಬಿಜೆಪಿ ಬಿಟ್ಟು ಬರುವುದಿಲ್ಲ' ಎಂದು ತಿಳಿಸಿರುವುದಾಗಿ ರಾಮದಾಸ್ ಇದೇ ವೇಳೆ ಹೇಳಿದರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಕಾಂಗ್ರೆಸ್ಸಿಗರೆ, ಭಾರತೀಯ ಮತದಾರರ ಮನಗೆಲ್ಲಿ; ಪಾಶ್ಚಿಮಾತ್ಯ ದೇಶಗಳದ್ದಲ್ಲ

ಕ್ಯೂಬಾ ದೇಶದ ಸಾಹಿತ್ಯ ದಿಗ್ಗಜ ಜೋಸ್ ಮಾರ್ಟಿಯವರ ಪ್ರಸಿದ್ಧವಾದ ನಾಣ್ಣುಡಿಯೊಂದು ಅಲ್ಲಿನ ಜನರಲ್ಲಿ ಜನಪ್ರಿಯವಾಗಿದೆ. "ನಮ್ಮ ವೈನ್ (ಮದಿರೆ) ಕಹಿಯಾಗಿರಬಹುದು, ಆದರೆ ಅದು ನಮ್ಮ ವೈನೇ". ಇದರರ್ಥ, ನಮ್ಮ ಪ್ರಜಾಪ್ರಭುತ್ವ ಪರಿಪೂರ್ಣವಲ್ಲದಿರಬಹುದು, ಆದರೆ ಅದು ನಮ್ಮದೆ.

ಅದೇ ರೀತಿ, ಭಾರತದ ಪ್ರಜಾಪ್ರಭುತ್ವದಲ್ಲಿ ದೋಷಗಳಿವೆ, ಆದರೆ ಅದು ನಮ್ಮ ಸಮಸ್ಯೆ. ಎಲ್ಲಾ ಪ್ರಜಾಪ್ರಭುತ್ವಗಳಲ್ಲೂ ದೋಷಗಳಿವೆ. ಅತ್ಯಂತ ಪ್ರಬುದ್ಧವಾದ ಪ್ರಜಾಪ್ರಭುತ್ವಗಳೆನಿಸಿರುವ ಪಾಶ್ಚಿಮಾತ್ಯದಲ್ಲಿ ಸಹ ಲೋಪ ದೋಷಗಳಿವೆ. ಭಾರತೀಯರಾದ ನಾವು ನಮ್ಮ ನಮ್ಮಲೇ ಅವುಗಳನ್ನು ಬಗೆಹರಿಸಿಕೊಳ್ಳುತ್ತೇವೆ. ನಾವು ಅನೇಕ ಬಾರಿ, ನಮ್ಮ ಅತ್ಯುತ್ತಮ ಸಾಧನ –ಸಾರ್ವತ್ರಿಕ ವಯಸ್ಕ ಮತದಾನ– ನಮ್ಮ ಮತದ ಮೂಲಕ ಪರಿಹಾರ ಕಂಡುಕೊಂಡಿದ್ದೇವೆ.

ಭಾರತೀಯರಾದ ನಾವು ಕಳೆದ 75 ವರ್ಷಗಳಿಂದ ನಮ್ಮ ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಪೋಷಿಸಿ, ಕಾಪಾಡಿಕೊಂಡು ಬಂದಿದ್ದೇವೆ. ಅದನ್ನು ಕಾಪಾಡಿಕೊಳ್ಳಲು ನಮಗೆ ಪರದೇಶಗಳ ಸಹಕಾರದ ಅಗತ್ಯವಿಲ್ಲ. ದುರದೃಷ್ಟವಶಾತ್, ಕಾಂಗ್ರೆಸ್‌ಗೆ ಹೀಗೆ ಅನ್ನಿಸುವುದಿಲ್ಲ!

ತಾನು ಅಧಿಕಾರದಲ್ಲಿ ಇದ್ದಾಗ ಮಾತ್ರ ಭಾರತ ಒಂದು "ಯಶಸ್ವಿ" ಪ್ರಜಾಪ್ರಭುತ್ವ ಹಾಗೂ "ವಾಸ್ತವ" ಪ್ರಜಾಪ್ರಭುತ್ವ ದೇಶವೆಂದು ಯೋಚಿಸುತ್ತದೆಯೇ? ಏಕೆಂದರೆ ಕಾಂಗ್ರೆಸ್ಸೇತರ ಬೇರೆ ಯಾವುದೇ ಪಕ್ಷ ಅಧಿಕಾರಕ್ಕೆ ಬಂದ ತಕ್ಷಣ, "ಭಾರತದಲ್ಲಿ ಪ್ರಜಾಪ್ರಭುತ್ವ ಸತ್ತಿದೆ" ಎಂದು ಇಡೀ ವಿಶ್ವಕ್ಕೆ ಕೇಳಿಸುವಂತೆ ಬೊಬ್ಬೆ ಹೊಡೆಯುತ್ತದೆ. ಇತರ ಕಾಂಗ್ರೆಸ್ಸೇತರ ಪಕ್ಷಗಳು ಪ್ರಜಾಪ್ರಭುತ್ವದ ವಿಧಿ ವಿಧಾನಗಳ ಮೂಲಕವೇ ಅಧಿಕಾರಕ್ಕೆ ಬಂದಿದ್ದರೂ ಸಹ.

ಹಿರಿಯ ಕಾಂಗ್ರೆಸ್ ನಾಯಕರಿಗೆ ಪಾಶ್ಚಿಮಾತ್ಯ ದೇಶಗಳಿಂದ ಸಿಂಧುತ್ವ ಮತ್ತು ಪ್ರಮಾಣೀಕರಣದ (Certification) ಗೀಳು ಇದ್ದಂತಿದೆ! ಕಾಂಗ್ರೆಸ್ಸಿನ ಈ ಕೆಟ್ಟ ಚಾಳಿಯನ್ನು ಅಥವಾ ಪ್ರವೃತ್ತಿಯನ್ನು ಪಾಶ್ಚಿಮಾತ್ಯ ಸರ್ಕಾರಗಳು, ದುರುಪಯೋಗಪಡಿಸಿಕೊಂಡು ಭಾರತಕ್ಕೆ ಮುಜುಗರ ಹಾಗೂ ಕಿರಿಕಿರಿ ಉಂಟು ಮಾಡುವುದರ ಮೂಲಕ ತಮ್ಮ ದೊಡ್ಡಸ್ತಿಕೆಯನ್ನು ಮೆರೆಯುತ್ತವೆ.

ರಾಹುಲ್ ಗಾಂಧಿಯವರು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡ ನಂತರ ಎರಡು ಪ್ರಮುಖ ದೇಶಗಳು ಅದರ ಬಗ್ಗೆ ಹೇಳಿಕೆ ನೀಡಿವೆ. ಅಮೆರಿಕಾದ ವಕ್ತಾರರು ತಾವು 'ವಿಷಯವನ್ನು ಗಮನಿಸುತ್ತಿದ್ದೇವೆ' ಎಂದು ಹೇಳಿದರೆ ಜರ್ಮನ್ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ತನ್ನ ಮಿತಿಯನ್ನು ಮೀರಿದ್ದಾರೆ.

ಜರ್ಮನ್ ವಕ್ತಾರರ ಟ್ವೀಟ್ ಹೀಗಿದೆ: "ಭಾರತದ ಪ್ರತಿಪಕ್ಷದ ರಾಜಕಾರಣಿ ರಾಹುಲ್ ಗಾಂಧಿ ಅವರ ವಿರುದ್ಧ ಮೊದಲ ನಿರ್ದೇಶನದ ತೀರ್ಪು ಮತ್ತು ಸಂಸತ್ ಸದಸ್ಯತ್ವದಿಂದ ಅವರನ್ನು ಅನರ್ಹಗೊಳಿಸಿರುವುದನ್ನು "ನಾವು ಗಮನಿಸಿದ್ದೇವೆ". ನಮ್ಮ ಅರಿವಿನ ಪ್ರಕಾರ ರಾಹುಲ್ ಗಾಂಧಿ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹರು. ಹೀಗೆ ಮಾಡಿದರೆ ಈ ತೀರ್ಪು ಊರ್ಜಿತವೇ ಹಾಗೂ ಅವರ ಸದಸ್ಯತ್ವದ ಅನರ್ಹತೆಗೆ ಆಧಾರವಿದೆಯೇ ಎಂದು ತಿಳಿಯುತ್ತದೆ.

ಅಬ್ಬಾ ಎಂತಹ ದಿಟ್ಟತನ! "ನಾವು ಗಮನಿಸಿದ್ದೇವೆ" ಎಂದು ಜರ್ಮನ್ ವಕ್ತಾರರು ಹೇಳಿರುವುದರ ಅರ್ಥವೇನು? ಆ ದೇಶ ಗಮನಿಸಿ ಏನು ಮಾಡಬೇಕು?


ಜರ್ಮನ್‌ರ ಪ್ರಜಾಪ್ರಭುತ್ವಕ್ಕೆ ವರ್ಣಭೇದ ನೀತಿ ಬೆದರಿಕೆಯೊಡ್ಡುತ್ತದೆ ಎಂದು ವರ್ಣಭೇದ ನೀತಿ ವಿರೋಧಿ ಜರ್ಮನ್ ಫೆಡರಲ್ ಕಮಿಷನರ್ ಹೇಳಿಕೆ ನೀಡಿದ ತಕ್ಷಣ "ಜರ್ಮನಿಯಲ್ಲಿ ವರ್ಣಭೇದ ಗಮನಾರ್ಹವಾಗಿ ಹೆಚ್ಚುತ್ತಿದೆ ಎಂಬುದನ್ನು ನಾವು ಗಮನಿಸಿದ್ದೇವೆ" ಎಂದು ಭಾರತದ ವಿದೇಶಿ ಸಚಿವಾಲಯದ ವಕ್ತಾರರು ಟ್ವೀಟ್ ಹಾಕಿದ್ದಾರಾ?

1.3 ಲಕ್ಷ ನಮೀಬಿಯನ್ನರನ್ನು ಕೊಲ್ಲುವ ಮೂಲಕ ಇಪ್ಪತ್ತನೆಯ ಶತಮಾನದ ಮೊದಲ ಜನಾಂಗೀಯ ಹತ್ಯೆಯನ್ನು ವಿಶ್ವಕ್ಕೆ ನೀಡಿದಂತಹ ದೇಶ ಜರ್ಮನಿಯಿಂದ ನಮಗೆ ಪ್ರಮಾಣ ಪತ್ರ ಬೇಕೇ? ಮೊದಲನೆಯ ವಿಶ್ವ ಸಮರದಲ್ಲಿ ವಿಷಕಾರಕ ಅನಿಲವನ್ನು ಅಸ್ತ್ರವಾಗಿ ಬಳಸಿದ ಮೊದಲ ದೇಶ ಜರ್ಮನಿಯಾಗಿದ್ದು, ಮಾತ್ರವಲ್ಲ ವಿಶ್ವದಲ್ಲಿ ಎರಡು ಮಹಾಯುದ್ಧಗಳಾಗಲು ಕಾರಣೀಭೂತವಾದ ಜರ್ಮನಿಯಿಂದ ನಾವು ಪ್ರಮಾಣ ಪತ್ರವನ್ನು ಪಡೆಯಬೇಕೇ?

ಇರಬಹುದೇನೋ. ಕಾಂಗ್ರೆಸ್ ನಾಯಕರ ಯೋಚನೆ ಹೀಗೆಯೇ ಇದ್ದಂತಿದೆ!

ಹಿರಿಯ ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಹೇಳುತ್ತಾರೆ–"ರಾಹುಲ್ ಗಾಂಧಿ ವಿಚಾರಣೆಗೊಳಪಡಿಸುವ ಮೂಲಕ ಭಾರತದಲ್ಲಿ ಪ್ರಜಾಪ್ರಭುತ್ವದೊಂದಿಗೆ ಹೇಗೆ ರಾಜೀ ಮಾಡಿಕೊಳ್ಳಲಾಗುತ್ತಿದೆ ಎಂಬುದನ್ನು ಗಮನಿಸಿರುವುದಕ್ಕೆ ಜರ್ಮನ್ ವಿದೇಶಿ ವ್ಯವಹಾರಗಳ ಸಚಿವಾಲಯಕ್ಕೆ ಧನ್ಯವಾದಗಳು"

ಭಾರತದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿದ್ದಾಗ 2012ರಲ್ಲಿ, ಜರ್ಮನಿಯ ಬಾನ್ ನಗರದಲ್ಲಿ ನಡೆದ ಜನಾಂಗೀಯ ದಾಳಿಯೊಂದರಲ್ಲಿ 24 ವರ್ಷದ ಭಾರತೀಯ ವಿದ್ಯಾರ್ಥಿಯ ನಾಲಿಗೆಯನ್ನು ಅಮಾನವೀಯವಾಗಿ ಕತ್ತರಿಸಿ ಹಾಕಿದಾಗ, ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವಲ್ಲಿ ಅಲ್ಲಿನ ಸರ್ಕಾರ ವಿಫಲವಾಗಿರುವುದನ್ನು ದಿಗ್ವಿಜಯ್ ಸಿಂಗ್ ಅಥವಾ ಕಾಂಗ್ರೆಸ್ ಪಕ್ಷ ಏಕೆ ಪ್ರಶ್ನಿಸಲಿಲ್ಲ ಎಂದು ನಮಗೆ ಆಶ್ಚರ್ಯವಾಗುತ್ತದೆ.



ಇಂಗ್ಲೆಂಡ್‌ನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ರಾಹುಲ್ ಗಾಂಧಿ ಉಪನ್ಯಾಸ ನೀಡುತ್ತಿರುವುದು.



ಭಾರತದ ವೈಸರಾಯ್ ಆಗಿದ್ದ ಮೌಂಟ್ ಬ್ಯಾಟನ್ ಜೊತೆ ಮಾಜಿ ಪ್ರಧಾನಿ ಜವಹರಲಾಲ್ ನೆಹರು

ಪಾಶ್ಚಿಮಾತ್ಯ ದೇಶಗಳಿಂದ ದೃಢೀಕರಣ ಬಯಸುವುದನ್ನು ನಾವು ನಿಲ್ಲಿಸಬೇಕು. ನನ್ನ ವೈನ್ ಕಹಿ ಇರಬಹುದು, ಆದರೆ ಅದು ನನ್ನದೆ. ನಮ್ಮ ಸರ್ಕಾರ ಮತ್ತು ಅದರ ನೀತಿಗಳನ್ನು ನಾವು ವಿಮರ್ಶಿಸಬೇಕು, ಆದರೆ ಅದನ್ನು ಸಂಸತ್ತಿನಲ್ಲಿ ಮತ್ತು ನಮ್ಮ ಜನರೊಂದಿಗೆ ಮಾಡಬೇಕು. ಸಂಸ್ಥೆಗಳನ್ನು ಸರ್ಕಾರ ದುರುಪಯೋಗಪಡಿ ಸಿಕೊಳ್ಳುತ್ತಿದೆ ಎಂದೆನಿಸಿದಾಗ ಜನರನ್ನು ಒಗ್ಗೂಡಿಸಿ ಪ್ರತಿಭಟಿಸಬೇಕು. ಇನ್ನು ಉತ್ತಮ ನೀತಿಗಳನ್ನು ರೂಪಿಸಲು ನಮ್ಮ ನಾಗರಿಕರೊಂದಿಗೆ ಸಮಾಲೋಚನೆ, ಚರ್ಚೆ ಮಾಡಬೇಕು. ಇಂತಹ ಕಾರ್ಯಗಳು ಉತ್ತಮ ರಾಷ್ಟ್ರವನ್ನು ನಿರ್ಮಿಸುವುದರ ಜೊತೆಗೆ ಇದು ನಿಜ ವಾದ ದೇಶ ಭಕ್ತಿ ಎನಿಸಿಕೊಳ್ಳುತ್ತದೆ. ಆದರೆ, ನಮ್ಮದೇ ಸ್ವಂತ ದೇಶದ ಬಗ್ಗೆ ದೂರು ನೀಡಲು ಬಿಳಿಯನ ಬಳಿ ಹೋಗುವುದು ಆತ್ಮ ಗೌರವದ ಕೊರತೆ ಮತ್ತು ಅಧೀನತೆ ಮನೋಭಾವವನ್ನು ತೋರಿಸುತ್ತದೆ.

ತಮ್ಮ ದೇಶದ ಆಂತರಿಕ ಹಿಂಸಾಚಾರವನ್ನು ಜರ್ಮನಿ ಹೇಗೆ ನಿಭಾಯಿಸುತ್ತಿದೆ ಎಂದು ಜರ್ಮನ್ ವಕ್ತಾರರನ್ನು ಕಾಂಗ್ರೆಸ್ ಪಕ್ಷ ದಯವಿಟ್ಟು ಕೇಳಬಹುದಾ? ಕಳೆದ ವರ್ಷ, ಜರ್ಮನ್ ಪೊಲೀಸ್, 20 ವರ್ಷಗಳಲ್ಲೇ ಅತೀ ಹೆಚ್ಚಿನ ಮಟ್ಟದ ಅಂದರೆ 24,000 ಕ್ಕೂ ಅಧಿಕ ಬಲ ಪಂಥೀಯ ಅಪರಾಧಗಳನ್ನು ದಾಖಲಿಸಿದ್ದರು. ನಾಝಿ ಚಿಹ್ನೆಗಳ ಪ್ರದರ್ಶನ ಮತ್ತು ಯಹೂದ್ಯರ ಟೀಕೆಗಳು, ದೈಹಿಕ ದಾಳಿ, ಕೊಲೆ ಸೇರಿದಂತೆ ಅನೇಕ ರೀತಿಯ ಅಪರಾಧಗಳು ದಾಖಲಾಗಿದ್ದವು.

ಭಾರತದ ಆಂತರಿಕ ವಿಷಯಗಳಲ್ಲಿ ವಿದೇಶಿ ಹಸ್ತಕ್ಷೇಪವನ್ನು ಕಾಂಗ್ರೆಸ್ ಪಕ್ಷ ಬಯಸುವುದನ್ನು ನಿಲ್ಲಿಸುವ ಸಮಯ ಬಂದಿದೆ. ಬ್ರಿಟಿಷ್ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಮೆಚ್ಚಿಸಲು, ಜವಾಹರಲಾಲ್ ನೆಹರು ಕಾಶ್ಮೀರ ವಿಷಯವನ್ನು ವಿಶ್ವಸಂಸ್ಥೆಗೆ ತೆಗೆದುಕೊಂಡು ಹೋಗಿದ್ದರ ಪರಿಣಾಮ ಏನಾಯಿತು ಎಂಬುದರಿಂದಲೂ ಕಾಂಗ್ರೆಸ್ ಯಾವ ಪಾಠವನ್ನು ಕಲಿತಿಲ್ಲವೇ? ಇವತ್ತಿಗೂ ಸಹ ನಾವು ಇದರ ಪರಿಣಾಮವನ್ನು ಎದುರಿಸುತ್ತಿದ್ದೇವೆ..

ತಮ್ಮ ಅಂತರಿಕ ವಿಷಯಗಳಲ್ಲಿ ಪಾಶ್ಚಿಮಾತ್ಯ ದೇಶಗಳ ಮಧ್ಯ ಪ್ರವೇಶಕ್ಕೆ ಅನುವು ಮಾಡಿಕೊಟ್ಟ ದೇಶಗಳು ನಾಶವಾಗಿ ಹೋಗಿರುವುದು ಕಾಂಗ್ರೆಸ್ಸಿಗೆ ತಿಳಿದಿಲ್ಲವೇ? ಪಾಕಿಸ್ತಾನದಿಂದ ಮಧ್ಯ ಪ್ರಾಚ್ಯ ದೇಶಗಳವರೆಗೆ, ವೆನೆಜುಲಾದಿಂದ ವಿಯೆಟ್ನಾಂವರೆಗೆ! ಪ್ರಜಾಪ್ರಭುತ್ವದ ಹೆಸರಿನಲ್ಲಿ ಎಲ್ಲೆಲ್ಲಿ ಪಾಶ್ಚಿಮಾತ್ಯ ದೇಶಗಳು ತಲೆ ಹಾಕಿವೆಯೋ, ಅಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವ ವಿರಳವಾಗಿ, ಅಲ್ಲಿ ಉಳಿಯುವುದು ಕೇವಲ ಕೈಗೊಂಬೆ ಸರ್ಕಾರಗಳು ಮಾತ್ರ ಇಲ್ಲವೇ ಸಾವು ಅಥವಾ ಸಾಲದ ಸರಮಾಲೆ!

ತನ್ನ ತಾತ ಆಂಗ್ಲರನ್ನು ಮೆಚ್ಚಿಸುತ್ತಿದ್ದ ಚಾಳಿಯನ್ನು ರಾಹುಲ್ ಅನುಕರಿಸುವುದನ್ನು ನಿಲ್ಲಿಸಬೇಕು. ರಾಹುಲ್ ಇದನ್ನು ಒಂದು ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದಾರೆ.

2009ರಲ್ಲಿ ಅಮೇಥಿಯ ಎಂಪಿಯಾಗಿದ್ದ ರಾಹುಲ್ ಗಾಂಧಿ, ಅಮೇಥಿಯ ಗ್ರಾಮೀಣ ಪ್ರದೇಶದಲ್ಲಿ ಒಂದು ದಲಿತ ಕುಟುಂಬದ ಮನೆಗೆ ಭೇಟಿ ನೀಡಿದಾಗ, ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಮಿಲಿಬ್ಯಾಂಡ್ ಅವರನ್ನು ಉದ್ದೇಶಿಸಿ; ಇದು "ವಾಸ್ತವ ಭಾರತ" ಎಂದು ಹೇಳುವ ಮೂಲಕ "ಬಡತನವನ್ನು ಒಂದು ಪ್ರವಾಸಿ" ತಂತ್ರವನ್ನಾಗಿಸಿದ್ದರು.

ಬಡತನ ಮಾತ್ರವೇ "ನಿಜವಾದ ಭಾರತವೇ? ಹಾಗಾದಲ್ಲಿ, ಅದು ರಾಹುಲ್ ಗಾಂಧಿಯವರ ಕುಟುಂಬದ ಅಸಾಮರ್ಥ್ಯ ಹಾಗೂ ಅವರ ಪಕ್ಷ ನಮ್ಮ ಬಡತನವನ್ನು ನಿವಾರಣೆ ಮಾಡುವಲ್ಲಿ ವಿಫಲವಾಗಿರುವುದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದಲೇ, ಜನರು ಅವರನ್ನು ಅಧಿಕಾರದಿಂದ ಕಿತ್ತೊಗೆದರು. ಇದುವೇ ದೇಶದಲ್ಲಿ ಪ್ರಜಾಪ್ರಭುತ್ವ ಕೆಲಸ ಮಾಡುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

2021ರಲ್ಲಿ ನಡೆದ ವರ್ಚುಯಲ್ ಸಂವಹನವೊಂದರಲ್ಲಿ ಅಮೆರಿಕಾದ ಅಧೀನ ಕಾರ್ಯದರ್ಶಿ ಹಾಗೂ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ನಿಕೋಲಸ್ ಬರ್ನ್ಸ್ ಅವರೊಡನೆ ಮಾತನಾಡುತ್ತ ಬಿಜೆಪಿ, ಭಾರತದಲ್ಲಿ ರಾಜ್ಯ ಸಂಸ್ಥೆಗಳನ್ನು ಆವರಿಸಿರುವುದಾಗಿ ಟೀಕೆ ಮಾಡಿದ ರಾಹುಲ್ ಗಾಂಧೀ, ಭಾರತದಲ್ಲಿನ ಆಗು–ಹೋಗುಗಳ ಬಗ್ಗೆ ಅಮೇರಿಕಾ ಏಕೆ ಮೌನವಾಗಿದೆ ಎಂದು ಪ್ರಶ್ನಿಸಿದರು.

ಭಾರತದ ಸಮಸ್ಯೆಯನ್ನು ಅಮೇರಿಕಾ ಏಕೆ ಸರಿಪಡಿಸುತ್ತಿಲ್ಲ ಎಂದು ರಾಹುಲ್ ಗಾಂಧಿ ಕೇಳುತ್ತಿದ್ದರು! ಸಂಸ್ಥೆಗಳ ದುರುಪಯೋಗ ಕೇವಲ ಬಿಜೆಪಿಗೆ ಮಾತ್ರ ಸೀಮಿತವಾಗಿಲ್ಲ. ಇದನ್ನು 50 ವರ್ಷಗಳ ಕಾಲ ಕಾಂಗ್ರೆಸ್ ಮಾಡಿತ್ತು. ಆಗ ಪ್ರತಿಪಕ್ಷಗಳ ಯಾವುದೇ ನಾಯಕನಾದರೂ ಓಡಿ ಹೋಗಿ, ಇದರ ಬಗ್ಗೆ ನೀವು ಏಕೆ ಸುಮ್ಮನಿದ್ದೀರಿ ಎಂದು ಅಮೇರಿಕವನ್ನು ಕೇಳಿದರೆ? ಇಲ್ಲ!!

ದೇಶದ ಈಶಾನ್ಯ ಭಾಗದಲ್ಲಿ ಸಮರ್ಥ ನಾಯಕತ್ವವಿಲ್ಲದೆ ನಲುಗುತ್ತಿದ್ದ ಕಾಂಗ್ರೆಸ್, ಚುನಾವಣೆಯಲ್ಲಿ ಸೋಲನ್ನು ಅನುಭವಿಸಿತ್ತು. ಇದರಿಂದ ಹತಾಶರಾಗಿದ್ದ ಪಕ್ಷದ ಕಾರ್ಯಕರ್ತರನ್ನು ಭೇಟಿ ಮಾಡುವ ಬದಲು, ಇತ್ತೀಚೆಗೆ ಭಾರತ್ ಜೋಡೋ ಯಾತ್ರೆಯ ನಂತರ ಭಾರತದಲ್ಲಿ ಪ್ರಜಾಪ್ರಭುತ್ವದ ಮೇಲಿನ ಆಕ್ರಮಣದ ಬಗ್ಗೆ ಮಾತನಾಡಲು ಗಡ್ಡ ಟ್ರಿಮ್ ಮಾಡಿಕೊಂಡು ರಾಹುಲ್ ಗಾಂಧಿ ಇಂಗ್ಲೆಂಡಿಗೆ ಭೇಟಿ ನೀಡಿದ್ದರು.

ಪಾಶ್ಚಿಮಾತ್ಯ ದೇಶಗಳಿಂದ ದೃಢೀಕರಣ ಬಯಸುವುದನ್ನು ನಾವು ನಿಲ್ಲಿಸಬೇಕು. ನನ್ನ ವೈನ್ ಕಹಿ ಇರಬಹುದು, ಆದರೆ ಅದು ನನ್ನದೆ. ನಮ್ಮ ಸರ್ಕಾರ ಮತ್ತು ಅದರ ನೀತಿಗಳನ್ನು ನಾವು ವಿಮರ್ಶಿಸಬೇಕು, ಆದರೆ ಅದನ್ನು ಸಂಸತ್ತಿನಲ್ಲಿ ಮತ್ತು ನಮ್ಮ ಜನರೊಂದಿಗೆ ಮಾಡಬೇಕು. ಸಂಸ್ಥೆಗಳನ್ನು ಸರ್ಕಾರ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದೆನಿಸಿದಾಗ ಜನರನ್ನು ಒಗ್ಗೂಡಿಸಿ ಪ್ರತಿಭಟಿಸಬೇಕು. ಇನ್ನು ಉತ್ತಮ ನೀತಿಗಳನ್ನು ರೂಪಿಸಲು ನಮ್ಮ ನಾಗರಿಕರೊಂದಿಗೆ ಸಮಾಲೋಚನೆ, ಚರ್ಚೆ ಮಾಡಬೇಕು. ಇಂತಹ ಕಾರ್ಯ ಗಳು ಉತ್ತಮ ರಾಷ್ಟ್ರವನ್ನು ನಿರ್ಮಿಸುವುದರ ಜೊತೆಗೆ ಇದು ನಿಜ ವಾದ ದೇಶ ಭಕ್ತಿ ಎನಿಸಿಕೊಳ್ಳುತ್ತದೆ.

ಆದರೆ, ನಮ್ಮದೇ ಸ್ವಂತ ದೇಶದ ಬಗ್ಗೆ ದೂರು ನೀಡಲು ಬಿಳಿಯನ ಬಳಿ ಹೋಗುವುದು ಆತ್ಮ ಗೌರವದ ಕೊರತೆ ಮತ್ತು ಅಧೀನತೆ ಮನೋಭಾವವನ್ನು ತೋರಿಸುತ್ತದೆ.

ಭಾರತದ ಭವಿಷ್ಯ ಪಾಶ್ಚಿಮಾತ್ಯ ವಿಶ್ವ ವಿದ್ಯಾನಿಲಯಗಳ ಹಜಾರಗಳಲ್ಲಿ ಅಲ್ಲ, ಬದಲಿಗೆ ಭಾರತದ ವೋಟಿಂಗ್ ಬೂತ್‌ಗಳಲ್ಲಿದೆ ಎಂದು ಕಾಂಗ್ರೆಸ್ ಪಕ್ಷಕ್ಕೆ ಈಗಲಾದರೂ ಮನವರಿಕೆಯಾಗಬೇಕು.

ಕಾಂಗ್ರೆಸ್ಸಿನ ಭವಿಷ್ಯ, ಪಾಶ್ಚಿಮಾತ್ಯ ಪ್ರೊಫೆಸರ್‌ಗಳು, ಬುದ್ಧಿಜೀವಿಗಳು ಅಥವಾ ವಕ್ತಾರರ ಬಳಿ ಇಲ್ಲ. ಅದು ಭಾರತೀಯರ ಕೈಯ್ಯಲ್ಲಿದೆ. ಹಾಗಾಗಿ ನಮ್ಮಿಂದ ದೃಢೀಕರಣ ಹಾಗೂ ಪ್ರಮಾಣೀಕರಣ ಬಯಸಿ. ಚುನಾವಣೆಗಳಲ್ಲಿ ಗೆಲ್ಲಲು ನಿಮಗೆ ಸಹಾಯ ಮಾಡುವುದು ಭಾರತದ ಮತದಾರ, ಪಾಶ್ಚಿಮಾತ್ಯ ದೇಶಗಳಲ್ಲ ಎಂಬುದನ್ನು ಕಾಂಗ್ರೆಸ್ ಪಕ್ಷ ಅರ್ಥಮಾಡಿಕೊಳ್ಳುವುದು ಒಳ್ಳೆಯದು.

(Vikram@starofmysore.com)

ಗೋಕುಲಂನಲ್ಲಿ ಮಹಿಳೆ ಕಗ್ಗೊಲೆ

ಮೈಸೂರು, ಏ.15(ಆರ್‌ಕೆ)– ಪ್ರಿಯಕರನೊಂದಿಗೆ ವಾಸವಾಗಿದ್ದ (ಲಿವಿಂಗ್ ಟುಗೆದರ್) ಮಹಿಳೆಯನ್ನು ಹತ್ಯೆ ಮಾಡಿರುವ ಘಟನೆ ಮೈಸೂರಿನ ಗೋಕುಲಂನ ನಂದಗೋಕುಲ ಬಡಾವಣೆಯ ತ್ರಿನೇತ್ರ ಸರ್ಕಲ್ ಬಳಿ ಇಂದು ಮಧ್ಯಾಹ್ನ ಸಂಭವಿಸಿದೆ.

ಬಡಾವಣೆಯ ಸೌಮ್ಯ(28) ಕೊಲೆಯಾದವರು. ಮಧ್ಯಾಹ್ನ 1.30 ಗಂಟೆ ವೇಳೆಗೆ ತಲೆಗೆ ಮಾರಕಾಸ್ತ್ರಗಳಿಂದ ಹೊಡೆದು ಹತ್ಯೆ ಮಾಡಲಾಗಿದ್ದು, ಸಾರ್ವಜನಿಕರು ನೀಡಿದ ಮಾಹಿತಿಯನ್ವಯ ಮಧ್ಯಾಹ್ನ 3 ಗಂಟೆ ವೇಳೆಗೆ ಸ್ಥಳಕ್ಕೆ ಧಾವಿಸಿದ ವಿವಿ ಪುರಂ ಠಾಣೆ ಪೊಲೀಸರು, ಮಹಜರು ನಡೆಸಿದರು. ತಲೆಯ ಎಡ ಭಾಗದಲ್ಲಿ ತೀವ್ರ ಪೆಟ್ಟು ಬಿದ್ದು, ರಕ್ತಸ್ರಾವವಾಗಿ ಸೌಮ್ಯ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. 7 ವರ್ಷಗಳ ಹಿಂದೆ ಮದುವೆಯಾಗಿದ್ದ ಆಕೆ, ಗಂಡನಿಂದ ವಿಚ್ಛೇದನ ಪಡೆಯಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಪ್ರಕರಣ ಇತ್ಯರ್ಥವಾಗಿಲ್ಲ. ಈ ನಡುವೆ ಆಕೆ, ಕ್ಯಾಬ್ ಡ್ರೈವರ್ ರಮೇಶ್ ಎಂಬುವನೊಂದಿಗೆ ನಂದಗೋಕುಲ ಬಡಾವಣೆಯಲ್ಲಿ ವಾಸವಾಗಿದ್ದರು ಎಂದು ನೆರೆಹೊರೆಯವರು ಮಹಜರ್ ವೇಳೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಮಧ್ಯಾಹ್ನ ಸೌಮ್ಯ ಕೊಲೆಯಾದ ವೇಳೆ ರಮೇಶ್ ಮನೆಯಲ್ಲೇ ಇದ್ದ ಎಂಬ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಠಾಣೆ ಪೊಲೀಸರು, ತಲೆಮರೆಸಿಕೊಂಡಿದ್ದ ಆತನನ್ನು ಸಂಜೆ ವೇಳೆಗೆ ಪತ್ತೆ ಮಾಡಿ ವಶಪಡಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ಸಂಬಂಧಿಸಿದ ಮಾಹಿತಿ ನೀಡಿದ ಪೊಲೀಸರು, ಸೌಮ್ಯ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ.

ವರುಣಾದಿಂದ ಡಾ.ಭಾರತೀಶಂಕರ್ ಜೆಡಿಎಸ್ ಅಭ್ಯರ್ಥಿ

ಮಡಿಕೇರಿಗೆ ಎನ್.ಎಂ.ಮುತ್ತಪ್ಪ, ಅರಸೀಕೆರೆಯಿಂದ ಎನ್.ಆರ್.ಸಂತೋಷ್ ಕಣಕ್ಕೆ

ಬೆಂಗಳೂರು, ಏ.15(ಕೆಎಂಶಿ)–



ಕಾಂಗ್ರೆಸ್ ಹಿರಿಯ ನಾಯಕ ಮಾಜಿ ಸಚಿವ ಮಲಕಾರೆಡ್ಡಿ ಸೇರಿದಂತೆ ಆರು ಅಭ್ಯರ್ಥಿಗಳ ಹೆಸರನ್ನು ಜೆಡಿಎಸ್ ಘೋಷಣೆ ಮಾಡಿದೆ ಪಕ್ಷದ ಹಿರಿಯ ನಾಯಕ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಾಂಗ್ರೆಸ್‌ನಿಂದ ಪಕ್ಷಕ್ಕೆ ಸೇರ್ಪಡೆಗೊಂಡ ಮಾಲಕರೆಡ್ಡಿಗೆ ಯಾದಗಿರಿ ಕ್ಷೇತ್ರದಿಂದ ಕಣಕ್ಕಿಳಿಸಲು ಅವಕಾಶ ಮಾಡಿಕೊಟ್ಟಿದ್ದಾರೆ.

ಇನ್ನು ಚಿತ್ರದುರ್ಗಕ್ಕೆ ವಿಧಾನಪರಿಷತ್‌ನ ಮಾಜಿ ಸದಸ್ಯ ರಘು ಅಚಾರ್, ಮಡಿಕೇರಿಗೆ ಎನ್.ಎಂ.ಮುತ್ತಪ್ಪ ಮೂಡಬಿದಿರೆಗೆ ಅಮರಶ್ರೀ, ವರುಣಾ ಕ್ಷೇತ್ರಕ್ಕೆ ಮಾಜಿ ಶಾಸಕ ಡಾ.ಭಾರತಿ ಶಂಕರ್, ಬಾಗಲಕೋಟೆ ಕ್ಷೇತ್ರಕ್ಕೆ ದೇವರಾಜ್ ಪಾಟೀಲ್ ಹಾಗೂ ಯಾದಗಿರಿ ಕ್ಷೇತ್ರಕ್ಕೆ ಮಾಜಿ ಸಚಿವ ಎ.ಬಿ.ಮಾಲಕರೆಡ್ಡಿ ಅವರು ಜೆಡಿಎಸ್ ಅಭ್ಯರ್ಥಿಗಳನ್ನು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು. ಇದೇ ಸಂದರ್ಭದಲ್ಲಿ ಅರಸೀಕೆರೆ ವಿಧಾನಸಭೆ ಕ್ಷೇತ್ರದ ಎನ್.ಆರ್. ಸಂತೋಷ್ ಅವರು ಬಿಜೆಪಿ ತೊರೆದು ಜೆಡಿಎಸ್ ಪಕ್ಷವನ್ನು ಸೇರಿದರು. ಹಾಗೆಯೇ, ಬಾಗಲಕೋಟೆಯ ದೇವರಾಜ್ ಪಾಟೀಲ್ ಅವರು ಕಾಂಗ್ರೆಸ್ ತೊರೆದು ಪಕ್ಷಕ್ಕೆ ಸೇರಿದರು. ಕುಮಾರಸ್ವಾಮಿ ಅವರು, ಪಕ್ಷದ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಅವರು ಇಬ್ಬರೂ ನಾಯಕರಿಗೆ ಪಕ್ಷದ ಶಾಲು ಹೊದಿಸಿ ಬರಮಾಡಿಕೊಂಡರು.

ಐದನೇ ಪುಟದಿಂದ

17 ಮಂದಿ ನಾಮಪತ್ರ ಸಲ್ಲಿಕೆ

ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಪಿ.ಎಸ್.ಯಡಿಯೂರಪ್ಪ (ಪಕ್ಷೇತರ) ಪಿ.ಎಸ್.ನವೀನ್ ಕುಮಾರ್ (ಉತ್ತಮ ಪ್ರಜಾಕೀಯ ಪಾರ್ಟಿ), ಬಿ.ಎಸ್.ಸುಬ್ರಹ್ಮಣ್ಯ (ಪಕ್ಷೇತರ), ಗುರುಮೂರ್ತಿ ಜೋಗನಹಳ್ಳಿ (ಕರ್ನಾಟಕ ರಾಷ್ಟ್ರ ಸಮಿತಿ) ಅವರು ನಾಮಪತ್ರ ಸಲ್ಲಿಸಿದ್ದಾರೆ. ಕೆ.ಆರ್.ನಗರ ಕ್ಷೇತ್ರದಿಂದ ಉತ್ತಮ ಪ್ರಜಾ ಪಾರ್ಟಿಯ ಕೆ.ಮೋಹನ್ ಹುಣಸೂರಿನಿಂದ ಪಕ್ಷೇತರರಾಗಿ ಉಮೇಶ್, ನಂಜನಗೂಡಿನಿಂದ ಆಮ್ ಆದ್ಮಿ ಪಾರ್ಟಿಯ ಹೆಚ್.ಹನುಮಯ್ಯ, ಕರ್ನಾಟಕ ರಾಷ್ಟ್ರ ಸಮಿತಿಯ ಎಂ.ಪಿ.ವಿಜಯ ಕುಮಾರ್ ಸ್ಪರ್ಧೆ ಬಯಸಿ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಮೈಸೂರಿನ ಚಾಮರಾಜ ಕ್ಷೇತ್ರದ ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿಯಾಗಿ ಮಾಳವಿಕ ಗುಬ್ಬಿವಾಣಿ ಅವರು 3 ನಾಮಪತ್ರ ಸಲ್ಲಿಸಿದ್ದು, ಉತ್ತಮ ಪ್ರಜಾ ಪಾರ್ಟಿಯ ವಿ.ಪ್ರಭಾ, ಸೋಸಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್)ದ ಜಿ.ಎಸ್. ಸೀಮಾ, ನರಸಿಂಹರಾಜ ಕ್ಷೇತ್ರದಿಂದ ಉತ್ತಮ ಪ್ರಜಾಕೀಯ ಪಾರ್ಟಿಯ ಜಿ.ಎಸ್.ಲೀಲಾವತಿ, ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾದ ಅಮ್ಜದ್ ಖಾನ್ ಹಾಗೂ ಅಜೀಜುಲ್ಲಾ ಅಜ್ಜು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಇಂದು 17 ಮಂದಿಯಿಂದ ಒಟ್ಟು 20 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಚಾಮುಂಡೇಶ್ವರಿ, ಕೃಷ್ಣರಾಜ, ವರುಣಾ ಹಾಗೂ ಟಿ.ನರಸೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ತಿಳಿಸಿದ್ದಾರೆ. ಏಪ್ರಿಲ್ 13ರಂದು ಪಿರಿಯಾಪಟ್ಟಣ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಕೆ.ವೆಂಕಟೇಶ್ ಸೇರಿದಂತೆ ಜಿಲ್ಲೆಯಲ್ಲಿ 16 ಮಂದಿ ನಾಮಪತ್ರ ಸಲ್ಲಿಸಿದ್ದರು. ಅದರಿಂದಾಗಿ ಈವರೆಗೆ ಉಮೇದುವಾರಿಕೆ ಸಲ್ಲಿಸಿದವರ ಸಂಖ್ಯೆ 33ಕ್ಕೇರಿದಂತಾಗಿದೆ.

ನಾಳೆ (ಭಾನುವಾರ) ರಜಾದಿನವಾಗಿರುವುದರಿಂದ ಸೋಮವಾರ(ಏ.17)ದಿಂದ ಪ್ರಮುಖ ರಾಜಕೀಯ ಪಕ್ಷಗಳ ಪ್ರಬಲ ಅಭ್ಯರ್ಥಿಗಳೂ ಸೇರಿ ಬಹುತೇಕ ಮಂದಿ ಚುನಾವಣೆಯಲ್ಲಿ ಸ್ಪರ್ಧೆ ಬಯಸಿ ಉಮೇದುವಾರಿಕೆ ಸಲ್ಲಿಸಲಿದ್ದಾರೆ. ಮೈಸೂರಿನ ಕೆ.ಆರ್.ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಘೋಷಣೆ ಮಾತ್ರ ಬಾಕಿ ಇದ್ದು, ಉಳಿದಂತೆ ಎಲ್ಲಾ ಕ್ಷೇತ್ರಗಳಿಗೆ ಆಯಾ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಪ್ರಕಟಿಸಿರುವುದರಿಂದ ಮೇ 20ರೊಳಗಾಗಿ ಆಕಾಂಕ್ಷಿತರೆಲ್ಲರೂ ನಾಮಪತ್ರ ಸಲ್ಲಿಸಲು ಸಿದ್ಧತೆ ನಡೆಸುತ್ತಿದ್ದಾರೆ.

ಕೆಆರ್ ಸೋಮಶೇಖರ್ ಸ್ಪರ್ಧೆ


ಸರ್ಕಾರ ಉರುಳಿಸಲು ಪ್ರಮುಖ ಪಾತ್ರಧಾರಿ ಕದಲೂರು ಉದಯ್‌ಗೆ ಮದ್ದೂರು ಕ್ಷೇತ್ರದಿಂದ ಕಣಕ್ಕಿಳಿಯಲು ಅನುವು ಮಾಡಿಕೊಡಲಾಗಿದೆ. ಚನ್ನಪಟ್ಟಣ ಸೇರಿದಂತೆ ಹಲವು ಕುತೂಹಲಕಾರಿ ಕ್ಷೇತ್ರದ ಲೆಕ್ಕಾಚಾರಗಳನ್ನು ಕಾಂಗ್ರೆಸ್ ತಲೆಕೆಳಗೆ ಮಾಡಿದೆ. ನಿರ್ಮಾಪಕ ಉಮಾಪತಿ ಅವರಿಗೆ ಬೊಮ್ಮನಹಳ್ಳಿಯಲ್ಲಿ ಸ್ಪರ್ಧಿಸಲು ಅನುವು ಮಾಡಿದೆ.

ಸಿದ್ದರಾಮಯ್ಯ ಅವರ ಆಪ್ತ ಬಣದಿಂದ ಗುರುತಿಸಿಕೊಂಡಿದ್ದ ನಟಿ ಉಮಾಶ್ರೀ ಅವರಿಗೆ ತೇರದಾಳದಿಂದ ಟಿಕೆಟ್ ನಿರಾಕರಿಸಲಾಗಿದೆ. ಹಾಲಿ ಶಾಸಕರ ಪೈಕಿ ಕುಸುಮಾ ಶಿವಳ್ಳಿ ಸರ್ಧೆಗೆ ಕಾಂಗ್ರೆಸ್ ಹಸಿರುನಿಶಾನೆ ತೋರಿಸಿದೆ. ದೇವರಹಿಪ್ಪರಗಿಯಲ್ಲಿ ಎಸ್.ಆರ್.ಪಾಟೀಲ್ ಅವರಿಗೆ ಅವಕಾಶ ನೀಡಿಲ್ಲ. ಲಿಂಗಸಗೂರು, ಪುಲಿಕೇಶಿನಗರ, ಶಿಡ್ಲಘಟ್ಟದಲ್ಲಿದ್ದ ಹಾಲಿ ಶಾಸಕರ ಕ್ಷೇತ್ರಗಳಿಗೆ ಇನ್ನು ಹೆಸರು ಅಖೈರುಗೊಳಿಸಿಲ್ಲ.

ಮೂರನೇ ಪಟ್ಟಿಯಲ್ಲಿ 43 ಕ್ಷೇತ್ರಗಳಿಗೆ ಹೆಸರು ಪ್ರಕಟಿಸಲಾಗಿದ್ದು, ಒಟ್ಟು 209 ಹುರಿಯಾಳುಗಳನ್ನು ಕಾಂಗ್ರೆಸ್ ಘೋಷಿಸಿದೆ. ಬಾಕಿ 15 ಕ್ಷೇತ್ರಗಳನ್ನು ಉಳಿಸಿಕೊಂಡಿದೆ. ಪ್ರಕಟಗೊಂಡಿರುವ ಅಭ್ಯರ್ಥಿಗಳ ಪಟ್ಟಿ: ಕೃಷ್ಣರಾಜ–ಎಂ.ಕೆ.ಸೋಮಶೇಖರ್, ಚಾಮರಾಜ–ಕೆ.ಹರೀಶ್‌ಗೌಡ, ಅಥಣಿ–ಲಕ್ಷ್ಮಣ್ ಸವದಿ, ರಾಯಭಾಗ–ಮಹಾವೀರ್ ಮೋಹಿತ್, ಅರಬಾವಿ–ಅರವಿಂದ ದಳವಾಯಿ, ಬೆಳಗಾವಿ ಉತ್ತರ–ಆಸೀಫ್ ಸೇಠ್, ಬೆಂಗಳೂರು ದಕ್ಷಿಣ–ಪದ್ಮಾವತಿ ಮಸ್ತ್ ಮರಡಿ, ತೇರದಾಳ–ಸಿದ್ದಪ್ಪ ರಾಮಪ್ಪ ಕೊನೂರು, ದೇವರಹಿಪ್ಪರಗಿ–ಶರಣಪ್ಪ ಪಿ.ಸುಣಗಾರ್, ಸಿಂಧಗಿ–ಅಶೋಕ್ ಎಂ.ಮನಗೋಳಿ, ಗುಲ್ಬರ್ಗ ಗ್ರಾಮೀಣ–ರೇವೂ ನಾಯಕ್ ಬೆಳಮಗಿ, ಔರಾದ್–ಡಾ.ಭೀಮರಾವ್ ಸಿಂಧೆ, ಮಾನ್ವಿ–ಜಿ.ಹಂಪಾನಾಯಕ್, ದೇವದುರ್ಗ–ಶ್ರೀದೇವಿ ಆರ್.ನಾಯಕ್, ಸಿಂದನೂರು–ಹಂಪನಗೌಡ ಬಾದರ್ಲಿ, ಶಿರಹಟ್ಟಿ– ಸುಜಾತ ಎನ್. ದೊಡ್ಡಮನಿ, ನವಲಗುಂದ–ಎನ್.ಎಚ್.ಕೋನರೆಡ್ಡಿ, ಕುಂದಗೋಳ–ಕುಸುಮಾ ಶಿವಳ್ಳಿ, ಕುಮಟಾ–ನಿವೇದಿತಾ ಆಳ್ವಾ, ಶಿರಗುಪ್ಪ–ಬಿ.ಎಂ.ನಾಗರಾಜ್, ಬಳ್ಳಾರಿನಗರ–ನರಭರತ್ ರೆಡ್ಡಿ, ಜಗಳೂರು–ಬಿ.ದೇವೇಂದ್ರಪ್ಪ, ಹೊನ್ನಾಳಿ–ಡಿ.ಜಿ.ಶಾಂತನಗೌಡ, ಶಿವಮೊಗ್ಗ ಗ್ರಾಮೀಣ–ಡಾ.ಶ್ರೀನಿವಾಸ ಕರಿಯಣ್ಣ, ಶಿವಮೊಗ್ಗ–ಎಚ್.ಸಿ.ಯೋಗೇಶ್, ಶಿಕಾರಿಪುರ–ಜಿ.ಬಿ.ಮಾಲತೇಶ್, ಕಾರ್ಕಳ–ಉದಯಶೆಟ್ಟಿ, ಮೂಡಿಗೆರೆ–ನಯನ ಜ್ಯೋತಿ, ತರೀಕೆರೆ–ಜಿ.ಎಚ್.ಶ್ರೀನಿವಾಸ್, ತುಮಕೂರು ಗ್ರಾಮೀಣ–ಜಿ.ಎಚ್.ಷಣ್ಮುಗಪ್ಪ ಯಾದವ್, ಚಿಕ್ಕಬಳ್ಳಾಪುರ–ಪ್ರದೀಪ್ ಈಶ್ವರ್ ಅಯ್ಯರ್, ಕೋಲಾರ–ಕೊತ್ತನೂರು ಜಿ.ಮಂಜುನಾಥ್, ದಾಸರಹಳ್ಳಿ–ಧನಂಜಯ ಗಂಗಾ ಧರಯ್ಯ, ಚಿಕ್ಕಪೇಟೆ–ಆರ್.ವಿ.ದೇವರಾಜ್, ಬೊಮ್ಮನಹಳ್ಳಿ–ಉಮಾಪತಿ ಶ್ರೀನಿವಾಸ್‌ಗೌಡ, ಬೆಂಗಳೂರು ದಕ್ಷಿಣ–ಆರ್.ಕೆ.ರಮೇಶ್, ಚನ್ನಪಟ್ಟಣ–ಗಂಗಾ ಧರ್.ಎಸ್, ಮದ್ದೂರು–ಕೆ.ಎಂ.ಉದಯ್, ಅರಸೀಕೆರೆ– ಕೆ.ಎಂ. ಶಿವಲಿಂಗೇಗೌಡ, ಹಾಸನ–ಬನವಾಸಿ ರಂಗಸ್ವಾಮಿ, ಮಂಗಳೂರು ದಕ್ಷಿಣ–ಜಾನ್ ರಿಚರ್ಡ್ ಲೋಬೊ, ಪುತ್ತೂರು– ಅಶೋಕ್‌ಕುಮಾರ್ ರೈ.

ಎನ್‌ಆರ್ ಕ್ಷೇತ್ರದ ಎಸ್‌ಡಿಪಿಐ ಅಭ್ಯರ್ಥಿ ನಾಮಪತ್ರ ಸಲ್ಲಿಸಲು ಮೆರವಣಿಗೆಗೆ ಅನುಮತಿ ಪಡೆಯಲಾಗಿತ್ತು; ಎಸ್‌ಡಿಪಿಐ ಸ್ಪಷ್ಟನೆ

ಮೈಸೂರು,ಏ.15(ಪಿಎಂ)– ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಎಸ್‌ಡಿಪಿಐ ಅಭ್ಯರ್ಥಿ ಅಬ್ದುಲ್ ಮಜೀದ್ ಅವರು ಬೈಕ್ ಮತ್ತು ಓಪನ್‌ಜೀಪ್‌ನಲ್ಲಿ ಮೆರವಣಿಗೆ ಮೂಲಕ ನಾಮಪತ್ರ ಸಲ್ಲಿಸಲು ಕ್ಷೇತ್ರದ ರಿಟರ್ನಿಂಗ್ ಅಧಿಕಾರಿಗಳ ಕಾರ್ಯಾಲಯದಿಂದ ಅನುಮತಿ ಪಡೆಯಲಾಗಿತ್ತು ಎಂದು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ಖಾನ್ ಸ್ಪಷ್ಟಪಡಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜೀವ್‌ನಗರದ ಅಲ್‌ಬದರ್ ಮಸೀದಿ ವೃತ್ತದಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಕ್ಷೇತ್ರದ ಚುನಾವಣಾಧಿಕಾರಿ ಕಚೇರಿವರೆಗೆ ಪಕ್ಷದ ಅಭ್ಯರ್ಥಿಯನ್ನು ಬೈಕ್ ಮತ್ತು ಓಪನ್‌ಜೀಪ್‌ಗಳೊಂದಿಗೆ ಮೆರವಣಿಗೆ ಮೂಲಕ ಕರೆದೊಯ್ಯಲು ಕ್ಷೇತ್ರದ ಚುನಾವಣಾಧಿಕಾರಿ ಕಚೇರಿಯಿಂದ ಅನುಮತಿ ಪಡೆಯಲಾಗಿತ್ತು. ಅದರಂತೆ ಮೆರವಣಿಗೆಗೆ ಮುಂದಾದಾಗ ಪೊಲೀಸರು ತಡೆಯೊಡ್ಡಿದರು ಎಂದು ತಿಳಿಸಿದರು.



ಹೀಗಾಗಿ ಕೆಲಕಾಲ ಗೊಂದಲ ಉಂಟಾಗಿತ್ತು. ಈ ಸಂಬಂಧ ಕೆಲ ಮಾಧ್ಯಮಗಳು ಮೆರವಣಿಗೆಗೆ ಅನುಮತಿ ಪಡೆದಿರಲಿಲ್ಲ ಎಂದು ವರದಿ ಮಾಡಿವೆ. ಆದರೆ ಅನುಮತಿ ಪಡೆಯಲಾಗಿತ್ತು. ಪೊಲಿಸರು ತಡೆದಾಗ, ಅನುಮತಿಯೊಂದಿಗೆ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ ಕೆಲಕಾಲ ಪೊಲೀಸರೊಂದಿಗೆ ಪಕ್ಷದ ಕಾರ್ಯಕರ್ತರ ಮಾತಿನ ಚಕಮಕಿಯೂ ನಡೆಯಿತು. ಬಳಿಕ ಗೊಂದಲ ನಿವಾರಣೆಗೊಂಡು ಅನುಮತಿಯಂತೆ ಮೆರವಣಿಗೆ ಮೂಲಕ ತೆರಳಲಾಯಿತು. ಅನುಮತಿ ಇದ್ದರೂ ಗೊಂದಲ ಸೃಷ್ಟಿಸಿದ ಹಿನ್ನೆಲೆಯಲ್ಲಿ ಪಕ್ಷದಿಂದ ಚುನಾವಣಾ ಆಯೋಗಕ್ಕೆ ದೂರು ನೀಡಲಿದ್ದೇವೆ ಎಂದು ಹೇಳಿದರು.

ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ ಮಾತನಾಡಿ, ನಮ್ಮ ಪಕ್ಷವು ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಕೆಲಸ ಮಾಡುವುದಿಲ್ಲ. ಈ ಪಕ್ಷಕ್ಕೆ ಭಾರೀ ಬೆಂಬಲ ವ್ಯಕ್ತವಾಗುತ್ತಿದೆ ಎಂದು ರಾಜಕೀಯ ಪಿತೂರಿಯಿಂದ ಈ ರೀತಿ ಮಾಡಲಾಗಿದೆ ಎಂದು ದೂರಿದರು. ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಎಸ್.ಸ್ವಾಮಿ, ಪ್ರಧಾನ ಕಾರ್ಯದರ್ಶಿ ಸಫಿ ಗೋಷ್ಠಿಯಲ್ಲಿದ್ದರು.

ಅಧಿಕಾರಕ್ಕೆ ಬಂದರೆ ಹೋಬಳಿಗಳಲ್ಲಿ ಇಂದಿರಾ ಕ್ಯಾಂಟೀನ್

ಕಾರಟಗಿ (ಕೊಪ್ಪಳ ಜಿಲ್ಲೆ), ಏ. 15– ಬಡವರ ಹಾಗೂ ಕಾರ್ಮಿಕರ ಸಲುವಾಗಿ ನಮ್ಮ ಸರ್ಕಾರ ಆರಂಭಿಸಿದ್ದ ಇಂದಿರಾ ಕ್ಯಾಂಟೀನ್‌ಗಳನ್ನು ಭ್ರಷ್ಟ ಬಿಜೆಪಿ ಸರ್ಕಾರ ಮುಚ್ಚಿದ್ದು, ಈ ಬಾರಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಎಲ್ಲಾ ಹೋಬಳಿ ಹಾಗೂ ತಾಲೂಕು ಕೇಂದ್ರಗಳಲ್ಲಿ ಇಂದಿರಾ ಕ್ಯಾಂಟೀನ್ ಆರಂಭಿಸಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ **AMMAPUR MILLENIUM DEVELOPERS PVT. LTD.,** ರವರು ಕೆಳಗಿನ ಅನುಸೂಚಿಯಲ್ಲಿರುವ ಸ್ವತ್ತನ್ನು **ROWFIN REAL ESTATE (P) LTD.,** ರವರಿಂದ ಖರೀದಿಸಲು ಆಸಕ್ತಿ ಉಳ್ಳವರಾಗಿರುತ್ತಾರೆ.

ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಯಾವುದೇ ರೀತಿಯಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ವ್ಯಕ್ತಿಯು ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಈ ದಿನದಿಂದ 14 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದ್ದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಆಸಕ್ತಿ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಅನುಸೂಚಿ ಸ್ವತ್ತು

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮಕ್ಕೆ ಸೇರಿದ ಅನ್ಯಕ್ರಾಂತವಾಗಿರುವ ಜಮೀನಿನ ಸರ್ವೇ ನಂ. 247/1 (ಹಳೇ ಸರ್ವೇ ನಂ. 247)ರ ವಿಸ್ತೀರ್ಣ 2 ಎಕರೆಗಳುಳ್ಳ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೇ ನಂ. 181ರ ಜಮೀನು, ಪಶ್ಚಿಮಕ್ಕೆ: ಸರ್ವೇ ನಂ.247/1ರ ಜಮೀನು, ಉತ್ತರಕ್ಕೆ: ರಾ.ಹೆ. 1 ಮತ್ತು ಸರ್ವೇ ನಂ.241ರ ಜಮೀನು, ದಕ್ಷಿಣಕ್ಕೆ: ರಾ.ಹೆ. 1.

ಸಹಿ/– ಶ್ರೀ ಎಮ್.ಎಸ್. ಚಂದ್ರಶೇಖರ್, ವಕೀಲರು ೯
1206/**A, CH-31/A** 1ನೇ ಮಹಡಿ, ನ್ಯೂ ಕಾಂತರಾಜ್ ಅರಸ್ ರಸ್ತೆ, ಬಲ್ಲಾಳ್ ವೃತ್ತದ ಹತ್ತಿರ, ಚಾಮರಾಜಪುರಂ, ಮೈಸೂರು–570 005.
ದಿನಾಂಕ: 15.04.2023, ಸ್ಥಳ: ಮೈಸೂರು

CHANGE OF NAME

I, Vinay Puttaswamy, S/o. K.P. Puttaswamy, residing at Door No. 51, Kenchamba Farm, Kuppalli post, Hassan Taluk & Dist-573217 have changed my name from Vinay Puttaswamy to Vivin K.P. before the Notary K.V. Bachi Reddy, Bangalore City vide affidavit dated 10th April 2023

Sd/- Vivin K.P.

PUBLIC NOTICE

The public at large is hereby notified that my client intends to purchase the schedule property from Mr. N.K.ANANTHA PADMANABHA RAO, aged about 84years, S/o Late Mr. N.H.K. Krishnamurthy Rao, residing at Flat No.301, 'A' Block Skanda Enclave, 6th Cross, 7th Main Road Padmanabha Nagar Bangalore South, Banashankari III Stage, Bangalore Karnataka-560085. If any person/s has/have any kind of right, title, interest, objections or claims over the schedule property, they may lodge their claims/objections with the undersigned within 7 days from the date of this notification with the supporting documents by registered post acknowledgement due failing which, my client will take it for granted that there are no claims/charges from whomsoever. Any claims/objections received after this stipulated period of 7 days will be considered as no claim and the same will be ignored and my client shall proceed to complete the sale transaction.

SCHEDULE OF THE PROPERTY

All that Piece and Parcel of the Residential House Constructed on the site bearing No.897, Situated at 5th Cross, S.S.Nagar "B" Layout, Bannimantap Extension Mandi Mohalla, Mysore. Site measuring East to West 12.19 Mtrs and North to South 18.28 Mtrs in total 222.8332 Square Meters and the property is bounded on the; East by: Property bearing No.896, West by: Property bearing No.898, North by:12.00 Meter Road, South by: Property bearing No.872.

PLINTH AREA:

The property consist of 1438.6 Square feet of Ground Floor & 1438.6 Square feet of First Floor with RCC roofing and Mosaic Tiled flooring having electricity, water and sanitary connections.

Sd/- Sridhar.L.Holla, Advocate, No. 237, Kshetraiah Road, K.R.Mohalla, Mysore-570024. Phone: 98442 58544/9902613515
Place: Mysore.Date :15-04-2023.

ರಾಜಾಸೀಟಿನಲ್ಲಿ ಕಂಗೊಳಿಸಿದ ಮತದಾನ ಮಹತ್ವದ ವೈವಿಧ್ಯಮಯ ಕಲಾ ಚಿತ್ರಗಳು

ರಾಜಾಸೀಟಿನಲ್ಲಿ ಚಿತ್ರಸಂತೆ ಆಯೋಜಿಸಲು ಚಿಂತನೆ: ಡಿಸಿ



ಮಡಿಕೇರಿ, ಏ.15– ಮಡಿಕೇರಿಯ ರಾಜಾಸೀಟು ಉದ್ಯಾನವನದಲ್ಲಿ ಚಿತ್ರ ಸಂತೆಯಂಥ ಕಲಾಪ್ರಕಾರ ಆಯೋಜಿಸಲು ಸೂಕ್ತತಾಣವಾಗಿದ್ದು ಮುಂದಿನ ದಿನಗಳಲ್ಲಿ ವಿನೂತನವಾದ ಚಿತ್ರಸಂತೆಯನ್ನು ಆಯೋಜಿಸಲಾಗುತ್ತದೆ ಎಂದು ಡಿಸಿ ಡಾ.ಬಿ.ಸಿ. ಸತೀಶ ತಿಳಿಸಿದ್ದಾರೆ.

ನಗರದ ರಾಜಾಸೀಟು ಉದ್ಯಾನವನದಲ್ಲಿ ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ ವತಿಯಿಂದ ಮಡಿಕೇರಿ ತಾಲೂಕು ಜಾನಪದ ಪರಿಷತ್ ಸಹಯೋಗದಲ್ಲಿ ಶನಿವಾರ ಆಯೋಜಿಸಲಾಗಿದ್ದ 'ಕೊಡಗು ಮತ್ತು ಮತದಾನ' ಚಿತ್ರಕಲಾ ಸ್ಪರ್ಧೆ ಮತ್ತು ನಾನು ಮತ ಹಾಕುವೆ ಎಂಬ ಬೃಹತ್ ಕ್ಯಾನ್ವಾಸ್ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸ್ವೀಪ್ ಸಮಿತಿ ವತಿಯಿಂದ ನಾನಾ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಆಯೋಜಿಸಲಾಗುತ್ತಿದೆ. ಮತದಾನ ಸಂದರ್ಭ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ತಮ್ಮ ಹಕ್ಕು ಚಲಾಯಿಸುವಂತೆ ಮಾಡುವ ಹೊಣೆಗಾರಿಕೆ ಸಮಿತಿ ಮೇಲಿದೆ. ಈ ನಿಟ್ಟಿನಲ್ಲಿ ಮತದಾನದ ಮಹತ್ವ ಸಾರುವ ಚಿತ್ರಕಲಾ ಸ್ಪರ್ಧೆಯನ್ನೂ ಮಡಿಕೇರಿ ತಾಲೂಕು ಜಾನಪದ ಪರಿಷತ್ ಸಹಯೋಗದಲ್ಲಿ ಆಯೋಜಿಸಲಾಗಿದೆ. ಇದಕ್ಕೆ ಉತ್ತಮ ಸ್ಪಂದನೆ ದೊರಕಿರುವುದು ಹರ್ಷ ತಂದಿದೆ ಎಂದರು.

ಮಡಿಕೇರಿ ತಾಲೂಕು ಜಾನಪದ ಪರಿಷತ್ ಅಧ್ಯಕ್ಷ ಅನಿಲ್ ಎಚ್.ಟಿ. ಅವರು ಮಾತನಾಡಿ, ವಿಶ್ವಚಿತ್ರಕಲಾ ದಿನಾಚರಣೆಯನ್ನು ಈ ಬಾರಿ ಜಿಲ್ಲಾಡಳಿತ, ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿಯ ಸಹಯೋಗದೊಂದಿಗೆ ತಾಲೂಕು ಜಾನಪದ ಪರಿಷತ್ ಆಯೋಜಿಸಿದೆ ಎಂದರು.

ಮುಳಿಗು ತಜ್ಞ ಮತ್ತು ಚುನಾವಣಾ ರಾಯಭಾರಿ ಕೆ.ರವಿಮುತ್ತಪ್ಪ ಮಾತನಾಡಿ, ನಿರ್ಭೀತಿಯಿಂದ ಎಲ್ಲರೂ ಮತದಾನ ಮಾಡಬೇಕೆಂದು ಕರೆ ನೀಡಿದರು. ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷರಾದ ಬಿ.ಜಿ.ಅನಂತ ಶಯನ ಮಾತನಾಡಿ, ಅರ್ಹರು ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು ಎಂದರು.

ಜಿಪಂ ಮುಖ್ಯ ಯೋಜನಾಧಿಕಾರಿ ರಾಜಗೋಪಾಲ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಾದ ನಾಯಕ್, ಹಿರಿಯ ಸಹಾಯಕ ನಿರ್ದೇಶಕರಾದ ಪ್ರಮೋದ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಸಿ.ರಂಗಧಾಮಯ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಪುಟ್ಟರಾಜು, ಮೂರ್ನಾಡು ಜಾನಪದ ಪರಿಷತ್ ನಿರ್ದೇಶಕರಾದ ಕಿಗ್ಗಾಲು ಹರೀಶ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸದಾಶಿವ ಪಲ್ಲೇದ್, ಕುಶಾಲನಗರ ಜಾನಪದ ಪರಿಷತ್ ಅಧ್ಯಕ್ಷರಾದ ಚಂದ್ರಮೋಹನ್, ಮಡಿಕೇರಿ ತಾಲೂಕು ಜಾನಪದ ಪರಿಷತ್ ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಸ್ವೀಪ್ ಸಮಿತಿಯ ಅಧಿಕಾರಿ ನವೀನ್ ಇನ್ನಿತರರಿದ್ದರು.

ಇದೇ ಸಂದರ್ಭ ಜಿಲ್ಲೆಯ ಕಲಾವಿದರಾದ ಬಿ.ಆರ್.ಸತೀಶ್ ರಚಿಸಿದ ನಾನು ಮತ ಹಾಕುವೆ... ಮತದಾನ ನನ್ನ ಹಕ್ಕು ಎಂಬ ಬೃಹತ್ ಕ್ಯಾನ್ವಾಸ್‌ನಲ್ಲಿ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಸಹಿ ಹಾಕುವ ಮೂಲಕ ಮತದಾನ ಅಭಿಯಾನಕ್ಕೆ ಚಾಲನೆ ನೀಡಿದರು.

ಜಿಲ್ಲೆಯ ವಿವಿಧೆಡೆಗಳ ಕಲಾವಿದರಾದ ಉ.ರಾ.ನಾಗೇಶ್, ಬಸವರಾಜು ಬಡಿಗೇರ್, ಸದಾನಂದ ಪುರೋಹಿತ್, ಸಾಧಿಕ್, ಸುದೀಪ್, ಬಾವಾ ಮಾಲ್ದಾರೆ, ಮಂಜುನಾಥ್, ಮೈಸೂರಿನ ಜಿಲ್ಲಾ ಪಯಸ್ವಿನಿ ಸತೀಶ್, ಸೂರಜ್ ಪ್ರಸಾದ್ ಸೇರಿದಂತೆ ಅನೇಕ ಕಲಾವಿದರು ಮತದಾನದ ಮಹತ್ವ ಸಾರುವ ವರ್ಣಮಯ ಚಿತ್ರರಚಿಸಿ ಗಮನ ಸೆಳೆದರು. ಮಡಿಕೇರಿ ತಾಲೂಕು ಜಾನಪದ ಪರಿಷತ್ ಅಧ್ಯಕ್ಷ ಅನಿಲ್ ಎಚ್.ಟಿ. ಕಾರ್ಯಕ್ರಮ ನಿರೂಪಿಸಿದರು.

ಚಾ.ನಗರದಲ್ಲಿ ಪ್ರಚಾರಕ್ಕಿಳಿದ ವಿ.ಸೋಮಣ್ಣ, ಕಾರ್ಯಕರ್ತರ ಸಭೆ ನಡೆಸಿದ ಪುಟ್ಟರಂಗಶೆಟ್ಟಿ





ಚಾಮರಾಜನಗರ, ಏ.15– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಚಿವರಾದ ವಿ.ಸೋಮಣ್ಣ ಶನಿವಾರ ಕ್ಷೇತ್ರದಲ್ಲಿ ಮೊದಲ ಬಾರಿಗೆ ಪ್ರಚಾರ ನಡೆಸಿದರು. ಇತ್ತ ಕಾಂಗ್ರೆಸ್ ಅಭ್ಯರ್ಥಿ ಶಾಸಕ ಸಿ. ಪುಟ್ಟರಂಗಶೆಟ್ಟಿ ನಗರದಲ್ಲಿ ಪಕ್ಷದ ಕಾರ್ಯಕರ್ತರ ಸಭೆ ನಡೆಸಿದರು.

ಬಿಜೆಪಿ ಪ್ರಚಾರ: ಸಚಿವ ವಿ.ಸೋಮಣ್ಣ ತಮಗೆ ಟಿಕೆಟ್ ಘೋಷಿಸಿದ ನಂತರ ನಗರಕ್ಕೆ ಎರಡನೇ ಬಾರಿಗೆ ಭೇಟಿ ನೀಡಿ ಪ್ರಚಾರ ನಡೆಸಿದರು. ಈ ಮೊದಲು ಗುರುವಾರ ಆಗಮಿಸಿ ಪಕ್ಷದ ಟಿಕೆಟ್ ವಂಚಿತ ಜಿ.ನಾಗಶ್ರೀ ಪ್ರತಾಪ್ ಅವರ ಮನೆಗೆ ಭೇಟಿ ನೀಡಿದ್ದರು. ನಂತರ ಪಕ್ಷದ ಕಚೇರಿಯಲ್ಲಿ ಪಕ್ಷದ ಮುಖಂಡರ ಸಭೆ ನಡೆಸಿದ್ದರು. ಇದಾದ ಬಳಿಕ ಶನಿವಾರ ಕ್ಷೇತ್ರದ ಅನೇಕ ಗ್ರಾಮಗಳಿಗೆ ತೆರಳಿ ಪ್ರಚಾರ ನಡೆಸಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಮತ್ತೋರ್ವ ಟಿಕೆಟ್ ವಂಚಿತ ಎಂ. ರಾಮಚಂದ್ರ ಅವರ ಮನೆಯಲ್ಲಿ ಉಪಾಹಾರ ಸೇವಿಸಿದ ಸೋಮಣ್ಣ ಕೂಡ್ಲೂರು ಗ್ರಾಮದ ಮಂಟೇಸ್ವಾಮಿ ದೇವಸ್ಥಾನಕ್ಕೆ ತೆರಳಿ ದೇವರ ದರ್ಶನ ಪಡೆಯುವ ಮೂಲಕ ತಮ್ಮ ಚುನಾವಣಾ ಪ್ರಚಾರವನ್ನು ಅಧಿಕೃತವಾಗಿ ಆರಂಭಿಸಿದರು. ನಂತರ ಆಲೂರು ಗ್ರಾಮಕ್ಕೆ ತೆರಳಿ ಡಾ.ಬಿ.ಆರ್. ಅಂಬೇಡ್ಕರ್, ಶ್ರೀ ಬಸವೇಶ್ವರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದರು. ಮಾಜಿ ರಾಜ್ಯಪಾಲರಾದ ಬಿ. ರಾಚಯ್ಯ ಅವರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು.

ಆಲೂರು ಗ್ರಾಮದಲ್ಲಿ ಪಕ್ಷದ ಮಹಾಶಕ್ತಿ ಕೇಂದ್ರದ ಸಭೆ ನಡೆಸಿ ಮತಯಾಚನೆ ನಂತರ ಚಂದಕವಾಡಿ, ಅಂಕನಶೆಟ್ಟಿಪುರ ಹಾಗೂ ಅರಕಲವಾಡಿ ಗ್ರಾಮಗಳಲ್ಲಿ ಮಹಾಶಕ್ತಿ ಕೇಂದ್ರದ ಸಭೆಯನ್ನು ನಡೆಸಿ ಪಕ್ಷದ ಮುಖಂಡರು, ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು.

ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಕ್ಷೇತ್ರದ ಚುನಾವಣಾ ಪ್ರಭಾರಿ ಕೋಟೆ ಎಂ.ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಲ್ಲಾ ಅಧ್ಯಕ್ಷ ಜಿ.ನಾರಾಯಣ್‌ಪ್ರಸಾದ್, ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್, ಮುಖಂಡರಾದ ಅಮ್ಮನಪುರ ಮಲ್ಲೇಶ್, ಡಾ.ಎ.ಆರ್. ಬಾಬು, ನಿಜಗುಣರಾಜು, ಹನುಮಂತಶೆಟ್ಟಿ, ಯು.ಎಂ. ಪ್ರಭುಸ್ವಾಮಿ, ಆರ್.ಸುಂದರ್, ಆಲೂರು ಎ.ಎಸ್. ನಟರಾಜು, ಎ.ಆರ್. ಬಾಲರಾಜು, ಎಚ್.ಎಸ್. ಬಸವರಾಜು, ಅರಕಲವಾಡಿ ಸೋಮನಾಯಕ, ರೂಪೇಶ್‌ಬಿರ್ ಇತರರು ಇದ್ದರು.

ಕಾಂಗ್ರೆಸ್ ಸಭೆ: ಕಾಂಗ್ರೆಸ್ ಅಭ್ಯರ್ಥಿ ಸಿ.ಪುಟ್ಟರಂಗಶೆಟ್ಟಿ ಬೆಳಗ್ಗೆಯಿಂದಲೇ ಬೊಮ್ಮನಹಳ್ಳಿಯಲ್ಲಿ ತಮಿಳು ಸಮುದಾಯದವರನ್ನು ಭೇಟಿ ಮಾಡಿ, ಮತಯಾಚಿಸಿದರು. ನಂತರ ನಗರದ ನಂದಗಲ್ಲು ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ನಾಮಪತ್ರ ಸಲ್ಲಿಕೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದರು. ತದನಂತರ ಅಂಕನಶೆಟ್ಟಿಪುರ ಗ್ರಾಮಕ್ಕೆ ತೆರಳಿ ಮತಯಾಚಿಸಿದರು.

ಬಳಿಕ ನಗರದ 24 ಮತ್ತು 25ನೇ ವಾರ್ಡ್‌ಗಳಲ್ಲಿ ಮನೆ–ಮನೆಗೆ ತೆರಳಿ ಚುನಾವಣಾ ಪ್ರಚಾರ ನಡೆಸಿ ನಮ್ಮನ್ನು ಬೆಂಬಲಿಸುವಂತೆ ಮತದಾರರಲ್ಲಿ ಮನವಿ ಮಾಡಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ. ಮರಿಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ಮುನ್ನ, ಒಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ. ಮಹದೇವಶೆಟ್ಟಿ, ಮುಖಂಡರಾದ ಎಸ್‌ವಿಕೆ ಆರ್. ಉಮೇಶ್, ಮ.ಶ್ರೀನಿವಾಸನಾಯಕ, ಮಹದೇವ ನಾಯಕ, ನಲ್ಲೂರು ಸೋಮೇಶ್, ಶಿವಸ್ವಾಮಿ, ಭಾಗ್ಯಮ್ಮ, ಆಲೂರು ಪ್ರದೀಪ್, ಆರ್. ಮಹದೇವು, ರವಿಕುಮಾರ್ ಇತರರು ಇದ್ದರು.

ಕೊಡಗಿನ ಯುವತಿಗೆ ಭಾರತೀಯ ಭೂ ಸೇನೆಯಲ್ಲಿ ಕರ್ನಲ್ ಪದವಿ




ಲೆಫ್ಟಿನೆಂಟ್ ಕರ್ನಲ್ ಮಂಡೇಪಂಡ ಸ್ಮಿತಾ ಅಯ್ಯಪ್ಪ

ಮಡಿಕೇರಿ, ಏ.15– ಮೈಸೂರಿನ ಲೆಫ್ಟಿನೆಂಟ್ ಕರ್ನಲ್ ಮಂಡೇಪಂಡ ಸ್ಮಿತಾ ಅಯ್ಯಪ್ಪ (ತಾಮನೆ–ಮೇವಡ) ಅವರು ಆರ್ಮಿ ಅಧಿಕಾರಿಯಾಗಿ ಕರ್ನಲ್ ಹುದ್ದೆಗೆ ಬಡ್ತಿ ಪಡೆದ ಪ್ರಥಮ ಕೊಡಗಿನ ಮಹಿಳೆಯಾಗಿದ್ದಾರೆ. 2005ರಲ್ಲಿ ಆಫೀಸರ್ ಟ್ರೈನಿಂಗ್ ಅಕಾಡೆಮಿ ಚೆನ್ನೈನಲ್ಲಿ ತರಬೇತಿ ಪಡೆದು ಆರ್ಮಿ ಸರ್ವಿಸಸ್ ಕೋರ್‌ಗೆ ಸೇರ್ಪಡೆಗೊಂಡು, ತನ್ನ 18 ವರ್ಷದ ಸೇವೆಯಲ್ಲಿ ಹಲವಾರು ಹುದ್ದೆಗಳನ್ನು ನಿರ್ವಹಿಸಿ ಸವಾಲಿನ ಸನ್ನಿವೇಶಗಳನ್ನು ಸಮರ್ಥವಾಗಿ ನಿಭಾಯಿಸಿ ತನ್ನ ದೇಶವೂ ಅಲ್ಲದೆ ಹೊರದೇಶದಲ್ಲೂ ಹೆಸರುವಾಸಿಯಾಗಿದ್ದಾರೆ.

ವಿಶ್ವಸಂಸ್ಥೆ (UN) ಶಾಂತಿಪಾಲನಾ ಸಂಸ್ಥೆ (Peace keeping)ಗೆ ನಿಯುಕ್ತಿಗೊಂಡು ಇಸ್ರೇಲ್ ಮತ್ತು ಸಿರಿಯಾ (UNDOF) ದಲ್ಲಿ ತನ್ನ ಧೈರ್ಯ, ಸ್ಥೈರ್ಯ ಮತ್ತು ಆ ಸಮಯಕ್ಕೆ ಸರಿಯಾದ (ಘಟನೆಗಳಿಗೆ) ಅತ್ಯುತ್ತಮ ನಿರ್ಣಯಗಳಿಗೆ ಅಲ್ಲಿನ Force Commander ರವರ ಕಮಾಂಡೇಶನ್ ಕಾರ್ಡ್ ದೊರೆತಿದೆ.

2014ರಲ್ಲಿ UNDOF ನಲ್ಲಿ ಸೇವೆಯಲ್ಲಿದ್ದಾಗ ಆಫ್ರಿಕಾ ದೇಶದ ಟಾಂಜಾನಿಯ ರಾಜ್ಯದ ಕಿಲಿಮಂಜಾರೋ ಎಂಬ ರೌದ್ರರಮಣೀಯವಾದ ಪರ್ವತಾರೋಹಣದಲ್ಲಿ ಯಶಸ್ವಿಯಾಗಿದ್ದಾರೆ. ಈ ಪರ್ವತವು ಸಮುದ್ರಮಟ್ಟದಿಂದ 19341 ಅಡಿ ಎತ್ತರದ ಗುಡ್ಡಗಾಡಿನ ಪ್ರದೇಶವಾಗಿರುತ್ತದೆ. 2013ರಲ್ಲಿ Ride the Himalayan Rally ಎಂಬ ಚಾತುರ್ಯ ಹಾಗೂ ಸಾಹಸ ಮೆರೆವ ಸ್ಪರ್ಧೆಯಲ್ಲಿ ಮಿಲಿಟರಿ Women Officerಗಳ ವರ್ಗದಲ್ಲಿ ಜಿಪ್ಸಿ ವಾಹನದ ಸ್ಪರ್ಧೆಯಲ್ಲಿ ಮೊದಲಿಗರಾಗಿರುತ್ತಾರೆ. ಇವರು ಮೇವಡ ಅಪ್ಪಣ್ಣ ರಾಧಾ ದಂಪತಿಯ ಪುತ್ರಿ (ನಿವೃತ್ತ ಯೋಧ ESM, HSM 37 Coorg Medium Regiment ಹಾಗೂ 35 Medium Regiment) ಇವರು ಮಂಡೇಪಂಡ ಕರ್ನಲ್ ಅಯ್ಯಪ್ಪನವರನ್ನು (ಮರಾಠ ಲೈಟ್ ಇನ್‌ಫೆಂಟ್ರಿ) ವಿವಾಹವಾಗಿದ್ದಾರೆ.

ಧ್ರುವ ನೆನೆದು ಕಣ್ಣೀರಿಟ್ಟ ಎಆರ್‌ಕೆ



ಕೊಳ್ಳೇಗಾಲ, ಏ.15– ಕೊಳ್ಳೇಗಾಲದ ಭ್ರಮರಾಂಭ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಸಭೆಯಲ್ಲಿ ಮಾಜಿ ಶಾಸಕರೂ ಮತ್ತು ಕಾಂಗ್ರೆಸ್ ಅಭ್ಯರ್ಥಿಯೂ ಆದ ಎ.ಆರ್. ಕೃಷ್ಣಮೂರ್ತಿ ಮಾಜಿ ಸಂಸದ ಧ್ರುವನಾರಾಯಣ್ ಅವರನ್ನು ನೆನೆದು ಕಣ್ಣೀರಿಟ್ಟಿದ್ದಾರೆ.

ಕಣ್ಣೀರಿಡುತ್ತಲೆ ಮಾತನಾಡಿದ ಅವರು, ನನಗೆ ಉತ್ತಮ ರಾಜಕೀಯ ಸ್ನೇಹಿತರಾಗಿದ್ದರು. ನಾವಿಬ್ಬರು ಹಲವು ಚುನಾವಣೆಗಳಲ್ಲಿ ಪರಸ್ಪರ ಎದುರಾಳಿಯಾಗಿದ್ದರೂ ಸಹಾ ರಾಜಕೀಯ ವೈಷಮ್ಯ ಬೆಳೆಸಿಕೊಂಡಿರಲಿಲ್ಲ, ಕಾಂಗ್ರೆಸ್ ಪಕ್ಷ ಸೇರಿದ ಮೇಲೆ ಅವರನ್ನು ಮೀರಿ ನಾನು ರಾಜಕೀಯ ಮಾಡಿಲ್ಲ, ಅವರ ಸಾವಿನ ವಿಚಾರ ತಿಳಿಯುತ್ತಲೆ ನನಗೆ ಶಾಕ್ ಆಯಿತು ಎನ್ನುತ್ತಲೇ ಗದ್ಗದಿತರಾದರು.

ಮಾಜಿ ಶಾಸಕ ಎಸ್.ಜಯಣ್ಣ ಮಾತನಾಡಿ, ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಎಆರ್‌ಕೆ ಗೆಲ್ಲುತ್ತಾರೆ ಎಂಬ ಭಾವನೆ ಪ್ರತಿಯೊಬ್ಬರಲ್ಲು ಬರಬೇಕು ಎಂದರು. ಪ್ರಚಾರ ಸಮಿತಿ ಅಧ್ಯಕ್ಷ ಮಧುವನಹಳ್ಳಿ ಶಿವಕುಮಾರ್, ವಡ್ಡಗೆರೆ ದಾಸ್, ಕೊಪ್ಪಾಳಿನಾಯಕ, ಯೋಗೀಶ್, ಮೋಳೆ ಚಂದ್ರು, ಆಲಹಳ್ಳಿ ತೋಟೇಶ್, ನಂಜೇಗೌಡ, ರೇಖಾ ರಮೇಶ್, ಎ.ಪಿ. ಶಂಕರ್, ಸುಶೀಲ, ರಮೇಶ್, ಅಣಗಳ್ಳಿ ಬಸವರಾಜು, ಸಿದ್ದಲಿಂಗೇಗೌಡ, ಚಿನ್ನಸ್ವಾಮಿ, ಬಸ್ತಿಪುರ ರವಿ, ಸೋಮಶೇಖರ್, ಲಿಂಗರಾಜು ಇನ್ನಿತರರು ಇದ್ದರು.

ಯುಪಿ ಮಾಫಿಯಾ ಡಾನ್ ಅತೀಕ್, ಸಹೋದರ ಅಶ್ರಫ್ ಗುಂಡಿಕ್ಕಿ ಹತ್ಯೆ

ಆಗ್ರಾ (ಉತ್ತರ ಪ್ರದೇಶ): ಉಮೇಶ್ ಪಾಲ್ ಹತ್ಯೆ ಪ್ರಕರಣದಲ್ಲಿ ಮೋಸ್ಟ್ ವಾಂಟೆಡ್ ಆಗಿದ್ದ ದರೋಡೆಕೋರ–ರಾಜಕಾರಣಿ ಅತೀಕ್ ಅಹ್ಮದ್ ಪುತ್ರ ಅಸದ್‌ನನ್ನು ಉತ್ತರ ಪ್ರದೇಶದ ವಿಶೇಷ ಕಾರ್ಯಪಡೆ ಎನ್‌ಕೌಂಟರ್ ಮಾಡಿದ ಬೆನ್ನಲ್ಲೇ ಅತೀಕ್ ಅಹ್ಮದ್ ಮತ್ತು ಆತನ ಸಹೋದರ ಅಶ್ರಫ್‌ನ ಮೇಲೆ ಗುಂಡಿನ ದಾಳಿ ನಡೆಸಿ, ಹತ್ಯೆ ಮಾಡಲಾಗಿದೆ. ವೈದ್ಯಕೀಯ ತಪಾಸಣೆಗೆ ಕರೆದೊಯ್ಯುವ ವೇಳೆ ಪ್ರಯಾಗ್‌ರಾಜ್ ಬಳಿ ಶೂಟೌಟ್ ಮಾಡಲಾಗಿದೆ. ಅಸದ್ ಅಹ್ಮದ್‌ನ ಅಂತ್ಯಕ್ರಿಯೆ ಇಂದು ನಡೆದಿದೆ. ಈ ವೇಳೆ ಭಾರೀ ಭದ್ರತೆ ಕಲ್ಪಿಸಲಾಗಿತ್ತು.

2006ರಲ್ಲಿ ಉಮೇಶ್ ಪಾಲ್ ಅಪಹರಣ ಪ್ರಕರಣದಲ್ಲಿ ಗ್ಯಾಂಗ್‌ಸ್ಟರ್ ಅತೀಕ್ ಅಹ್ಮದ್ ದೋಷಿ ಎಂದು ಪ್ರಯಾಗರಾಜ್ ನ್ಯಾಯಾಲಯ ತೀರ್ಪು ನೀಡಿದೆ. ಉಮೇಶ್ ಪಾಲ್ ಅಪಹರಣ ಪ್ರಕರಣದಲ್ಲಿ ಅತೀಕ್ ಅಹ್ಮದ್, ಖಾನ್ ಸೌಲತ್ ಹನೀಫ್ ಮತ್ತು ದಿನೇಶ್ ಪಾಸಿ ಅವರಿಗೆ ಪ್ರಯಾಗ್‌ರಾಜ್‌ನಲ್ಲಿರುವ ಎಂಪಿ, ಎಂಎಲ್‌ಎ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಕೊಲೆ ಮತ್ತು ಅಪಹರಣ ಸೇರಿದಂತೆ ಕನಿಷ್ಠ 100 ಕ್ರಿಮಿನಲ್ ಪ್ರಕರಣಗಳನ್ನು ಮಾಜಿ ಸಂಸದ ಮತ್ತು ಶಾಸಕ ಅತೀಕ್ ಅಹ್ಮದ್ ಎದುರಿಸುತ್ತಿದ್ದಾನೆ.

ಮದ್ದೂರು ಜೆಡಿಎಸ್ ಅಭ್ಯರ್ಥಿ ತಮ್ಮಣ್ಣ ನಾಮಪತ್ರ ಸಲ್ಲಿಕೆ



ಮದ್ದೂರು, ಏ.15– ಮೇ 10ರಂದು ನಡೆಯುವ ಚುನಾವಣೆ ಹಿನ್ನೆಲೆಯಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಡಿ.ಸಿ.ತಮ್ಮಣ್ಣ ತಮ್ಮ ಅಪಾರ ಬೆಂಬಲಿಗರೊಂದಿಗೆ ತೆರಳಿ ಚುನಾವಣಾಧಿಕಾರಿ ಆರ್.ನಾಗರಾಜು ಅವರಿಗೆ ನಾಮಪತ್ರ ಸಲ್ಲಿಸಿದರು.

ಇದಕ್ಕೂ ಮುನ್ನಾ ತಮ್ಮ ಮನೆ ದೇವರು ತಾಲೂಕಿನ ಆಬಲವಾಡಿ ಗ್ರಾಮದ ತೋಪಿನ ತಿಮ್ಮಪ್ಪ ದೇವಾಲಯದಲ್ಲಿ ಪ್ರಥಮ ಪೂಜೆ ಸಲ್ಲಿಸಿ, ಬಳಿಕ ಪಟ್ಟಣದ ಶಕ್ತಿ ದೇವತೆ ಮದ್ದೂರಮ್ಮ, ಹೊಳೆ ಆಂಜನೇಯ ಸ್ವಾಮಿ ಮತ್ತು ಶ್ರೀಉಗ್ರನರಸಿಂಹಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಕಳೆದೆರಡು ಬಾರಿ ಮದ್ದೂರು ಕ್ಷೇತ್ರದ ಜೆಡಿಎಸ್ ಶಾಸಕರಾಗಿ ಆಯ್ಕೆಯಾಗಿರುವ ಶಾಸಕ ಡಿ.ಸಿ. ತಮ್ಮಣ್ಣ ಮೂರನೇ ಬಾರಿ ಆಯ್ಕೆ ಬಯಸಿ ಸಾವಿರಾರು ಕಾರ್ಯಕರ್ತರು, ಬೆಂಬಲಿಗರು ಮತ್ತು ಸಂಸ್ಕೃತಿಕ ಕಲಾ ತಂಡಗಳೊಂದಿಗೆ ಬೈಕ್ ರ‍್ಯಾಲಿ ಮೂಲಕ ತೆರೆದ ವಾಹನದಲ್ಲಿ ಪಟ್ಟಣದ ಪೇಟೆ ಬೀದಿಯಲ್ಲಿ ಮೆರವಣಿಗೆ ನಡೆಸಿದರು.

ನಾಮಪತ್ರ ಸಲ್ಲಿಕೆಗೆ ಬರಿಗಾಲಲ್ಲಿ ಆಗಮಿಸಿದ ಜೆಡಿಎಸ್ ಅಭ್ಯರ್ಥಿ ಶಾಸಕ ಡಿ.ಸಿ.ತಮ್ಮಣ್ಣ ಬೆಳಗ್ಗೆ 11.50ರ ಶುಭ ಮುಹೂರ್ತದಲ್ಲಿ ತಮ್ಮ ಪತ್ನಿ ಪ್ರಮೀಳಾ ತಮ್ಮಣ್ಣ, ಪುತ್ರಿ ಡಾ.ಸೌಮ್ಯರಮೇಶ್, ತಾಲೂಕು ಘಟಕದ ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಕಾರ್ಯಾಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ ಅವರ ನೇತೃತ್ವದಲ್ಲಿ ಚುನಾವಣಾಧಿಕಾರಿ ನಾಗರಾಜು ಅವರಿಗೆ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಡಿ.ಸಿ.ತಮ್ಮಣ್ಣ, ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳೇ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದ್ದು, ಕ್ಷೇತ್ರದ ಜನರ ಆಶೀರ್ವಾದ ಸದಾ ತಮ್ಮ ಮೇಲಿದ್ದು, ಪ್ರಸಕ್ತ ಚುನಾವಣೆಯಲ್ಲಿ ತಾವು ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದರು.

ತಾವು ವೈಭವೀಕರಿಸಿ ಪ್ರಚಾರ ಮಾಡುವ ಅಗತ್ಯವಿಲ್ಲ. ನಾನು ಮಾಡಿದ ಅಭಿವೃದ್ಧಿ ಕಾರ್ಯಗಳೇ ಪ್ರಚಾರ ಮಾಡುತ್ತಿದ್ದು, ಕ್ಷೇತ್ರದಾದ್ಯಂತ ಮತದಾರರು ತಮ್ಮನ್ನು ಬೆಂಬಲಿಸುವ ವಿಶ್ವಾಸವಿದೆ. ವಿಧಾನಸಭಾ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷವು ಅಧಿಕಾರಕ್ಕೆ ಬರಲಿದ್ದು, ಮತ್ತೊಮ್ಮೆ ಹೆಚ್.ಡಿ. ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ ಎಂದರು.

ತೇವಣಿ ನೀಡಿದ ಗ್ರಾಮಸ್ಥರು: ಕಳೆದ ಕೆಲ ಚುನಾವಣೆಯಿಂದ ತಾಲೂಕಿನ ದೇವರಹಳ್ಳಿ ಗ್ರಾಮಸ್ಥರು ಜೆಡಿಎಸ್ ಅಭ್ಯರ್ಥಿಗೆ ತೇವಣಿ ನೀಡುವುದು ವಾಡಿಕೆ. ಅದರಂತೆ ಈ ಬಾರಿಯೂ ಜೆಡಿಎಸ್ ಅಭ್ಯರ್ಥಿ ಡಿ.ಸಿ. ತಮ್ಮಣ್ಣ ಅವರಿಗೆ ನಾಮಪತ್ರ ಸಲ್ಲಿಕೆ ವೇಳೆ 10 ಸಾವಿರ ರೂ. ತೇವಣಿ ಹಣ ವಿತರಿಸಿದರು.

ಹಸಿರು ಶಾಲು: ಶಾಸಕ ಡಿ.ಸಿ.ತಮ್ಮಣ್ಣ ನಾಮಪತ್ರ ಸಲ್ಲಿಕೆ ವೇಳೆ ರೈತರ ಸಂಕೇತ ಸೂಚಿಸುವ ಹಸಿರು ಶಾಲು ತೊಟ್ಟು ನಾಮಪತ್ರ ಸಲ್ಲಿಸಿರುವುದು ವಿಶೇಷವಾಗಿತ್ತಲ್ಲದೇ, ತಾಲೂಕು ಕಚೇರಿಗೆ ಆಗಮಿಸಿದ ಶಾಸಕ ಡಿ.ಸಿ.ತಮ್ಮಣ್ಣ 20 ನಿಮಿಷಗಳ ಕಾಲ ಶುಭಗಳಿಗೆಗೆ ಕಾದು 11.50ರಲ್ಲಿ ನಾಮಪತ್ರ ಸಲ್ಲಿಸಿದರು.

ಗೈರು ಹಾಜರಿ: ನಾಮಪತ್ರ ಸಲ್ಲಿಕೆ ವೇಳೆ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು ಅವರ ಗೈರು ಹಾಜರಿ ಎದ್ದು ಕಾಣುತಿತ್ತಲ್ಲದೇ ಸಾವಿರಾರು ಕಾರ್ಯಕರ್ತರು ಬೈಕ್ ರ‍್ಯಾಲಿ ಹಾಗೂ ತೆರೆದ ವಾಹನದಲ್ಲಿ ತೆರಳುತ್ತಿದ್ದ ವೇಳೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪರ ಘೋಷಣೆ ಕೂಗುತಿದ್ದದ್ದು ಕಂಡುಬಂತು.

ಈ ವೇಳೆ ಪುರಸಭಾಧ್ಯಕ್ಷ ಸುರೇಶ್ ಕುಮಾರ್, ಉಪಾಧ್ಯಕ್ಷೆ ಸುಮಿತ್ರ, ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ಆರ್.ಪ್ರಸನ್ನಕುಮಾರ್, ಸದಸ್ಯರಾದ ಮಹೇಶ್, ಬಸವರಾಜು, ವನಿತಾ, ಎಂ.ಐ.ಪ್ರವೀಣ್, ಯೂತ್ ಘಟಕದ ಉಪಾಧ್ಯಕ್ಷ ಆರ್.ಸಂದೀಪ್, ಮಹಿಳಾ ಅಧ್ಯಕ್ಷೆ ಪದ್ಮ, ಶೋಭಾ, ಯುವ ಮುಖಂಡ ಸಂತೋಷ್ ತಮ್ಮಣ್ಣ ಇತರರಿದ್ದರು.

ಜಿಲ್ಲೆಯಲ್ಲಿ 9 ಮಂದಿ ನಾಮಪತ್ರ ಸಲ್ಲಿಕೆ

ಮಂಡ್ಯ, ಏ.15– ವಿಧಾನಸಭಾ ಚುನಾವಣೆ–2023ರ ಮಂಡ್ಯ ಜಿಲ್ಲಾ ವ್ಯಾಪ್ತಿಯ 7 ವಿಧಾನಸಭಾ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಲು 3ನೇ ದಿನವಾದ ಶನಿವಾರ ಮಳವಳ್ಳಿ, ಶ್ರೀರಂಗಪಟ್ಟಣ ಮತ್ತು ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ. ಉಳಿದ 4 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 9 ಅಭ್ಯರ್ಥಿಗಳಿಂದ 12 ನಾಮಪತ್ರ ಸಲ್ಲಿಕೆಯಾಗಿದೆ.

ಮದ್ದೂರು ಜೆಡಿಎಸ್ ಅಭ್ಯರ್ಥಿ ಡಿ.ಸಿ.ತಮ್ಮಣ್ಣ, ಪಕ್ಷೇತರ ಅಭ್ಯರ್ಥಿ ಸಿ.ಟಿ.ಬೀರೇಶ್, ಮೇಲುಕೋಟೆ ಕ್ಷೇತ್ರದಿಂದ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ, ಪಕ್ಷೇತರ ಅಭ್ಯರ್ಥಿಗಳಾಗಿ ಎಚ್.ನಾರಾಯಣ್, ಸಿ.ಎಸ್.ಪುಟ್ಟರಾಜು, ರವಿಕುಮಾರ, ಮಂಡ್ಯ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ಎಸ್.ಸಿ.ಮಧುಚಂದನ್, ಆಮ್ ಆದ್ಮಿ ಪಕ್ಷದಿಂದ ಬೊಮ್ಮಯ್ಯ, ನಾಗಮಂಗಲ ಪಕ್ಷೇತರ ಅಭ್ಯರ್ಥಿಯಾಗಿ ವೆಂಕಟೇಶ್ ಉಮೇದುವಾರಿಕೆ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ಜನ ಕುಮಾರಸ್ವಾಮಿ ಮುಖ್ಯಮಂತ್ರಿ ಆಗುವುದನ್ನ ಬಯಸಿದ್ದಾರೆ

ಹುಣಸೂರಲ್ಲಿ ನನ್ನ ಮಗ ಹರೀಶ್‌ಗೌಡರ ಗೆಲುವು ನಿಶ್ಚಿತ

ಶಾಸಕ ಜಿ.ಟಿ.ದೇವೇಗೌಡ ವಿಶ್ವಾಸ





ಹುಣಸೂರು, ಏ.15– ರಾಜ್ಯದಲ್ಲಿ ಹೆಚ್.ಡಿ. ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾಗಬೇಕು ಎಂಬ ನಿಟ್ಟಿನಲ್ಲಿ ಹುಣಸೂರು ಮತದಾರರು ತಮ್ಮ ಪುತ್ರನೂ ಆದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರನ್ನು ಗೆಲ್ಲಿಸುತ್ತಾರೆ ಎಂದು ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಇಂದಿಲ್ಲಿ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ನಾಮಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಿಟಿಡಿ, ಈ ಹಿಂದೆ ತಾವು 2 ಬಾರಿ ಶಾಸಕರಾಗಿ, ಮಂತ್ರಿಯಾಗಿ ಕ್ಷೇತ್ರದಲ್ಲಿ ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳಿಗೆ ಮನ್ನಣೆ ನೀಡಿ ಈ ಚುನಾವಣೆಯಲ್ಲಿ ಹರೀಶ್‌ಗೌಡರನ್ನು ಇಲ್ಲಿನ ಜನತೆ ಗೆಲ್ಲಿಸಲಿದ್ದಾರೆ ಎಂದರು.

ಬಿ.ಎಸ್.ಯಡಿಯೂರಪ್ಪನವರು ಮೈಸೂರು ಭಾಗದ ಹೆಬ್ಬಾಗಿಲಾದ ಹುಣಸೂರಿನಲ್ಲಿ ನೀವು ನಮ್ಮ ಪಕ್ಷಕ್ಕೆ ಬೆಂಬಲ ಸೂಚಿಸಿದರೆ ಮುಖ್ಯಮಂತ್ರಿಯಾಗಿ ಬಿಡುತ್ತೇನೆ ಎಂದು ಮನವಿ ಮಾಡಿದ ಹಿನ್ನೆಲೆಯಲ್ಲಿ ನಾನು ಕ್ಷೇತ್ರದ ಜನರಿಗೆ ತಿಳಿಸದೇ ಬಿಜೆಪಿಗೆ ಹೋದ ಪರಿಣಾಮ ನನ್ನ ಮೇಲಿನ ಕೋಪದಿಂದ ಆ ಚುನಾವಣೆಯಲ್ಲಿ ಮೊದಲ ಬಾರಿಗೆ ಮಂಜುನಾಥ್ ಅವರನ್ನು ಇಲ್ಲಿನ ಜನ ಗೆಲ್ಲಿಸಿದ್ದರು. ನಂತರದ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರಿಗೆ ಜೆಡಿಎಸ್ ಟಿಕೆಟ್ ನೀಡಲಾಗಿತ್ತು. ಅವರು ಒಳ್ಳೆಯವರಾದರೂ ವೀಕ್ ಕ್ಯಾಂಡಿಡೇಟ್ ಆದ ಕಾರಣ 2ನೇ ಬಾರಿಗೆ ಮಂಜುನಾಥ್ ಗೆದ್ದರು. ಇಡೀ ನಮ್ಮ ಕುಟುಂಬ ಕೆಲಸ ಮಾಡಿದ್ದರಿಂದ ವಿಶ್ವನಾಥ್ ಗೆಲುವು ಸಾಧಿಸಿದರು. ಉಪ ಚುನಾವಣೆ ವೇಳೆ ಸಿದ್ದರಾಮಯ್ಯನವರ ಮನವಿ ಮೇರೆಗೆ ಆತ ನಾನು ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿದ್ದ ಕಾರಣದಿಂದಾಗಿ ಮಂಜುನಾಥ್‌ಗೆ ಬೆಂಬಲ ಸೂಚಿಸಿದ ಪರಿಣಾಮವಾಗಿ ಅವರು ಮೂರನೇ ಬಾರಿ ಗೆದ್ದಿದ್ದಾರೆ. ಯಾವಾಗಲೂ ಮಂಜುನಾಥ್ ಸ್ವಂತ ಬಲದಿಂದ ಗೆದ್ದವರಲ್ಲ ಎಂದು ವಿವರಿಸಿದ ಜಿಟಿಡಿ, ಈ ಚುನಾವಣೆಯಲ್ಲಿ ತಮ್ಮ ಪುತ್ರನೇ ಸ್ಪರ್ಧಿಸುತ್ತಿರುವುದರಿಂದ ಮಂಜುನಾಥ್ ಗೆಲುವು ಅಸಾಧ್ಯ. ಈ ಬಾರಿ ಚುನಾವಣೆಯಲ್ಲಿ ಹುಣಸೂರಿನಲ್ಲಿ ಜೆಡಿಎಸ್ ಅಭ್ಯರ್ಥಿ ಹರೀಶ್‌ಗೌಡ ಗೆಲುವು ಸಾಧಿಸಲಿದ್ದಾರೆ ಎಂದರು.

ಕೆರೆಯಲ್ಲಿ ಮುಳುಗಿ ಮೂವರು ಸಾವು







ಮದ್ದೂರು, ಏ.15– ಕೆರೆಯಲ್ಲಿ ಈಜಲು ಹೋದ ಇಬ್ಬರು ಮಕ್ಕಳು ಸೇರಿದಂತೆ ಮಹಿಳೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ವಳಗೆರೆಹಳ್ಳಿ ಗ್ರಾಮದಲ್ಲಿ ಶನಿವಾರ ಸಂಜೆ ನಡೆದಿದೆ.

ಗ್ರಾಮದ ನಿವಾಸಿ ಮುತ್ತುರಾಜು ಅವರ ಪತ್ನಿ ಶೈಲಜಾ(30), ಪುತ್ರ ತೇಜಸ್ (11) ಹಾಗೂ ಅದೇ ಗ್ರಾಮದ ಶ್ರೀನಿವಾಸ್ ಎಂಬುವರ ಪುತ್ರ ಯೋಧನ್(15) ಮೃತಪಟ್ಟವರು.

ಶನಿವಾರ ಬೆಳಗ್ಗೆ ಎಂದಿನಂತೆ ಜಾನುವಾರುಗಳನ್ನು ಮೇಯಿಸಲು ಶೈಲಜಾ, ಪುತ್ರ ತೇಜಸ್ ಹಾಗೂ ಯೋಧನ್ ಜಮೀನಿನ ಬಳಿ ತೆರಳಿದ್ದರು. ಈ ವೇಳೆ ತೇಜಸ್ ಹಾಗೂ ಯೋಧನ್ ಮದ್ದೂರಮ್ಮನ ಕೆರೆಯಲ್ಲಿ ಈಜಲು ನೀರಿಗೆ ಇಳಿದಿದ್ದರು. ಈ ವೇಳೆ ಇವರಿಬ್ಬರು ನೀರಿನಿಂದ ಹೊರ ಬರಲು ಸಾಧ್ಯವಾಗದೇ ಕೆಸರಿನಲ್ಲಿ ಸಿಲುಕಿದ್ದರು. ಈ ವೇಳೆ ಮಕ್ಕಳನ್ನು ರಕ್ಷಿಸಲು ಕೆರೆಗಿಳಿದ ಶೈಲಜಾ ಕೂಡ ಕೆಸರಿನಲ್ಲಿ ಸಿಲುಕಿದ ಪರಿಣಾಮ ಮೂವರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಕೆರೆ ಬಳಿ ಜಮಾಯಿಸಿದ ಸಾರ್ವಜನಿಕರು ಇಬ್ಬರು ಮಕ್ಕಳು ಹಾಗೂ ಶೈಲಜಾ ಮೃತದೇಹವನ್ನು ಕೆರೆಯಿಂದ ಮೇಲಕ್ಕೆತ್ತಿದರು. ಈ ಸಂಬಂಧ ಬೆಸಗರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್‌ಸಿಬಿ, ಪಂಜಾಬ್‌ಗೆ ಭರ್ಜರಿ ಜಯ

ಬೆಂಗಳೂರು, ಏ.15– ಶನಿವಾರ ನಡೆದ ಪಂದ್ಯಗಳಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 23 ರನ್ ಜಯ ಗಳಿಸಿದರೆ, ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ 2 ವಿಕೆಟ್ ಜಯ ಸಾಧಿಸಿದೆ.

ಮಧ್ಯಾಹ್ನ ನಡೆದ ಮೊದಲ ಪಂದ್ಯದಲ್ಲಿ ಆರ್‌ಸಿಬಿ 6 ವಿಕೆಟ್‌ಗೆ 174 ರನ್ ಗಳಿಸಿದರೆ, ಡೆಲ್ಲಿ 9 ವಿಕೆಟ್‌ಗೆ 151 ರನ್ ಗಳಿಸಿತು. ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ಸಂಜೆ ನಡೆದ ಮತ್ತೊಂದು ಪಂದ್ಯದಲ್ಲಿ ಲಕ್ನೋ 8 ವಿಕೆಟ್‌ಗೆ 159 ರನ್ ಗಳಿಸಿದರೆ, ಪಂಜಾಬ್ ಕಿಂಗ್ಸ್ 19.3 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಗೆಲುವು ಸಾಧಿಸಿತು. ಸಿಕಂದರ್ ರಾಜಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಚುನಾವಣೆಯಲ್ಲಿ ಜಾತಿ ವ್ಯವಸ್ಥೆ ನನ್ನ ಎದುರಾಳಿ

ಸಂವಾದದಲ್ಲಿ ಶಾಸಕ ಸಾ.ರಾ.ಮಹೇಶ್



ಕೆ.ಆರ್.ನಗರ, ಏ.15– ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ನನ್ನ ಎದುರಾಳಿಗಳಲ್ಲ. ಬದಲಿಗೆ ಜಾತಿ ವ್ಯವಸ್ಥೆ ನನ್ನ ಎದುರಾಳಿ ಎಂದು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಸಾ.ರಾ. ಮಹೇಶ್ ತಿಳಿಸಿದರು.


ಪಟ್ಟಣದ ತಾಲೂಕು ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ನೋಡಿದರೆ ನನಗೆ ಎದುರಾಳಿಗಳೇ ಇಲ್ಲ. ಆದರೆ ವಸ್ತುಸ್ಥಿತಿ ಬದಲಾಗಿದೆ. ಓರ್ವ ಅಭ್ಯರ್ಥಿ ಪರವಾಗಿ ಒಂದು ಜಾತಿ ನಿಂತಿರುವುದರಿಂದ ನನಗೆ ಜಾತಿವ್ಯವಸ್ಥೆ ಎದುರಾಳಿಯಾಗಿದೆ. ಆದರೂ ಕ್ಷೇತ್ರದ ಜನರು ನನ್ನ ಬೆಂಬಲಕ್ಕೆ ನಿಂತಿದ್ದು, ಈ ಬಾರಿ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದೇನೆ ಎಂದರು.

ಕಳೆದ 15 ವರ್ಷಗಳ ನನ್ನ ಅಧಿಕಾರವಧಿಯಲ್ಲಿ 4 ಸಾವಿರ ಕೋಟಿ ಅನುದಾನ ತಂದು ಅವಳಿ ತಾಲೂಕಿನ ಎಲ್ಲಾ 224 ಗ್ರಾಮಗಳ ಪುರಾತನ ದೇವಾಲಯಗಳು, ಶಿಕ್ಷಣ, ಆರೋಗ್ಯ, ರಸ್ತೆ ಮತ್ತು ಶುದ್ಧ ಕುಡಿಯುವ ನೀರು ಪೂರೈಕೆ, ಸಮುದಾಯದ ಭವನಗಳ ನಿರ್ಮಾಣ, ಏತ ನೀರಾವರಿ ಯೋಜನೆ ಜಾರಿ, ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವ ಜೊತೆಗೆ ಜನಸಾಮಾನ್ಯರ ಅಭಿವೃದ್ಧಿಗೆ ಸ್ಪಂದಿಸುವ ಕೆಲಸವನ್ನು ನಿರಂತರವಾಗಿ ಮಾಡಿರುವ ಬಗ್ಗೆ ನನಗೆ ತೃಪ್ತಿ ಇದೆ ಎಂದರು.

ಉದ್ಯೋಗಕ್ಕೆ ಆದ್ಯತೆ: ಅವಳಿ ತಾಲೂಕಿನ ಯುವಕರು, ಮಹಿಳೆಯರು ಉದ್ಯೋಗ ಅರಸಿ ಬೇರೆಡೆಗೆ ಹೋಗದಂತೆ ತಾಲೂಕಿನ ಕಗ್ಗೆರೆ ಬಳಿ ಕೈಗಾರಿಕಾ ಪ್ರದೇಶ ಸ್ಥಾಪಿಸಲು 100 ಎಕರೆ ಜಮೀನು ಖರೀದಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಯಿತು. ಆದರೆ ನಮ್ಮ ಸರ್ಕಾರ ಬಿದ್ದು ಹೋದ ಕಾರಣ ಪ್ರಸ್ತಾವನೆ ಹಾಗೆ ಉಳಿಯಿತು. ನಾನು 12 ತಿಂಗಳು ಸಚಿವನಾಗಿದ್ದಾಗ ರೇಷ್ಮೆ ಇಲಾಖೆಗೆ 45 ಖಾಯಂ ನೌಕರರು, 150 ಹಂಗಾಮಿ ನೌಕರರನ್ನು ನೇಮಿಸಿದ್ದು, ಇತ್ತೀಚೆಗೆ ತಾಲೂಕಿನ ಕೆಗ್ಗರೆ ಗ್ರಾಮದಲ್ಲಿ ಸಾ.ರಾ.ನಿಧಿ ಗಾರ್ಮೆಂಟ್ಸ್ ಸ್ಥಾಪಿಸಿ 1200 ಮಹಿಳೆಯರಿಗೆ ಉದ್ಯೋಗ ದೊರಕಿಸಿ ಕೊಡಲಾಗಿದೆ. ಅಲ್ಲದೇ 8 ವಸತಿ ಶಾಲೆಗಳಿಗೆ ಬೋಧಕರು ಮತ್ತು ಅಡುಗೆ ಸಿಬ್ಬಂದಿ ನೇಮಕ ಮಾಡಲಾಗಿದೆ. ನನ್ನ ಬಳಿ ಉದ್ಯೋಗ ಕೊಡಿಸುವಂತೆ ಮನವಿ ಮಾಡಿದ ಯುವಕರಿಗೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಕೊಡಿಸಲಾಗಿದೆ. ಮುಂದಿನ ದಿನಗಳಲ್ಲಿ ಯುವಕರಿಗಾಗಿ ತಾಲೂಕಿನಲ್ಲಿ ಕೈಗಾರಿಕೆ ಪ್ರಾರಂಭಿಸಲು ಚಿಂತಿಸಲಾಗಿದೆ ಎಂದರು. ಸಂವಾದದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ಶಿವರಾಮು, ಪ್ರಧಾನ ಕಾರ್ಯದರ್ಶಿ ಎಂ.ಎಸ್.ರವಿಕುಮಾರ್ ಹಾಜರಿದ್ದರು.

ಬಿಜೆಪಿಗೆ ಮಾಜಿ ಮುಖ್ಯಮಂತ್ರಿ ಶೆಟ್ಟರ್ ರಾಜೀನಾಮೆ ಘೋಷಣೆ

ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಸಾಧ್ಯತೆ



ಹುಬ್ಬಳ್ಳಿ, ಏ. 15– ಟಿಕೆಟ್ ಕೈತಪ್ಪಿದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಬಿಜೆಪಿಗೆ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ. ಅಲ್ಲದೇ ನಾಳೆ (ಏ. 16) ತಮ್ಮ ಶಾಸಕ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸುವುದಾಗಿ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದ್ದಾರೆ.

ತಮಗೆ ಟಿಕೆಟ್ ಕೈತಪ್ಪಿದ್ದರಿಂದ ತೀವ್ರ ಅಸಮಾಧಾನಗೊಂಡಿದ್ದ ಶೆಟ್ಟರ್, ಇತ್ತೀಚೆಗೆ ದೆಹಲಿಗೆ ತೆರಳಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಬಂದಿದ್ದರು. ಶೆಟ್ಟರ್ ಅವರನ್ನು ಸಮಾಧಾನಪಡಿಸಲು ಇಂದು ರಾತ್ರಿ 8.30ರ ಸುಮಾರಿನಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಧರ್ಮೇಂದ್ರ ಪ್ರಧಾನ್, ಪಕ್ಷದ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಸೇರಿದಂತೆ ಹಿರಿಯ ಮುಖಂಡರು ಅವರ ನಿವಾಸಕ್ಕೆ ಆಗಮಿಸಿ ಮಾತುಕತೆ ನಡೆಸಿದ್ದರು. ಆದರೆ, ಶೆಟ್ಟರ್ ಯಾವುದೇ ಸಂಧಾನಕ್ಕೂ ಒಪ್ಪದೇ ಸುದ್ದಿಗೋಷ್ಠಿ ನಡೆಸಿ, ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ. ಇದಕ್ಕೂ ಮುನ್ನ ಮಧ್ಯಾಹ್ನ ಸುದ್ದಿಗೋಷ್ಠಿ ನಡೆಸಿದ್ದ ಶೆಟ್ಟರ್, ತಾವು ಚುನಾವಣೆಯಲ್ಲಿ ಸ್ಪರ್ಧಿಸುವುದು ನಿಶ್ಚಿತ ಎಂದು ಘೋಷಿಸಿದ್ದರು. ಅದೇ ವೇಳೆ ಕಾಂಗ್ರೆಸ್ ವರಿಷ್ಠರು ಶೆಟ್ಟರ್ ಪ್ರತಿನಿಧಿಸುತ್ತಿರುವ ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರಕ್ಕೆ ಅಭ್ಯರ್ಥಿಯನ್ನು ಘೋಷಣೆ ಮಾಡದೇ, ಶೆಟ್ಟರ್‌ಗಾಗಿ ಕಾಯುತ್ತಿದ್ದಾರೆ ಎಂದು ಹೇಳಲಾಗಿದೆ. ಜಗದೀಶ್ ಶೆಟ್ಟರ್ ಕಾಂಗ್ರೆಸ್‌ನಿಂದ ಕಣಕ್ಕಿಳಿಯುವರೇ ಅಥವಾ ಪಕ್ಷೇತರರಾಗಿ ಸ್ಪರ್ಧಿಸುವರೇ ಕಾದುನೋಡಬೇಕಿದೆ.

ಇಂದು ವಿದ್ಯುತ್ ವ್ಯತ್ಯಯ



ಮೈಸೂರು,ಏ.15– ಹೂಟಗಳ್ಳಿ ಉಪವಿಭಾಗ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ (ಸರ್ವೀಸ್ ರಸ್ತೆ ಕಾಮಗಾರಿ) ಕಂಬಗಳನ್ನು ಸ್ಥಳಾಂತರಿಸುವ ಕೆಲಸದ ನಿಮಿತ್ತ ಏ.16 (ಭಾನುವಾರ) ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹೂಟಗಳ್ಳಿ ಮತ್ತು ಬೆಳವಾಡಿ ಕೈಗಾರಿಕಾ ಪ್ರದೇಶ, ಲಿಂಗದೇವರಕೊಪ್ಪಲು, ಜಾಕಿ ಫ್ಯಾಕ್ಟರಿ, ಪೀರ್‌ಮೀಡ್ ಟಿಂಬರ್, ಆರ್.ಕೆ.ಬಿ ರಸ್ತೆ, ಕೆ.ಆರ್.ಎಸ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗಲಿದೆ ಸೆಸ್ಕ್ ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ M/s.ROYAL NEST BUILDERS AND DEVELOPERS, Mysuru ರವರು ಕೆಳಗಿನ ಅನುಸೂಚಿಯಲ್ಲಿರುವ ಸ್ವತ್ತನ್ನು ಶ್ರೀ.ಬಿ.ನಾಗರಾಜು, ಶ್ರೀ.ಬಿ.ಅಶೋಕ್ ಕುಮಾರ್, ಶ್ರೀಮತಿ ಸಾಕಮ್ಮ, ಶ್ರೀ .ಬಿ.ಶಿವಪ್ಪ ಮತ್ತು ಅವರುಗಳ ಕುಟುಂಬದವರಿಂದ ಖರೀದಿಸಲು ಆಸಕ್ತಿ ಉಳ್ಳವರಾಗಿರುತ್ತಾರೆ. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಯಾವುದೇ ರೀತಿಯಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ವ್ಯಕ್ತಿಯು ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿ ಗಳೊಂದಿಗೆ ಈ ದಿನದಿಂದ 14 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದ್ದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಅನುಸೂಚಿ ಸ್ವತ್ತು: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮಕ್ಕೆ ಸೇರಿದ ಜಮೀನಿನ ಸರ್ವೇ ನಂ.206ರ ವಿಸ್ತೀರ್ಣ 4 ಎಕರೆ 8ಗುಂಟೆಗಳುಳ್ಳ ಸ್ವತ್ತಿಗೆ ಚೆಕ್ಕುಬಂದಿ:

ಪೂರ್ವಕ್ಕೆ : ಸರ್ವೇ ನಂ. 207ರ ಜಮೀನು, ಪಶ್ಚಿಮಕ್ಕೆ: ಉಳಿಕೆ ಸರ್ವೇ ನಂ.206ರ ಜಮೀನು, ಉತ್ತರಕ್ಕೆ : ಸರ್ವೇ ನಂ.209ರ ಜಮೀನು, ದಕ್ಷಿಣಕ್ಕೆ : ಸರ್ವೇ ನಂ.205ರ ಜಮೀನು

ಸಹಿ/-ಎಮ್.ಎಸ್.ಜನಚಂದ್ರನ್, ವಕೀಲರು
ವಿಳಾಸ: #1206/ಎ, ಸಿಎಚ್-31/ಎ, 1ನೇ ಮಹಡಿ, ನ್ಯೂ ಕಾಂತರಾಜ್ ಅರಸ್ ರಸ್ತೆ, ಬಲ್ಲಾಳ್ ವೃತ್ತದ ಹತ್ತಿರ, ಚಾಮರಾಜಪುರಂ, ಮೈಸೂರು-570005

ದಿನಾಂಕ: 15.04.2023, ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ **M/s.Y.S. Properties Developers and Builders** ಹೆಸರಿನ ಪಾಲುಗಾರಿಕಾ ಸಂಸ್ಥೆಯು ಶ್ರೀ ಎಂ.ಪಂಚಾಕ್ಷರಿ ಮತ್ತು ಕುಟುಂಬದವರೊಂದಿಗೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಜಂಟಿ ಅಭಿವೃದ್ಧಿ ಕರಾರು ಹೊಂದಲು ಆಸಕ್ತಿ ಉಳ್ಳವರಾಗಿರುತ್ತಾರೆ.

ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಯಾವುದೇ ರೀತಿಯಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ವ್ಯಕ್ತಿಯು ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿ ಗಳೊಂದಿಗೆ ಈ ದಿನದಿಂದ 14ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದ್ದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಆಸಕ್ತಿ ಇಲ್ಲವೆಂದು ಪರಿಗಣಿಸಲಾಗುವುದು ಮತ್ತು ನನ್ನ ಕಕ್ಷಿದಾರರು ಜಂಟಿ ಅಭಿವೃದ್ಧಿ ಕರಾರು ಮಾಡಿಕೊಳ್ಳುವರು.

ಅನುಸೂಚಿ ಸ್ವತ್ತು

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಮಾರಬೆಟ್ಟಹಳ್ಳಿ ಗ್ರಾಮದ ಜಮೀನಿನ ಸರ್ವೆ ನಂ.52/1ರ ವಿಸ್ತೀರ್ಣ 1ಎಕರೆ 20ಗುಂಟೆ ಮತ್ತು ಸರ್ವೆ ನಂಬರ್: 52/3ರ ವಿಸ್ತೀರ್ಣ 34.08 ಗುಂಟೆ ಗಳುಳ್ಳ ಸ್ವತ್ತು. ಚೆಕ್ಕುಬಂದಿ: ಸರ್ವೆ ನಂಬರ್ : 52/1, ಪೂರ್ವಕ್ಕೆ – ರಸ್ತೆ, ಪಶ್ಚಿಮಕ್ಕೆ–ದೊಡ್ಡಕುಳ್ಳಯ್ಯನವರ ಜಮೀನು, ಉತ್ತರಕ್ಕೆ–ಬೋಜೇಗೌಡರ ದೊಡ್ಡಣ್ಣ ರವರ ಜಮೀನು, ಚೆಕ್ಕುಬಂದಿ: ಸರ್ವೆ ನಂಬರ್ " 52/3, ಪೂರ್ವಕ್ಕೆ –ರಸ್ತೆ, ಪಶ್ಚಿಮಕ್ಕೆ–ಎಸ್.ಎ. ಶಾಂತರಸರ ಬಾಬ್ತು ಸ್ವತ್ತು, ಉತ್ತರಕ್ಕೆ – ಲಾ.ಪಿ.ನಂ.52/1, ದಕ್ಷಿಣಕ್ಕೆ–ಲಾ.ಪಿ.ನಂ.60.


ಸಹಿ/– ಎಮ್.ಎಸ್. ಜನಚಂದ್ರನ್,
ವಕೀಲರು, # 1206/A, CH-31/A, 1ನೇ ಮಹಡಿ, ನ್ಯೂ ಕಾಂತರಾಜ್ ಅರಸ್ ರಸ್ತೆ, ಬಲ್ಲಾಳ್ ವೃತ್ತದ ಹತ್ತಿರ, ಚಾಮರಾಜಪುರಂ, ಮೈಸೂರು-570005.


ದಿನಾಂಕ: 15–04–2023 ಸ್ಥಳ: ಮೈಸೂರು















ಹಳೆ ಮೈಸೂರು ಭಾಗದ ಜನರ ಒಡನಾಡಿಯಾಗಿರುವ
ಮೈಸೂರು ಮಿತ್ರನಿಗೆ
44ನೇ ವಾರ್ಷಿಕೋತ್ಸವದ
ಶುಭಾಶಯಗಳು
ಮೈಸೂರು ಮಿತ್ರ ಸಂಸ್ಥಾಪಕ ಸಂಪಾದಕರಾದ
ಕೆ.ಬಿ ಗಣಪತಿ ಹಾಗೂ
ಅವರ ಕುಟುಂಬಕ್ಕೆ ಈ ಸುಸಂದರ್ಭದಲ್ಲಿ ನಮ್ಮ ಆತ್ಮೀಯ
ಅಭಿನಂದನೆಗಳು
ಶ್ರೀಮತಿ ಲಲಿತಾ
ಜಿ.ಟಿ.ದೇವೇಗೌಡ
ಅಧ್ಯಕ್ಷರು,
ರಾಜ್ಯ ಸಹಕಾರ ಪತ್ತಿನ ಮಹಾಮಂಡಳ
ಮಾಜಿ ಸದಸ್ಯರು, ಜಿಲ್ಲಾ ಪಂಚಾಯತ್
ಮೈಸೂರು
“ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಪ್ರಭುಗಳು, ಅದು ಎಚ್ಚರ ವಹಿಸಿ, ತಪ್ಪದೇ ಮತದಾನ ಮಾಡಿದಾಗ ಮಾತ್ರ”
ಜಿ.ಡಿ.ಹರೀಶ್‌ಗೌಡ
ಅಧ್ಯಕ್ಷರು, ಮೈಸೂರು-ಚಾಮರಾಜನಗರ
ಜಿಲ್ಲಾ ಸಹಕಾರ ಬ್ಯಾಂಕ್, ಮೈಸೂರು ಹಾಗೂ
ಉಪಾಧ್ಯಕ್ಷರು, ರಾಜ್ಯ ಅಪೆಕ್ಸ್ ಬ್ಯಾಂಕ್
ಮತ್ತು ಜೆಡಿಎಸ್ ಯುವ ಮುಖಂಡರು
ಜಿ.ಟಿ.ದೇವೇಗೌಡ
ಮಾಜಿ ಸಚಿವರು ಹಾಗೂ ಹಾಲಿ ಶಾಸಕರು
ಚಾಮುಂಡೇಶ್ವರಿ ಕ್ಷೇತ್ರ

ಮೈಸೂರು ಮಿತ್ರ

ವಾರ್ಷಿಕ ವಿಶೇಷಾಂಕ 2023

16-4-2023
ಭಾನುವಾರ





ಚುನಾವಣೆ

ಪ್ರಜೆಗಳು ದೇಶದ, ಆ ಮೂಲಕ ತಮ್ಮ ಹಿತ ಕಾಪಾಡಿಕೊಳ್ಳುವ ಅವಕಾಶ

–ಎಸ್.ಎಲ್.ಭೈರಪ್ಪ
ನಾಡಿನ ಖ್ಯಾತ ಸಾಹಿತಿ
ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರು

ನಮ್ಮ ರಾಜ್ಯದ ಅಸೆಂಬ್ಲಿಗೆ ಚುನಾವಣೆ ಘೋಷಣೆಯಾಗಿದೆ. ಹೆದ್ದಾರಿಗಳಲ್ಲಿ, ಕಿರುರಸ್ತೆಗಳ ಕೂಡುಗಳಲ್ಲಿ ಪೊಲೀಸರು ಡೇರೆ ಕಟ್ಟಿ ಕೊಂಡು ಸಂಶಯ ಬರುವ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡುತ್ತಿದ್ದಾರೆ. ಕೋಟಿಗಟ್ಟಲೆ ಹಣವನ್ನು ಆಗಲೇ ಹಂಚಿ ಆಗಿದೆ. ಇವರಿಗೆ ಏನು ಸಿಕ್ಕುತ್ತೆ ಎಂದು ಡ್ರೈವರ್‌ಗಳು ಮೌನ ಸಹಾನುಭೂತಿಪಡುತ್ತಾರೆ.

ಪಾರ್ಲಿಮೆಂಟರಿ ಚುನಾವಣೆಯ ಮಾತೃಭೂಮಿಯಾದ ಬ್ರಿಟನ್‌ನಲ್ಲಿ ಇರುವ ಎರಡು ಪ್ರಮುಖ ಪಕ್ಷಗಳು ತಾವು ಗೆದ್ದರೆ ಮಾಡುವ ಬದಲಾವಣೆಗಳನ್ನು ಸ್ಪಷ್ಟವಾಗಿ ವೃತ್ತ ಪತ್ರಿಕೆಗಳು ಮತ್ತು ಟೆಲಿವಿಷನ್‌ಗಳ ಮೂಲಕ ಮತದಾರರಿಗೆ ತಿಳಿಸುತ್ತಾರೆ. ಪಕ್ಷಗಳು ಘೋಷಿಸುವ ಪ್ರಣಾಳಿಕೆಗಳು ನಿಜವಾಗಿಯೂ ಸಾಧಿಸುವಂಥವುಗಳೇ ಅಥವಾ ಬುರುಡೆಗಳೇ ಎಂಬುದನ್ನು ಮತದಾರರು ತಕ್ಷಣ ಅರ್ಥ ಮಾಡಿಕೊಳ್ಳುತ್ತಾರೆ. ಅವರಲ್ಲಿ ನೂರಕ್ಕೆ ನೂರು ಭಾಗ ವಿದ್ಯಾವಂತರು. ಸುಮಾರು ಇನ್ನೂರು ವರ್ಷಗಳ ಚುನಾವಣೆಯ ಅನುಭವಿಗಳು. 0ಯಾವ ಪಕ್ಷವು ಏನು ಮಾಡುತ್ತದೆ, ಅದರ ಸಾಧಕ–ಬಾಧಕಗಳೇನು ಎಂಬುದನ್ನು ಲೇಬರ್‌ಗಳು ಮತ್ತು ಕನ್ಸರ್ವೇಟಿಗಳು ಸ್ಪಷ್ಟವಾಗಿ ತಿಳಿದಿರುತ್ತಾರೆ. ಯಾವ ಪಕ್ಷವೂ ಓಟುಗಳನ್ನು ಖರೀದಿಸುವ ಆಲೋಚನೆಯನ್ನು ಕೂಡ ಮಾಡಲಾರವು. ಮತದಾರರು ಕೂಡ ತಮ್ಮ ಓಟಿನ ಪಾವಿತ್ರ್ಯವನ್ನು ಗೌರವಿಸುತ್ತಾರೆ.


ಓಟಿನ ಖರೀದಿಯ ಬೇರೆ ಬೇರೆ ವಿಧಾನಗಳು ಸ್ವಾತಂತ್ರ್ಯ ಭಾರತದ ವೊತ್ತ ವೊದಲ ಚುನಾವಣೆಯಿಂದಲೇ ಸಣ್ಣ ಪ್ರಮಾಣದಲ್ಲಿ ಆರಂಭವಾದವು. ಕ್ರಮೇಣ ಸೀರೆ, ಪಂಚೆ, ಅಡುಗೆಯ ಕುಕ್ಕರ್, ಐನೂರು, ಸಾವಿರಗಳ ದಕ್ಷಿಣೆ– ಹೀಗೆ ಕೋಟಿ ಕೋಟಿ ಬಂಡವಾಳ ಹೂಡಿಕೆಗಳು ಬೆಳೆದವು. ಜಾತಿವಾರು ಖರೀದಿ ಮಾತ್ರವಲ್ಲ. ಮೈನಾರಿಟಿ–ಮೆಜಾರಿಟಿ ತಂತ್ರಗಳು ಬಿಡಿಸಲು ಅಸಾಧ್ಯವಾಗುವ ಮಟ್ಟಿಗೆ ಬೆಳೆದು ನಿಂತವು.

ಸೆಕ್ಯುಲರಿಸಂನ ಆಣೆ ಇಡುವ, ಹಿಂದಿನ ಪ್ರಧಾನಮಂತ್ರಿ ಡಾ. ಮನಮೋಹನ ಸಿಂಗರು, ಈ ದೇಶದ ಸಂಪತ್ತಿನ ಪ್ರಥಮ ಭಾಗವು ಮೈನಾರಿಟಿಯವರಿಗೆ ಹಂಚಿ, ಉಳಿದುದನ್ನು ಇತರರು ಪಡೆಯಬೇಕು. ಇದು ತಮ್ಮ ಸರ್ಕಾರದ ಕಾರ್ಯ ನೀತಿ ಎಂದು ಘೋಷಿಸಿದರು. ಅದಕ್ಕೆ ಬೇಕಾದ ಹಣವು ಮೆಜಾರಿಟಿಯವರು ತೆರುವ ತೆರಿಗೆಯಿಂದ ಬರುತ್ತದೆ ಎಂಬ ವಾಸ್ತವವನ್ನು ಬಿಡಿಸಿ ಹೇಳಲಿಲ್ಲ. ಕೋವಿಡ್–19 ಮಾರಿ ರೋಗವು ಪ್ರಪಂಚದ ಸಣ್ಣ–ದೊಡ್ಡ ಎಲ್ಲಾ ದೇಶಗಳನ್ನು ಆವರಿಸಿದಾಗ ಅಮೆರಿಕದಂಥ ವೈದ್ಯ ವೈಜ್ಞಾನಿಕ ರಾಷ್ಟ್ರದಲ್ಲಿ ಮಿಲಿಯಗಟ್ಟಲೆ ಜನರು ಸತ್ತರು. ಆರು ಕೋಟಿ ಜನಸಂಖ್ಯೆಯ ಬ್ರಿಟನ್‌ನಲ್ಲಿ ರೋಗವನ್ನು ತಡೆಯಲಾಗಲಿಲ್ಲ. ಮಹಾನ್ ಶಕ್ತಳೆಂಬ ಹೆಸರು ಗಳಿಸಿದ ಜರ್ಮನಿಯ ಮಹಿಳಾ ಛಾನ್ಸಲರ್ ಮರ್ಕೆಲ್‌ರನ್ನು ಬಡದೇಶಗಳಿಗೆ ಉಚಿತವಾಗಿ ಔಷಧ ಕಳಿಸುವಂತೆ ಮನವಿ ಮಾಡಿಕೊಂಡಾಗ ಉಚಿತವಾಗಿ ಸರಬರಾಜು ಮಾಡಿರೆಂದು ಔಷಧ ಉದ್ಯಮಗಳನ್ನು ಕೇಳಿದರೆ ದೇಶದ ಆರ್ಥಿಕತೆ ಕುಂಠಿತವಾಗುತ್ತದೆಂದು ತಪ್ಪಿಸಿಕೊಂಡರು. ಮೋದಿಯವರು ಭಾರತೀಯ ಔಷಧ ಉದ್ಯಮಗಳಿಗೆ ಬೆಲೆಯನ್ನು ಏರಿಸದಂತೆ ಆದೇಶವನ್ನು ಜಾರಿ ಮಾಡಿ ಕೋಟಿಗಟ್ಟಲೇ ವ್ಯಾಕ್ಸಿನ್‌ಗಳನ್ನು ಸೃಷ್ಟಿಸಿ, ಜನಗಳು ಗುಂಪಿನಲ್ಲಿರದಂತೆ ಕಟ್ಟುನಿಟ್ಟು ಮಾಡಿ ಆಸ್ಪತ್ರೆಗಳಿಗೆ ಹುಕುಂ ತಂದು ಸಾವಿನ ಸಂಖ್ಯೆಯನ್ನು ತಹಬದಿಗೆ ತಂದರು. ಮಾತ್ರವಲ್ಲ, ಬಡ ರಾಷ್ಟ್ರಗಳಿಗೆ ಉಚಿತವಾಗಿ ಮಿಲಿಯಗಟ್ಟಲೆ ವ್ಯಾಕ್ಸಿನ್‌ಗಳನ್ನು ಭಾರತದ ವಿಮಾನದಲ್ಲಿ ತುರಂತ್ ಕಳಿಸಿ ಇಡೀ ಪ್ರಪಂಚವು ಭಾರತದ ಔದಾರ್ಯವನ್ನು ಮೆಚ್ಚುವಂತೆ ಮಾಡಿದರು.

ಮುಸ್ಲಿಂ ರಾಷ್ಟ್ರಗಳು ಯಾವಾಗಲೂ ಪಾಕಿಸ್ತಾನದ ಕಡೆಗಿರುತ್ತವೆ ಎಂಬ ಗ್ರಹಿಕೆ ಭಾರತವು ಸ್ವಾತಂತ್ರ್ಯ ಪಡೆದಾಗಲಿಂದ ವರ್ತಿಸುತ್ತಿತ್ತು. ಮೋದಿಯವರು ಅಧಿಕಾರಕ್ಕೆ ಬಂದ ನಂತರ ಬಹುತೇಕ ಮುಸ್ಲಿಂ ರಾಷ್ಟ್ರಗಳನ್ನು ಭಾರತಕ್ಕೆ ಅನುಕೂಲಕರವಾಗಿ ತಿರುಗಿಸಿದರು.

ಚುನಾವಣೆ ಎಂದರೆ ಪ್ರಜೆಗಳು ದೇಶದ, ಆ ಮೂಲಕ ತಮ್ಮ ಹಿತವನ್ನು ಕಾಪಾಡುವ ಮತ್ತು ಬೆಳೆಸುವ ಅವಕಾಶ ಎಂದು ಭಾವಿಸಬೇಕು. ಭಾರತ ದೇಶದಲ್ಲಿ ಡಂಗೂರ ಹೊಡೆಸುವ ಬಹುತೇಕ ಘೋಷಣೆಗಳು ಕಾರ್ಯಸಾಧು ಆಗಿರುವುದಿಲ್ಲ. ಅಲ್ಲದೇ ಅವರು ಪ್ರಚೋದಿಸುವುದು ಜಾತಿ ಭಾವನೆಗಳನ್ನು. ಮತಗಳ ಖರೀದಿಗೆ ಪ್ರತಿಯೊಬ್ಬ ಅಭ್ಯರ್ಥಿಯೂ ಕೋಟಿ ಕೋಟಿ ಹಣವನ್ನು ಚೆಲ್ಲುತ್ತಾರೆ. ಈ ಹಣವು ಭ್ರಷ್ಟ ಮಾರ್ಗವಲ್ಲದೇ ಪ್ರಾಮಾಣಿಕವಾಗಿ ದುಡಿದದ್ದು ಖಂಡಿತಾ ಅಲ್ಲ. ಆದ್ದರಿಂದ ಮತದಾನ ಎಂದರೆ ಮತದಾರರನ್ನು ಭ್ರಷ್ಟಗೊಳಿಸುವುದೇ ಆಗಿರುತ್ತದೆ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಈ ರೋಗವು ಪ್ರತಿಯೊಂದು ಮತದಾನ ಕ್ರಿಯೆಯಲ್ಲೂ ಉಲ್ಬಣವೇ ಆಗುತ್ತಿದೆ. ಜಾತಿಯತೆಯಂತೂ ಹೆಚ್ಚುತ್ತಲೇ ಇರುವ ಸಮೂಹ ರೋಗ.

ನಮ್ಮ ಸಂವಿಧಾನವು ಎಷ್ಟೇ ಪಕ್ವವಾಗಿದ್ದರೂ ಅದನ್ನು ಅನುಸರಿಸುವವರ ಪ್ರಾಮಾಣಿಕತೆಯನ್ನು ಅವಲಂಬಿಸಿರುತ್ತದೆ. ಅಲ್ಲದೇ ರಾಜಕೀಯ ಪಕ್ಷಗಳು ಹೊಸ ಹೊಸ ಬೈಗುಳಗಳನ್ನು ಸೃಷ್ಟಿಸಿ ನಮ್ಮ ಭಾಷೆಗಳಿಗೆ ತುಂಬುತ್ತವೆ. ಅದು ನಮ್ಮ ಸಂಸ್ಕೃತಿಯನ್ನು ತುಳಿಯುವ ಕೆಲಸ. ಇಂಥ ಸಂದರ್ಭದಲ್ಲಿ ಪ್ರಜಾಪ್ರಭುತ್ವವನ್ನು ಶುದ್ಧವಾಗಿ ಇರಿಸಲು ವಿದ್ಯಾವಂತ ಪ್ರಜೆಗಳು ಮಾಡಬೇಕಾದ ಒಂದು ಕರ್ತವ್ಯವೆಂದರೆ ವಿದ್ಯಾವಂತರೇ ಸಣ್ಣ ಸಣ್ಣ ಗುಂಪುಗಳಾಗಿ ಹಳ್ಳಿಗಳಿಗೆ ಮತ್ತು ಓಟುಗಳನ್ನು ಮಾರಿಕೊಳ್ಳುವ ಸ್ಥಳಗಳಿಗೆ ಹೋಗಿ ಮತಗಳನ್ನು ಮಾರಿಕೊಳ್ಳುವ ಕೆಲಸ ಮಾಡಬಾರದು. ದೇಶ ಉದ್ಧಾರವಾದರೆ ಪ್ರತಿಯೊಬ್ಬ ಪ್ರಜೆಯ ಜೀವನವೂ ಉತ್ತಮಗೊಳ್ಳುತ್ತದೆ. ಚುನಾವಣಾ ಸಮಯದಲ್ಲಿ ಸಿಕ್ಕುವ 500–1000 ರೂಗಳು, ಒಂದು ಸೀರೆ, ಒಂದು ಮೊಬೈಲ್ ಫೋನ್... ಹೀಗೆ ಹಲವಾರು ಆಮಿಷಗಳನ್ನು ಒಡ್ಡುವ ಅಭ್ಯರ್ಥಿಗಳು ನಿಮಗೆ ಪ್ರಾಮಾಣಿಕವಾಗಿ ಸಲ್ಲಬೇಕಾದ ಯೋಜನೆಗಳಿಗೆ ಮೋಸ ಮಾಡುವ ವಿಧಾನ ಎಂಬುದನ್ನು ಮತದಾರರಿಗೆ ಮನವರಿಕೆ ಆಗುವಂತೆ ವಿವರಿಸಬೇಕು. ಇದು ಅಷ್ಟು ಸುಲಭದ ಕಾರ್ಯವಲ್ಲ ಎಂಬುದು ತಿಳಿದಿದೆ. ಏಕೆಂದರೆ ನಮ್ಮ ಎಷ್ಟೋ ಜನ ವಿದ್ಯಾವಂತರಾಗಿದ್ದರೂ ಭ್ರಷ್ಟ ವಿಧಾನದಲ್ಲಿ ಮುಂದೆ ಬಂದವರಾಗಿದ್ದಾರೆ.



Jagmohan ಅವರ My Frozen Turbulence in Kashmir ಪುಸ್ತಕದ 647ನೇ ಪುಟದ ಈ ವಾಕ್ಯವನ್ನು ನೋಡಬೇಕು: The Atmosphere had been fouled to such an extent that even otherwise well-meaning prime ministers of 1990s such as V.P. Singh, Chandra shekar, P.V. Narasimha Rao, H.D. Devegowda and I.K. Gujral were unable to sail above their small ends of personal and political power. ಜಗಮೋಹನ್‌ರ ಇಂಗ್ಲೀಷ್ ರೇಷ್ಮೆಯಷ್ಟು ನಯವಾದದ್ದು. ಪ್ರಧಾನಿಯಾಗಲು, ಮುಖ್ಯಮಂತ್ರಿಯಾಗಲು ಒಬ್ಬರ ಮೇಲೊಬ್ಬರು ಪೈಪೋಟಿ ಮಾಡುವ ಚಿತ್ರವು ಈ ಚುನಾವಣೆಯಲ್ಲಿ ಕಾಣುತ್ತಿದೆಯಲ್ಲವೇ?

ಈ ಸಂದರ್ಭದಲ್ಲಿ ನಮ್ಮ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಯವರು ನಮ್ಮ ಪ್ರಜಾಪ್ರಭುತ್ವದ ಪ್ರಜ್ವಲಿಸುವ ದೀಪವಾಗಿದ್ದಾರೆ. ಅವರು ಅಧಿಕಾರಕ್ಕೆ ಬಂದ 9 ವರ್ಷಗಳಲ್ಲಿ ಮಾಡಿರುವ ಕೆಲಸಗಳನ್ನು ಜನಗಳಿಗೆ ಜ್ಞಾಪಿಸಬೇಕು. ಹಳ್ಳಿ ಮತ್ತು ಪಟ್ಟಣಗಳು ಈಗ ಮೊದಲಿಗಿಂತ ಹೆಚ್ಚು ಸ್ವಚ್ಛವಾಗಿವೆ. ಪ್ರತೀ ಹಳ್ಳಿಯಲ್ಲೂ ಸೌದೆ ಒಲೆಯಿಂದ ಮುಕ್ತಗೊಳಿಸಿ ಅಡುಗೆ ಅನಿಲ ವಿತರಿಸಿದ್ದಾರೆ. ಸೌದೆ ಒಲೆಯಿಂದ ಉಂಟಾಗುತ್ತಿದ್ದ ಇಂಗಾಲವು ಹೆಣ್ಣುಮಕ್ಕಳ ಶ್ವಾಸಕೋಶಕ್ಕೆ ಸೇರಿ ದಿನವೊಂದಕ್ಕೆ 24 ಸಿಗರೇಟ್ ಸೇದಿದಷ್ಟೇ ಅಪಾಯಕಾರಿಯಾಗಿದ್ದವು. ಅಡುಗೆ ಅನಿಲ ವಿತರಿಸಿದ ನಂತರ ದೇಶದ ಹೆಣ್ಣು ಮಕ್ಕಳು ಈಗ ಅದರಿಂದ ಮುಕ್ತರಾಗಿದ್ದಾರೆ. ಇನ್ನು ಶೌಚಾಲಯದ ವಿಷಯಕ್ಕೆ ಬಂದರೆ ಹಿಂದೆಲ್ಲಾ ಹಳ್ಳಿಗಾಡುಗಳಲ್ಲಿ ಹೆಂಗಸರು ರಾತ್ರಿ ಕತ್ತಲಾಗುವತನಕ ಕಾದು ತಂಬಿಗೆ ಹಿಡಿದು ಹೋಗುತ್ತಿದ್ದರು. ಅಲ್ಲದೇ ಮಲವನ್ನು ಬಲವಂತವಾಗಿ ಕಟ್ಟಿಕೊಳ್ಳುವುದರಿಂದ ಹೊಟ್ಟೆಯಲ್ಲಿ ರೋಗ ಬೆಳೆಯುತ್ತಿತ್ತು. ಈಗ ಮೋದಿಯವರ ಪ್ರಯತ್ನದ ಫಲವಾಗಿ ಪ್ರತಿಯೊಂದು ಹಳ್ಳಿಯ ಮನೆಗಳಲ್ಲಿ ಶೌಚಾಲಯ ನಿರ್ಮಾಣವಾಗಿದೆ. ಶೌಚಾಲಯ ಇಲ್ಲದ ಮನೆಗಳಿಗೆ ಮದುವೆ0ಯಾಗುವುದಿಲ್ಲ ಎಂದು ಹೆಣ್ಣುಮಕ್ಕಳು ಧೈರ್ಯವಾಗಿ ಹೇಳುವಂತಾಗಿದೆ.

ಮೊದಲು ಸರ್ಕಾರವು ಕೊಡುತ್ತಿದ್ದ ಸಹಾಯಧನವನ್ನು ಮಧ್ಯವರ್ತಿಗಳೇ ಅರ್ಧಕ್ಕರ್ಧ ನುಂಗಿ ಬಿಡುತ್ತಿದ್ದರು. ಆ ಮಧ್ಯವರ್ತಿಗಳು ರಾಜಕೀಯ ಧುರೀಣರು ಅಥವಾ ಅವರ ಏಜೆಂಟರುಗಳೇ ಆಗಿರುತ್ತಿದ್ದರು. ಮೋದಿಯವರು ಇದನ್ನು ಹೋಗಲಾಡಿಸಲು ಪ್ರತಿಯೊಬ್ಬ ಪ್ರಜೆಗೂ ಬ್ಯಾಂಕ್ ಖಾತೆ ತೆರೆಯುವಂತೆ ಪ್ರೇರೇಪಿಸಿದರು. ಡಿಜಿಟಲ್ ಹಣದ ಮೂಲಕ ವ್ಯವಹರಿಸುವಂತೆ ಪ್ರೋತ್ಸಾಹಿಸಿದರು. ಇದರ ಫಲವಾಗಿ ಸರ್ಕಾರವು ಕೊಡುವ ಸಹಾಯ ಧನ ನೇರವಾಗಿ ಜನತೆಯ ಖಾತೆಗೆ ಹೋಗುವಂತಾಗಿದೆ. ಮಧ್ಯವರ್ತಿಗಳು, ಏಜೆಂಟರ ಆಟ ನಡೆಯದಂತೆ ಮಾಡಿದ್ದಾರೆ.

ಪ್ಯಾನ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಲಿಂಕ್ ಮಾಡುವುದರಿಂದ ಫಲಾನುಭವಿಗಳೇ ಇಲ್ಲದೇ ಸುಳ್ಳು ಸುಳ್ಳೇ ಸೋರಿಕೆಯಾಗುತ್ತಿದ್ದ ಹಣವು ಸುಮಾರು 54000 ಕೋಟಿಗಳಷ್ಟು ಸರ್ಕಾರಕ್ಕೆ ಉಳಿತಾಯವಾಗಿದ್ದು ಇದರಿಂದ ದೇಶದ ಇತರ ಅಭಿವೃದ್ಧಿ ಕೆಲಸಗಳಿಗೆ ಅನುಕೂಲವಾಗಿದೆ.

ದೇಶದ ರಕ್ಷಣೆ, ಕಾಶ್ಮೀರ ಸಮಸ್ಯೆ ಪರಿಹಾರ, ಕೈಗಾರಿಕಾ ಅಭಿವೃದ್ಧಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಗಳಿಸಿರುವ ಗೌರವ ಮುಂತಾದ ಹಲವಾರು ಸಾಧನೆಗಳು ಪ್ರತಿಯೊಬ್ಬರ ಅನುಭವಕ್ಕೆ ಬಂದಿರುವ ಕಾರ್ಯಗಳು.

ಮೋದಿ ಸರ್ಕಾರ ಬರುವುದಕ್ಕೆ ಮೊದಲು ವಿದೇಶಯಾತ್ರೆ ಮಾಡುತ್ತಿದ್ದವರು ಅನುಭವಿಸುತ್ತಿದ್ದ ಹಿಂಸೆಯನ್ನು ನೆನಪಿಸಿಕೊಳ್ಳಬೇಕು. ತಮ್ಮ ಪಾಸ್‌ಪೋರ್ಟ್‌ನ್ನು ಕಳೆದುಕೊಂಡೋ, ವೀಸಾವನ್ನು ಒಂದೆರಡು ವಾರ ವಿಸ್ತರಿಸಿಕೊಳ್ಳಬೇಕಾದ ಸಂದರ್ಭವಾದಾಗಲೋ ಸಹಾಯಕ್ಕಾಗಿ ಭಾರತದ ಎಂಬೆಸಿಗೆ ಹೋದರೆ ಅವರ ಉಡಾಫೆಯನ್ನು ನೋಡಬೇಕಿತ್ತು. ಭಾರತದ ಸರ್ಕಾರಿ ಕಚೇರಿಯ ಅಧಿಕಾರಿಗಳಿಗಿರುವ ಧಿಮಾಕು, ಎಂಬೆಸಿಯ ಅಧಿಕಾರಿಗಳಿಗೂ ಇತ್ತು. 'ಪಾಸ್‌ಪೋರ್ಟ್ ಮುಖ್ಯವಾದ ಡಾಕ್ಯುಮೆಂಟ್ ಅಂತ ನಿಮಗೆ ಗೊತ್ತಿರಲಿಲ್ಲವೇ' ಎಂಬಂಥ ಚುಚ್ಚು ಪ್ರಶ್ನೆಗಳು. ದೇಶದ ಒಳಗೆ ತಾಕತ್ ಇದ್ದರೆ ವಿದೇಶಾಂಗ ನೀತಿಯಲ್ಲೂ ತಾಕತ್ ಇರುತ್ತದೆ. ಮೋದಿ ಸರ್ಕಾರ ಬಂದ ಮೇಲೆ ಎರಡು ಕಡೆಯಲ್ಲೂ ತಾಕತ್, ಸೌಜನ್ಯ, ಸಹಾಯ ಮಾಡುವ ಮನಸ್ಸು ಇರುತ್ತವೆ. ಈ ಸೇವಾಗುಣವು ಸುಷ್ಮಾಸ್ವರಾಜ್‌ರಿಂದ ಆರಂಭವಾಯಿತು. ಜಯಶಂಕರ್ ಬಂದ ಮೇಲೆ ಇನ್ನೂ ಚುರುಕಾಯಿತು. ಪ್ರಧಾನಮಂತ್ರಿಯಲ್ಲಿ ತಾಕತ್ ಇಲ್ಲದಿದ್ದರೆ ವಿದೇಶಾಂಗ ವರ್ತನೆಯಲ್ಲಿ ತಾಕತ್ ಎಲ್ಲಿಂದ ಬರಬೇಕು?

ದೇಶದಲ್ಲಿ ಆರ್ಥಿಕ ಶಕ್ತಿ ಇಲ್ಲದಿದ್ದರೆ ಪ್ರಧಾನಿಯಲ್ಲಿ ಶಕ್ತಿ ಹೇಗೆ ಬಂದೀತು? ಉಕ್ರೇನ್‌ನಲ್ಲಿ ಮೆಡಿಕಲ್ ಓದುತ್ತಿದ್ದ ನಮ್ಮ ಸಾವಿರಾರು ವಿದ್ಯಾರ್ಥಿಗಳನ್ನು ಕ್ಷೇಮವಾಗಿ ಕರೆಸಿಕೊ0ಡದ್ದನ್ನು ನೆನಪಿಸಿಕೊಳ್ಳಬೇಕು. ನಮ್ಮ ಹುಡುಗರನ್ನು ಮಾತ್ರವಲ್ಲ, ನಮ್ಮ ನೆರೆಹೊರೆ ದೇಶಗಳ ಹುಡುಗರನ್ನೂ ಉಚಿತವಾಗಿ ಮನೆಗೆ ಸೇರಿಸಿದ ಔದಾರ್ಯವು ಗಳಿಸಿದ ಸದ್ಭಾವನೆ ಕಡಿಮೆಯೇ?

ಸಮುದ್ರಕ್ಕೆ ಬಿದ್ದ ತೆಂಗಿನಕಾಯಿ

ಪ್ರಥಮ ಬಹುಮಾನ



ಡಾ.ಎಸ್.ವಿ.ಗೌರಿ
ಎಂ.ಎಸ್ಸಿ, ಎಂ.ಎಡ್, ಪಿಎಚ್.ಡಿ., ಎಂ.ಎ.
#51, ವಿಧಾತ್ರಿ, ಭಾರತಿ ಎನ್‌ಕ್ಲೇವ್, ಗದ್ದಿಗೆ ಮೇನ್ ರೋಡ್, ಬೋಗಾದಿ, ಮೈಸೂರು–570 026.
ಮೊ. 9480085110, 9480085109

"ನಲ್ಲೆ! ನೀನಿಲ್ಲೆ!! ನಿನ್ನನಗಲಿ ನಾನಿರಲೊಲ್ಲೆ" ನಗುತ್ತಾ ನುಡಿಯುತ್ತಿದ್ದ ಪ್ರಿಯತಮನ ಎದೆಗೊರಗಿ ಮುಗುಳ್ನಕ್ಕಳು ಸರಳಾ. ಹದಿಹರೆಯದ ತರಲೆ ಈ ಸರಳೆ! ತಾಯಿ ಅವರಿವರ ಮನೆಯಲ್ಲಿ ಮುಸುರೆ ತಿಕ್ಕಿ, ಬಟ್ಟೆ ತೊಳೆದು, ಕಸ ಹೊಡೆದು ನೆಲ ಒರೆಸಿ ದೊಡ್ಡ ಸಂಸಾರದ ತುತ್ತಿನ ಚೀಲ ತುಂಬಿಸಲು ಹೊಡೆದಾಡುತ್ತಿದ್ದಳಾದರೂ ಮಕ್ಕಳ ಓದು ನಿಲ್ಲಬಾರದು ಎಂಬ ಜಿದ್ದಿನಾಕೆ. ಹೀಗಾಗಿ ಸರಳಾ ಮುನಿಸಿಪಲ್ ಕಾಲೇಜಿನಲ್ಲಿ ಪಿಯು ಪ್ರಥಮ ವರ್ಷದಲ್ಲಿ ಓದುತ್ತಿದ್ದಳು; ಅದೂ ವಿಜ್ಞಾನ ವಿಷಯವನ್ನಾಯ್ದುಕೊಂಡು! ಅವಳ ಕಾಲೇಜಿಗೆ ಸಮೀಪವಿರುವ ಮೆಡಿಕಲ್ ಕಾಲೇಜಿನಿಂದ ಕೊಕ್ಕರೆಯ ಬಿಳಿಯಂತಹ ಬಿಳಿ, ಬಿಳಿ ಕೋಟು ಧರಿಸಿರುವ ಭಾವೀ ವೈದ್ಯರಾಗಲಿರುವ ವಿದ್ಯಾರ್ಥಿಗಳು ಹೊರಬಂದಾಗ ಅವಳೆದೆಯಲ್ಲಿ ಅರಳು ಕುಟ್ಟಿದ್ದಿದೆ.?ಎಷ್ಟು ಚೆಂದ ಅವರ ಕೋಟು!? ಅವಳು ಉದ್ಗರಿಸಿದ್ದಿದೆ.

ಹದಿನಾರರ ಹರೆಯದಲ್ಲಿ ಕತ್ತೆಯೂ ಚೆಂದ ಕಾಣುವುದಂತೆ! ಅಂತಹದರಲ್ಲಿ ಬಡತನವಿದ್ದರೂ ಮೈಯ ಸಿರಿತನಕ್ಕೆ ಏನೂ ಕೊರತೆಯಿರದ ಸರಳಾಳ ಮೈಯ ಕಣ, ಕಣದಲ್ಲೂ ರೂಪ ಸಿರಿವಂತಿಕೆ ಕಣ್ಣು ಕುಕ್ಕುವಂತಿತ್ತು. ಯಾರಾದರೂ ಒಮ್ಮೆ ನೋಡಿದರೆ ತಿರುಗಿ ಇನ್ನೊಮ್ಮೆ ನೋಡಬೇಕೆನ್ನಿಸುವ ರೂಪ ಅವಳದು. ಹೀಗಾಗಿ ಎಷ್ಟೇ ಓದಿನಲ್ಲಿ ಮುಳುಗಿ ಬಾಳ ಗುರಿಯನ್ನೇ ನೆಚ್ಚಿಕೊಂಡು ನಡೆಯಬೇಕೆನ್ನುವ ಅವಳ ಗಮನವನ್ನು ಮಕರಂದವನ್ನೀರುವ ಜೀರುಂಬೆಗಳು ಆಗಿಂದಾಗ್ಗೆ ಆಚೆಯಿಂದೀಚೆಗೆ ಎಳೆಯುತ್ತಲೇ ಇದ್ದವು. ಸೊಕ್ಕಿ ಬೀಗುವ ತಾರುಣ್ಯ, ಮನ್ಮಥನ ಕೂರಂಬುಗಳು ತಾಗದೇ ಇದ್ದಾವೇ? ಮನೆಯಲ್ಲಿನ ಬಡತನ, ಗೆಳತಿಯರ ಸಿರಿತನ ಅವಳೆದೆಯ ನೋವನ್ನು ಮೀಟುತ್ತಲೇ ಇದ್ದವು. ಗೆಳತಿಯರು ಚೆಂದ, ಚೆಂದದ ವಿಧ, ವಿಧ ಬಗೆಯ ಉಡುಪು ಧರಿಸಿ ಮೆರೆಯುತ್ತಿದ್ದಾಗಲಂತೂ ಅವಳಿಗೆ ತನ್ನ ಮೇಲೆ ತನಗೇ ಜಿಗುಪ್ಸೆ ಹುಟ್ಟುತ್ತಿದ್ದುದು ಸುಳ್ಳಲ್ಲ. ಅವರಿವರು ಉಟ್ಟು ಬಿಟ್ಟ ಹಳೆಯ ಬಟ್ಟೆಗಳನ್ನೇ ಉಟ್ಟರೂ ಉಳಿದ ಎಲ್ಲರಿಗಿಂತ ಕಣ್ಣು ಕುಕ್ಕುವಂತಿದ್ದ ತನ್ನ ಸೌಂದರ್ಯದ ಬಗ್ಗೆ ಅಪಾರ ಹೆಮ್ಮೆಯಿದ್ದರೂ ಆ ಸೌಂದರ್ಯವನ್ನು ನಾಲ್ಕು ಜನರೆದುರಿಗೆ ಇನ್ನೂ ಹೆಚ್ಚು ಮೆರೆಸಲಾಗುತ್ತಿಲ್ಲವಲ್ಲ ಎಂಬ ವಿಷಾದ ಒಳಗೊಳಗೇ ಅವಳನ್ನು ದಾವಾನಲದಂತೆ ಸುಡುತ್ತಿತ್ತು.

ಆದರೂ ಅವಳಪ್ಪನಿಗೆ ಅವಳು ಯಾವ ಐಶ್ವರ್ಯ ರೈಗೂ ಕಡಿಮೆಯಿಲ್ಲ ಎಂಬ ಕನಸಿನ ಲೋಕದಲ್ಲಿ ತೇಲುತ್ತಿದ್ದವಳಿಗೆ ಅಮ್ಮನ "ಸರಳಾ, ಏಯ್ ಸರಳಾ!?" ಎಂಬ ಕೂಗು ಕೇಳಿಸಲೇ ಇಲ್ಲ. ಅಮ್ಮನಿಗೆ ಕೋಪ ಎಲ್ಲಿತ್ತೋ, ಕೈಯಲ್ಲಿದ್ದ ಪಾತ್ರೆಯನ್ನೇ ತಂದು ತಲೆಗೆ ಮೊಟಕಿದಳು. 'ಅಯ್ಯೋ ನೋವಿನಿಂದ ಕಿರುಚುತ್ತಲೇ ತನ್ನ ಸ್ವಪ್ನ ಲೋಕಕ್ಕೆ ರಾಕ್ಷಸನಂತೆ ಅತಿಕ್ರಮಿಸಿದ ತಾಯಿಯನ್ನು ಸುಡುಗಣ್ಣಿನಿಂದ ನೋಡಿದಳು. ಅವಳ ಅಮ್ಮನೇನೂ ಅವಳ ಕೆಂಗಣ್ಣಿಗೆ ಸುಟ್ಟು ಬೂದಿಯಾಗಲಿಲ್ಲ. " ಸಾಕು ನನ್ನ ದುರುಗುಟ್ಟಿಕೊಂಡು ನೋಡಿದ್ದು! ಹೋಗಿ ನೋಡು ನಿಮ್ಮಪ್ಪ ಎಲ್ಲಿ ಕುಡಿದು ಬಿದ್ದಿದ್ದಾನೇ ಅಂತ. ಸಾಲು, ಸಾಲಾಗಿ ನಾಲ್ಕು ಮಕ್ಕಳನ್ನು ನನ್ನ ಕೈಗಿಟ್ಟು ಯಾವ ಸೂಳೆಯ ಮಗ್ಗುಲಲ್ಲಿ ಮಲಗಿದ್ದಾನೋ ಮಹಾರಾಯ! ಒಟ್ಟಿನಲ್ಲಿ ನನ್ನ ಹಣೆಬರಹವೇ ಸರಿಯಾಗಿಲ್ಲ.ಮೂರು ಹೆಣ್ಣಿನ ಮೇಲೆ ಒಂದು ಗಂಡು ಹುಟ್ಟಿದರೆ ಅದೃಷ್ಟವಂತೆ!! ಯಾವಳು ನಂಬುತ್ತಾಳೆ? ಈ ನಾಲ್ಕನೇ ಮೂದೇವಿ ಗಂಡು ಮೂಳ ಹುಟ್ಟಿದ ಮೇಲೂ ನನ್ನ ಅದೃಷ್ಟದ ಬಾಗಿಲು ತೆಗೀಲಿಲ್ಲ!? ಎಂದು ಮಗನನ್ನೊಮ್ಮೆ ತಿವಿದಳು. ಅಮ್ಮ ಅವನನ್ನು ತಿವಿದ ರಭಸಕ್ಕೆ ಕಿರೋ ಎಂದು ಒರಲತೊಡಗಿದ ತಮ್ಮನನ್ನು ಎತ್ತಿ ಸೊಂಟಕ್ಕೇರಿಸಿಕೊಂಡು ಅಪ್ಪನನ್ನು ಹುಡುಕಲು ಹೊರಟಳು ಸರಳೆ.

ಸರಳೆಯ ಅಮ್ಮ ಶಾರದಮ್ಮ ಕಡು ಬಡತನದಲ್ಲಿದ್ದರೂ ಮರ್ಯಾದೆ ಮೀರಿ ಬದುಕಿದವಳಲ್ಲ. ಮೂರು ಹೆಣ್ಣುಮಕ್ಕಳು ಮತ್ತೊಂದು ಗಂಡು ಪಿಂಡ ಜೊತೆಗೆ ಕುಡುಕ ಗಂಡನನ್ನು ಸಂಭಾಳಿಸಿಕೊಂಡು ತನ್ನ ಹಾಗೂ ಹೆಣ್ಣು ಮಕ್ಕಳ ಶೀಲ ಹಾಗೂ ಮಾನಗಳನ್ನು ಕಿಂಚಿತ್ತೂ ಊನ ಬಾರದಂತೆ ಕಾಪಾಡಿಕೊಂಡಾಕೆ. ಆದರೆ ಬೆಳೆಯುತ್ತಿರುವ ಹೆಣ್ಣುಮಕ್ಕಳ ಸುಂದರ ರೂಪ ಅವಳಿಗೆ ಮಡಿಲಲ್ಲಿ ಬೆಂಕಿಯ ಕೆಂಡ ಸುರುಹಿಕೊಂಡಂತೆ ಭಾಸವಾಗುತ್ತಿತ್ತು. ತನ್ನ ಬದುಕ ಬವಣೆ ತನ್ನ ಮಕ್ಕಳಿಗೆ ಬರಬಾರದೆಂದೇ ಅವಳು ಅವರನ್ನು ತಪ್ಪದೇ ಶಾಲೆಗೆ ಕಳುಹಿಸುತ್ತಿದ್ದಳು. ಮಕ್ಕಳಾದರೂ ಓದಿನಲ್ಲಿ ದಡ್ಡರೇನಲ್ಲ; ಹಾಗಂತ ತೀರಾ ಜಾಣರೂ ಅಲ್ಲ. ಅಂತೂ ಬಾಳ ಚಕ್ರ ತಿರುಗುತ್ತಿತ್ತು. ಶಾರದಮ್ಮ ಪಾತ್ರೆ ತಿಕ್ಕುತ್ತಲೇ ತನ್ನ ಲೆಕ್ಕಾಚಾರ ಮುಂದುವರೆಸಿದಳು. "ಸರಳಾ ಈ ವರ್ಷ ಪಿಯುಸಿ ಮುಗಿಸುತ್ತಾಳೆ. ಚೆನ್ನಾಗಿ ಓದಿದರೆ ಓದಿಸಿದರಾಯ್ತು. ಇಲ್ಲದಿದ್ದರೆ ಅವಳಿಗೊಂದು ಮದುವೆ ಮಾಡಿದರಾಯ್ತು. ದಂತದ ಗೊಂಬೆಯಂತಿದ್ದಾಳೆ ನನ್ನ ಮಗಳು; ಯಾರಾದರೂ ಕಣ್ಣಿಗೊತ್ತಿಕೊಂಡು ಮದುವೆ ಮಾಡಿಕೊಳ್ಳುತ್ತಾರೆ" ಶಾರದಮ್ಮನ ತುಟಿಯ ಮೇಲೆ ಕಿರುನಗೆ ಲಾಸ್ಯವಾಡಿತು.

ನಿಜ; ಸರಳಾ ನಿಜವಾಗಲೂ ಚಂದನದ ಗೊಂಬೆಯೇ ಸರಿ. ಅವಳೂ ಸಾಧ್ಯವಾದಷ್ಟು ತನ್ನ ಮಿತಿಯಲ್ಲಿಯೇ ತನ್ನ ಸೌಂದರ್ಯವನ್ನು ಎತ್ತಿ ತೋರಿಸುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತಾಳೆ. ಸೌಂದರ್ಯ ಇದ್ದಲ್ಲಿ ಆರಾಧನೆಯೂ ಹೆಚ್ಚಲ್ಲವೇ? ಅಂತಹ ಆರಾಧಕರಿಗೇನೂ ಬರ ಇರಲಿಲ್ಲ. ಅಂತಹ ಒಂದು ದುಂಬಿಯ ಆಕರ್ಷಣೆಗೆ ವಯೋಸಹಜವಾಗಿ ಅವಳು ಬಿದ್ದಿದ್ದಳು. ಈ ಮೊದಲು ಕಾಣಿಸಿದ ಸನ್ನಿವೇಶ ಅಂತಹ ಪ್ರಸಂಗಗಳಲ್ಲೊಂದು.

ಆದರೂ ಸರಳಾ ತೀರಾ ಕುಲಟೆಯೇನಲ್ಲ. ಅಪ್ಪ ಹೇಗೇ ಇದ್ದರೂ ಅಮ್ಮನ ಹೆದರಿಕೆ ಅವಳಿಗಿದ್ದೇ ಇತ್ತು. ಎದೆಯುದ್ದ ಬೆಳೆದು ನಿಂತ ಮಗಳಾದರೂ ಸರಳೆ ಮಾಡುವ ಸಣ್ಣಪುಟ್ಟ ತಪ್ಪುಗಳೂ ಶಿಕ್ಷಾರ್ಹ ಎಂದೇ ಭಾವಿಸಿದ್ದ ಶಾರದಮ್ಮ ಮಗಳನ್ನು ಮೈಯೆಲ್ಲ ಕಣ್ಣಾಗಿ ಕಾಯುತ್ತಿದ್ದಳು. ಹೀಗಾಗಿ ಮರ್ಯಾದೆಯ ಸೀಮಾರೇಖೆಯನ್ನು ಉಲ್ಲಂಘಿಸುವ ಎದೆಗಾರಿಕೆ ಅವಳಿಗಿರಲಿಲ್ಲ.

ಶಾರದಮ್ಮ ಎಂತಹ ಕಷ್ಟ ಬಂದರೂ ಎದೆಗುಂದುವ ಹೆಣ್ಣಲ್ಲ. ನಾಲ್ಕು ಮಕ್ಕಳ ತಾಯಿಯಾದರೂ ಕೃಶಾಂಗಿಯಾಗಿ ಕಳೆ, ಕಳೆಯಾಗಿದ್ದ ಅವಳನ್ನು ಎಷ್ಟೊಂದು ಕಾಮಾಲೆ ಕಣ್ಣುಗಳು ಈಂಟಿ, ಈಂಟಿ ಕುಡಿದಿಲ್ಲ ಹೇಳಿ!? ಕುಡುಕ ಗಂಡ, ಕಿತ್ತು ತಿನ್ನುವ ಬಡತನ.... ಅವಳು ಮನಸ್ಸು ಮಾಡಿದ್ದರೆ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡಬಹುದಾಗಿತ್ತು ಆದರೆ ಅವಳೆಂದೂ ಸುಖ ಲೋಲುಪತೆಗೆ ಮೈ ಸೋತವಳಲ್ಲ. ನಾಲ್ಕು ಮನೆಯ ಬದಲು ಎಂಟು ಮನೆಯ ಕೆಲಸ ಮಾಡಿದರೂ ಸರಿಯೇ ಆದರೆ ಇನ್ನೊಬ್ಬರೆದುರಿಗೆ ಕೈ ಚಾಚಲಾರೆ ಎಂಬ ಹಠಮಾರಿ ಗುಂಡಿಗೆ ಅವಳದು.

ಆದರೂ ಬಡತನಕ್ಕೆ ಬವಣೆ ಜಾಸ್ತಿಯಲ್ಲವೇ? ಕಷ್ಟಗಳು, ನೋವುಗಳು.... ಗಾಯದ ಮೇಲೆ ಬರೆ ಕೊಡುತ್ತಲೇ ಇರುವುದು ಜಗದ ನಿಯಮ. ಜಗತ್ತಿನಲ್ಲಿ ಎಷ್ಟೊಂದು ಕಥೆಗಳಿವೆ. ರಾತ್ರಿ ಕಳೆದು ಬೆಳಗಾಗುವುದರಲ್ಲಿ ಕೋಟ್ಯಾಂತರ ಗಳಿಸಿದವರೂ ಇದ್ದಾರೆ; ಕೋಟಿ ಕಳೆದುಕೊಂಡವರೂ ಇದ್ದಾರೆ....ಎಲ್ಲೋ ಒಂದೆರಡು ಪ್ರತಿಶತ ಜನರು. ಆದರೆ ನಿಜ ಏನೆಂದರೆ ಈ ಜಗತ್ತಿನಲ್ಲಿ ಬಡವ ಬಡವನಾಗಿಯೇ ಇರುತ್ತಾನೆ, ಶ್ರೀಮಂತನ ಶ್ರೀಮಂತಿಕೆ ಏರುತ್ತಲೇ ಹೋಗುತ್ತದೆ. ಇನ್ನು ಮಧ್ಯಮ ವರ್ಗದವ ತ್ರಿಶಂಕುವಾಗಿಯೇ ಇರುತ್ತಾನೆ. ದಿನ ಕಳೆದು ದಿನ ಬರುತ್ತಿತ್ತು. ಬೆಳಗ್ಗೆ ಉಂಡರೆ ರಾತ್ರಿಗಿಲ್ಲ ರಾತ್ರಿಗೆ ಉಂಡರೆ ಬೆಳಗ್ಗೆಗಿಲ್ಲ. ಹೀಗೇ ಶಾರದಮ್ಮನ ಕುಟುಂಬ ನಡೆಯುತ್ತಿತ್ತು.

ಬಹುಶಃ ಕೊರೊನಾ ಎಂಬ ಮಹಾಮಾರಿ ಒಕ್ಕರಿಸದಿದ್ದರೆ ಈ ಕಥೆ ಇಲ್ಲಿಗೆ ಮುಕ್ತಾಯವಾಗುತ್ತಿತ್ತು. ಅಥವಾ ಸರಳೆಯ ಮದುವೆ ಮಾಡುವಲ್ಲಿಗೆ ಕೊನೆಯಾಗುತ್ತಿತ್ತು. ಇನ್ನೂ ಹೆಚ್ಚೆಂದರೆ ಬಿಳಿಕುದುರೆಯನ್ನೇರಿ ಏಳು ಸಮುದ್ರ ದಾಟಿ ಬಂದ ರಾಜಕುಮಾರನೊಬ್ಬ ಸರಳೆಯ ಲಾವಣ್ಯಕ್ಕೆ ಮನ ಸೋತು ಅವಳು ಅತ್ಯಂತ ಬಡತನದಿಂದ ಬಂದವಳಾದರೂ ಲೆಕ್ಕಿಸದೇ ಅವಳನ್ನು ಮದುವೆಯಾಗಿ ತನ್ನ ಅರಮನೆಯಲ್ಲಿ ಸುಖಿಯಾಗಿರಿಸಿಕೊಂಡ ಎಂಬ ಫಿಲ್ಮಿ ಸುಖಾಂತ್ಯ ಕಾಣಬಹುದಾಗಿತ್ತು. ಆದರೆ ಇದು ವಾಸ್ತವ, ನಾನೇನೂ ಕಥೆ ಕಟ್ಟುತ್ತಿಲ್ಲ. ನಮ್ಮ ನಿಮ್ಮೆಲ್ಲರ ಸುತ್ತ ಮುತ್ತ ನಡೆದಿದ್ದನ್ನೇ ನಡೆಯುತ್ತಿರುವುದನ್ನೇ ನಿಮ್ಮೆದುರಿಗೆ ಪ್ರಸ್ತುತಪಡಿಸುತ್ತಿದ್ದೇನೆ. ಹೀಗಾಗಿ ನಮ್ಮ ಕಥಾನಾಯಕಿ ಸರಳೆ ಸಿಂಡ್ರೆಲಾನೂ ಅಲ್ಲ; ಯಾವ ರಾಜಕುಮಾರನೂ ಅವಳನ್ನರಸಿ ಬಂದು ಅರಸಿಯನ್ನಾಗಿಸಲೂ ಇಲ್ಲ.

ಈ ಕೊರೊನಾ ಎಲ್ಲಿತ್ತೋ ನಾ ಬೇರೆ ಕಾಣೆ! ಮಾರ್ಚ್ 27.... ಸರಳೆಯ ಕೊನೆಯ ಪರೀಕ್ಷೆ ಇತ್ತು.ಅದೊಂದು ಪರೀಕ್ಷೆ ಮುಗಿಸಿದರೆ ಸರಳೆ ಕುಮಾರಿ ಸರಳಾ ಪಿಯುಸಿ ಆಗುತ್ತಿದ್ದಳು. ಇದ್ದಕ್ಕಿದ್ದ ಹಾಗೆ ಸರ್ಕಾರ ಲಾಕ್‌ಡೌನ್ ಘೋಷಿಸಿತು. ಕುಟು, ಕುಟು ಮೆಲ್ಲಗೆ ಉಸಿರು ಹಿಡಿದು ನಡೆಯುತ್ತಿದ್ದ ಬದುಕಿನ ಬಂಡಿ ಇನ್ನೂ ಮೆಲ್ಲಗೆ ತೆವಳತೊಡಗಿತು. ಶಾರದಮ್ಮ ಕೆಲಸ ಮಾಡುತ್ತಿದ್ದ ಮನೆಗಳಲ್ಲಿ ನಾಲ್ಕಾರು ಮನೆಗಳು ಕೈ ತಪ್ಪಿದವು. ಕಾರಣಗಳೂ ವಿಚಿತ್ರವಾಗಿದ್ದವು. "ಹೇಗೂ ಲಾಕ್ ಡೌನ್. ಆಫೀಸಿಗೆ ಹೋಗುವ ಧಾವಂತವಿಲ್ಲ ಶಾರದಮ್ಮಾ. ಲಾಕ್‌ಡೌನ್ ಮುಗಿದ ಮೇಲೆ ನೋಡುವಾ ಅಂತ ಒಬ್ಬರೆಂದರೆ "ಅಯ್ಯೋ ನೀನು ಯಾರ್ಯಾರ ಮನೆಗೆ ಹೋಗಿ ಎಲ್ಲೆಲ್ಲಿ ತಿರುಗ್ಯಾಡಿ ಬಂದಿರುತ್ತೀಯೋ? ಮನೇಲಿ ಚಿಕ್ಕ ಮಗು ಬೇರೆ! ನಮ್ಮ ಆರೋಗ್ಯ ನಾವು ಕಾಪಾಡಿಕೊಳ್ಳಬೇಕಲ್ಲ ಶಾರದಮ್ಮಾ" ಅಂತ ಬೇರೊಬ್ಬರು. ಮಗದೊಬ್ಬರು? ಅಯ್ಯೋ ಲಾಕ್‌ಡೌನ್ ಅಂತ ಹೇಳಿ ಎಲ್ಲ ರೇಟು ವಿಪರೀತ ಹೆಚ್ಚಾಗಿದೆ ಕಣಮ್ಮಾ, ನಿನಗೆ ತಿಂಗಳಿಗೆ ಸಾವಿರಾರು ರೂಪಾಯಿ ಕೊಟ್ಟು ಕೆಲಸಕ್ಕೆ ಇಟ್ಟುಕೊಳ್ಳುವ ಬದಲು ಅದನ್ನೇ ಉಳಿತಾಯ ಮಾಡಬಹುದಲ್ವಾ? ಎಂಬ ಜಾಣ ಪ್ರಶ್ನೆಯನ್ನಿಟ್ಟರು. ಇವೆಲ್ಲಕ್ಕೂ ಸರ್ಕಾರದ ಕುಮ್ಮಕ್ಕು ಬೇರೆ. ಸಾಧ್ಯವಾದಷ್ಟು ಹೊರಗಿನವರನ್ನು ಮನೆಯ ಒಳಗೆ ಸೇರಿಸಿಕೊಳ್ಳಬೇಡಿ. ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಿ, ಇತ್ಯಾದಿ, ಟಿವಿ ತುಂಬಾ ಕೊರೊನಾ ಹಾವಳಿಯೇ ಹಾವಳಿ, ಸತ್ತವರ ಸಂಸ್ಕಾರವೂ ಅಸಾಧ್ಯವಾದ ಪರಿಸ್ಥಿತಿ, ಯಾವುದಾದರೂ ಫೋನ್ ಬಂದರೆ ಮತ್ತೆ ಯಾರು ತೀರಿಕೊಂಡರೋ ಇನ್ಯಾವ ಕೆಟ್ಟ ಸುದ್ದಿ ಕಾದಿದೆಯೋ ಎಂಬ ಆತಂಕ. ಅಂತೂ ಶಾರದಮ್ಮನ ಸಂಸಾರಕ್ಕೀಗ ಅಗ್ನಿಪರೀಕ್ಷೆ.

ಆದರೂ ಜಾಣೆ, ಗಟ್ಟಿಗಿತ್ತಿ ಶಾರದಮ್ಮ, ಸಂಸಾರವನ್ನು ಮುಳುಗಲು ಬಿಡಬಾರದು ಎಂದು ನಿಶ್ಚಯಿಸಿಯೇ ಇದ್ದಳು. ಹೀಗಾಗಿ ನೌಕೆ ತೇಲುತ್ತಿತ್ತು. ಮುನ್ನಡೆಯುತ್ತಿರಲಿಲ್ಲ ಅಷ್ಟೇ. ಆದರೆ ನಾವಂದುಕೊಂಡಂತೆಯೇ ಎಲ್ಲ ನಡೆಯುವುದಾದರೆ ಸಂಕಟ ವಿಮೋಚನ ವೆಂಕಟರಮಣನಿರುವುದಾದರೂ ಏಕೆ? ಈ ಮಧ್ಯೆ ಸರಳೆಯ ಅಪ್ಪನಿಗೆ ಮೊದಲಿಗಿಂತ ಹೆಚ್ಚೇ ಹಣ ಬೇಕಾಗತೊಡಗಿತು. ಹೆಂಡದ ರೇಟು ಕಳ್ಳಸಂತೆಯಲ್ಲಿ ಹೆಚ್ಚಾಗಿತ್ತಲ್ಲ. ಸರಳೆಗೆ ಒಂದು ದೊಡ್ಡ ಮನೆಯಲ್ಲಿ ಕೆಲಸ ಸಿಕ್ಕಿತು. ಅವಳಿಗೆ ಖುಷಿಯೋ ಖುಷಿ ಎಲ್ಲರೂ ಇದ್ದ ಉದ್ಯೋಗವನ್ನೂ ಕಳೆದುಕೊಂಡು ಮನೆಯಲ್ಲಿ ಕುಳಿತಿರುವಾಗ ಸರಳೆಯನ್ನು ಹುಡುಕಿಕೊಂಡು ಉದ್ಯೋಗ ಬಂದಿತ್ತು. ಸಂಬಳವೂ ದೊಡ್ಡದೇ! ಶಾರದಮ್ಮ ಐದು ಮನೆಗಳಲ್ಲಿ ದುಡಿದರೆ ಸಿಕ್ಕುವ ಸಂಬಳ ಸರಳೆಗೆ ಒಂದೇ ಮನೆಯಲ್ಲಿ ಸಿಕ್ಕುವಂತಾಗಿತ್ತು. ಮೇಲಾಗಿ ಆ ಮನೆಯಾತ ಐವತ್ತು ಸಾವಿರ ರೂಪಾಯಿ ಮುಂಗಡವಾಗಿ ಕೊಡಲೊಪ್ಪಿದ್ದ. ಶಾರದಮ್ಮನಿಗೆ ಇದ್ದದ್ದು ಒಂದೇ ಸಮಸ್ಯೆ. ಅದೇನೆಂದರೆ ಸರಳ ತಿಂಗಳಿಗೊಮ್ಮೆ ಮಾತ್ರ ಮನೆಗೆ ಬರಲು ಅವಕಾಶವಿತ್ತು. ಕಾರಣ ಕೊರೊನಾ! ದಿನಾ ಮನೆಗೆ ಬಂದು ಹೋಗಿದ್ದರೆ ಅಕಸ್ಮಾತ್ ಕೊರೊನಾ ಸರಳೆಗೆ ತಗುಲಿ, ಸರಳೆಯಿಂದ ಅವನ ಹೆಂಡತಿಗೆ ತಗುಲಿ, ಹೆಂಡತಿಯಿಂದ ಅವನಿಗೆ ಅಂಟಿಕೊಂಡು ಅವನು ಟಿಕೆಟ್ ತೆಗೆಯುವಂತಾದರೆ... ಅಳೆದೂ, ಸುರಿದು ಮಗಳನ್ನು ಕಳುಹಿಸಲೊಪ್ಪಿದಳು ಶಾರದಮ್ಮ, ಅದೂ ಆರು ತಿಂಗಳ ಮಟ್ಟಿಗೆ.

ಆದರೆ ವಿಧಿ ನಿಯಮವೇ ಬೇರೆಯಾಗಿತ್ತು. ಸರಳಾ ಕೆಲಸಕ್ಕೆ ಸೇರಿದ ತಿಂಗಳೊಪ್ಪತ್ತಿನಲ್ಲೇ ಶಾರದಮ್ಮ ಮತ್ತು ಅವಳ ಗಂಡು ಕೂಸು ಕೊರೊನಾಗೆ ಬಲಿಯಾಗಿ ಹೋಗಿದ್ದರು. ಬೇಜವಾಬ್ದಾರ ಅಪ್ಪ ಮಾತ್ರ ಗುಂಡುಕಲ್ಲಂತೆ ಉಳಿದಿದ್ದ. ಸರಳೆಯ ಇಬ್ಬರು ತಂಗಿಯರು ದಿಕ್ಕೇಡಿಗಳಾಗಿದ್ದರು. ಸರಳೆಯ ಕೆಲಸದೊಡೆಯ ಆ ಘಳಿಗೆಯಲ್ಲಿ ದೇವರಂತೆ ಬಂದ. ಸರಳೆಯ ಅಪ್ಪನೊಂದಿಗೆ ನಾಲ್ಕಾರು ದಿನ ಮಾತನಾಡಿ ನಂತರ ಸರಳೆಯ ತಂಗಿಯರನ್ನೂ ತನ್ನ ಮನೆಗೇ ಕರೆತಂದ. ಅವರಿಬ್ಬರಿಗೂ ಸರಳೆಯಂತೆಯೇ ತನ್ನ ಸಂಬಂಧಿಕರ ಮನೆಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿದಾಗ ಸರಳೆಗೆ ಸ್ವರ್ಗಕ್ಕೆ ಮೂರೇ ಗೇಣು!

ಏಕೆಂದರೆ ಸರಳೆಗೆ ಈಗ ಅವಳಿಷ್ಟಪಡುವ ಬಟ್ಟೆ ಬರೆ ಹಾಕುವ ಸ್ವಾತಂತ್ರ್ಯ ಬಂದಿದೆ. ಜೊತೆಗೊಂದು ಮೊಬೈಲ್ ಬೇರೆ ಸಿಕ್ಕಿದೆ. ಅಲ್ಲದೇ ಅವಳೀಗ ಶ್ರೀಮಂತರ ಮನೆಯ ಕೆಲಸದಾಳಾಗಿದ್ದರಿಂದ ದೊಡ್ಡ, ದೊಡ್ಡ ಪಾರ್ಟಿಗಳಿಗೆ ಅವಳ 'ಅಮ್ಮ'ನ ಜೊತೆಗೆ ಅಂದರೆ ಅವಳ ಮಾಲಕಿ ಜೊತೆಗೆ ಅವಳೂ ಹೋಗುತ್ತಾಳೆ. ಸರಳೆ ಕಂಡ ತಳುಕು ಬಳುಕಿನ ಬಣ್ಣದ ಲೋಕ ಇದೀಗ ಅವಳ ಮುಂದೆ ಅನಾವರಣಗೊಂಡಿದೆ. ಎಷ್ಟು ಚೆಂದ ಈ ಲೋಕ ಎನಿಸತೊಡಗಿದೆ. ದಿನಗಳು ಹೀಗೆಯೇ ನಡೆದರೆ ಅಂತೂ ಇಂತೂ ರಾಜಕುಮಾರಿ ಸುಖವಾಗಿದ್ದಳು ಎಂಬಲ್ಲಿಗೆ ಕಥೆ ಮುಗಿಯುತ್ತಿತ್ತು. ಆದರೆ ಮುಂದೆ ನಡೆದಿದ್ದೇ ಬೇರೆ!

ಮೂರು ವರ್ಷಗಳ ನಂತರ.......

ಸಮುದ್ರದ ದಂಡೆಯಲ್ಲಿ ಕಾಲುಚಾಚಿ ಕುಳಿತಿದ್ದಾಳೆ ಸರಳಾ. ಮುಸ್ಸಂಜೆಯ ಇಳಿಬೆಳಕಿನಲ್ಲಿ ಮುಂಬೈಯೆಂಬ ಮಾಯಾನಗರಿಯಲ್ಲಿ ಅಲ್ಲೊಂದು, ಇಲ್ಲೊಂದು ದೀಪಗಳು ಇದೀಗ ಬೆಳಗತೊಡಗಿವೆ. ಸರಳೆಗೀಗ 21ರ ಹರೆಯ. ಆದರೆ ಮೊದಲಿನ ಸರಳ ಸೌಂದರ್ಯವೀಗ ಮಾಸಿದೆ. ಬಿಗಿದ ಮೈಕಟ್ಟೂ ಸಡಿಲವಾಗಿದೆ. ಈಗೇನಿದ್ದರೂ ಹೊಳೆವ, ಕಣ್ಣು ಕುಕ್ಕುವ ರೂಪು, ಮೇಕಪ್ ಇಲ್ಲದಿದ್ದರೂ ನಾಲ್ಕು ಜನರ ನಡುವೆ ಎದ್ದು ಕಾಣುತ್ತಿದ್ದ ಅವಳ ಸ್ನಿಗ್ಧ ಸೌಂದರ್ಯಕ್ಕೀಗ ಜನರ ಗಮನ ಸೆಳೆಯಲು ಐದು ಕೆಜಿಯಾದರೂ ಮೇಕಪ್ ಬೇಕು. ಅಷ್ಟೆಲ್ಲ ಮೇಕಪ್ ಮಾಡಿಕೊಂಡ ಮೇಲೂ ಕೆಲವು ಸಲ ಜನರ ಗಮನ ಸೆಳೆಯಲು ಸೆರಗನ್ನು ಜಾರಿಸಿ ಹೊದೆಯಬೇಕಾಗುತ್ತದೆ. ಆದರೇನು ಬದುಕು ಜಟಕಾ ಬಂಡಿ ವಿಧಿಯದರ ಸಾಹೇಬ.....

ಇಂದೇಕೋ ಮನಸ್ಸು ತುಂಬಾ ದಣಿದಿತ್ತು. ಇಬ್ಬರು ತಂಗಿಯರ ನೆನಪೂ ಒತ್ತೊತ್ತಿ ಬರುತ್ತಿತ್ತು. 'ಅಮ್ಮನಿದ್ದಿದ್ದರೆ....' ಎಂಬರೆ ಪ್ರಪಂಚವೂ ಒಮ್ಮೊಮ್ಮೆ ಕಣ್ಣೆದುರು ಹರಡುತ್ತಿತ್ತು. ಆದರೆ...ಎಲ್ಲವೂ ಕನಸೇ ಸರಿ. ಮೂರು ವರ್ಷದಲ್ಲಿ ತನ್ನ ಬದುಕು ಏನಾಗಿ ಹೋಯಿತು? ಬಾಳ ದೋಣಿ ನೀರು ಹರಿದತ್ತ, ಗಾಳಿ ಬೀಸಿದತ್ತ ಸಾಗಿ ಹೋಗುತ್ತಿದೆ.


ದೋಣಿ ತನ್ನದಾದರೂ ತಾನು ನಾವಿಕಳಲ್ಲ; ನಾವಿ ಕಳಾಗಬಯಸಿದರೂ ಹರಿಗೋಲು ತನ್ನ ಕೈಲಿಲ್ಲ. ಎಂಥ ವಿಪರ್ಯಾಸ! ಅವತ್ತು ಅಮ್ಮ ನಾನು ಓದಲಿ ಅಂತ ಬಯಸಿದಳು. ಕೊರೊನಾ ಓದಿಗೆ ಕಲ್ಲು ಹಾಕಿತು. ಮನಸಿರಲಿಲ್ಲ, ಆದರೂ ಕೆಲಸಕ್ಕೆ ಸೇರಿದಳು. ಆ ಕೆಲಸ ಸುಖದ ಗಣಿ ಎಂದು ಕೊಂಡವಳಿಗೆ ಸುಖವೆಂಬುದು ಮರೀಚಿಕೆ ಎಂದು ಗೊತ್ತಾಗುವುದರೊಳಗೆ ಬದುಕು ಬೇರೆಯದೇ ದಾರಿ ಹಿಡಿದಿತ್ತು.

ತಂಗಿಯರನ್ನೂ ಕರೆದುಕೊಂಡು ಬಂದಿದ್ದನಲ್ಲ ತನ್ನ ಮನೆ ಮಾಲಿಕ. ಅವರನ್ನು ಕರೆದುಕೊಂಡು ಬಂದ ನಾಲ್ಕಾರು ದಿನಗಳಲ್ಲೇ ತಂಗಿಯರಿಬ್ಬರನ್ನೂ ಒಳ್ಳೆಯ ಕಡೆ ಕೆಲಸಕ್ಕೆ ಸೇರಿಸಿದ (ಎಂದು ಅವನೇ ಹೇಳಿಕೊಂಡದ್ದು) ಶುರು, ಶುರುವಿನ ನಾಲ್ಕಾರು ತಿಂಗಳಲ್ಲಿ ತಂಗಿಯರ ಫೋನ್ ಬರುತ್ತಿದ್ದವು. ಆಮೇಲೆ ಸರಳೆಯ ಕೈಯಿಂದ ಫೋನ್ ಮಾಯವಾಯಿತು. ಒಂದು ದಿನ ಮನೆ ಮಾಲಿಕ ಸರಳಗೆ ಹೇಳಿದ "ಸರಳಾ, ನಿನ್ನ ಬಟ್ಟೆಗಳನ್ನೆಲ್ಲ ಪ್ಯಾಕ್ ಮಾಡಿಕೋ. ನನ್ನ ಅಕ್ಕ ಒಬ್ಬಳು ಮುಂಬೈಯಲ್ಲಿ ಇರುತ್ತಾಳೆ. ನೀನು ಅವಳ ಮನೆಯಲ್ಲಿ ನಾಲ್ಕಾರು ತಿಂಗಳು ಇರಬೇಕಾಗುತ್ತೆ. ನಾವು ಮಗಳ ಮನೆಗೆ ಫಾರಿನ್ನಿಗೆ ಹೋಗ್ತಾ ಇದೀವಿ. ನಾವು ಬರೋ ತನಕ ನೀನೊಬ್ಬಳೇ ಇರೋದು ಸರಿಯಲ್ಲ? ಎಂದ. "ಇರಬಹುದೇನೋ" ಎಂದುಕೊಂಡೆ. ಅಷ್ಟರಲ್ಲಿ ಅಪ್ಪ ನಾಪತ್ತೆಯಾಗಿದ್ದ, ನನಗೀಗ ಬೇರೆ ದಾರಿಯೇ ಇರಲಿಲ್ಲ. ಸಾಹೇಬ್ ಮತ್ತು ಮೇಮ್ ಸಾಬ್‌ರನ್ನು ನಂಬದೇ ಗತಿಯಿರಲಿಲ್ಲ. ಬ್ಯಾಗ್ ಪ್ಯಾಕ್ ಮಾಡಿಕೊಂಡು ರಾತ್ರಿ ಯಿಡೀ ಪ್ರಯಾಣಿಸಿ ಮುಂಬೈ ತಲುಪುವದರೊಳಗೆ ಮಟ, ಮಟ ಮಧ್ಯಾಹ್ನ ಹನ್ನೆರಡು ಘಂಟೆ.

ಸಮುದ್ರದ ಆವಿಗೆ ಎಂಥ ಗಟ್ಟಿ ಕಲ್ಲಾದರೂ ಕರಗಬೇಕು ಅಂಥ ಉಗ್ರ ಸೆಖೆ! ಸಾಹೇಬರ ಅಕ್ಕನ ಮನೆ ಭವ್ಯವಾಗಿತ್ತು. ಸರಳೆಗಂತೂ ಒಳ್ಳೆ ಅರಮನೆ ನೋಡಿದಂತೆ ಭಾಸವಾಯಿತು. ಒಳಗೆ ಹೆಜ್ಜೆ ಇಡುತ್ತಲೇ ಹೊರಗಿನ ಬಿಸಿಲು, ಸೆಖೆ ಎಲ್ಲ ಮರೆತು ಹೋಗಬೇಕು ಅಂಥಾ ತಂಪು, ತಂಪು. ಮೇಲಾಗಿ ಪಾರಿಜಾತ ಹೂವಿನ ಮಂದವಾದ ನವಿರಾದ ಕಂಪು, ಸುಮಧುರ ವಾಸನೆ, ನೆಲ ಕನ್ನಡಿಯ ಹಾಗೆ ಹೊಳೆಯುತ್ತಿತ್ತು. ಅಡಿಯಿಡಲೂ ಒಂದು ಘಳಿಗೆ ಯೋಚಿಸಿದಳು ಸರಳ. ಅಕ್ಕ ಅರೇ ಬೇಟಿ! ಆವ್, ಆವ್ ಎಂದು ಸಂಭ್ರಮದಿಂದ ಎದುರುಗೊಂಡಾಗ ಸರಳ ಗಾಬರಿಯಾದಳು. "ಪುರಮಾಯಿಶಿ ತಂದದ್ದು ಸರಳೆಯ ಮಾಲಿಕ ಹಲ್ಲು ಕಿರಿದ. ಬಹುಮಾನವೂ ಚೆನ್ನಾಗೇ ಸಿಗುತ್ತೆ ಬಿಡು! ತಾಜಾ, ತಾಜಾ ಇದ್ದಾಳೆ" ಅಕ್ಕ ನಕ್ಕಳು. ಸರಳೆಗೆ ಎಲ್ಲವೂ ಅಯೋಮಯ. ಏನು ತಾಜಾ ಏನು ಬಹುಮಾನ" ಸರಳೆಯ ಪ್ರಶ್ನೆಗೆ ಸಿಕ್ಕದ್ದು ವಿಕಟಾಟ್ಟಹಾಸದ ಪ್ರತ್ಯುತ್ತರ.

ಅಕ್ಕನ ಅರಮನೆಯ ತುಂಬಾ ದೊಡ್ಡ, ದೊಡ್ಡ ಕೋಣೆಗಳು. ಎರಡು ದೊಡ್ಡ ಹಾಲ್‌ಗಳು, ಅಲಂಕಾರವಂತೂ ದೇವಲೋಕವೇ ಧರೆಗಿಳಿದಂತಿತ್ತು. ಸರಳಗೂ ದೊಡ್ಡದೊಂದು ಕೋಣೆ ಕೊಡಲಾಯಿತು. ಇಷ್ಟು ದೊಡ್ಡ ಕೋಣೆ ನನಗೊಬ್ಬಳಿಗೇನಾ? ಸರಳಾ ಕಣ್ಣರಳಿಸಿದಳು. "ಇಲ್ಲ; ಆಗಾಗ ಯಾರಾದರೊಬ್ಬರು ಬಂದು ಹೋಗ್ತಾ ಇರತಾರೆ" ಪಕ್ಕದ ಕೋಣೆಯ ಹುಡುಗಿ ಪುಸಕ್ಕನೆ ನಕ್ಕಳು. ಸರಳೆಗೆ ಅರ್ಥವಾಗಲಿಲ್ಲ "ನಿಧಾನಕ್ಕೆ ಅರ್ಥವಾಗುತ್ತೆ ಬಿಡು" ಇನ್ನೊಂದು ಹುಡುಗಿ ಹೇಳಿದಳು. "ಹೌದು ಈ ಮನೆಯಲ್ಲಿ ಬರೀ ಹುಡುಗಿಯರೇ ಇರುವುದಾ? ಸರಳೆ ಮತ್ತೆ ಕೇಳಿದಳು.

● 4ನೇ ಪುಟಕ್ಕೆ



ಹೆಚ್.ಜಿ.ಎನ್.ಪ್ರಸಾದ್.

ಸಮುದ್ರದ ಆವಿಗೆ ಎಂಥ ಗಟ್ಟಿ ಕಲ್ಲಾದರೂ ಕರಗಬೇಕು ಅಂಥ ಉಗ್ರ ಸೆಖೆ! ಸಾಹೇಬರ ಅಕ್ಕನ ಮನೆ ಭವ್ಯವಾಗಿತ್ತು. ಸರಳೆಗಂತೂ ಒಳ್ಳೆ ಅರಮನೆ ನೋಡಿದಂತೆ ಭಾಸವಾಯಿತು. ಒಳಗೆ ಹೆಜ್ಜೆ ಇಡುತ್ತಲೇ ಹೊರಗಿನ ಬಿಸಿಲು, ಸೆಖೆ ಎಲ್ಲ ಮರೆತುಹೋಗಬೇಕು ಅಂಥಾ ತಂಪು, ತಂಪು. ಮೇಲಾಗಿ ಪಾರಿಜಾತ ಹೂವಿನ ಮಂದವಾದ ನವಿರಾದ ಕಂಪು, ಸುಮಧುರ ವಾಸನೆ, ನೆಲ ಕನ್ನಡಿಯ ಹಾಗೆ ಹೊಳೆಯುತ್ತಿತ್ತು. ಅಡಿಯಿಡಲೂ ಒಂದು ಘಳಿಗೆ ಯೋಚಿಸಿದಳು ಸರಳ. ಅಕ್ಕ ಅರೇ ಬೇಟಿ! ಆವ್, ಆವ್ ಎಂದು ಸಂಭ್ರಮದಿಂದ ಎದುರುಗೊಂಡಾಗ ಸರಳ ಗಾಬರಿಯಾದಳು. "ಪುರಮಾಯಿಶಿ ತಂದದ್ದು ಸರಳೆಯ ಮಾಲೀಕ ಹಲ್ಲು ಕಿರಿದ. ಬಹುಮಾನವೂ ಚೆನ್ನಾಗೇ ಸಿಗುತ್ತೆ ಬಿಡು! ತಾಜಾ, ತಾಜಾ ಇದ್ದಾಳೆ" ಅಕ್ಕ ನಕ್ಕಳು. ಸರಳೆಗೆ ಎಲ್ಲವೂ ಅಯೋಮಯ. ಏನು ತಾಜಾ ಏನು ಬಹುಮಾನ" ಸರಳೆಯ ಪ್ರಶ್ನೆಗೆ ಸಿಕ್ಕದ್ದು ವಿಕಟಾಟ್ಟಹಾಸದ ಪ್ರತ್ಯುತ್ತರ.

ಶಾರದಮ್ಮ ಎಂತಹ ಕಷ್ಟ ಬಂದರೂ ಎದೆಗುಂದುವ ಹೆಣ್ಣಲ್ಲ. ನಾಲ್ಕು ಮಕ್ಕಳ ತಾಯಿಯಾದರೂ ಕೃಶಾಂಗಿಯಾಗಿ ಕಳೆ, ಕಳೆಯಾಗಿದ್ದ ಅವಳನ್ನು ಎಷ್ಟೊಂದು ಕಾಮಾಲೆ ಕಣ್ಣುಗಳು ಈಂಟಿ, ಈಂಟಿ ಕುಡಿದಿಲ್ಲ ಹೇಳಿ?! ಕುಡುಕ ಗಂಡ, ಕಿತ್ತು ತಿನ್ನುವ ಬಡತನ... ಅವಳು ಮನಸ್ಸು ಮಾಡಿದ್ದರೆ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡಬಹುದಾಗಿತ್ತು. ಆದರೆ ಅವಳೆಂದೂ ಸುಖ ಲೋಲುಪತೆಗೆ ಮೈ ಸೋತವಳಲ್ಲ. ನಾಲ್ಕು ಮನೆಯ ಬದಲು ಎಂಟು ಮನೆಯ ಕೆಲಸ ಮಾಡಿದರೂ ಸರಿಯೇ ಆದರೆ ಇನ್ನೊಬ್ಬರೆದುರಿಗೆ ಕೈ ಚಾಚಲಾರೆ ಎಂಬ ಹಠಮಾರಿ ಗುಂಡಿಗೆ ಅವಳದು.

ದ್ವಿತೀಯ ಬಹುಮಾನ


'ಗೌರ್ನಮೆಂಟ್ ಸ್ಕೂಲ್‌ಗೆ ಸೇರ್ತೀನಮ್ಮ'



ಜಿ.ಎನ್.ಕೃಷ್ಣಮೂರ್ತಿ
ನಾಗನಹಳ್ಳಿ ಗ್ರಾಮ
ಕಸಬಾ ಹೋಬಳಿ, ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ–571103

ತೃತೀಯ ಬಹುಮಾನ

'ನಿನಗೆ ನೀನೇ...'



ಚಂಚಲವೇಣಿ
179, 4ನೇ ಕ್ರಾಸ್, ಕಂದಾಯನಗರ, 1ನೇ ಹಂತ,
ಶ್ರೀರಾಮಪುರ 2ನೇ ಹಂತ,
ಮೈಸೂರು–570034

ನಾಲ್ಕನೇ ಬಹುಮಾನ

'ನಾನು ಸೀತೆಯಾಗಲಾರೆ'



ಬಿ.ಕೆ.ಮೀನಾಕ್ಷಿ
1580, ಶ್ರೀನರಸಿಂಹ, 8ನೇ ಅಡ್ಡ ರಸ್ತೆ,
ಶಾರದಾದೇವಿನಗರ,
ಮೈಸೂರು.


ಐದನೇ ಬಹುಮಾನ

'ಗೊಂಬೆ ಆಡ್ಸೋನು ಮ್ಯಾಲೆ ಕುಂತೌನೆ...'



ಎಸ್.ಗಣೇಶ್
ಎಲ್‌ಐಜಿ 261, ಹೆಬ್ಬಾಳ್ 3ನೇ ಹಂತ
ಸುಬ್ರಹ್ಮಣ್ಯನಗರ
ಮೈಸೂರು–570016

ತೀರ್ಪುಗಾರರ ನುಡಿ



ಕರ್ನಾಟಕದ ಪತ್ರಿಕೋದ್ಯಮದಾಗಸದಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರು ಭಾಗದ ಓದುಗ ಲೋಕದ ಬಾನಿನಲ್ಲಿ ಒಂದು ಧ್ರುವತಾರೆಯಂತಿರುವ 'ಮೈಸೂರು ಮಿತ್ರ' ದಿನಪತ್ರಿಕೆಗೆ ಈಗ ನಾಲ್ಕೂವರೆ ದಶಕಗಳ ಪ್ರಾಯ. ಸ್ಥಳೀಯ ಪತ್ರಿಕೆಯಾದರೂ ಪ್ರಸರಣದಿಂದಿಡಿದು ಎಲ್ಲಾ ರೀತಿಯಿಂದಲೂ ರಾಜ್ಯಮಟ್ಟದ ಪತ್ರಿಕೆಗಳ ಸಮ ಸಮಕ್ಕೆ ಬೆಳೆದು ನಿಂತಿರುವ 'ಮೈಸೂರು ಮಿತ್ರ'ನೆಂದರೆ ಮೈಸೂರಿಗರಿಗೆ ಹೆಮ್ಮೆ. ಅಷ್ಟೇ ಅಲ್ಲ ಸಮಸ್ತ ಕನ್ನಡಿಗರ ಹೆಮ್ಮೆಯೂ ಹೌದು. ಸ್ಥಳೀಯ ಪತ್ರಿಕೆಯಾಗಿ ಅನೇಕ ವಿಶೇಷತೆಗಳನ್ನು ತನ್ನ ಹೆಸರಲ್ಲಿ ದಾಖಲಿಸಿಕೊಂಡಿರುವ 'ಮೈಸೂರು ಮಿತ್ರ' ಪ್ರತಿವರ್ಷ ತನ್ನ ವಾರ್ಷಿಕೋತ್ಸವ ಸಂಭ್ರಮದಲ್ಲಿ ಸಾಹಿತ್ಯ ಮತ್ತು ಸಾಹಿತಿಗಳನ್ನು ಪ್ರೋತ್ಸಾಹಿಸಲು ಕಥಾಸ್ಪರ್ಧೆಯನ್ನು ನಡೆಸುತ್ತಿದ್ದು, ಇದರಲ್ಲಿ ಭಾಗವಹಿಸಿ ಬಹುಮಾನಗಳಿಸಿದ ಅನೇಕ ಮಂದಿ ಇಂದು ಪ್ರಸಿದ್ಧ ಕಥೆಗಾರರಾಗಿರುವುದುಂಟು. ಇದೂ ಕೂಡ ಮಿತ್ರನ ಒಂದು ಹೆಗ್ಗಳಿಕೆ. ಅದರಂತೆ ಪ್ರಸ್ತುತ 'ಮೈಸೂರು ಮಿತ್ರ'ನ 44ನೇ ವಾರ್ಷಿಕೋತ್ಸವಕ್ಕೆ ಕಥಾ ಸ್ಪರ್ಧೆ ಏರ್ಪಡಿಸಿದ್ದು ಮಿತ್ರನ ನಿರೀಕ್ಷೆಯನ್ನೂ ಮೀರಿ ನೂರಾರು ಕಥೆಗಳು ಬಂದಿವೆ. ಈ ಎಲ್ಲಾ ಕಥೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಬಹಳಷ್ಟು ಉತ್ತಮ ಕಥೆಗಳು ಬಂದಿದ್ದು ಆಯ್ಕೆಯು ತುಸು ತ್ರಾಸವೇ ಆಗಿತ್ತು. 'ಮೈಸೂರು ಮಿತ್ರ'ನ ಘೋಷಣೆಯಂತೆ ಒಟ್ಟು ಐದು ಕಥೆಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಬೇಕಾಗಿದ್ದರಿಂದ ಈ ಉತ್ತಮ ಕಥೆಗಳಲ್ಲೇ ಕಥಾವಸ್ತು, ಭಾಷೆ, ಭಾವ, ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ನೆಲ ಪ್ರಜ್ಞೆ, ಸಮಾಜೋಪಯೋಗಿತನ, ನಿರೂಪಣಾ ಶೈಲಿಗಳೆಲ್ಲದರ ಬಹು ಮೌಲಿಕವಾದ ಅತ್ಯುತ್ತಮಿಕೆಯನ್ನು ಆಧರಿಸಿ ಪ್ರಥಮ, ದ್ವಿತೀಯ, ತೃತೀಯ ಹಾಗೂ ಎರಡು ಪ್ರೋತ್ಸಾಹಕವೆಂದು ಒಟ್ಟು ಐದು ಕಥೆಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ.

ಸಮುದ್ರದ ಭೋರ್ಗರೆತದ ಅಲೆಗಳ ನಡುವೆ ದಡ ಸೇರಲು ವ್ಯರ್ಥ ಪ್ರಯತ್ನದಲ್ಲಿ ತೊಯ್ದಾಡುತ್ತಿರುವ ಸಮುದ್ರಕ್ಕೆ ಬಿದ್ದ ತೆಂಗಿನಕಾಯೊಂದನ್ನು ಕಥಾರೂಪಕವಾಗಿಟ್ಟುಕೊಂಡು ಸುರ ಸುಂದರಿಯಂಥ ಚೆಂದದ ಹುಡುಗಿಯೊಬ್ಬಳ ಛಿದ್ರವಾದ ಜೀವನವನ್ನು ಇತರರಿಗೆ ಪಾಠವಾಗುವಂತೆ ಎಳೆ ಎಳೆಯಾಗಿ ಬಿಚ್ಚಿಡುವ 'ಸಮುದ್ರಕ್ಕೆ ಬಿದ್ದ ತೆಂಗಿನಕಾಯಿ' ಕಥೆಗೆ ಪ್ರಥಮ ಬಹುಮಾನವನ್ನೂ, ನಾಲ್ಕು ಮನೆಗಳ ಜೀತ ಮಾಡಿಯಾದರೂ ಸರಿಯೇ ನನ್ನ ಮಕ್ಕಳನ್ನು ಪ್ರೈವೇಟ್ ಸ್ಕೂಲ್‌ನಲ್ಲೇ ಓದಿಸ್ತೀನಿ ಎಂಬ ಧೋರಣೆಯಲ್ಲಿ ಪ್ರೈವೇಟ್ ಸ್ಕೂಲ್ ಶ್ರೇಷ್ಠ, ಗೌರ್ನಮೆಂಟ್ ಸ್ಕೂಲ್ ಕನಿಷ್ಠ ಎಂಬ ಭ್ರಮೆಯಲ್ಲಿರುವ ಮಂದಿಯ ಕಣ್ ಪೊರೆಯನ್ನು ಕಳಚುವ 'ಗೌರ್ನಮೆಂಟ್ ಸ್ಕೂಲ್‌ಗೆ ಸೇರ್ತೀನಮ್ಮ' ಕಥೆಗೆ ದ್ವಿತೀಯ ಬಹುಮಾನವನ್ನೂ ಮತ್ತು ಪುಟ್ಟ ಹುಡುಗಿಯೊಬ್ಬಳನ್ನು ಗಟ್ಟಿಯಾಗಿಸಿ ತನ್ನ ಮೈ ಮುಟ್ಟಿದ ಕಾಮುಕರಿಗೆ ಮೆಟ್ಟಿನಲ್ಲಿ ಹೊಡೆಯುವ ದೈಹಿಕ ಮತ್ತು ಮಾನಸಿಕವಾಗಿ ಸದೃಢವಾಗಿಸಿ ಕೆಟ್ಟ ಸಮಾಜವನ್ನು ಎದುರಿಸುವ ಬಗೆಯನ್ನು ನಿನಗೆ ನೀನೇ ಎಂಬಂತೆ ಎದುರಿಸುವ ಶಾಲಾ ಮಕ್ಕಳ ಮೇಲಿನ ಲೈಂಗಿಕ ಕಿರುಕುಳದ ಮೇಲೆ ಬೆಳಕು ಚೆಲ್ಲುವ 'ನಿನಗೆ ನೀನೇ...' ಕಥೆಗೆ ತೃತೀಯ ಬಹುಮಾನವನ್ನು ನೀಡಲಾಗಿದೆ.

ಎಂಥಾ ಪತಿತೆಯರನ್ನೂ ಪಾವನಗೊಳಿಸುವ ಪುರುಷೋತ್ತಮರು ಇವತ್ತಿಗೂ ನಮ್ಮಲ್ಲಿದ್ದು ಅವರ ಉದಾರಶೀಲತೆಯ ಬೆಳಕಿನಲ್ಲಿ ಬದುಕು ಕಟ್ಟಿಕೊಳ್ಳುವ ಧೈರ್ಯ ನಮ್ಮ ಹೆಣ್ಣು ಮಕ್ಕಳಲ್ಲಿ ಇರಬೇಕೆಂಬ ಸಂದೇಶದೊಡನೆ ತನ್ನದಲ್ಲದ ತಪ್ಪಿಗೆ ಜೀವ–ಜೀವನವನ್ನೇ ಕಳೆದುಕೊಳ್ಳುವ ರಂಗ ನಟಿಯೊಬ್ಬಳ ಬದುಕನ್ನು ಅನಾವರಣಗೊಳಿಸುವ 'ನಾನು ಸೀತೆಯಾಗಲಾರೆ' ಕಥೆ ಹಾಗೂ ತಾನೊಂದು ಬಗೆದರೆ ಮಾನವ ಬೇರೊಂದು ಬಗೆವುದು ದೈವ ಎಂಬಂತೆ ನಿವೃತ್ತಿಯ ಅಂಚಿನಲ್ಲಿರುವ ತಂದೆ, ಸೂಕ್ತ ಉದ್ಯೋಗದ ತಲಾಶೆಯಲ್ಲಿರುವ ಮಗ, ಹೀಗೆ ತಂದೆ–ಮಗರಿಬ್ಬರೂ ಕೇಂದ್ರಿತವಾಗಿರುವ ಒಂದು ಪುಟ್ಟ ಕುಟುಂಬದ ತಾಕಲಾಟದಲ್ಲಿ ಅನೇಕರ ನೈಜ ಹೆಜ್ಜೆಗಳನ್ನು ಊರಿಸಿರುವ 'ಗೊಂಬೆ ಆಡ್ಸೋನು ಮ್ಯಾಲೆ ಕುಂತವ್ನೆ 'ಕಥೆಗಳೆರಡಕ್ಕೂ ಪ್ರೋತ್ಸಾಹಕ ಬಹುಮಾನ ನೀಡಲಾಗಿದೆ. ಬಹುಮಾನಿತ ಕಥೆಗಾರರೆಲ್ಲರನ್ನು 'ಮೈಸೂರು ಮಿತ್ರ' ಅಭಿನಂದಿಸುತ್ತದೆ.

–ಬನ್ನೂರು ಕೆ.ರಾಜು, ತೀರ್ಪುಗಾರರು

ತೀರ್ಪುಗಾರರಾದ ಬನ್ನೂರು ಕೆ.ರಾಜು ಅವರ ಸಂಕ್ಷಿಪ್ತ ಪರಿಚಯ

ಕಥೆ, ಕಾವ್ಯ, ನಾಟಕ, ಶಿಶುಸಾಹಿತ್ಯ, ಪ್ರಬಂಧ, ವಿಮರ್ಶೆ, ಸಂಪಾದನೆ, ಸಂಶೋಧನೆ, ವ್ಯಕ್ತಿ ವಿಶೇಷ ಸೇರಿದಂತೆ ಸಾಹಿತ್ಯದ ಬಹುತೇಕ ಎಲ್ಲಾ ಪ್ರಾಕಾರಗಳಲ್ಲೂ ಕೃಷಿ ಮಾಡಿರುವ ನಾಡಿನ ಪ್ರಸಿದ್ಧ ಸಾಹಿತಿಗಳಲ್ಲೊಬ್ಬರಾದ ಬನ್ನೂರು ಕೆ.ರಾಜು ಅವರು ಅಕ್ಷರಶಃ ಸರಸ್ವತಿ ಪುತ್ರರು. ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯಗಳೆರಡರಲ್ಲೂ ಇವರು ಅದ್ಭುತವೆನಿಸುವ ಸಾಧನೆ ಮಾಡಿದ್ದು ಈವರೆಗೆ ಸುಮಾರು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದು ಕನ್ನಡಮ್ಮನ ಸಿರಿಮಡಿಲು ತುಂಬಿದ್ದಾರೆ.

ಅಷ್ಟು ಮಾತ್ರವಲ್ಲ, ಆರು ಸಾವಿರಕ್ಕೂ ಹೆಚ್ಚು ಬಿಡಿ ಲೇಖನಗಳನ್ನು ಬರೆದು ನಾಡಿನ ಗಮನ ಸೆಳೆದಿರುವ ಪತ್ರಕರ್ತರೂ ಆದ ಸಾಹಿತಿ ಬನ್ನೂರು ರಾಜು ಅವರು, ಮೈಸೂರು ಭಾಗದ ಜನಪ್ರಿಯ ದಿನ ಪತ್ರಿಕೆಯಾದ "ಮೈಸೂರು ಮಿತ್ರ" ಪತ್ರಿಕೆಯ ಅಂಕಣಕಾರರಾಗಿದ್ದಾರೆ. ಪ್ರತಿನಿತ್ಯ ಒಂದಲ್ಲ ಒಂದು ಬರವಣಿಗೆಯಿಂದ ಓದುಗರೊಡನೆ ಸ್ಪಂದಿಸುತ್ತಾ ಅವರ ಭಾವಕೋಶದಲ್ಲಿ ಭದ್ರವಾಗಿ ತಳವೂರಿದ್ದಾರೆ. ಎಲ್ಲಾ ತೆರನಾದ ಪತ್ರಿಕೆಗಳಿಗೂ ಬರೆಯುವ ಇವರ ಪತ್ರಿಕಾ ಬರಹಗಳ ಸಾಧನೆ ಕೂಡ ಬಹುದೊಡ್ಡದು.

ಬನ್ನೂರು ರಾಜು ಬರೆಯದ ಪತ್ರಿಕೆಗಳೇ ಇಲ್ಲವೆಂದರೆ ಇದು ಉತ್ಪ್ರೇಕ್ಷೆಯ ಮಾತಾಗಲಾರದು. ಏಕೆಂದರೆ ಸ್ಥಳೀಯ ಪತ್ರಿಕೆಗಳಿಂದ ಹಿಡಿದು ರಾಜ್ಯ ಮಟ್ಟದ ಪತ್ರಿಕೆಗಳ ತನಕ ಬಹುತೇಕ ಎಲ್ಲಾ ಪತ್ರಿಕೆಗಳಿಗೂ ಇವರು ಬರೆಯುತ್ತಾರೆ. ಬನ್ನೂರು ರಾಜು ಬರಹಗಳನ್ನು ಪ್ರಕಟಿಸದ ಪತ್ರಿಕೆಗಳು ವಿರಳ. ಇಲ್ಲವೆಂದರೂ ಆದೀತು! ಹಾಗಾಗಿ ಬನ್ನೂರು ರಾಜು ಓದುಗ ಲೋಕದಲ್ಲಿ ಬಹು ಜನಪ್ರಿಯರು. ಸಾಹಿತಿ ಸಿಪಿಕೆ ಅವರು ಹೇಳುವಂತೆ ಇವರು ಅಂಕಣ ಬ್ರಹ್ಮರು. ಒಳಿತನ್ನು ಪ್ರೀತಿಸುವ ಕೆಡಕನ್ನು ತಿದ್ದಿ ತೀಡುವ ನೇರ ನಡೆ–ನುಡಿಯ ಬೆಂಕಿಯಂಥಾ ವ್ಯಕ್ತಿತ್ವದ ಬನ್ನೂರು ರಾಜು ಅವರು ಬರಹದಲೆಂತೋ ಅಂತೆಯೇ ಭಾಷಣದಲ್ಲೂ ಒಳ್ಳೆ ವಾಗ್ಮಿಗಳಾಗಿದ್ದು, ಯಾವ ವಿಷಯವಾದರೂ ಸರಿಯೇ ಅಷ್ಟೇ ಆಕರ್ಷಕವಾಗಿ ಮಾತನಾಡಬಲ್ಲರು. ವಿಶೇಷವಾಗಿ ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿಯುಳ್ಳ ಇವರು ಶಾಲಾ–ಕಾಲೇಜುಗಳಲ್ಲಿ ವಿವಿಧ ಸಂದರ್ಭಗಳಲ್ಲಿ ನೂರಾರು ವಿದ್ಯಾರ್ಥಿಯೋಪಯೋಗಿ ಭಾಷಣಗಳನ್ನು, ಉಪನ್ಯಾಸಗಳನ್ನು ಮಾಡುತ್ತಾ ಬಂದಿದ್ದಾರೆ. ಹಾಗಾಗಿ ನಾಡಿನ ಶೈಕ್ಷಣಿಕ ವಲಯದಲ್ಲಿಯೂ ಇವರು ಚಿರಪರಿಚಿತರು.

ಕಳೆದ ಮೂರೂವರೆ ದಶಕಗಳ ಸುದೀರ್ಘ ಕಾಲದಿಂದಲೂ ಮಾಡಿಕೊಂಡು ಬಂದಿರುವ ಇವರ ಆಯ್ದ ಭಾಷಣಗಳು ಪುಸ್ತಕರೂಪದಲ್ಲಿ ಎರಡು ಸಂಪುಟಗಳಲ್ಲಿ ಪ್ರಕಟಣೆಗೆ ಸಿದ್ಧವಾಗಿದ್ದು ವಿದ್ಯಾರ್ಥಿ ಮತ್ತು ಶಿಕ್ಷಕರಿಬ್ಬರಿಗೂ ಈ ಕೃತಿಗಳು ಮಹತ್ವದ ಮಾಹಿತಿಯ ಕಣಜವಾಗಲಿವೆ. ಕಲೆ,ಸಾಹಿತ್ಯ, ಸಂಗೀತ, ಸಂಸ್ಕೃತಿ,ಪತ್ರಿಕೆ, ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ ಸಾಹಿತ್ಯ ಮತ್ತು ಪತ್ರಿಕೋದ್ಯಮ ಹಾಗೂ ಸಾಮಾಜಿಕ ಸೇವಾ ಸಾಧನೆಗಾಗಿ ನಾಡಿನ ಅನೇಕ ಪ್ರಶಸ್ತಿ–ಪುರಸ್ಕಾರ, ಸನ್ಮಾನ–ಗೌರವಗಳಿಗೆ ಭಾಜನರಾಗಿದ್ದಾರೆ. ಪ್ರಸ್ತುತ 'ಮೈಸೂರು ಮಿತ್ರ' 44 ನೇ ವಾರ್ಷಿಕೋತ್ಸವ ಕಥಾ ಸ್ಪರ್ಧೆಯ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ್ದಾರೆ.

ಇದು ಪ್ರಜಾಪ್ರಭುತ್ವ ಹಬ್ಬ...
ಬನ್ನಿ, ನೀವೂ ಭಾಗಿಯಾಗಿ...



❝ಮೈಸೂರು ನಗರದ ಮೂರು ವಿಧಾನಸಭಾ ಕ್ಷೇತ್ರ ಸೇರಿದಂತೆ ಜಿಲ್ಲೆಯ 11 ಕ್ಷೇತ್ರಗಳಲ್ಲಿ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆ ನಡೆಸಲು ಜಿಲ್ಲಾಡಳಿತ ಸನ್ನದ್ಧವಾಗಿದೆ. ಈ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು, ಚುನಾವಣೆ ಸಿದ್ಧತೆ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾಹಿತಿ ಹಂಚಿಕೊಂಡಿದ್ದು, ಪ್ರಜಾಪ್ರಭುತ್ವ ಹಬ್ಬದಲ್ಲಿ ಸಂಭ್ರಮದಿಂದ ಭಾಗಿಯಾಗುವಂತೆ ಮತದಾರರಲ್ಲಿ ಮನವಿ ಮಾಡಿದ್ದಾರೆ.

ಸಂದರ್ಶನ:
ಎಸ್.ಬಿ.ದೇವರಾಜ

ಮೈಸೂರು ಮಿತ್ರ: *ಚುನಾವಣೆ ಸಿದ್ಧತೆ ಯಾವ ಹಂತದಲ್ಲಿದೆ?.*

ಡಾ.ಕೆ.ವಿ.ರಾಜೇಂದ್ರ: ಜಿಲ್ಲಾಡಳಿತದ ವತಿಯಿಂದ ಚುನಾವಣಾ ಸಿದ್ಧತೆ ಎಲ್ಲಾ ಹಂತಗಳಲ್ಲೂ ಆಗಿದೆ. ಮತಗಟ್ಟೆ, ಮತದಾರರ ಪಟ್ಟಿ, ಚುನಾವಣಾ ಅಧಿಕಾರಿಗಳ ನೇಮಕ, ಮತಗಟ್ಟೆ ಅಧಿಕಾರಿಗಳ ನಿಯೋಜನೆ, ಚೆಕ್‌ಪೋಸ್ಟ್, ಭದ್ರತಾ ವ್ಯವಸ್ಥೆ, ಕ್ಷೇತ್ರವಾರು ಮಸ್ಟರಿಂಗ್, ಡಿ–ಮಸ್ಟರಿಂಗ್ ಸ್ಥಳ, ಮತ ಎಣಿಕೆ ಕೇಂದ್ರ, ಹೀಗೆ ಎಲ್ಲಾ ರೀತಿಯ ವ್ಯವಸ್ಥೆಯೊಂದಿಗೆ ಸನ್ನದ್ಧರಾಗಿದ್ದೇವೆ.

ಮಿತ್ರ *ಚುನಾವಣಾ ಅಕ್ರಮ ತಡೆ ಪರಿಣಾಮಕಾರಿಯಾಗಿದೆಯೇ?.*

ರಾಜೇಂದ್ರ: ಖಂಡಿತವಾಗಿ. ಕಮಿಷನರೇಟ್ ಹಾಗೂ ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ ಒಟ್ಟಾರೆ 53 ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದೆ. ಈವರೆಗೆ 1.20 ಕೋಟಿಗೂ ಹೆಚ್ಚು ನಗದು ಹಣ, ಎರಡೂವರೆ ಕೋಟಿಗೂ ಹೆಚ್ಚು ಮೌಲ್ಯದ ವಸ್ತುಗಳು, ಮದ್ಯ ವಶಪಡಿಸಿಕೊಳ್ಳಲಾಗಿದೆ. ಈ ರೀತಿಯ ಅಕ್ರಮ ತಡೆಗೆ ತೀವ್ರ ನಿಗಾ ವಹಿಸಲಾಗಿದೆ. ಇದರಲ್ಲಿ ಸಾರ್ವಜನಿಕರ ಸಹಭಾಗಿತ್ವ ತುಂಬಾ ಮುಖ್ಯ. ಜಿಲ್ಲಾಡಳಿತಕ್ಕೆ ಜನ ಸಹಕಾರ ಕೊಡಬೇಕು. 'ಸಿ–ವಿಜಿಲ್ (cVIGIL)' ಆ್ಯಪ್ ಮೂಲಕ ಎಲ್ಲೇ ಚುನಾವಣಾ ಅಕ್ರಮಗಳು ನಡೆದರೂ ವರದಿ ಮಾಡಿದರೆ ಸಾಕು. ಕೂಡಲೇ ಫ್ಲೈಯಿಂಗ್ ಸ್ಕ್ವಾಡ್, ಸೆಕ್ಟರ್ ಆಫೀಸರ್ ಮೂಲಕ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮಿತ್ರ: *ಈ ಬಾರಿ ನಗರ ಪ್ರದೇಶದಲ್ಲಿ ಮತದಾನ ಪ್ರಮಾಣ ಸುಧಾರಣೆ ನಿರೀಕ್ಷಿಸಬಹುದೇ?.*

ರಾಜೇಂದ್ರ: ನಗರ ಭಾಗದಲ್ಲಿ ಬಹಳಷ್ಟು ಜನರಿಗೆ, ಅವರು ಮತ ಚಲಾಯಿಸಬೇಕಾದ ಮತಗಟ್ಟೆಯೇ ಗೊತ್ತಿರಲಿಲ್ಲ. ರಜೆ ಸಿಗದ ಕಾರಣ ಹಲವರು ಮತದಾನ ಮಾಡುತ್ತಿರಲಿಲ್ಲ. ಕೇಂದ್ರ, ರಾಜ್ಯ ಸರ್ಕಾರಿ ನೌಕರರು, ಕೈಗಾರಿಕೆಗಳ ಕಾರ್ಮಿಕರು ಎಪಿಕ್ ಕಾರ್ಡ್‌ಗಳನ್ನು ಸ್ಥಳೀಯ ವಿಳಾಸದಲ್ಲಿ ಮಾಡಿಸಿರುವುದಿಲ್ಲ. ಇನ್ನಿತರ ಕಾರಣಗಳಿಂದ ಮತದಾನ ಪ್ರಮಾಣ ಕಡಿಮೆಯಾಗುತ್ತಿತ್ತು. ಆದರೆ ಈ ಬಾರಿ ಆಯಾಯ ಸಂಸ್ಥೆಗಳ ಮುಖ್ಯಸ್ಥರನ್ನು ಒಡಗೂಡಿಸಿಕೊಂಡು ಮನವರಿಕೆ ಮಾಡಿಕೊಡಲಾಗಿದೆ. ಉದ್ಯೋಗಿಗಳಿಗೆ ಮತದಾನದ ದಿನ ವೇತನ ಸಹಿತ ರಜೆ ನೀಡುವಂತೆ ವಿಭಾಗಗಳ ಮುಖ್ಯಸ್ಥರಿಗೆ ಅರಿವು ಮೂಡಿಸಲಾಗಿದೆ. ಇದೊಂದು ಪ್ರಜಾಪ್ರಭುತ್ವದ ಹಬ್ಬ, ಎಲ್ಲರೂ ಕಡ್ಡಾಯವಾಗಿ ಬಂದು ಮತದಾನ ಮಾಡಬೇಕು ಎಂದು ತಿಳಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಕಡಿಮೆ ಮತದಾನವಾಗಿದ್ದ ಪ್ರದೇಶಗಳನ್ನು ಗುರುತಿಸಿ, ಮತದಾರರ ಸೆಳೆಯುವ ನಿಟ್ಟಿನಲ್ಲಿ ಮತಗಟ್ಟೆಗಳನ್ನು ಅತ್ಯಾಕರ್ಷಕಗೊಳಿಸುವ ಕೆಲಸವಾಗಿದೆ. ಜಿಲ್ಲಾ ಸ್ವೀಪ್ ಐಕಾನ್ ಆಗಿರುವ ಜಾವಗಲ್ ಶ್ರೀನಾಥ್ ಅವರ ಸಹಕಾರದಿಂದಲೂ ವ್ಯಾಪಕವಾಗಿ ಜನರನ್ನು ಸಂಪರ್ಕಿಸಿ ಜಾಗೃತಿ ಮೂಡಿಸಲಾಗಿದೆ.

ಮಿತ್ರ: ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮತದಾನ ಸಂದರ್ಭದಲ್ಲಿ ಮಾರ್ಗಸೂಚಿ ಪ್ರಕಟಿಸುವ ಸಾಧ್ಯತೆ ಇದೆಯೇ?

ರಾಜೇಂದ್ರ ನಮ್ಮ ಜಿಲ್ಲೆಯಲ್ಲಿ ಕೊರೊನಾ ಪ್ರಮಾಣ ಹೆಚ್ಚಿಲ್ಲ. ಆದಾಗ್ಯೂ ಈಗಾಗಲೇ ನಮ್ಮ ವೈದ್ಯಕೀಯ ತಂಡ ಹಾಗೂ ಎಲ್ಲಾ ಅಧಿಕಾರಿಗಳೂ ಸರ್ವಸನ್ನದ್ಧರಾಗಿದ್ದಾರೆ. ಸದ್ಯ ಅಂತಹ ಗಂಭೀರ ಪರಿಸ್ಥಿತಿ ಇಲ್ಲ. ಜಿಲ್ಲೆಯಲ್ಲಿ 25–30 ಕೇಸ್ ಇವೆ. ವೆಂಟಿಲೇಟರ್‌ನಲ್ಲಿ ಇರುವವರು, ಆಪರೇಷನ್‌ಗೆ ಒಳಗಾದವರು ಹೀಗೆ ಒಳರೋಗಿಗಳ ಪರೀಕ್ಷಿಸಿದಾಗ ಕೊರೊನಾ ಸೋಂಕು ಪತ್ತೆಯಾಗಿದೆಯಷ್ಟೇ. ಆದರೂ ನಮ್ಮ ಜಿಲ್ಲೆಯೊಳಗಡೆ ಜಾಗೃತವಾಗಿರುತ್ತೇವೆ. ಸೋಂಕು ವ್ಯಾಪಿಸುವ ಪರಿಸ್ಥಿತಿ ಎದುರಾದರೆ ಮತದಾನದ ದಿನಕ್ಕೆ ಅಗತ್ಯ ಮಾರ್ಗಸೂಚಿ ಹೊರಡಿಸುತ್ತೇವೆ.

ಮಿತ್ರ: *ಕಳೆದ 2018ರ ವಿಧಾನಸಭಾ ಚುನಾವಣೆ ವೇಳೆ ಬಳ್ಳಾರಿ ಸಿಇಓ ಆಗಿ ಚುನಾವಣೆ ಜವಾಬ್ದಾರಿ ನಿರ್ವಹಿಸಿದ್ದೀರಿ. ಈಗ ಮೈಸೂರು ಜಿಲ್ಲಾಧಿಕಾರಿಯಾಗಿ ಮುಖ್ಯ ಚುನಾವಣಾಧಿಕಾರಿಯಾಗಿದ್ದೀರಿ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?.*

ರಾಜೇಂದ್ರ: ಮಹಾನಗರ ಪಾಲಿಕೆ ಒಳಗೊಂಡಿರುವ ಜಿಲ್ಲೆಗಳಲ್ಲಿ ಸವಾಲುಗಳು ಇದ್ದೇ ಇರುತ್ತವೆ. ಅಲ್ಲಿ ಗ್ರಾಮೀಣ ಪ್ರದೇಶ ಜಾಸ್ತಿ. ಆದರೆ ಇಲ್ಲಿ ಕೈಗಾರಿಕಾ ಪ್ರದೇಶ, ನಗರೀಕರಣವಾಗಿರುವ ಭಾಗ, ವಿಸ್ತಾರ ಭೂಪ್ರದೇಶ, ಬುಡಕಟ್ಟು ಜನವಸತಿ ಪ್ರದೇಶ ಇನ್ನಿತರ ವ್ಯತ್ಯಾಸಗಳಿವೆ. ಮಾಧ್ಯಮ ಗಮನ, ಶಕ್ತಿಕೇಂದ್ರ ಬೆಂಗಳೂರಿಗೆ ಸಮೀಪವಿರುವುದರಿಂದ ಸಣ್ಣಪುಟ್ಟ ವಿಷಯಗಳೂ ಹೆಚ್ಚು ಹೈಲೈಟ್ ಆಗುವುದರಿಂದ ಮೈಸೂರಲ್ಲಿ ಸವಾಲುಗಳು ಜಾಸ್ತಿಯಿವೆ.

ಮಿತ್ರ *ನಿಮ್ಮ ಮೊದಲ ಮತದಾನದ ಬಗ್ಗೆ ತಿಳಿಸುವಿರಾ?.*

ರಾಜೇಂದ್ರ: ನಾನು ತೀರ್ಥಹಳ್ಳಿ ಮೂಲದವನಾದರೂ ಕಾಲೇಜು ವ್ಯಾಸಂಗ ಮಾಡಿದ್ದು ದಾವಣಗೆರೆ ಹಾಗೂ ಹರಿಹರದಲ್ಲಿ. ನಾನು ದಾವಣಗೆರೆಯಲ್ಲಿ ಮೊದಲ ಬಾರಿ ಮತದಾನ ಮಾಡಿದ್ದೆ.


ಮಿತ್ರ: *ಚುನಾವಣಾ ಪ್ರಚಾರದಲ್ಲಿ ಅಪ್ರಾಪ್ತರ ಬಳಕೆ ಬಗ್ಗೆ ಏನು ಹೇಳುತ್ತೀರಿ?.*

ರಾಜೇಂದ್ರ: 18 ವರ್ಷ ತುಂಬಿದವರನ್ನು ವಯಸ್ಕರು ಎಂದು ಪರಿಗಣಿಸಲಾಗುವುದು. ಈ ವಯಸ್ಸಿನ ಒಳಗಿನವರು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುವಂತಿಲ್ಲ. ಸ್ವಯಂಪ್ರೇರಿತವಾಗಿಯೂ ಭಾಗವಹಿಸುವಂತಿಲ್ಲ. ಹಾಗೇನಾದರೂ ಮಾಡಿದರೆ ಆಯೋಜಕರೇ ಜವಾಬ್ದಾರಿ ಆಗಿರುತ್ತಾರೆ. ಯಾರೇ ಪ್ರಚಾರ ಮಾಡುವಾಗಲೂ ಯಾವುದೇ ಕಾರಣಕ್ಕೂ ಮಕ್ಕಳು ಭಾಗವಹಿಸದಂತೆ ಎಚ್ಚರ ವಹಿಸಬೇಕು. ಕೆಲವೊಂದು ಕಡೆ ಟಿ– ಶರ್ಟ್, ಕ್ಯಾಪ್‌ಗಳನ್ನು ಬೇಕಾಬಿಟ್ಟಿ ಹಂಚುತ್ತಾರೆ. ಹಾಗಾಗಿ ಅಪ್ರಾಪ್ತರೂ ಭಾಗವಹಿಸುವ ಸಾಧ್ಯತೆ ಇರುತ್ತದೆ. ಹೀಗಾದರೆ ಆಯೋಜಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಮಿತ್ರ: *ಜಿಲ್ಲಾ ಮುಖ್ಯ ಚುನಾವಣಾಧಿಕಾರಿಯಾಗಿ ಮತದಾರರಿಗೆ ನಿಮ್ಮ ಸಂದೇಶವೇನು?.*

ರಾಜೇಂದ್ರ: ಇದು ಪ್ರಜಾಪ್ರಭುತ್ವದ ಹಬ್ಬ. ಮತ ಚಲಾವಣೆ ಪ್ರತಿಯೊಬ್ಬರ ಸಾಂವಿಧಾನಿಕ ಪರಮಾಧಿಕಾರ. ಸಂವಿಧಾನ ರಚನೆಕಾರರು ಆಗಲೇ ಆಲೋಚನೆ ಮಾಡಿ ಎಲ್ಲರಿಗೂ ಸಮಾನ ಹಕ್ಕು ಕಲ್ಪಿಸಿದ್ದಾರೆ. 18 ವರ್ಷ ತುಂಬಿದವರಿಗೆಲ್ಲಾ ಮತದಾನ ಮಾಡುವ ಹಕ್ಕು ನೀಡಿದ್ದಾರೆ. ರಾಷ್ಟ್ರಪತಿಗಳು ಹಾಗೂ ಸಾಮಾನ್ಯರ ಮತಕ್ಕೂ ಒಂದೇ ಮೌಲ್ಯ. ಹಾಗಾಗಿ ಎಲ್ಲರೂ ಮೇ 10ರಂದು ಕಡ್ಡಾಯವಾಗಿ ಮತ ಚಲಾವಣೆ ಮಾಡಬೇಕು. ಯಾವ ಅಭ್ಯರ್ಥಿಯೂ ಸಮಾಧಾನಕರವಲ್ಲ ಎಂದೆನಿಸಿದರೆ ನೋಟ (NOTA)ಗೆ ಮತ ಚಲಾಯಿಸಬಹುದು. ಹಾಗಾಗಿ ಪ್ರಜಾಪ್ರಭುತ್ವದ ಹಬ್ಬದಲ್ಲಿ ಸ್ವಇಚ್ಛೆಯಿಂದ ಸಂಭ್ರಮದಿಂದ ಭಾಗವಹಿಸಬೇಕು. ನೈತಿಕವಾದ ಮತದಾನ ಮಾಡಬೇಕು. ನಮ್ಮ ಜಾತಿ, ನಮ್ಮ ಸಮುದಾಯ, ನಮ್ಮ ಧರ್ಮ, ಅವರು ಹಣ, ಸೀರೆ ಕೊಟ್ಟಿದ್ದಾರೆ, ಇನ್ನಿತರ ಯಾವುದೇ ದಾಕ್ಷಿಣ್ಯಗಳಿಗೆ ಯಾರೂ ಒಳಗಾಗಬಾರದು. ಯಾವುದೇ ರೀತಿಯ ಪ್ರಚೋದನೆಗೆ ಒಳಗಾಗಬಾರದು. ನೈತಿಕ ಹಾಗೂ ಕಡ್ಡಾಯ ಮತದಾನ ಮಾಡಲು ಎಲ್ಲರೂ ಮುಂದಾಗಬೇಕು. ಅಕ್ಷರಸ್ಥರು, ಅನಕ್ಷರಸ್ಥರು ಎಲ್ಲಾ ಸೇರಿ ಉತ್ತಮ ಸಮಾಜ ಕಟ್ಟಬೇಕಾಗುತ್ತದೆ. ನಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಕಾನೂನಾತ್ಮಕವಾಗಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕು.


ಕರ್ನಾಟಕದ ರಾಜಕಾರಣದಲ್ಲಿ ವಂಶವಾದ



ಸಿದ್ದರಾಮಯ್ಯ–ಡಿಕೆಶಿ ನೇತೃತ್ವದಲ್ಲಿ ಕಾಂಗ್ರೆಸ್ ಚುನಾವಣೆ ಎದುರಿಸಲಿದೆ.

ಕರ್ನಾಟಕದ ವಿಧಾನಸಭೆಗೆ ಮೇ ಹತ್ತರಂದು ಚುನಾವಣೆ ನಡೆದು ಹದಿಮೂರಕ್ಕೆ ಫಲಿತಾಂಶ ಪ್ರಕಟವಾಗಲಿದೆ. ರಾಜ್ಯದ ಮೂರು ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಈಗಾಗಲೇ ಹಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದ್ದು, ಉಳಿದೆಡೆ ಸೂಕ್ತ ಅಭ್ಯರ್ಥಿಗಳ ಹುಡುಕಾಟದಲ್ಲಿ ನಿರತರಾಗಿದ್ದಾರೆ. ಶಾಸಕರಾಗಬೇಕೆಂಬ ಉತ್ಸಾಹದಲ್ಲಿರುವವರು ಟಿಕೆಟ್ ಸಿಗುವ ಪಕ್ಷದಿಂದ ಸ್ಪರ್ಧಿಸಲು ಕಾತರರಾಗಿದ್ದಾರೆ. ಆಡಳಿತಾರೂಢ ಬಿಜೆಪಿ ಅಧಿಕಾರ ಉಳಿಸಿಕೊಳ್ಳಲು ಮತ್ತು ಕಾಂಗ್ರೆಸ್ ಪಕ್ಷವು ಬಿಜೆಪಿಯಿಂದ ಅಧಿಕಾರ ಕಿತ್ತುಕೊಳ್ಳುವ ಸನ್ನಾಹದಲ್ಲಿವೆ. ಜೆಡಿಎಸ್ ಆಂತರ್ಯದಲ್ಲಿ ಅತಂತ್ರ ವಿಧಾನಸಭೆಯಾಗಬೇಕೆಂಬ ಅವಕಾಶವಾದಿ ಮಾನಸಿಕತೆಯಲ್ಲಿದೆ.

ಪ್ರಸ್ತುತ ಕರ್ನಾಟಕದ ಅನೇಕ ಹಿರಿಯ ರಾಜಕಾರಣಿಗಳಲ್ಲಿ ಕೆಲವರು ಬಹಿರಂಗವಾಗಿ ಕೆಲವರು ನೇಪಥ್ಯದಲ್ಲಿ ಸದ್ದಿಲ್ಲದೇ ತಮ್ಮ ಕುಟುಂಬದ ಸದಸ್ಯರಿಗೆ ಟಿಕೆಟ್‌ಗಾಗಿ ಒತ್ತಡ ತಂತ್ರ ಆರಂಭಿಸಿದ್ದಾರೆ. ಕಾಂಗ್ರೆಸ್ ಪಕ್ಷ ಸೋನಿಯಾ ಪರಿವಾರದ ಮತ್ತು ಜೆಡಿಎಸ್ ಮಾಜಿ ಪ್ರಧಾನಿ ದೇವೇಗೌಡರ ಕಂಪೆನಿಯಂತಿವೆ. ಕಾಂಗ್ರೆಸ್ ಮತ್ತು ಜೆಡಿಎಸ್‌ನ ಎಲ್ಲಾ ನಾಯಕರು, ಕಾರ್ಯಕರ್ತರು ಸೋನಿಯಾ ಮತ್ತು ದೇವೇಗೌಡರ ವಂಶಾಡಳಿತವನ್ನೇ ಪ್ರಜಾಪ್ರಭುತ್ವವೆಂದು ಭಾವಿಸಿದಂತಿದೆ. ಇತ್ತೀಚಿನ ವರ್ಷಗಳಲ್ಲಿ ಬಿಜೆಪಿಯಲ್ಲೂ ಕುಟುಂಬ ರಾಜಕಾರಣ ಸದ್ದು ಮಾಡುತ್ತಿದೆ.



ಕಾರ್ಕಳ ಆನಂದ ಭಟ್
ಫ್ಲಾಟ್ ನಂ. 204, 3ನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್, ಪೆರ್ವಾಜೆ ರಸ್ತೆ, ಕಾರ್ಕಳ–574 104
ಮೊ. 7676554198

ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಮತ್ತು ಪುತ್ರ ಡಾ. ಯತೀಂದ್ರ, ರಾಮಲಿಂಗಾರೆಡ್ಡಿ ಪುತ್ರಿ ಸೌಮ್ಯಾ ರೆಡ್ಡಿ, ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕ್ ಖರ್ಗೆ, ಅಜೀಜ್ ಸೇಠ್ ಪುತ್ರ ತನ್ವೀರ್ ಸೇಠ್ ಶಾಸಕರಾಗಿ ಕರ್ನಾಟಕದ ರಾಜಕಾರಣದಲ್ಲಿದ್ದಾರೆ. ಇದೇ ರೀತಿ ಜೆಡಿಎಸ್‌ನಲ್ಲೂ ಎಚ್‌.ಡಿ.ರೇವಣ್ಣ, ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ, ಪ್ರಜ್ವಲ್ ರೇವಣ್ಣ ಇವರೆಲ್ಲರೂ ಮಾಜಿ ಪ್ರಧಾನಿ ದೇವೇಗೌಡರ ಒಂದೇ ಕುಟುಂಬದವರಾಗಿದ್ದಾರೆ. ಬಿಜೆಪಿಯಲ್ಲಿ ಇತ್ತೀಚೆಗೆ ಸಕ್ರಿಯ ರಾಜಕಾರಣದಿಂದ ಹಿಂದೆ ಸರಿದಿರುವ ಡಿ.ಹೆಚ್.ಶಂಕರಮೂರ್ತಿಯವರ ಪುತ್ರ ಡಿ.ಎಸ್.ಅರುಣ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಓರ್ವ ಪುತ್ರ ಸಂಸದರಾಗಿದ್ದರೆ, ಇನ್ನೋರ್ವ ಪುತ್ರನನ್ನು ಈ ಬಾರಿ ಸುರಕ್ಷಿತ ಕ್ಷೇತ್ರದಿಂದ ವಿಧಾನಸಭೆಗೆ ಕಳಿಸುವ ಸಿದ್ಧತೆಯಲ್ಲಿದ್ದಾರೆ. ಇದೇ ರೀತಿ ಸೋಮಣ್ಣ, ಈಶ್ವರಪ್ಪ ಗೋವಿಂದ ಕಾರಜೋಳ ಮೊದಲಾದವರು ತಮ್ಮ ಮಕ್ಕಳಿಗೆ ಟಿಕೆಟ್‌ಗಾಗಿ ಲಾಬಿ ಮಡುತ್ತಿದ್ದಾರೆ ಎಂಬ ಸುದ್ದಿ ರಾಜ್ಯ ರಾಜಕೀಯದ ಮೊಗಸಾಲೆಯಲ್ಲಿದೆ. ಬೇರೆ ಪಕ್ಷಗಳಂತೆ ಬಿಜೆಪಿಯಲ್ಲೂ ಪರಿವಾರ ವಾದದ ರೋಗ ಹಬ್ಬುತ್ತಿರುವುದು ವಿಷಾದದ ವಿಷಯವಾಗಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಿಷ್ಠಾವಂತ ಸ್ವಯಂ ಸೇವಕರೆಂದು ಅಭಿಮಾನದಿಂದ ಹೇಳುವವರು ಕುಟುಂಬ ವ್ಯಾಮೋಹಕ್ಕೆ ಬಲಿಯಾಗುತ್ತಿರುವುದು ದುರದೃಷ್ಟಕರವಾಗಿದೆ.

ಪ್ರಸ್ತುತ ಕರ್ನಾಟಕದ ಕೆಲವು ಹಿರಿಯ ಶಾಸಕರು ತಾವು ಸುದೀರ್ಘ ಕಾಲದಿಂದ ಪ್ರತಿನಿಧಿಸುತ್ತಿರುವ ಕ್ಷೇತ್ರವನ್ನು ತಮ್ಮ ಪಾಳೇಗಾರಿಕೆಗೆ ಸೇರಿದಂತೆ ವರ್ತಿಸುತ್ತಿದ್ದಾರೆ. ಟಿಕೆಟ್ ತಮಗೆ ಅಥವಾ ತಮ್ಮ ಕುಟುಂಬದವರಿಗೆ ಕೊಡುವಂತೆ ಒತ್ತಡ ಹೇರುತ್ತಿದ್ದಾರೆ. ರಾಜ್ಯ ರಾಜಕೀಯವು ನಿಧಾನವಾಗಿ ರಾಜಪ್ರಭುತ್ವ, ಪ್ರಜಾಪ್ರಭುತ್ವದಿಂದ ಕುಟುಂಬ ಪ್ರಭುತ್ವಕ್ಕೆ ಜಾರುವ ಸಂಭಾವ್ಯತೆ ಅಧಿಕವಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ರಾಜಕಾರಣಿಗಳಿಗೆ ಸಿಗುತ್ತಿರುವ ಮಾನ್ಯತೆ, ಗೌರವ, ಹೆಚ್ಚುತ್ತಿರುವ ಪ್ರಭಾವ, ಗಳಿಕೆಗಳಿಂದಾಗಿ ರಾಜಕಾರಣವಿಂದು ಲಾಭದಾಯಕ ಉದ್ಯಮವೆನಿಸಿದೆ. ರಾಜಕಾರಣಿಗಳು ಅನಭಿಷಿಕ್ತ ರಾಜರುಗಳಂತೆ ವರ್ತಿಸುತ್ತಿದ್ದು, ಸರಕಾರದಿಂದ ಸಿಗುವ ಸೌಲಭ್ಯಗಳು ಜನಸಾಮಾನ್ಯರಿಗೆ ತಾವು ನೀಡುವ ಭಿಕ್ಷೆ ಎಂಬಂತೆ ವರ್ತಿಸುತ್ತಿದ್ದಾರೆ. ಈ ಕಾರಣದಿಂದ ಹಿರಿಯ ರಾಜಕಾರಣಿಗಳು ಪರಿವಾರ ರಾಜಕಾರಣಕ್ಕಾಗಿ ಒಂದು ಪ್ರಭಾವಲಯ ರಚಿಸಿ, ಅದರೊಳಗೆ ಯಾರೂ ಪ್ರವೇಶಿಸಲಾಗದಂತಹ ವ್ಯೂಹ ರಚಿಸುತ್ತಾರೆ. ಪರಿವಾರದವರನ್ನು ಯಾವ ರೀತಿ ಅಧಿಕಾರ ರಾಜಕಾರಣಕ್ಕೆ ತರಬೇಕೆಂದು ನಮಗೆ ಚೆನ್ನಾಗಿ ಗೊತ್ತಿದೆ ಎಂದು ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಹಿರಿಯ ರಾಜಕಾರಣಿಯೊಬ್ಬರು ಬಹಿರಂಗವಾಗಿ ಯಾವುದೇ ಸಂಕೋಚ, ಮುಜುಗರವಿಲ್ಲದೇ ಹೇಳಿಕೆ ನೀಡಿದ್ದರು. ಈ ರೀತಿಯ ರಾಜಕಾರಣಕ್ಕೆ ಆಯಾ ಪಕ್ಷದ ಕಾರ್ಯಕರ್ತರು ಮತ್ತು ಮತದಾರರು ಮುಕ್ತಾಯ ಹಾಡಬೇಕಾಗಿದೆ.

ಭಾರತದ ಬಹುತೇಕ ರಾಜಕಾರಣಿಗಳ ಮಕ್ಕಳು ವಿದೇಶಗಳಲ್ಲಿ ಶಿಕ್ಷಣ ಪಡೆದವರಾಗಿದ್ದು, ಇವರಿಗೆ ದೇಸೀಯ ಸಮಸ್ಯೆಗಳು, ಸಾಮಾಜಿಕ, ರಾಜಕೀಯ, ಸ್ಥಾನೀಯ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವಷ್ಟು ಪ್ರಬುದ್ಧತೆ ಇರುವುದಿಲ್ಲ. ಹಿರಿಯ ರಾಜಕಾರಣಿಗಳು ತಾವಿರುವ ಪಕ್ಷವನ್ನು ತಮ್ಮ ಖಾಸಗಿ ಕಂಪೆನಿ ಮತ್ತು ಸ್ವಕ್ಷೇತ್ರವನ್ನು ಸ್ವಂತ ಆಸ್ತಿ ಎಂದು ಭಾವಿಸಿ ಪರಿವಾರದವರನ್ನು ಈ ಕ್ಷೇತ್ರದಿಂದ ರಾಜಕೀಯಕ್ಕೆ ತರುತ್ತಾರೆ. ಈ ಸಂದರ್ಭದಲ್ಲಿ ಪಕ್ಷಕ್ಕಾಗಿ ಅನೇಕ ವರ್ಷಗಳಿಂದ ದುಡಿಯುತ್ತಿರುವ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸುತ್ತಾರೆ. ಇಂತಹ ಸ್ಥಿತಿಯಲ್ಲಿ ಕಾರ್ಯಕರ್ತರು ಪ್ರಭಾವಿ ರಾಜಕಾರಣಿಗಳ ನಿರ್ಧಾರಗಳನ್ನು ಪ್ರಶ್ನಿಸುವ ಅಥವಾ ವಿರೋಧಿಸುವ ಸಾಹಸ ಮಾಡುವುದಿಲ್ಲ.

ರಾಜ್ಯದಲ್ಲಿ ಕೇಂದ್ರ ನಾಯಕರಿಗಿಂತ ಪ್ರಭಾವಿಯಾಗಿರುವ ಸಿದ್ದರಾಮಯ್ಯ–ಡಿಕೆಶಿ ನೇತೃತ್ವದಲ್ಲಿ ಕಾಂಗ್ರೆಸ್ ಚುನಾವಣೆ ಎದುರಿಸಲಿದೆ. ಜೆಡಿಎಸ್ ಮಾಜಿ ಪ್ರಧಾನಿ ದೇವೇಗೌಡರ ಮಾರ್ಗದರ್ಶನ ಮತ್ತು ಕುಮಾರಸ್ವಾಮಿಯವರ ತಂತ್ರಗಾರಿಕೆಯನ್ನು ಅವಲಂಬಿಸಿದೆ. ಆದರೆ ರಾಜ್ಯಾದ್ಯಂತ ವರ್ಚಸ್ಸು, ಪ್ರಭಾವ ಹೊಂದಿರುವ ನಾಯಕನಿಲ್ಲದೇ ಬಿಜೆಪಿ ಮೋದಿಯವರನ್ನು ಅವಲಂಬಿಸಿದೆ. ಈ ಕಾರಣದಿಂದ ಕರ್ನಾಟಕದ ಬಿಜೆಪಿ ನಾಯಕರು ಪ್ರಧಾನಿ ಮೋದಿ ವ್ಯಕ್ತಿತ್ವವನ್ನು ವರ್ಣಿಸುವ ವಿಷಯದಲ್ಲಿ ಪರಸ್ಪರ ಸ್ಪರ್ಧಿಸುತ್ತಿದ್ದಾರೆ. ಮೋದಿಯವರು ದೇಶದೊಳಗೆ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲಿ ಬೈಡನ್, ಮೆಕ್ರಾನ್, ಸುನಾಕ್, ಪುಟಿನ್ ಜಸ್ಟಿಸ್ ಟ್ರುಡೊ ಮೊದಲಾದ ನಾಯಕರನ್ನು ಹಿಂದಿಕ್ಕಿ ಪ್ರಭಾವಿ ನಾಯಕರಾಗಿದ್ದಾರೆ. ಆದರೆ ಯಾವನೇ ಓರ್ವ ಕರ್ನಾಟಕದ ಬಿಜೆಪಿ ನಾಯಕರಿಗೆ ಮೋದಿಯವರಂತೆ ರಾಜ್ಯದೊಳಗೆ ಜನಪ್ರಿಯತೆ ಗಳಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಮೋದಿಯವರ ಪ್ರಭಾವ, ವರ್ಚಸ್ಸಿನ ಮರೆಯಲ್ಲಿ ಕರ್ನಾಟಕದ ಬಿಜೆಪಿ ನಾಯಕರು ತಮ್ಮ ರಾಜಕೀಯ ಜೀವನವನ್ನು ಮುಂದುವರಿಸುತ್ತಿದ್ದಾರೆ. ಮೋದಿಯವರು ರಾಜಕಾರಣದಲ್ಲಿ ಅನೇಕ ಮೌಲ್ಯಗಳನ್ನು ಪ್ರತಿಪಾದಿಸುತ್ತಿದ್ದಾರೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದುದು ದೇಶದ ರಾಜಕಾರಣದಲ್ಲಿ ಆಳವಾಗಿ ಬೇರೂರಿರುವ ವಂಶವಾದ, ಪರಿವಾರವಾದ, ದೇಶದ ರಾಜಕಾರಣವನ್ನು ಈ ಪಿಡುಗಿನಿಂದ ಶಾಶ್ವತವಾಗಿ ಮುಕ್ತಗೊಳಿಸಬೇಕೆಂದು ಕಾರ್ಯಶೀಲರಾಗಿದ್ದಾರೆ. ಈ ಉದ್ದೇಶಕ್ಕಾಗಿ ತಮ್ಮ ಸ್ವಂತ ಪರಿವಾರದವರನ್ನು ರಾಜಕೀಯದಿಂದ ದೂರವಿರಿಸಿದ್ದಾರೆ. ಕೆಲವು ತಿಂಗಳ ಹಿಂದೆ ಗುಜರಾತ್‌ನ ಸೂರತ್ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಅಲ್ಲಿನ ಸ್ಥಾನೀಯ ಘಟಕ ಮೋದಿಯವರ ಸಂಬಂಧಿಯೋರ್ವಳಿಗೆ ಟಿಕೆಟ್ ನೀಡಿದ್ದರು. ಪ್ರಧಾನಿ ಮೋದಿಯವರು ಮಧ್ಯ ಪ್ರವೇಶಿಸಿ ಆಕೆಯನ್ನು ಚುನಾವಣಾ ಕಣದಿಂದ ಹಿಂದೆಗೆಯುವಂತೆ ಮಾಡಿದರು. ಕಾಂಗ್ರೆಸ್ ಅನ್ನು ಅಮ್ಮ–ಮಕ್ಕಳ ಪಕ್ಷ, ಜೆಡಿಎಸ್ ಅನ್ನು ಅಪ್ಪ–ಮಕ್ಕಳ ಪಕ್ಷವೆಂದು ಟೀಕಿಸುತ್ತಿದ್ದ ಕರ್ನಾಟಕದ ಕೆಲವು ಹಿರಿಯ ಬಿಜೆಪಿ ನಾಯಕರು ಪರಿವಾರದ ವ್ಯಾಮೋಹದಿಂದ ಈ ಅಸ್ತ್ರವನ್ನೇ ತ್ಯಜಿಸಬೇಕಾದ ಪರಿಸ್ಥಿತಿಗೆ ಬಂದಿರುವುದು ಶೋಚನೀಯವಾಗಿದೆ. ಪರಿವಾರ ವಾದದ ಬಗ್ಗೆ ಮೋದಿಯವರ ಭಾವನೆ ಅರಿತು ಅವರ ಆದರ್ಶ ಪಾಲಿಸದ ನಾಯಕರಿಗೆ ಕಾರ್ಯಕರ್ತರೇ ಪಾಠ ಕಲಿಸಬೇಕಾಗಿದೆ.

ಇತ್ತೀಚೆಗೆ ಉತ್ತರ ಪ್ರದೇಶದ ಕಾಶಾಂಬಿಯಲ್ಲಿ ಗೃಹಮಂತ್ರಿಗಳಾದ ಅಮಿತ್ ಷಾರವರು "ಇಂದು ದೇಶದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿಲ್ಲ, ಬದಲಿಗೆ ಜಾತಿ ಮತ್ತು ಕುಟುಂಬ ರಾಜಕೀಯ ಅಪಾಯದಲ್ಲಿದೆ ಎಂದು ಹೇಳಿದ್ದರು. ಕರ್ನಾಟಕದ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಇದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

ಬಿಜೆಪಿ ಸಂಸ್ಥಾಪನಾ ದಿನಾಚರಣೆ ಸಂದರ್ಭ ಮಾಡಿದ ಒಂದು ಭಾಷಣದಲ್ಲಿ ಮೋದಿಯವರು "ಬಿಜೆಪಿ ಜಾಹೀರಾತುಗಳು, ವಾಟ್ಸಪ್ ಸಂದೇಶಗಳು, ಟ್ವೀಟರ್ ಹ್ಯಾಂಡಲ್ ಮೊದಲಾದ ಪ್ರಚಾರ ಮಾಧ್ಯಮಗಳಿಂದ ಬೆಳೆದ ಪಕ್ಷವಲ್ಲ. ಈ ಪಕ್ಷ ಕಾರ್ಯಕರ್ತರ ತ್ಯಾಗ, ಪರಿಶ್ರಮ, ಸಮರ್ಪಣೆ, ನಿರಂತರ ಕಾರ್ಯಕ್ಷಮತೆಯಿಂದ ಬೆಳೆದ ಪಕ್ಷವಾಗಿದೆ. ಕಾರ್ಯಕರ್ತರೆ ಪಕ್ಷದ ಶಕ್ತಿ" ಎಂದು ಹೇಳಿದ್ದರು. ಕರ್ನಾಟಕದ ಕೆಲವು ಬಿಜೆಪಿ ನಾಯಕರು ಕೆಲವೊಮ್ಮೆ ನಡೆಯುವ ಪಕ್ಷದ ಕಾರ್ಯಕರ್ತರ ಸಭೆಗಳಲ್ಲಿ ಭಾರೀ ಸಂಖ್ಯೆ ಇದ್ದರೆ ಉತ್ಸಾಹದಿಂದ ಬಿಜೆಪಿಯಲ್ಲಿ ಮಾತ್ರ ದೇವದುರ್ಲಭ ಕಾರ್ಯಕರ್ತರಿರುವುದು ಎಂದು ಅಭಿಮಾನದಿಂದ ಹೇಳುತ್ತಾರೆ. ಆದರೆ ಚುನಾವಣೆ ಸಮೀಪಿಸುತ್ತಿದ್ದಂತೆ ಟಿಕೆಟ್ ನೀಡುವ ಸಂದರ್ಭದಲ್ಲಿ ಕೇವಲ ತಮ್ಮ ಪರಿವಾರದ ಪರಿಧಿಯೊಳಗೆ ಯೋಚಿಸುತ್ತಾರೆ. ಕಾಂಗ್ರೆಸ್, ಜೆಡಿಎಸ್ ಮಾತ್ರವಲ್ಲ, ದೇಶದ ಹೆಚ್ಚಿನ ಪಕ್ಷಗಳು ಕೆಲವೇ ಕೆಲವು ಪರಿವಾರದ ಲಿಮಿಟೆಡ್ ಕಂಪೆನಿಗಳಂತೆ ದೇಶದ ರಾಜಕಾರಣದಲ್ಲಿವೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಕ್ಷದ ಯಾವುದೇ ನಾಯಕರ ಚೇಲಾಗಳಾಗದೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಬೇಕಾಗಿದೆ. ನಾಯಕರ ಭಟ್ಟಂಗಿಗಳಾಗದೆ ರಾಷ್ಟ್ರದ, ರಾಜ್ಯದ ಆರಾಧಕರಾಗಬೇಕಾಗಿದೆ. ಈ ರೀತಿ ಬಿಜೆಪಿ ಕಾರ್ಯಕರ್ತರು ಸಂಕಲ್ಪ ತೊಟ್ಟಲ್ಲಿ ಪಕ್ಷದಲ್ಲಿ ಚಿಗುರುತ್ತಿರುವ ವಂಶವಾದವನ್ನು ಆರಂಭದಲ್ಲೇ ಕಿತ್ತೆಸೆಯಬಹುದು. ಇದು ಪಕ್ಷದ ಹಿತದೃಷ್ಟಿಯಿಂದ ಹಾಗೂ ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಅನಿವಾರ್ಯವಾಗಿದೆ. ■

ಸವಿ ರುಚಿ

ಕೊತ್ತಂಬರಿ ಸೊಪ್ಪಿನ ತಂಬುಳಿ



ಬೇಕಾಗುವ ಪದಾರ್ಥಗಳು...

ಕೊತ್ತಂಬರಿ ಸೊಪ್ಪು– 1 ಸಣ್ಣ ಗೊಂಚಲು
ಜೀರಿಗೆ – 1/2 ಚಮಚ
ಹಸಿರು ಮೆಣಸಿನಕಾಯಿ– 1
ತುರಿದ ತೆಂಗಿನಕಾಯಿ – 1/2 ಬಟ್ಟಲು
ಮೊಸರು– 1 ಬಟ್ಟಲು
ಕೆಂಪು ಮೆಣಸಿನಕಾಯಿ–1
ಅಡುಗೆ ಎಣ್ಣೆ / ತುಪ್ಪ– 2 ಚಮಚ
ಸಾಸಿವೆ– ಸ್ವಲ್ಪ, ಕರಿಬೇವು–ಸ್ವಲ್ಪ
ಇಂಗು–ಸ್ವಲ್ಪ, ಉಪ್ಪು– ರುಚಿಗೆ ತಕ್ಕಷ್ಟು

ಮಾಡುವ ವಿಧಾನ...

ಕೊತ್ತಂಬರಿ ಸೊಪ್ಪು ಮತ್ತು ಹಸಿ ಮೆಣಸಿನಕಾಯಿಯನ್ನು ಸಣ್ಣಗೆ ಕತ್ತರಿಸಿಕೊಳ್ಳಿ, ಬಾಣಲೆಯನ್ನು ಬಿಸಿ ಮಾಡಿ, ಎಣ್ಣೆ ಹಾಗೂ ಜೀರಿಗೆಯನ್ನು ಹಾಕಿ. ನಂತರ ಸಣ್ಣಗೆ ಕತ್ತರಿಸಿಕೊಂಡ ಕೊತ್ತಂಬರಿ ಸೊಪ್ಪು ಹಾಗೂ ಹಸಿಮೆಣಸಿನ ಕಾಯಿ, ತೆಂಗಿನ ತುರಿಯನ್ನು ಸೇರಿಸಿ. ಸಣ್ಣ ಉರಿಯಲ್ಲಿ 5 ಸೆಕೆಂಡ್‌ಗಳ ಕಾಲ ಫ್ರೈ ಮಾಡಿ. ಬಳಿಕ ಇದನ್ನು ಮಿಕ್ಸಿ ಜಾರ್‌ಗೆ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ, ನೀರು ಸೇರಿಸಬಹುದು. ನಂತರ ಇದಕ್ಕೆ 3 ಟೇಬಲ್ ಸ್ಪೂನ್‌ನಷ್ಟು ಮೊಸರು ಸೇರಿಸಿ. ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ, ಬಳಿಕ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ. ಆಮೇಲೆ ಒಂದು ಒಗ್ಗರಣೆ ಪಾತ್ರೆಗೆ 1 ಚಮಚ ಎಣ್ಣೆ ಹಾಕಿ ಅದು ಬಿಸಿಯಾಗುತ್ತಲೆ ಸಾಸಿವೆ, ಜೀರಿಗೆ, ಕೆಂಪು ಮೆಣಸಿನಕಾಯಿ, ಚಿಟಿಕೆ ಇಂಗು, ಕರಿಬೇವು ಹಾಕಿ. ಈ ಒಗ್ಗರಣೆಯನ್ನು ತಂಬುಳಿಗೆ ಹಾಕಿ ಮಿಕ್ಸ್ ಮಾಡಿದರೆ ರುಚಿಕರವಾದ ಕೊತ್ತಂಬರಿ ಸೊಪ್ಪಿನ ತಂಬುಳಿ ಸವಿಯಲು ಸಿದ್ಧ.

ತೆಂಗಿನಕಾಯಿ

(2ನೇ ಪುಟದಿಂದ)

ಈ ಪ್ರಶ್ನೆಗೆ ಎಲ್ಲ ಹುಡುಗಿಯರೂ ಗೊಳ್ಳನೆ ನಕ್ಕರು. ಅಲ್ಲಿ ಬಹಳಷ್ಟು ಹುಡುಗಿಯರಿಗೆ ಕನ್ನಡ ಬರುತ್ತಿರಲಿಲ್ಲ. ಕೆಲವರಿಗೆ ಬಂದರೂ ಮಾತನಾಡಲು ಇಷ್ಟವಿರಲಿಲ್ಲ. ಕೆಲವ ರದ್ದು ಹರುಕು ಮುರುಕು ಕನ್ನಡ.

ಬಂದ ಎರಡನೇ ದಿನವೇ ತಾನ್ಯಾವ ಕೆಲಸಕ್ಕೆ ಬಂದಿದ್ದೇನೆ ಎಂಬುದು ಸರಳೆಗೆ ಅರ್ಥವಾಗಿ ಹೋಗಿತ್ತು. ಆದರೂ ಅದರಿಂದ ಹೊರಬರುವ ಕೊನೆಯ ಉಪಾಯವಾಗಿ ಅಕ್ಕನ ಬಳಿ ಅಂಜುತ್ತಲೇ ಹೋದಳು. ಅಕ್ಕ ನಾನು ಆ ಥರದವಳಲ್ಲ. ನನ್ನನ್ನು ಬಿಟ್ಟು ಬಿಡು ಅಂದಿದ್ದಕ್ಕೆ ಅಕ್ಕ ಜೋರಾಗಿ ನಕ್ಕಳು. ಇಲ್ಲಿ ಎಲ್ಲ ಒಂದೇ ಥರದವರು! ನಿಂಗೊತ್ತಾ ಹುಡುಗಿ, ನಿಮ್ಮಪ್ಪ ನೀವು ಮೂರೂ ಜನರನ್ನು ನಾಲ್ಕು ಲಕ್ಷ ರೂಪಾಯಿಗೆ ಮಾರಿ ಹೋಗಿದ್ದ. ಈಗ ನನ್ನ ತಮ್ಮನಿಗೆ ನಿನಗೊಬ್ಬಳಿಗೇ ಐದು ಲಕ್ಷ ತೆತ್ತಿದ್ದೇನೆ ನಾನು" ನಿಂತ ನೆಲ ಬಾಯಿಡತೊಡಗಿತ್ತು. ಅಪ್ಪ ನಮ್ಮನ್ನು ಮಾರಿ ದನೇ? ನಂಬಲಾಗಲಿಲ್ಲ, ನಂಬದೇ ಇರಲೂ ಆಗಲಿಲ್ಲ. ಸತ್ಯ ನಗ್ನವಾಗಿ ಎದುರಿಗೆ ನಿಂತಿತ್ತು. "ಸತ್ಯದ ನಗ್ನತೆಯಷ್ಟೇ ನನ್ನ ಮೈಯ ನಗ್ನತೆಯೂ ಸತ್ಯ ಎಂದು ಕೊಂಡಳು ಸರಳೆ. ಇಲ್ಲಿಂದ ಹೊರಹೋದರೆ ನಿನ್ನನ್ನು ಹರಿದು ತಿನ್ನುವ ಜನ ಸಾಕಷ್ಟಿದ್ದಾರೆ. ಇಲ್ಲಿಯೇ ಇದ್ದು ಬಚಾವ್ ಆಗುತ್ತೀಯಾ ಇಲ್ಲ ಹೊರಗೆ ಹೋಗಿ ಬಡಿದಾಡಿ ಸಾಯುತ್ತೀಯಾ? ಅಕ್ಕ ಲಿಪ್ ಸ್ಟಿಕ್ ತುಟಿ ಒಡೆದು ಹೋಗುವಂತೆ ನಕ್ಕಳು.

ಹಸಿ, ಹಸಿ ಕಾಮದ ಬಿಸಿ ಉಸಿರಿನಲ್ಲಿ ಪ್ರೇಮವೆಂಬ ಭಾವ ಬತ್ತಿ ಹೋಗಿ ಉಳಿದಿದ್ದು ಬರೀ ನೋವು, ನಿಟ್ಟುಸಿರು ಮಾತ್ರ, ಎಲ್ಲ ಹುಡುಗಿಯರಿಗಿಂತ ಸರಳಗೇ ಡಿಮ್ಯಾಂಡ್ ಹೆಚ್ಚು ಇದ್ದುದರಿಂದ ಅಕ್ಕನಿಗೆ ಖುಷಿಯೋ ಖುಷಿ. ಪೈಸಾ ವಸೂಲ್ ಆಗಿತ್ತು. ಸರಳೆಯ ಕೈಯಲ್ಲೀಗ ಕಾಸೂ ಉಳಿಯತೊಡಗಿತ್ತು. ಎಲ್ಲ ಬಿಟ್ಟು ಹೋಗಿ ಮರ್ಯಾದೆಯಾಗಿ ಬದುಕಬೇಕು ಎಂಬ ಆಸೆ ಬೆಟ್ಟದಷ್ಟಿತ್ತು. ಆದರೇನು? ಮನೆಯನ್ನು ಬಿಟ್ಟು ಹೋಗಲು ಪ್ರಯತ್ನಿಸಿದ ಒಂದಿಬ್ಬರು ಹುಡುಗಿಯರು ಈ ಲೋಕವನ್ನೇ ಬಿಟ್ಟು ಹೋಗಬೇಕಾಗಿ ಬಂದದ್ದು ಜೀವಂತ ಉದಾಹರಣೆಯಾಗಿ ತನ್ನ ಕಣ್ಮುಂದೆಯೇ ಇತ್ತು. ಅದರ ಬದಲು ಕಾಸು ಕೂಡಿಟ್ಟು ಮುಂದೆ ಎಂದಾದರೊಂದು ದಿನ ಬದುಕು ಕಟ್ಟಿಕೊಳ್ಳೋಣ ಎಂದು ನಿರ್ಧರಿಸಿದ್ದಳು. ಹೀಗಾಗಿ ಕೆಲಸಕ್ಕೆ ಪ್ರತಿರೋಧಿಸುವುದನ್ನು ಬಿಟ್ಟಳು. ಹುಡುಗಿ ಜಾಣೆ; ಬದುಕುವ ಕಲೆ ಗೊತ್ತಿದೆ. ಬಹಳ ಬೇಗನೇ ದಾರಿಗೆ ಬಂದಳು ಅಕ್ಕ ಖುಷಿ ಯಾಗಿ ಎಲ್ಲರ ಮುಂದೆ ಹೇಳುತ್ತಿದ್ದಳು.


ಇತ್ತೀಚೆಗೆ ಅಕ್ಕ ಸರಳೆಗೆ ಸ್ವಲ್ಪ ಸ್ವಾತಂತ್ರ್ಯ ಕೊಡತೊಡಗಿದ್ದಳು. ಅಲ್ಲದೇ ಸರಳೆಗಾಗಿ ಒಂದು ಕಾರನ್ನೂ, ಡ್ರೈವರನ್ನೂ ಗೊತ್ತು ಮಾಡಿದ್ದಳು. ಹೀಗಾಗಿಯೆ ಸರಳೆ ಇಂದು ಏಕಾಂಗಿಯಾಗಿ ಸಮುದ್ರದ ದಂಡೆಯಲ್ಲಿ ಕುಳಿತುಕೊಳ್ಳಲು ಸಾಧ್ಯವಾಗಿದ್ದು.

ಇದೀಗ ಕೊರೊನಾ ಹಾವಳಿಯಿಲ್ಲ. ಗಿರಾಕಿಗಳೇನೋ ಬಹಳಷ್ಟು ಬರುತ್ತಾರೆ. ಆದರೆ ಬಂದವರ ವಿಕೃತಿ ಮೈ, ಮನಸ್ಸುಗಳನ್ನೆಲ್ಲ ನುಗ್ಗಿ ನುರಿ ಮಾಡಿಬಿಡುತ್ತದೆ. ಬಹುಶಃ ಮನೆಯಲ್ಲಿ ಹೆಂಡತಿಯೊಂದಿಗೆ ಮಾಡಲಾಗದ ಚೇಷ್ಟೆಗಳನ್ನೆಲ್ಲಾ ಇಲ್ಲಿ ತೀರಿಸಿಕೊಳ್ಳುವ ಉದ್ದೇಶಕ್ಕೆ ಬಂದಿರುತ್ತಾರೋ ಏನೋ ಎಂದುಕೊಂಡಿದ್ದಿದೆ. ಕಾಮದ ಬಯಕೆ ಎಂದೋ ಸತ್ತು ಹೋಗಿದೆ. ನಿರ್ಮಲವಾದ ಪ್ರೇಮದ ಹಪಾಹಪಿ ಇನ್ನೂ ನಿಂತಿಲ್ಲ. ನಲ್ಲನೆದೆಗೊರಗಿ ಅವನ ಪಿಸುಮಾತುಗಳನ್ನಾಲಿಸುತ್ತಿದ್ದ ಆ ಮಧುರ ದಿನಗಳು ನೆನಪಾಗುತ್ತವೆ. ಅಂಥ ಸ್ವಚ್ಛ ಅಪ್ಪುಗೆಗಾಗಿ ಮನಸ್ಸು ಹಾತೊರೆಯುತ್ತದೆ. ತನ್ನನ್ನು ಹೂವಿನಂತೆ ಮೃದುವಾಗಿ ನೇವರಿಸಿ, ತೋಳೆಯಲ್ಲಿ ಕರೆದೊಯ್ದು ಪ್ರೀತಿಯ ನಲ್ನುಡಿಗಳನ್ನಾಡುತ್ತಾ ರಮಿಸುವ ಕಾಮ ಬೇಕೆನ್ನಿಸುತ್ತದೆ. ಆದರೆ....ಈ ಗಿರಾಕಿಗಳೋ.... ಬಂದ ತಕ್ಷಣ ಹಾಸಿಗೆಗೆ ಎಳೆಯುತ್ತಾರೆ. ನೇವರಿಕೆ ಎಲ್ಲ ಹೇವರಿಕೆಯನ್ನಿಸತೊಡಗುತ್ತದೆ. ನನ್ನವರು ಯಾರೂ ಇಲ್ಲ ಎನ್ನಿಸಿ ಮನಸ್ಸು ಖಿನ್ನವಾಗುತ್ತದೆ. ಅದನ್ನೇ ಧ್ಯಾನಿಸುತ್ತಾ ಕುಳಿತಿರುವಾಗ ಉಕ್ಕಿ ಬರುವ ಅಲೆಗಳಲ್ಲಿ ಒಂದಿಡೀ ತೆಂಗಿನಕಾಯಿ ದಂಡೆಯತ್ತ ಅಲೆಯೊಂದಿಗೆ ಧಾವಿಸಿ ಬರುವುದು ಕಂಡಿತು. ಯಾರೋ ಸಮುದ್ರ ರಾಜನಿಗೆ ಅರ್ಪಿಸಿದ ತೆಂಗಿನ ಕಾಯಿಯಿರಬೇಕು. ಮುನ್ನುಗುವ ಅಲೆಯೊಂದಿಗೆ ಮುಂದೆ ಬಂದರೆ ಹಿನ್ನುಗ್ಗುವ ಅಲೆಯೊಂದಿಗೆ ಮತ್ತೆ ಸಮುದ್ರ ಸೇರುತ್ತಿತ್ತು. ಹೇಗಾದರೂ ದಡ ಸೇರುವ ಅದರ ಯತ್ನ ಮತ್ತೆ, ಮತ್ತೆ ವಿಫಲವಾಗುತ್ತಿತ್ತು. "ಸಮುದ್ರದಿಂದ ಹೊರಬಂದು ದಂಡೆ ತಲುಪುವ ಅದರ ಕನಸು ನನಸಾಗುವದೇ?" ಜಿಜ್ಞಾಸೆಗೊಳಗಾದಳು. ತೆಂಗಿನ ಕಾಯಿ ದಡ ಸೇರುತ್ತಿತ್ತು; ಮತ್ತೆ ಸಮುದ್ರಕ್ಕೆ ಬೀಳುತ್ತಿತ್ತು. ನಿಟ್ಟುಸಿರಿಟ್ಟಳು ಸರಳಾ,

ಒಂದೇ ಸಮನೆ ಕಾಯಿಯನ್ನು ದಿಟ್ಟಿಸುತ್ತಿದ್ದುದರಿಂದ ಕಣ್ಣಲ್ಲಿ ನೀರು ಬರತೊಡಗಿತ್ತು. ದೃಷ್ಟಿ ಬದಲಾಯಿಸಿದವಳಿಗೆ ಯಾವುದೋ ಎರಡು ಕಣ್ಣುಗಳು ತನ್ನನ್ನೇ ನಿಟ್ಟಿಸುತ್ತಿರುವದು ಅರಿವಿಗೆ ಬಂತು. ಅಚಾನಕ್ಕಾಗಿ ನಾಲ್ಕೂ ಕಣ್ಣುಗಳು ಸಂಧಿಸಿದವು. ಸರಳೆಯ ಕಣ್ಣುಗಳು ಫಳ, ಫಳ ಹೊಳೆದವು. ನನ್ನ ಹುಡುಗ!! ಉದ್ಗರಿಸಿದಳು. ಸರಳಾ!! ಆ ಹುಡುಗನ ಧ್ವನಿ ಆರ್ದ್ರತೆಯಿಂದ ತೇವವಾಗಿತ್ತು. ಬಿಲ್ಲಿನಿಂದ ಬಿಟ್ಟ ಬಾಣದಂತೆ ತೂರಿ ಓಡಿದಳು ಸರಳಾ. "ಸರಳಾ ನೀನಿಲ್ಲಿ" ನಿನಗಾಗಿ ನಾನು ಎಲ್ಲೆಲ್ಲಿ ಹುಡುಕಿದೆ? ಇಲ್ಲಿ ಏನು ಮಾಡಿಕೊಂಡಿದ್ದೀಯಾ? ಅವನ ಪ್ರಶ್ನೆಗೆ ಕಣ್ಣೀರಾದಳು ಸರಳಾ, ನೀನು ಇನ್ನೂ ನನಗಾಗಿ ಕಾಯುತ್ತಿದ್ದೀಯಾ?" ಬಿಕ್ಕಳಿಸುತ್ತಲೇ ಕೇಳಿದಳು. "ಖಂಡಿತಾ ಸರಳಾ" ಹುಡುಗ ಹೇಳಿದ. ಇನ್ನೇನು ಹುಡುಗ ಸರಳೆಯನ್ನು ಬಿಗಿದಪ್ಪಬೇಕು; ಕಾರಿನ ಡ್ರೈವರ್ ಬಂದ ಮೇಡಂ, ಅಕ್ಕಾ ನೆ ಫೋನ್ ಕಿಯಾ ಥಾ, ಏಕ್ ಗ್ರಾಹಕ್ ಆಯಾ ಹೈ, ದೋ ಘಂಟಾ ಕೇ ಲಿಯೆ ದಸ್ ಹಜಾರ್. (ಮೇಡಂ, ಅಕ್ಕನ ಫೋನ್ ಬಂದಿತ್ತು ಯಾವುದೋ ಗಿರಾಕಿ ಬಂದಿದ್ದಾನೆ. ಎರಡು ತಾಸಿಗೆ ಹತ್ತು ಸಾವಿರವಂತೆ").


ಸರಳೆಯ ಹುಡುಗನ ಚಾಚಿದ ಕೈಗಳು ಅಲ್ಲಿಯೇ ಸ್ತಬ್ಧವಾದವು. "ಸರಳಾ.... ನೀನೀಗ ....ಛೇ....ನಿನ್ನ ಮುಖ ನೋಡಲೂ ಅಸಹ್ಯ ಅನಿಸುತ್ತಿದೆ. ನಿನಗಾಗಿ ನಾನು ಕಾದೆನಲ್ಲ ಎಂಥ ಮೂರ್ಖ ನಾನು" ವಾಪಸ್ ಹೊರಟೇ ಬಿಟ್ಟ, ಸರಳೆಯ ಚಾಚಿದ ಕೈ, ತೆರೆದ ಬಾಯಿ ಹಾಗೆಯೇ ಇತ್ತು. ಮೇಡಂ, ಜಲಿ ಚಲಿಯೇ" ಡ್ರೈವರ್ ಅವಸರಿಸಿದ. ಭಾರವಾದ ಹೆಜ್ಜೆ ಕಿತ್ತಿಟ್ಟಳು ಸರಳಾ, ಕಣ್ಣು ಅಪ್ರಯತ್ನವಾಗಿ ತೆಂಗಿನಕಾಯಿಯತ್ತ ತಿರುಗಿತು. ಊಹೂಂ ಯಾರೂ ಅದನ್ನು ಸಮುದ್ರದಿಂದ ಹೊರ ತರಲಾರರು ನಿಟ್ಟುಸಿರಿಟ್ಟಳು. ದಡಕ್ಕೆ ಬಂದಿದ್ದ ತೆಂಗಿನಕಾಯಿಯನ್ನು ಸಮುದ್ರ ಮತ್ತೆ ತನ್ನೊಳಕ್ಕೆ ಎಳೆದೊಯ್ಯುತ್ತಿತ್ತು. ಸಮುದ್ರದ ಕಬಂಧ ಬಾಹುಗಳೊಳಗೆ ಸೇರಿಕೊಳ್ಳುತ್ತಿರುವದು ತೆಂಗಿನಕಾಯಿಯೋ, ತನ್ನ ಬದುಕೋ ಸರಳೆಗೆ ತಿಳಿಯಲೇ ಇಲ್ಲ.


























ನಕ್ಕರೆ ಅದೇ ಸ್ವರ್ಗ

ಪತ್ನಿ: ಆ ಚಿತ್ರನಟಿಗೆ ಹೆಣ್ಣು ಮಗು ಆಯಿತಂತೆ. ಇಲ್ಲಿ ನೋಡಿ ಪೇಪರ್‌ನಲ್ಲಿ ಹಾಕಿದ್ದಾರೆ.
ಪತಿ: ಛೇ... ಮಗುವನ್ನು ತೊಟ್ಟಿಲಲ್ಲಿ ಹಾಕುವುದನ್ನು ಬಿಟ್ಟು, ಪೇಪರ್‌ನಲ್ಲಿ ಯಾಕೆ ಹಾಕಿದ್ದರು.


ಮಾಸ್ಟರ್: ಯಾಕೋ ಗುಂಡಾ ನಾನು ಎಷ್ಟು ಬೈದರೂ ನೀನು ಕೋಪನೂ ಮಾಡಿಕೊಳ್ಳಲ್ಲ. ಎದುರು ಮಾತಾನಾಡುವುದಿಲ್ಲ ಯಾಕೋ?
ಗುಂಡಾ: ನೀವೇ ಹೇಳಿದ್ದೀರಲ್ಲಾ ಸಾರ್, ನಾಯಿ ಬೊಗಳಿದರೆ ಭೂಲೋಕ ಹಾಳಾಗುತ್ತೇನೂ ಅಂತ.

ವಿದ್ಯಾರ್ಥಿ: ಸಾರ್ ದಯವಿಟ್ಟು ನನ್ನನ್ನು ಫೇಲ್ ಮಾಡಿ, ನಿಮ್ಮ ಕಾಲಿಡಿದುಕೊಳ್ತೀನಿ.
ಮೇಷ್ಟ್ರು: ಯಾಕೋ ಎಲ್ಲರೂ ಪಾಸ್ ಮಾಡಿ ಅಂದ್ರೆ, ನೀನು ಫೇಲ್ ಮಾಡು ಅಂತೀಯ?
ವಿದ್ಯಾರ್ಥಿ: ಸಾರ್ ನಮ್ಮಪ್ಪ ಪಾಸಾದರೆ ಕಾಲೇಜಿಗೆ ಸೇರಿಸ್ತೀನಿ, ಫೇಲ್ ಆದ್ರೆ ಮದುವೆ ಮಾಡ್ತೀನಿ ಅಂತೀದ್ದಾರೆ ಸಾರ್. ದಯವಿಟ್ಟು ಫೇಲ್ ಮಾಡಿ.

















ಮೈಸೂರು ರಾಜಪರಂಪರೆ ಸಂರಕ್ಷಣೆ

ಮೈಸೂರು ರಾಜವಂಶದ ಕುಡಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ನಿಧನದ ನಂತರ, ಅವರ ಧರ್ಮಪತ್ನಿಯವರಾದ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಅವರು, ತಮ್ಮ ದಿವಂಗತ ಪತಿಯವರ ಕನಸಿನ ಯೋಜನೆಗಳನ್ನು ಸಾಕಾರಗೊಳಿಸಲು ಮುಂದಾಗುವುದರ ಜೊತೆಗೆ ಅವರ ಆಸ್ತಿಗಳನ್ನು ಸಂರಕ್ಷಿಸುವ ಪಣ ತೊಟ್ಟರು. ಅವರ ಈ ಪ್ರಯತ್ನದ ಪಯಣದಲ್ಲಿ ಸದ್ಯಕ್ಕೆ ಹೆಲಿಪ್ಯಾಡ್ ಮತ್ತು ದೇವಿಕೆರೆಯನ್ನು ರಕ್ಷಿಸಿಕೊಳ್ಳುವಲ್ಲಿ ಸಹಕಾರಿಯಾಯಿತು. ಸಾವಿರಾರು ಎಕರೆಗಳ ವಿಸ್ತಾರವುಳ್ಳ ಸರ್ವೇ ನಂಬರ್ 04ರ ಭೂ ಮಾಲೀಕತ್ವ ಹಾಗೂ ಚಾಮುಂಡಿಬೆಟ್ಟದ ಮಾಲೀಕತ್ವಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಅವರು ಜಯಶಾಲಿಯಾದರು. 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣ ಅವರೊಂದಿಗಿನ ನೇರ ಮಾತುಕತೆಯಲ್ಲಿ ಪ್ರಮೋದಾ ದೇವಿಯವರು ಚಾಮುಂಡಿಬೆಟ್ಟದ ಮೇಲಿರುವ ರಾಜೇಂದ್ರ ವಿಲಾಸ್ ಅರಮನೆ ಪುನರ್‌ನವೀಕರಣ ಹಾಗೂ ಬಹು ಮುಖ್ಯವಾಗಿ ಸರ್ವೇ ನಂಬರ್ 04 ಮತ್ತು ಚಾಮುಂಡಿಬೆಟ್ಟದ ವಿಚಾರದಲ್ಲಿ ತಾವು ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳ ಬಗ್ಗೆ ವಿವರಿಸಿದ್ದಾರೆ.





ಪ್ರಮೋದಾದೇವಿ ಒಡೆಯರ್ ಅವರು ಚಾಮುಂಡಿಬೆಟ್ಟದ ಮೇಲಿನ ರಾಜೇಂದ್ರ ವಿಲಾಸ ಅರಮನೆಯಲ್ಲಿ ನಡೆಯುತ್ತಿರುವ ಪುನರ್‌ನವೀಕರಣ ಕಾಮಗಾರಿಗಳ ಬಗ್ಗೆ 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕ ವಿಕ್ರಮ್ ಮುತ್ತಣ್ಣ ಅವರಿಗೆ ಸ್ಥಳದಲ್ಲಿ ವಿವರಿಸುತ್ತಿರುವುದು.

***ವಿಕ್ರಮ್ ಮುತ್ತಣ್ಣ:* ಒಡೆಯರ್ ಅವರು ರಾಜೇಂದ್ರ ವಿಲಾಸ ಪ್ಯಾಲೇಸ್ ಗತ ವೈಭವವನ್ನು ಪುನರ್ ಸ್ಥಾಪಿಸಲು ಬಯಸಿದ್ದರು. ಆ ನಿಟ್ಟಿನಲ್ಲಿ ನೀವೂ ಸಹ ಈಗ ಪ್ರಯತ್ನಶೀಲರಾಗಿರುವಿರಿ, ಏಕೆ?**

ಪ್ರಮೋದಾ ದೇವಿ: ಅದು ಅವರ ಕನಸಿನ ಯೋಜನೆಯಾಗಿತ್ತು ಹಾಗೂ ನಾನು ಅದನ್ನು ಮುಂದುವರೆಸಲು ಬಯಸಿದ್ದೇನೆ ಮತ್ತು ಈ ರೀತಿಯ ಪುನರ್ ಸ್ಥಾಪನೆಯ ಕೆಲಸಗಳನ್ನು ಮಾಡಲು ನಾನು ಇಷ್ಟಪಡುತ್ತೇನೆ. ಆದರೆ ಅಂತಹ ಕೌಶಲ್ಯದ ಕೆಲಸಗಳನ್ನು ಮಾಡುವ ಕುಶಲಕರ್ಮಿಗಳು ಸಿಕ್ಕುವುದು ಕಷ್ಟ. ಆದರೆ ಬಹುತೇಕ ಒಳಮಾಳಿಗೆಯ (ಸೀಲಿಂಗ್) ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆ. ದುರದೃಷ್ಟವಶಾತ್, ಕೆಲವೊಂದು ಹಾನಿಯಾಗಿವೆ. ಆದರೆ ಅವುಗಳನ್ನು ಸರಿಪಡಿಸುವ ಮಾರ್ಗವನ್ನು ನಾವು ಕಂಡುಕೊಳ್ಳಬೇಕು. ಸದ್ಯಕ್ಕೆ ನನ್ನ ಪ್ರಾಥಮಿಕ ಉದ್ದೇಶ ಹವಾಮಾನ ವೈಪರೀತ್ಯಗಳಿಂದ ಅರಮನೆಗೆ ಹಾನಿ ಉಂಟಾಗುವುದನ್ನು ತಡೆಯುವುದೇ ಆಗಿದೆ.

***ವಿಕ್ರಮ್:* ರಚನಾತ್ಮಕವಾಗಿ ಅರಮನೆ ಸುಸ್ಥಿತಿಯಲ್ಲಿದೆಯೇ?**

ಪ್ರಮೋದಾ ದೇವಿ: ಹೌದು. ನಿಸ್ಸಂದೇಹವಾಗಿ. ಬೆಟ್ಟದ ಮೇಲೆ ವಾಹನ ನಿಲುಗಡೆ ಸ್ಥಳವನ್ನು ನಿರ್ಮಿಸುವಾಗ, ಡೈನಾಮೆಟ್ ಬಳಸಿ ಬಂಡೆಗಳನ್ನು ಸ್ಫೋಟಿಸುತ್ತಿದ್ದ ಸಂದರ್ಭದಲ್ಲಿ ಅರಮನೆಗೆ ಸ್ವಲ್ಪಮಟ್ಟಿಗೆ ಹಾನಿ ಉಂಟಾಗಿತ್ತು. ಏಕೆಂದರೆ ಆ ಸ್ಥಳವು (ಅರಮನೆಗೆ) ತುಂಬಾ ಹತ್ತಿರವಿದೆ. ಅದು ಕಟ್ಟಡಕ್ಕೆ ಹಾನಿ ಉಂಟು ಮಾಡದೇ ಇರಬಹುದು. ಆದರೆ ಇದರಿಂದ ಪ್ಲಾಸ್ಟರ್‌ಗಳಲ್ಲಿ ಅಲ್ಲಿ ಇಲ್ಲಿ ಕೆಲವು ಕಡೆ ಬಿರುಕುಗಳು ಮೂಡಿವೆ. ಸದ್ಯಕ್ಕೆ ನನ್ನ ಉದ್ದೇಶ ಗೋಪುರಗಳನ್ನು ರಕ್ಷಿಸುವುದೇ ಆಗಿದೆ.

***ವಿಕ್ರಮ್:* ಬೇರೆ ರಾಜಮನೆತನದವರಂತೆ, ಈ ಅರಮನೆಯನ್ನು, ತಾಜ್ ಅಥವಾ ಒಬೇರಾಯ್ ಅಂತಹ ಹೋಟೆಲ್ ಸಮೂಹಗಳಿಗೆ ಲೀಸ್‌ಗೆ ನೀಡುವುದು ಒಳ್ಳೆಯದು ಎಂಬ ಆಲೋಚನೆ ನಿಮಗೆ ಎಂದಾದರೂ ಬಂದಿದೆಯೇ?**

ಪ್ರಮೋದಾ ದೇವಿ: ನಾನು ಮಾರುಕಟ್ಟೆಗೆ ಸಂಬಂಧಪಟ್ಟ ವ್ಯಕ್ತಿಯಲ್ಲ ಹಾಗೂ ಮಾರುಕಟ್ಟೆ ವಿಷಯದಲ್ಲಿ ನಾನು ಪರಿಣಿತಳೂ ಅಲ್ಲ. ನಾನು ಕೆಲವು ಸಮೂಹಗಳನ್ನು ಮಾರುಕಟ್ಟೆ ನಿರ್ವಹಣೆಗೆ ಬಳಸಿಕೊಳ್ಳಬಹುದು. ಆದರೆ, ಹೋಟೆಲ್ಲನ್ನು ನಡೆಸುವ ಮತ್ತು ನಿರ್ವಹಣೆ ಮಾಡುವ ಕೆಲಸವನ್ನು ನಾನೇ ಮಾಡಲು ಆಸಕ್ತಳಾಗಿದ್ದೇನೆ. ನಾನು ಇದನ್ನು ಬೇರೆಯವರಿಗೆ ಮಾಡಲು ಬಿಟ್ಟರೆ, ಅದು ಅವರ ಪಾಲಿಗೆ ಉದ್ಯೋಗವಾಗುತ್ತದೆ. ಆದರೆ ನನಗೆ ಅದು ಪ್ರೀತಿಯ ಕಾಯಕವಾಗಿದೆ.

***ವಿಕ್ರಮ್:* ನಿಮ್ಮ ಮತ್ತೊಂದು ಆಸ್ತಿ 'ಗನ್ ಹೌಸ್' ಅನ್ನು ಸಹ ಪುನರ್ ಸ್ಥಾಪಿಸಿ, ಕಾಯಕಲ್ಪ ನೀಡಲು ಬಯಸುವಿರಾ?**

ಪ್ರಮೋದಾ ದೇವಿ: ಕೆಲವರು ಅದನ್ನು ನನ್ನ ಪರವಾಗಿ ನಿರ್ವಹಿಸಲು ಆಸಕ್ತರಾಗಿದ್ದರು. ಆದರೆ ಈಗ ಅಲ್ಲಿ ಸಮಸ್ಯೆ ಉಂಟಾಗಿದೆ. ಈ ಎಲ್ಲಾ ಸ್ವತ್ತುಗಳನ್ನು ಪುನರ್ ಸ್ಥಾಪಿಸಲು ಸಾಕಷ್ಟು ಸಂಪನ್ಮೂಲದ ಅಗತ್ಯವಿದೆ. ನಾನು ಯಾರಿಂದಲೂ ಹಣಕಾಸಿನ ನೆರವನ್ನು ಪಡೆದಿಲ್ಲ. ನನ್ನ ಪತಿಯವರ ನಿಧನದ ನಂತರ, ಯಾವ ರೀತಿಯ ಕಷ್ಟಕರ ಪರಿಸ್ಥಿತಿಗಳನ್ನು ಎದುರಿಸಿದೆ ಎಂಬುದು ನಿಮಗೂ ಗೊತ್ತಿದೆ. ಸಿಬ್ಬಂದಿ ಮತ್ತು ಆಸ್ತಿಗಳ ನಿರ್ವಹಣೆ ತುಂಬಾ ಒತ್ತಡದ ಕೆಲಸ. ಆದರೆ, ಹೇಗೋ, ದೇವರು ನನ್ನ ಪಾಲಿಗೆ ತುಂಬಾ ದಯಾಮಯನಾಗಿದ್ದಾನೆ. ತಾಯಿ ಚಾಮುಂಡೇಶ್ವರಿ ನನಗೆ ಧೈರ್ಯ ನೀಡಿದ್ದಾಳೆ. ನನಗೆ ಸರಿಯಾದ ಸಮಯಕ್ಕೆ ಸೂಕ್ತ ಸಲಹೆ ದೊರಕುತ್ತಿದೆ. ಎಲ್ಲಾ ಕೆಲಸ ಮಾಡಲು ತಾಯಿ ಚಾಮುಂಡೇಶ್ವರಿ ಸಂಪನ್ಮೂಲಗಳನ್ನು ಕಲ್ಪಿಸುತ್ತಿದ್ದಾಳೆ. ಆದ್ದರಿಂದ ಇವೆಲ್ಲವುಗಳನ್ನು ಮಾಡಲು ನನ್ನ ಸಂಪನ್ಮೂಲಗಳನ್ನು ಜಾಣ್ಮೆಯಿಂದ ಬಳಸಬೇಕು. ಎಲ್ಲಾ ಕೆಲಸಗಳನ್ನು ಒಟ್ಟಿಗೆ ಕೈಗೊಳ್ಳಲು ಸಾಧ್ಯವಿಲ್ಲ. ನಾನು ಕಾಯಬೇಕಾಗುತ್ತದೆ ಮತ್ತು ಒಂದರ ನಂತರ ಮತ್ತೊಂದನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕಾಗುತ್ತದೆ.

***ವಿಕ್ರಮ್:* ರಾಜೇಂದ್ರ ವಿಲಾಸ ಅರಮನೆ ಪುನರ್ ಸ್ಥಾಪನೆಗೆ ನೀವೇನಾದರೂ ಕಾಲಮಿತಿಯನ್ನು ಹಾಕಿಕೊಂಡಿರುವಿರಾ?**

ಪ್ರಮೋದಾ ದೇವಿ: ಸಾಮಾನ್ಯವಾಗಿ ನಾನು ಯಾವುದೇ ಕಾಲಮಿತಿಯನ್ನು ಹಾಕಿಕೊಳ್ಳುವುದಿಲ್ಲ. ಪಾರಂಪರಿಕ ನಿರ್ಮಾಣಗಳಿಗೆ ಸಂಬಂಧಪಟ್ಟ ಹಾಗೆ ಕಾಲಮಿತಿ ಹಾಕಿಕೊಂಡು ಕೆಲಸ ಮಾಡುವುದು ಕಷ್ಟವಾಗುತ್ತದೆ. ಹಾಗೆ ಏನಾದರೂ ಕೆಲಸ ಮಾಡಿದರೆ, ಅದರ ಪರಿಣಾಮಗಳು ಕಟ್ಟಡದ ಬೇರೆ ಬೇರೆ ಭಾಗಗಳ ಮೇಲೆ ಉಂಟಾಗುತ್ತದೆ. ಎಲ್ಲವೂ ಮುಗಿಯುವವರೆಗೂ, ಇದೊಂದು ನಿರಂತರ ಪ್ರಕ್ರಿಯೆಯಾಗಿದೆ. ಅಷ್ಟನ್ನು ಹೇಳಿ, ನಾನು ಸಾಧ್ಯವಾದಷ್ಟು ಬೇಗನೇ ಮುಗಿಸುತ್ತೇನೆ. ಏಕೆಂದರೆ, ಇನ್ನಿತರೆ ಬಹಳಷ್ಟು ಕೆಲಸಗಳನ್ನು ನಾನು ಕೈಗೆತ್ತಿಕೊಳ್ಳಬೇಕಾಗಿದೆ.

***ವಿಕ್ರಮ್:* ಬೇರೆ ಸಾಕಷ್ಟು ವಿಷಯಗಳನ್ನು ಮಾತನಾಡಿದ್ದೀರಿ. ಇತ್ತೀಚೆಗೆ, ನೀವು ಸರ್ವೇ ನಂಬರ್ 04ರ ಪ್ರಕರಣದಲ್ಲಿ ಜಯಶೀಲರಾಗಿದ್ದೀರಿ. ಭಾರತ ಒಕ್ಕೂಟದಲ್ಲಿ ಮೈಸೂರು ಸಂಸ್ಥಾನದ ಸೇರ್ಪಡೆ ಒಪ್ಪಂದದ ಕರಾರಿನಂತೆ, ಚಾಮುಂಡಿಬೆಟ್ಟವು ರಾಜಮನೆತನಕ್ಕೆ ಸೇರುತ್ತದೆ ಎಂದು ಹೇಳಲಾಗುತ್ತದೆ. ಆದ್ದರಿಂದ, ಮುಜರಾಯಿ ಇಲಾಖೆಯ ಬದಲಿಗೆ ಚಾಮುಂಡೇಶ್ವರಿ ದೇವಸ್ಥಾನವನ್ನು, ಇನ್ನು ಮುಂದೆ ನೀವೇ ನಿರ್ವಹಣೆ ಮಾಡುವಿರಾ?**

> **ತಾಯಿ ಚಾಮುಂಡೇಶ್ವರಿ ನನಗೆ ಧೈರ್ಯ ನೀಡಿದ್ದಾಳೆ. ನನಗೆ ಸರಿಯಾದ ಸಮಯಕ್ಕೆ ಸೂಕ್ತ ಸಲಹೆ ದೊರಕುತ್ತಿದೆ. ನಾನು ಎಲ್ಲಾ ಕೆಲಸ ಮಾಡಲು ತಾಯಿ ಚಾಮುಂಡೇಶ್ವರಿ ಸಂಪನ್ಮೂಲಗಳನ್ನು ಒದಗಿಸುತ್ತಿದ್ದಾಳೆ. ಆದ್ದರಿಂದ ಇವೆಲ್ಲವುಗಳನ್ನು ಮಾಡಲು ನನ್ನ ಸಂಪನ್ಮೂಲಗಳನ್ನು ಜಾಣ್ಮೆಯಿಂದ ಬಳಸಬೇಕು. ಎಲ್ಲಾ ಕೆಲಸಗಳನ್ನು ಒಟ್ಟಿಗೆ ಕೈಗೊಳ್ಳಲು ಸಾಧ್ಯವಿಲ್ಲ.**

ಪ್ರಮೋದಾ ದೇವಿ: ಸರ್ವೇ ನಂಬರ್ 04ರ ಪ್ರಕರಣದಲ್ಲಿನ ವಿಜಯದ ನಂತರವೂ ನನಗೆ ಯಾವುದೇ ಆಸ್ತಿ ಲಭಿಸಿಲ್ಲ. ನಿಮಗೆ ಗೊತ್ತಿರುವ ಹಾಗೆ ದೇವಿಕೆರೆಯ ಕಾಮಗಾರಿ ಇತ್ತೀಚೆಗೆ ಪ್ರಾರಂಭವಾಗಿದೆ. ಆದರೆ ಬೇರೆಯವರಿಗೆ ಸೇರಿದ ಸ್ವತ್ತಿನಲ್ಲಿ ಯಾರಾದರೂ ಹೇಗೆ ಕೆಲಸ ಪ್ರಾರಂಭಿಸುತ್ತಾರೆ? ಇದು ಸರಿಯೇ? ಇದನ್ನು ನೋಡಿ ನನಗೆ ಆಘಾತವೇ ಆಯಿತು.

ನಾನು ಕೆಲ ದಿನಗಳ ಕಾಲ ಹೊರಗಡೆ, ಜೋಧ್‌ಪುರ ಮತ್ತು ದೆಹಲಿಯಲ್ಲಿ ಇದ್ದು, ನಂತರ ನಗರಕ್ಕೆ ವಾಪಸ್ಸಾದೆ. ನಿಮ್ಮ ಪತ್ರಿಕೆಯಲ್ಲಿ ನಾನು ಮೊದಲು ನೋಡಿದ್ದು ದೇವಿಕೆರೆಯ ಸಂಪೂರ್ಣ ಸುದ್ದಿ. ಅದನ್ನು ಓದಿದ ಬಳಿಕ ನನಗೆ ಆಘಾತವಾಯಿತು. ಜನಪ್ರತಿನಿಧಿಗಳು ಸರಿಯಾಗಿ ಪರಿಶೀಲಿಸದೇ ಈ ಎಲ್ಲಾ ಕೆಲಸಗಳನ್ನು ಮಾಡುತ್ತಾರೆ ಎಂಬ ಕಲ್ಪನೆಯೇ ನನಗಿರಲಿಲ್ಲ. ಕಳೆದ ಬಾರಿಯ ತೆಪ್ಪೋತ್ಸವಕ್ಕೆ ನಾನು ದೇವಿಕೆರೆಗೆ ಹೋಗಿದ್ದೆ. ಅಲ್ಲಿ ಕೈಗೊಳ್ಳಬೇಕಾದ ಯಾವ ಸುಧಾರಣಾ ಕಾರ್ಯವೂ ಇಲ್ಲ. ಅಲ್ಲಿದ್ದ ಒಂದು ಗೋಡೆಯನ್ನು ನೆಲಸಮಗೊಳಿಸಿದ್ದಾರೆ. ಅದರ ಬೆಲೆ ಎಷ್ಟಾಗಬಹುದೆಂದು ನನಗೆ ತಿಳಿದಿಲ್ಲ. ಭಗ್ನಗೊಂಡಿರುವ ಗೋಡೆಯನ್ನು ರಿಪೇರಿ ಮಾಡಿಸಲು ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ನಾನು ಈಗ ನೋಡಬೇಕು.

***ವಿಕ್ರಮ್:* ಸರಿ, ಮೈಸೂರಿನ ರಾಜವಂಶವು ಚಾಮುಂಡೇಶ್ವರಿ ದೇವಸ್ಥಾನದ ಒಡೆತನ ಹೊಂದಿದೆಯೇ?**

ಪ್ರಮೋದಾದೇವಿ: ಇಲ್ಲ. ಚಾಮುಂಡೇಶ್ವರಿದೇವಿ ದೇವಸ್ಥಾನದ ಒಡತಿಯಾಗಿದ್ದಾಳೆ. ದೇವಸ್ಥಾನದ ಧರ್ಮದರ್ಶಿ ಮಂಡಳಿಯ ವ್ಯವಸ್ಥಾಪಕ ಟ್ರಸ್ಟಿಯಾಗಿ ದೇವಸ್ಥಾನದ ನಿರ್ವಹಣೆಗೆ ಮಾತ್ರ ಆ ಹಕ್ಕು ಸೀಮಿತವಾಗಿದೆ. ಮಾಲೀಕತ್ವದ ವಿಚಾರದಲ್ಲಿ ಹೇಳುವುದಾದರೆ, ದೇವಸ್ಥಾನದ ಮಾಲೀಕತ್ವ ಆ ತಾಯಿಗೇ ಸೇರಿದೆ.

***ವಿಕ್ರಮ್:* ದೇವಿಕೆರೆಯ ಗೇಟ್‌ಗೆ ನೀವು ಈಗ ಬೀಗ ಹಾಕಿದ್ದೀರಿ...**

ಪ್ರಮೋದಾ ದೇವಿ: ದೇವಿಕೆರೆಗೆ ಆ ಗೇಟನ್ನು 30 ವರ್ಷಗಳ ಹಿಂದೆಯೇ ಅಳವಡಿಸಲಾಗಿದೆ. ಹಾಗೂ ಈ ಹಿಂದೆಯೇ ಅದಕ್ಕೆ ಬೀಗ ಹಾಕಲಾಗಿತ್ತು. ಇದನ್ನು ಹೇಳಲು ಬೇಸರವಾಗುತ್ತಿದೆ. ಪೊಲೀಸರೇ ಕೆಲವು ವರ್ಷಗಳ ಹಿಂದೆ ಬೀಗವನ್ನು ಮುರಿದರು. ನಾವು ಅದನ್ನು ಸುಮ್ಮನೆ ಹಾಗೆ ಬಿಟ್ಟಿದ್ದೆವು. ಆದರೆ, ಇತ್ತೀಚಿನ ದೇವಿಕೆರೆಯಲ್ಲಿನ ಘಟನೆ ನಂತರ, ಮತ್ತೆ ಗೇಟ್ ಅಳವಡಿಸಿ, ಬೀಗ ಹಾಕಿದೆವು.

***ವಿಕ್ರಮ್:* ಮೈಸೂರು ಸಂಸ್ಥಾನವು ಭಾರತ ಒಕ್ಕೂಟಕ್ಕೆ ಸೇರ್ಪಡೆಗೊಂಡ ಒಪ್ಪಂದದ ಪ್ರಕಾರ, ಚಾಮುಂಡಿಬೆಟ್ಟವೂ ಮೈಸೂರಿನ ರಾಜವಂಶಕ್ಕೆ ಸೇರುತ್ತದೆ. ನಾನು ಹೇಳಿದ್ದು ಸರಿಯೇ?**

ಪ್ರಮೋದಾ ದೇವಿ: ಭಾಗಶಃ ಅಷ್ಟೆ. ಅದರ ಬಗ್ಗೆ ವಿವರಗಳನ್ನು ನಾನು ಪರಿಶೀಲಿಸಬೇಕಾಗಿದೆ. ಆದರೆ ಅದರಲ್ಲಿ ಚಾಮುಂಡಿಬೆಟ್ಟದ ಉಲ್ಲೇಖವಿದೆ. ಏಕೆಂದರೆ ಲಲಿತಾದ್ರಿ ಕಾಟೇಜ್ ಬೆಟ್ಟಕ್ಕೆ ಸೇರುತ್ತದೆ. ಆದರೆ ಪ್ರಯೋಜನವೇನು? ರಾಜ್ಯ ಸರ್ಕಾರವು ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿತು. ಅಲ್ಲಿ ಅವರು ಸೋತರು. ಪುನಃ ಸುಪ್ರೀಂಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದರು. ಅಲ್ಲಿಯೂ ಸೋಲುಂಟಾಯಿತು. ಆದರೆ ಅವರಿಗೆ ಕೋರ್ಟಿನ ಆದೇಶದ ಬಗ್ಗೆ ಗೌರವವಿಲ್ಲ. ಹೋಗಲಿ, ಕೋರ್ಟಿನ ಆದೇಶವನ್ನು ಸಹ ಪಾಲಿಸಿಲ್ಲ.

***ವಿಕ್ರಮ್:* ದೇವಿಕೆರೆ ಗೇಟ್‌ಗೆ ಬೀಗ ಹಾಕುವುದಾದರೆ, ಮುಂದೆ ದೇವಸ್ಥಾನ ಹಾಗೂ ಬೆಟ್ಟಕ್ಕೂ ಪ್ರವೇಶ ನಿರ್ಬಂಧಿಸಬಹುದೆಂದು ಅನೇಕರು ಕಳವಳ ವ್ಯಕ್ತಪಡಿಸುತ್ತಿದ್ದಾರೆ?**

ಪ್ರಮೋದಾ ದೇವಿ: ನಾನು ಅಂತಹ ವ್ಯಕ್ತಿಯಲ್ಲ. ದೇವಿಯು ಎಲ್ಲಾ ವರ್ಗದ ಜನರಿಗೂ ಸೇರಿದವಳು. ಅವರು ಯಾವ ವರ್ಗ ಅಥವಾ ಎಲ್ಲಿಂದ ಬಂದವರು ಎಂಬುದು ಇಲ್ಲಿ ಪರಿಗಣನೆಗೆ ಬರುವುದಿಲ್ಲ. ಅಷ್ಟು ಮಾತ್ರ ಹೇಳಿ, ನಾನು ಯಾವುದೇ ಅವೈಜ್ಞಾನಿಕ ಅಭಿವೃದ್ಧಿಯನ್ನು ಖಂಡಿತವಾಗಿ ವಿರೋಧಿಸುತ್ತೇನೆ. ರೋಪ್ ವೇ ವಿಚಾರದಲ್ಲಿ ನಾನೂ ಪ್ರತಿಭಟಿಸಿದೆ. ಹಾಗೆಯೇ ಪ್ರತಿಯೊಬ್ಬರೂ ಪ್ರತಿಭಟಿಸಿದರು. ಅದನ್ನು ಅವರು "ಗತಿ ಶಕ್ತಿ" ಎಂಬ ಹೆಸರಿನಲ್ಲಿ ಮತ್ತೇ ತರುತ್ತಿದ್ದಾರೆ ಎಂಬ ವಿಚಾರ ಇತ್ತೀಚೆಗೆ ನನ್ನ ಕಿವಿಗೆ ಬಿತ್ತು.

***ವಿಕ್ರಮ್:* ಚಾಮುಂಡಿಬೆಟ್ಟವು ಮೈಸೂರು ರಾಜ ವಂಶದವರಿಗೆ ಸೇರಿದ್ದು ಎಂದು ಪ್ರತಿಪಾದಿಸುವಾಗ ಬೆಟ್ಟದಲ್ಲಿ ನೆಲೆಸಿರುವ ಜನರ ಗತಿಯೇನು? ಅದನ್ನು ನೀವು ಹೇಗೆ ನಿಭಾಯಿಸುತ್ತೀರಾ?**

ಪ್ರಮೋದಾದೇವಿ: ನಾನು ಪ್ರತಿಯೊಂದನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗುತ್ತದೆ. ದೇವಿಕೆರೆ ಮತ್ತು ಅದರ ಸುತ್ತಮುತ್ತಲಿನ ಅನಧಿಕೃತ ನಿರ್ಮಾಣಗಳ ಮೇಲೆ ಗಮನಹರಿಸಿದ್ದೇನೆ. ಏಕೆಂದರೆ ಕೆಲಸವನ್ನು ಪ್ರಾರಂಭಿಸುವ ಮುಂಚೆ ಸದರಿ ಭೂಮಿ ಯಾರಿಗೆ ಸೇರಿದೆ ಎಂಬುದನ್ನು ರಾಜ್ಯ ಸರ್ಕಾರ ಪರಿಶೀಲಿಸಬೇಕಾಗಿತ್ತು.

ಹಾಗೆಯೇ ಬೆಟ್ಟದ ಮೇಲೆ ಕೆಲವರು ಸಣ್ಣ ಪುಟ್ಟದಾಗಿ ಭೂಮಿ ಮಾಲೀಕತ್ವ ಹೊಂದಿದ್ದಾರೆ. ಆದ್ದರಿಂದ ಅದರ ಬಗ್ಗೆಯೂ ನಾನು ಸಮಗ್ರವಾಗಿ ಅಧ್ಯಯನ ಮಾಡಬೇಕಿದೆ. ಆದರೆ, ಈಗಲೂ ನಾನು ದೇವಸ್ಥಾನದ ವಿಚಾರದಲ್ಲಿ ಅತ್ಯಂತ ವಿಶ್ವಾಸದಿಂದ ಇದ್ದೇನೆ. ಹೇಗೂ ಪ್ರಕರಣ ಏಲೇ ಆಗಿರುವುದರಿಂದ ಆ ನಿಟ್ಟಿನಲ್ಲಿ ನಾನು ಮುಂದುವರೆಯುತ್ತಿದ್ದೇನೆ.

***ವಿಕ್ರಮ್:* ನೀವು ಲಲಿತಮಹಲ್ ಹೆಲಿಪ್ಯಾಡ್ ಅನ್ನು ಈಗ ವಶಕ್ಕೆ ತೆಗೆದುಕೊಂಡಿದ್ದೀರಾ. ಆದರೆ, ನಮ್ಮ ನಗರಕ್ಕೆ ಇರುವಂತಹ ಏಕೈಕ ಹೆಲಿಪ್ಯಾಡ್ ಇದು. ಒಂದು ವೇಳೆ ಸರ್ಕಾರವು ತಮಗೆ ಪರಿಹಾರ ನೀಡಿ, ಹೆಲಿಪ್ಯಾಡ್ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾಪ ಮುಂದಿಟ್ಟರೆ ಅದಕ್ಕೆ ನೀವು ಸಕಾರಾತ್ಮಕವಾಗಿ ಪ್ರತಿಕ್ರಿಯಿಸುವಿರಾ?**

ಪ್ರಮೋದಾ ದೇವಿ: ಹೆಲಿಕಾಪ್ಟರ್ ಸಿಬ್ಬಂದಿ ಈ ಸೌಕರ್ಯವನ್ನು ಬಳಸಿಕೊಳ್ಳಲು ನಾನು ಅವಕಾಶ ನೀಡಿದ್ದೇನೆ. ಯಾರು ಬೇಕಾದರೂ ಅನುಮತಿ ಪಡೆದು ಇಲ್ಲಿ ಹೆಲಿಕಾಪ್ಟರ್ ಭೂಸ್ಪರ್ಶ ಮಾಡಬಹುದು. ಸರ್ಕಾರವು ನನ್ನ ಒಪ್ಪಿಗೆಯನ್ನು ಪಡೆಯಲು ಆಸಕ್ತಿ ಹೊಂದಿಲ್ಲ. ಅವರಿಗಿರುವ ಅಹಂ, ನನ್ನ ಅನುಮತಿಯನ್ನು ಕೇಳಲು ಅವರನ್ನು ತಡೆಯುತ್ತಿದೆ. ಆದರೂ ನಾನು ಅವರನ್ನು ದೂಷಿಸುವುದಿಲ್ಲ. ಏಕೆಂದರೆ ಅವರು ಖಾಸಗಿ ವ್ಯಕ್ತಿಯಿಂದ ಒಪ್ಪಿಗೆಯನ್ನು ಕೇಳಲಾಗುವುದಿಲ್ಲ.

***ವಿಕ್ರಮ್:* ಒಂದು ವೇಳೆ ಹೆಲಿಪ್ಯಾಡ್ ಅನ್ನು ಅವರು ಸ್ವಾಧೀನಪಡಿಸಿಕೊಳ್ಳಬಹುದೇ?**

ಪ್ರಮೋದಾ ದೇವಿ: ಪರಿಹಾರ ನೀಡಿದ ಬಳಿಕವಷ್ಟೇ ಅವರು ಹಾಗೆ ಮಾಡಬಹುದು. ಈಗ ನಾನು ಹಾಗೆ ಒಪ್ಪಿ, ಅದಕ್ಕೆ ಅವಕಾಶ ನೀಡುವುದಿಲ್ಲ. ಏಕೆಂದರೆ, ಹೆಲಿಪ್ಯಾಡಿಗೆ ನನ್ನ ಮಾವನವರ ಹೆಸರನ್ನು ಇಟ್ಟಿದ್ದೇನೆ. ಅದನ್ನು ಈಗ "ಜಯಚಾಮರಾಜೇಂದ್ರ ಒಡೆಯರ್ ಹೆಲಿಪ್ಯಾಡ್" ಎಂಬ ಹೆಸರಲ್ಲಿ ನಡೆಸುತ್ತಿದ್ದೇನೆ. ಹೆಲಿಕಾಪ್ಟರ್‌ಗಳು ಇಲ್ಲಿ ಇಳಿಯುತ್ತಿವೆ. ಇದರ ನಿರ್ವಹಣೆಯನ್ನು ಒಬ್ಬ ವ್ಯಕ್ತಿಗೆ ವಹಿಸಿದ್ದೇವೆ. ನನಗೆ ಗೊತ್ತಿರುವ ಹಾಗೆ ಇತ್ತೀಚೆಗೆ ನಾಗರಿಕ ವಿಮಾನಯಾನ ಪ್ರಧಾನ ನಿರ್ದೇಶನಾಲಯದ ಅನುಮತಿ ಪಡೆದ ಬಳಿಕ ಆರೋಗ್ಯ ಸಚಿವರ ಹೆಲಿಕಾಪ್ಟರ್ ಇಲ್ಲಿ ಇಳಿಯಿತು.

***ವಿಕ್ರಮ್:* ಒಂದು ವೇಳೆ ಚಾಮುಂಡಿಬೆಟ್ಟವನ್ನು, ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರ ಪರಿಹಾರ ನೀಡುವ ಪ್ರಸ್ತಾಪವನ್ನು, ನಿಮ್ಮ ಮುಂದಿಟ್ಟರೆ ಅದನ್ನು ಒಪ್ಪಿಕೊಳ್ಳುವಿರಾ? ಏಕೆಂದರೆ ದೇಶ–ವಿದೇಶದ ಜನರು ಚಾಮುಂಡೇಶ್ವರಿಯ ದರ್ಶನ ಪಡೆಯಲು ಬರುತ್ತಾರೆ ಹಾಗೂ ಬೆಟ್ಟದ ವ್ಯೂ ಪಾಯಿಂಟ್‌ನಿಂದ ಮೈಸೂರಿನ ವಿಹಂಗಮ ನೋಟವನ್ನು ಕಣ್ತುಂಬಿಕೊಳ್ಳಲು ಬಯಸುತ್ತಾರೆ. ಇಲ್ಲವೆ, ಚಾಮುಂಡಿಬೆಟ್ಟ ಹಾಗೂ ಅದರ ವನಸಿರಿ ರಕ್ಷಿಸುವ ಕೆಲಸದಲ್ಲಿ ನೀವೇ ಉತ್ತಮವಾಗಿ ನಿರ್ವಹಿಸಬಹುದು ಎಂದು ಭಾವಿಸುತ್ತೀರಾ?**

ಪ್ರಮೋದಾ ದೇವಿ: ಇದು ತುಂಬಾ ಕಠಿಣವಾದ ಪ್ರಶ್ನೆ, ಉತ್ತರಿಸುವುದು ಕಷ್ಟ. ಚಾಮುಂಡಿಬೆಟ್ಟವನ್ನು ರಕ್ಷಿಸುವ ವಿಚಾರದಲ್ಲಿ ಬೇರೆಲ್ಲಾ ಯಾವ ಯಾವ ವಿಚಾರಗಳು ಅಥವಾ ವಸ್ತುಗಳು ಅಂದರೆ ಅರಣ್ಯ ಇಲಾಖೆ, ಜನ ಸಾಮಾನ್ಯರು ಇತ್ಯಾದಿ ಇವೆಯೋ ಗೊತ್ತಿಲ್ಲ. ಪ್ರತಿಯೊಂದೂ ಹಾಗೂ ಪ್ರತಿಯೊಬ್ಬರೂ ಒಳಗೊಂಡಿವೆ. ಆದರೆ ಪ್ರಕೃತಿಗೆ ವಿರುದ್ಧವಾದ, ಜನ ಹಿತಕ್ಕೆ ವಿರುದ್ಧವಾದ ಯಾವ ಕೆಲಸವನ್ನು ಸಹ ನಾನು ಮಾಡುವುದಿಲ್ಲ. ಹಾಗೆಯೇ ಜನರ ಧಾರ್ಮಿಕ ಭಾವನೆಗಳಿಗೆ ಚ್ಯುತಿ ತರುವುದಿಲ್ಲ. ಪುನಃ ಮತ್ತೆ ನಾನು ಹೇಳಬಯಸುವುದೇನೆಂದರೆ, ನಾನು ಯಾವುದೇ ರೀತಿಯ ಅವೈಜ್ಞಾನಿಕ, ವಿವೇಚನಾರಹಿತ ಬೆಳವಣಿಗೆಗಳು ನಡೆಯಲು ಅವಕಾಶ ನೀಡುವುದಿಲ್ಲ.



> **ದೇವಿಯು ಎಲ್ಲಾ ವರ್ಗದ ಜನರಿಗೂ ಸೇರಿದವಳು. ಅವರು ಯಾವ ವರ್ಗ ಅಥವಾ ಎಲ್ಲಿಂದ ಬಂದವರು ಎಂಬುದು ಪರಿಗಣನೆಗೆ ಬರುವುದಿಲ್ಲ. ಅಷ್ಟು ಮಾತ್ರ ಹೇಳಿ, ನಾನು ಯಾವುದೇ ಅವೈಜ್ಞಾನಿಕ ಅಭಿವೃದ್ಧಿಯನ್ನು ಖಡಾಖಂಡಿತವಾಗಿ ವಿರೋಧಿಸುತ್ತೇನೆ. ರೋಪ್ ವೇ ವಿಚಾರದಲ್ಲಿ ನಾನೂ ಪ್ರತಿಭಟಿಸಿದೆ. ಹಾಗೆಯೇ ಪ್ರತಿಯೊಬ್ಬರೂ ಪ್ರತಿಭಟಿಸಿದರು.**



***ವಿಕ್ರಮ್:* ಎಲ್ಲಾ ಕೇಸ್‌ಗಳು ಹಾಗೂ ಕೆಲಸ ಒಟ್ಟಿಗೆ ನಿಮ್ಮ ಮೇಲೆ ಮುಗಿಬಿದ್ದಿರುವಂತಹ ಭಾವನೆ ನಿಮಗೆ ಬಂದಿಲ್ಲವೆ?**

ಪ್ರಮೋದಾ ದೇವಿ: ನಾನು ಹೆಚ್ಚು ಹೆಚ್ಚು ಕೆಲಸಗಳನ್ನು ಕೈಗೆತ್ತಿಕೊಳ್ಳುತ್ತೇನೆ. ಏಕೆಂದರೆ ಕೆಲಸವನ್ನು ಪ್ರೀತಿಸುತ್ತೇನೆ. ಆದರೆ, ಕೆಲವು ವೇಳೆ ನಾನು ಏನೂ ಮಾಡುವುದಿಲ್ಲ, ಆತ್ಮ ವಿಮರ್ಶೆಗೆ ಸಮಯ ತೆಗೆದುಕೊಳ್ಳುತ್ತೇನೆ. ನನಗೆ ಸಾಧ್ಯವಿರುವವರೆಗೂ ನಾನು ಕೆಲಸ ಮಾಡುತ್ತಲೇ ಇರುತ್ತೇನೆ.

ಆನಂತರ, ನನ್ನ ಮಗ, ಈ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಸಾರ್ವಜನಿಕರಿಗೆ ಏನಾದರೂ ಬಿಟ್ಟು ಹೋಗಲು ಬಯಸಿದ್ದೇನೆ. ಜೊತೆಗೆ ನಮ್ಮ ಮುಂದಿನ ಪೀಳಿಗೆಗೆ ಏನನ್ನಾದರೂ ಸಂರಕ್ಷಿಸಿಟ್ಟು ಹೋಗುವ ಮನಸ್ಸಿದೆ. ಜನರು ನನಗೆ ಅದರಲ್ಲೂ ನನ್ನ ಪತಿಯವರ ನಿಧನದ ನಂತರ ಅತ್ಯಂತ ಹೆಚ್ಚಿನ ಪ್ರೀತಿಯನ್ನು ತೋರಿದ್ದಾರೆ. ಮುನ್ನಡೆಯಲು ಅದು ನನಗೆ ಪ್ರೇರಕ ಶಕ್ತಿಯಾಗಿದೆ. ಏಕೆಂದರೆ ನಾನು ಹಲವಾರು ವಿಷಯ ಮತ್ತು ವಿಚಾರಗಳನ್ನು ಇನ್ನು ಕ್ರೋಢೀಕರಿಸಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ, ಸರ್ಕಾರವು ಸಹ ಹೆಚ್ಚಾಗಿ ಸರ್ವೇ ನಂಬರ್ 4ಕ್ಕೆ ಸಂಬಂಧಿಸಿದ ವಿಚಾರದಲ್ಲಿ ಜನರನ್ನು ದಿಕ್ಕು ತಪ್ಪಿಸುತ್ತಿದೆ. 1,563 ಎಕರೆ ಭೂಮಿಯನ್ನು ಇಟ್ಟುಕೊಂಡು ನೀವು ಏನು ಮಾಡುತ್ತೀರಿ ಎಂದು ಅವರು ಕೇಳುತ್ತಾರೆ. ಅದರಲ್ಲಿ ಎಷ್ಟು ಉಳಿದಿದೆ ಎಂಬುದನ್ನು ಪರಿಶೀಲಿಸುತ್ತೇನೆ ಎಂದು ಹೇಳುತ್ತಿದ್ದೇನೆ. ಈ ವಹಿವಾಟುಗಳಲ್ಲಿ ಸಾಕಷ್ಟು ವಂಚನೆ ಮತ್ತು ಫೋರ್ಜರಿ ನಡೆದಿವೆ. ನನ್ನ ಅಭಿಪ್ರಾಯದ ಪ್ರಕಾರ, ನೀವು ಕಟ್ಟಡಗಳನ್ನು ನಿರ್ಮಿಸಬಹುದು, ಕೈಗಾರಿಕೆಗಳನ್ನು ಪ್ರಾರಂಭಿಸಬಹುದು ಹಾಗೂ ವಸ್ತುಗಳನ್ನು ಉತ್ಪಾದಿಸಬಹುದು. ಆದರೆ, ನೀವು ಭೂಮಿಯನ್ನು ಉತ್ಪಾದಿಸಲು ಸಾಧ್ಯವಿಲ್ಲ. ಹಾಗಾಗಿಯೇ, ಅದು ಅಮೂಲ್ಯವಾದದ್ದು. ಅಷ್ಟು ಹೇಳಿ, ಕುದುರೆಗಳು ಇಲ್ಲವೆ ಜಾನುವಾರುಗಳು ಸದರಿ ಭೂಮಿಯಲ್ಲಿ ಇರುವ ಬಗ್ಗೆ ನಾನು ಚಿಂತಿಸುವುದಿಲ್ಲ. ಅವುಗಳಿಗೂ ಜಾಗದ ಅವಶ್ಯಕತೆ ಇರುತ್ತದೆ.

***ವಿಕ್ರಮ್:* ಸರ್ವೇ ನಂಬರ್ 4ರಲ್ಲಿ ಬಹುತೇಕ ಜನರು ತಮ್ಮ ಭೂಮಿಯನ್ನು ಮಾರಿ ಹಣ ಮಾಡಿಕೊಳ್ಳುವ ನಿರೀಕ್ಷೆಯಲ್ಲಿದ್ದಾರೆ. ಈ ವೇಳೆ ನೀವು ಪ್ರಕೃತಿಯನ್ನು ಪ್ರೀತಿಸುವವರಾಗಿ ನಿಮ್ಮ ಸ್ವತ್ತಿನ ಬಹಳಷ್ಟು ಭಾಗವನ್ನು ನಗರ ಅರಣ್ಯೀಕರಣವಾಗಿ ಪರಿವರ್ತಿಸಿ, ಮೈಸೂರಿಗೆ ಕೊಡುಗೆ ನೀಡುವಿರಾ?**


ಪ್ರಮೋದಾ ದೇವಿ: ನನ್ನ ಸ್ವಂತಕ್ಕಾಗಿ ಭೂಮಿಯನ್ನು ಮಾರುವ ಸಂದರ್ಭದ ಹೊರತಾಗಿ, ನಾನು ಏತಕ್ಕಾಗಿ ಅಥವಾ ಯಾವ ಕಾರಣಕ್ಕಾಗಿ ನನ್ನ ಭೂಮಿಯನ್ನು ಮಾರಬೇಕು? ನಾನು ಈಗಾಗಲೇ ಹೇಳಿರುವ ಹಾಗೆ ತಾಯಿ ಚಾಮುಂಡೇಶ್ವರಿಯು ನನ್ನ ವಿಷಯದಲ್ಲಿ ತುಂಬಾ ದಯಾಮಯಳಾಗಿದ್ದಾಳೆ.

ನೆನಪುಗಳ ಪಯಣ...






ಚಾಮುಂಡಿಬೆಟ್ಟದ ಮೇಲಿನ ರಾಜೇಂದ್ರ ವಿಲಾಸ ಪ್ಯಾಲೇಸ್ ಮುಂದೆ ಮೈಸೂರು ರಾಜಮನೆತನದ ದಿವಂಗತ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪವಡಿಸಿದ್ದ 2008ರಲ್ಲಿ ತೆಗೆದ ವಿಶೇಷ ಚಿತ್ರ. ಈ ಅರಮನೆ ಪುನರುಜ್ಜೀವನಗೊಳಿಸುವುದು ಇವರ ಅತ್ಯಂತ ಪ್ರಿಯವಾದ ಯೋಜನೆ. ಅವರ ಅಕಾಲಿಕ ನಿಧನದ ಹಿನ್ನೆಲೆಯಲ್ಲಿ ಅವರ ಪತ್ನಿ ಶ್ರೀಮತಿ ಪ್ರಮೋದಾ ದೇವಿ ಒಡೆಯರ್ ತಮ್ಮ ಪತಿಯ ಅಗಲಿಕೆ ನಂತರ ಅವರ ಮಹತ್ವಾಕಾಂಕ್ಷಿ ಯೋಜನೆಗಳ ಪೂರ್ಣಗೊಳಿಸುವ ಬದ್ಧತೆಯೊಂದಿಗೆ ಮುನ್ನಡೆದಿದ್ದಾರೆ. ಅವರ ಕಾಯಕ ಪ್ರೀತಿ ಅವರ ಮಾತಿನಿಂದಲೇ ವ್ಯಕ್ತವಾಗುತ್ತದೆ.




ಪುನರ್ ನವೀಕರಣ ಕಾಮಗಾರಿ ನಡೆಯುತ್ತಿರುವ ರಾಜೇಂದ್ರ ವಿಲಾಸ್ ಪ್ಯಾಲೇಸ್ ಮುಂದೆ ಪ್ರಮೋದಾದೇವಿ ಅವರೊಂದಿಗೆ 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕ ವಿಕ್ರಮ್ ಮುತ್ತಣ್ಣ

ಚಿತ್ರಗಳು: ಲಕ್ಷ್ಮಿನಾರಾಯಣ ಯಾದವ್












ಮೈಸೂರು ಮಿತ್ರ

ಒದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು







ಒಗಟು... ಒಗಟು... ಒಗಟು...

- ಗೂಡಿನಲ್ಲಿನ ಪಕ್ಷಿ ನಾಡೆಲ್ಲ ನೋಡುತ್ತದೆ–
- ಕಾಸಿನ ಕುದುರೆಗೆ ಬಾಲದ ಲಗಾಮು
- ಎಲೆ ಇಲ್ಲ, ಸುಣ್ಣ ಇಲ್ಲ, ಬಣ್ಣವಿಲ್ಲ ತುಟಿ ಕೆಂಪಗಾಗಿದೆ, ಮಳೆಯಿಲ್ಲ , ಬೆಲೆಯಿಲ್ಲ , ಮೈ ಹಸಿರಾಗಿದೆ
- ಮನೆ, ಮನೆಗೆರಡು ಬಾಗಿಲು, ಬಾಗಿಲ ಮುಂದೆ , ಮುಚ್ಚಿದರೆ ಹಾನಿ ಇದೇನು?
- ಸುತ್ತ ಮುತ್ತ ಸುಣ್ಣದ ಗೋಡೆ, ಎತ್ತ ನೋಡಿದರೂ ಬಾಗಿಲಿಲ್ಲ ಇದು ಏನು?
- ಅಂಗಳದಲ್ಲಿ ಹುಟ್ಟುವುದು, ಅಂಗಳದಲ್ಲಿ ಬೆಳೆ0ುವುದು, ತನ್ನ ಮಕ್ಕಳ ಹಂಗಿಸಿ ಮಾತಾಡುವುದು ಇದು ಏನು?
- ಇದ್ದಲು ನುಂಗುತ್ತ , ಗದ್ದಲ ಮಾಡುತ್ತಾ, ಉದ್ದಕ್ಕೂ ಓಡುತ್ತಾ ಮುಂದಕ್ಕೆ ಸಾಗುವ ನಾನ್ಯಾರು?
- ಊಟಕ್ಕೆ ಕುಳಿತವರು ಹನ್ನೆರಡು ಜನರು, ಬಡಿಸುವವರು ಇಬ್ಬರು, ಒಬ್ಬನು ಒಬ್ಬರಿಗೆ ಬಡಿಸುವಷ್ಟರಲ್ಲಿ ಇನ್ನೊಬ್ಬನು ಹನ್ನೆರಡು ಜನಕ್ಕೂ ಬಡಿಸಿರುತ್ತಾನೆ
- ಹಸಿರು ಹಾವರಾಣಿ, ತುಂಬಿದ ತತ್ರಾಣಿ, ಹೇಳದಿದ್ದರೆ ನಿಮ್ಮ ದೇವರಾಣೆ
- ಮೊಟ್ಟೆ ಒಡೆ0ುೋ ಹಾಗಿಲ್ಲ ಕೊಡ ಮುಳುಗಿಸೋ ಹಾಗಿಲ್ಲ ಬರಿ ಕೊಡೆ ತಗೊಂಡು ಬಾರೋ ಹಾಗಿಲ್ಲ
- ಕಡಿದರೆ ಕಚ್ಚೋಕೆ ಆಗೋಲ್ಲ , ಹಿಡದ್ರೆ ಮುಟ್ಟೋಕೆ ಸಿಗೋಲ್ಲ
- ಒಂದು ರುಮಾಲು ನಮ್ಮಪ್ಪನೂ ಸುತ್ತಲಾರ.
- ಅಬ್ಬಬ್ಬ ಹಬ್ಬ ಬಂತು, ಸಿಹಿಕಹಿ ಎರಡೂ ತಂತು.
- ಹುಟ್ಟುತ್ತಲೇ ಹುಡುಗ ತಲೆ0ುಲ್ಲಿ ಟೋಪಿ ಹಾಕಿರುತ್ತೆ .
- ಸಾಗರ ಪುತ್ರ ,ಸಾರಿನ ಮಿತ್ರ
- ಸಾವಿರಾರು ಹಕ್ಕಿಗಳು, ಒಂದೇ ಬಾರಿಗೆ ನೀರಿಗಿಳಿತವೆ.
- ಗುಡುಗು, ಗುಡುಗಿದರೆ ಸಾವಿರ ನ0ುನಗಳು ಅರಳುವುದು.
- ಕಣ್ಣಿಲ್ಲ, ಕಾಲಿಲ್ಲ ,ಆದರು ಚಲಿಸುತಿದೆ 0ುಾವುದು ಎಲ್ಲಿದೆ ಬಲ್ಲಿದನ ಹೇಳಿರಲ.
- ಹಲ್ಲಿಲ್ಲದ ಹಕ್ಕಿಗೆ ಗೂಡು ತುಂಬ ಮರಿಗಳು.

21. ಮೋಟು ಗೋಡೆ ಮೇಲೆ, ದೀಪ ಉರೀತಿದೆ.

- ಹೊಂಚು ಹಾಕಿದ ದೆವ್ವ, ಬೇಡ ಬೇಡ ಎಂದರೂ ಜೊತೆ0ುೇ ಬರುತ್ತೆ.

ಸವಿ ರುಚಿ

ಕಬ್ಬಿನ ಹಾಲಿನ ಹಲ್ವ



ಬೇಕಾಗುವ ಪದಾರ್ಥಗಳು...

ಕಬ್ಬಿನ ಹಾಲು– ಅರ್ಧ ಲೀಟರ್
ಅಕ್ಕಿ– ಒಂದು ಬಟ್ಟಲು
ಏಲಕ್ಕಿ ಪುಡಿ– ಸ್ವಲ್ಪ
ತುಪ್ಪ–ಸ್ವಲ್ಪ
ಬೆಲ್ಲ–ಸ್ವಲ್ಪ

ಮಾಡುವ ವಿಧಾನ...

ಅಕ್ಕಿ0ುನ್ನು ತೊಳೆದು ಸ್ವಲ್ಪ ನೀರಿನಲ್ಲಿ 2 ಗಂಟೆ ನೆನೆಸಿಡಿ. ನಂತರ ಇದನ್ನು ಅರ್ಧದಷ್ಟು ಕಬ್ಬಿನ ರಸದ ಜೊತೆ ಸೇರಿಸಿ. ಏಲಕ್ಕಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ದಪ್ಪ ಬಾಣಲೆಗೆ ಮಿಶ್ರಣವನ್ನು ಹಾಕಿ ಉಳಿದ ಕಬ್ಬಿನ ರಸ ಸೇರಿಸಿ. ಸ್ವಲ್ಪ ಬೆಲ್ಲ ಸೇರಿಸಿ ತಳ ಬಿಡುವವರೆಗೆ ಕಾಯಿಸಿ. ಬೆಂದ ನಂತರ ತುಪ್ಪ ಸವರಿದ ಪ್ಲೇಟ್‌ಗೆ ಹಾಕಿ ಸಮನಾಗಿ ಹರಡಿಕೊಳ್ಳಿ. ತಣ್ಣಗಾದ ಮೇಲೆ ಬೇಕಾದ ಆಕಾರಕ್ಕೆ ಕತ್ತರಿಸಿದರೆ ಕಬ್ಬಿನ ಹಾಲಿನ ಹಲ್ವ ಸವಿಯಲು ಸಿದ್ಧ.

Promotional Feature

ಕೈಗಾರಿಕೆಗಳ ಅಭಿವೃದ್ಧಿಗೆ ಕೆಬಿಎಲ್ ಪಣ



ಮೈಸೂರು ಕೈಗಾರಿಕಾ ಕ್ಷೇತ್ರದ ಉನ್ನತೀಕರಣಕ್ಕೆ ಕೆ.ಬಿ.ಲಿಂಗರಾಜು ಕೊಡುಗೆ ಅಪಾರ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾಗಿ ಯಶಸ್ವಿ ಕಾರ್ಯನಿರ್ವಹಣೆ

ಕೈಗಾರಿಕಾ ಕ್ಷೇತ್ರಗಳು ದೊಡ್ಡ ಶಕ್ತಿಯಾಗಿ ಬೆಳೆದಾಗ ನಿರುದ್ಯೋಗ ಸಮಸ್ಯೆ ನಿವಾರಿಸಬಹುದು. ಆದೇ ರೀತಿ ಉದ್ದಿಮೆದಾರರಿಗೂ ಸರಕಾರ ಸಮರ್ಪಕ ಸೌಲಭ್ಯ ಕಲ್ಪಿಸಬೇಕು ಎಂದು ಪ್ರತಿಪಾದಿಸಿಕೊಂಡು ಬಂದಿರುವ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರು, ಈ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ದೇಶದ ಆಧಾರ ಸ್ಥಂಭಗಳು. ದೊಡ್ಡ ಸಂಸ್ಥೆಗಳೊಂದಿಗೆ ಸಣ್ಣ ಸಣ್ಣ ಕೈಗಾರಿಕೆಗಳು ಬೆಳೆಯಬೇಕು. ಕೈಗಾರಿಕೆಗೆ ಸಂಬಂಧಪಟ್ಟಂತೆ ಮೈಸೂರು ಅತ್ಯಂತ ಪ್ರಮುಖ ಜಿಲ್ಲೆ ಈ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ. ಎಂಬುದನ್ನು ಸರಕಾರಕ್ಕೆ ಹಾಗೂ ಸಂಬಂಧಪಟ್ಟವರ ಗಮನಕ್ಕೆ ತಂದು ಕ್ಷೇತ್ರದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಇದಲ್ಲದೆ ಮೈಸೂರಿನಲ್ಲಿ ಕೈಗಾರಿಕೆಗಳ ಬವಣೆ, ಮೂಲ ಸೌಲಭ್ಯ ಕೊರತೆ, ಬೆಳವಣಿಗೆ, ಅವಕಾಶ, ಹೊಸ ಉದ್ದಿಮೆದಾರರಿಗೆ ಸಹಕಾರ, ಮಾರ್ಗದರ್ಶನ ಸೇರಿದಂತೆ ಸಾಕಷ್ಟು ಕಾಳಜಿ ವಹಿಸಿ ಸೇವೆ ಸಲ್ಲಿಸುತ್ತಿರುವ ಕೆ.ಬಿ.ಲಿಂಗರಾಜು ಅವರು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷರಾದ ಮೇಲೆ ತಮ್ಮ ಸೇವೆಯನ್ನು ಇನ್ನಷ್ಟು ವಿಸ್ತರಿಸಿದ್ದಾರೆ.

ಕೈಗಾರಿಕೆಗಳಿಗೆ ಮೂಲ ಸೌಲಭ್ಯ, ಕೆಬಿಎಲ್ ಹೋರಾಟ ಇಂಡಸ್ಟ್ರೀಯಲ್ ಸಬರ್ಬ್, ಬನ್ನಿಮಂಟಪ, ಹೂಟಗಳ್ಳಿ, ಹೆಬ್ಬಾಳು, ಮೇಟಗಳ್ಳಿ, ಕೂರ್ಗಳ್ಳಿ, ಬೆಳಗೊಳ, ಬೆಳವಾಡಿ ಮತ್ತಿತರ ಕೈಗಾರಿಕಾ ಪ್ರದೇಶದಿಂದ ಕೋಟ್ಯಾಂತರ ರೂ. ತೆರಿಗೆ ಸಂಗ್ರಹಿಸಲಾಗುತ್ತದೆ ಆದರೆ, ಇಲ್ಲಿ ಅಭಿವೃದ್ಧಿ ಎಂಬುದು ಮರೀಚಿಕೆಯಾಗಿದೆ.

ಕನಿಷ್ಠ ಬೀದಿದೀಪ, ನೀರು, ರಸ್ತೆ, ಶೌಚಾಲಯ ಕೂಡ ಸಮರ್ಪಕವಾಗಿಲ್ಲ. ಇದು ಈಗಿನ ಸಮಸ್ಯೆಯಲ್ಲ ಹತ್ತಾರು ವರ್ಷದಿಂದ ಮುಂದುವರಿದುಕೊಂಡು ಬಂದಿದೆ. ಈಗಲಾದರೂ ಸಮಸ್ಯೆ ಬಗೆಹರಿಸಿ ಎಂದು ಸಂಬಂಧಪಟ್ಟ ಸಚಿವರು, ಶಾಸಕರು ಹಾಗೂ ಅಧಿಕಾರಿಗಳಿಗೆ ನಿರಂತರವಾಗಿ ಮನವಿ ನೀಡುತ್ತಿದ್ದಾರೆ.

ಜಿಲ್ಲೆಯಲ್ಲಿ ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರದ ಕನಸು ಎರಡು ದಶಕ ಕಳೆದರೂ ಇನ್ನೂ ಈಡೇರಿಲ್ಲ.

- 2003ರ ಗೆಜೆಟ್ ಅಧಿಸೂಚನೆಯಲ್ಲಿ ಮೈಸೂರಿಗೆ ಕೈಗಾರಿಕಾ ಪಟ್ಟಣ ಪ್ರಾಧಿಕಾರ ಘೋಷಿಸಿದ್ದರೂ ಇದುವರೆಗೂ ಕಾರ್ಯಗತವಾಗಿಲ್ಲ.
- ಎರಡು ಬಾರಿ ತೆರಿಗೆ ಪಾವತಿಸುವುದು ತಪ್ಪಿಸಿ ನಗರ ಸಭೆಗೆ ಹಾಗೂ ಕೆಐಎಡಿಬಿಗೂ ಟ್ಯಾಕ್ಸ್ ಕಟ್ಟಬೇಕಾಗಿದೆ. ಇದನ್ನುತಪ್ಪಿಸಿ ಒಬ್ಬರಿಗೆ ಮಾತ್ರ ತೆರಿಗೆ ಕಟ್ಟುವಂತಾಗಲಿ. ಈ ಸಮಸ್ಯೆಗಳ ಪರಿಹಾರಕ್ಕೆ ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರವಾದರೆ ಉದ್ದಿಮೆಗಳೇ ಇದರ ನಿರ್ವಹಣೆ ಮಾಡಿಕೊಳ್ಳುತ್ತಾರೆ.

ಕೆ.ಬಿ.ಲಿಂಗರಾಜು ಪರಿಚಯ

ಕೆ.ಬಿ.ಲಿಂಗರಾಜು ಅವರು. ಎಂ.ಎ.ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದ್ದು, ಜೆ.ಡಿ.ಸಿಯನ್ನು ಮೈಸೂರು ಸಹಕಾರ ಯೂನಿಯನ್‌ನಲ್ಲಿ ಪಡೆದಿದ್ದಾರೆ.

ಲಿಂಗರಾಜು ಅವರು ಪ್ರಸ್ತುತ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ರಾಜಕೀಯ ಹಾಗೂ ಕೃಷಿ ಹಿನ್ನೆಲೆಯಲ್ಲಿ ಹುಟ್ಟಿದ್ದು, ತಂದೆ ಬೈರಪ್ಪ ಹಾಗೂ ತಾಯಿ ಲಕ್ಷ್ಮಮ್ಮ ಕಿರಣ್ ಇಂಡಸ್ಟ್ರೀಸ್ ಹೆಸರಿನಲ್ಲಿ ಮುಳ್ಳು ತಂತಿ ಹಾಗೂ ಚೈನ್ ಲಿಂಕ್ ತಯಾರಿಕಾ ಘಟಕವನ್ನು ಮುನ್ನಡೆಸುತ್ತಿದ್ದಾರೆ. ಸುಮಾರು 15 ವರ್ಷ ಗಳಿಂದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇವರು ಬೆಂಗಳೂರಿನ ಕಾಸಿಯಾ ಹಾಗೂ ಎಫ್.ಕೆ.ಸಿ.ಸಿ.ಐ.ನ ಸದಸ್ಯರು. ಇವರು ಕೆಐಎಡಿಬಿ ಏರಿಯಾ ತಯಾರಕರ ಸಂಘದ ಕಾರ್ಯ ದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ಕೆ.ಬಿ.ಲಿಂಗರಾಜು ಅವರು 2022-23ರ ಎಫ್ ಕೆಸಿಸಿಐ ಬೆಂಗಳೂರು ಹಾಗೂ ಕಾಸಿಯಾ ಬೆಂಗಳೂರುನ ಕಾರ್ಯ ಕಾರಿ ಸಮಿತಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಭಾರತ ಸೇವಾ ದಳದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಈಗ ಜಿಲ್ಲಾ ಸಮಿತಿ ಸದಸ್ಯರಾಗಿದ್ದಾರೆ. ಕುಂಬಾರಕೊಪ್ಪಲು ಯುವಕರ ಸಂಘದ ಅಧ್ಯಕ್ಷರು, ಕೃಷಿಕ ಸಮಾಜ ಮೈಸೂರು ತಾಲೂಕು, ಅಖಿಲ ಕರ್ನಾಟಕ ಮತದಾರರವೇದಿಕೆ ಗೌರವ ರಾಜ್ಯಾಧ್ಯಕ್ಷರು, ಕೆ.ಪುಟ್ಟಸ್ವಾಮಿ ಪ್ರತಿಷ್ಠಾನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕುಂಬಾರಕೊಪ್ಪಲು ಹೈಯರ್ ಪ್ರೈಮರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಗೌರವ ಅಧ್ಯಕ್ಷರು ಹಾಗೂ ಹೆಬ್ಬಾಳು ಫೌಂಡೇಶನ್ ಸಾಮಾಜಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

- ವಿಶ್ವೇಶ್ವರನಗರ, ಬನ್ನಿಮಂಟಪ ಎ ಮತ್ತು ಬಿ ಬಡಾವಣೆ ಸೇರಿದಂತೆ ದಕ್ಷಿಣ ಕೈಗಾರಿಕಾ ಪ್ರದೇಶದ ಮೂಲ ಅಗತ್ಯತೆ ಪೂರೈಕೆಗಾಗಿ ಕನಿಷ್ಠ 50 ಕೋಟಿ ರೂ. ಮೀಸಲಿಡಬೇಕು. ಈ ಹಣದಲ್ಲಿ ರಸ್ತೆ, ಚರಂಡಿ ಹಾಗೂ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಬೇಕು.

ಮೈಸೂರಿನಲ್ಲಿ ಮೂರು ಕೈಗಾರಿಕಾ ಕ್ಲಸ್ಟರ್‌ಗಳು ಸ್ಥಾಪನೆಯಾಗಬೇಕು. ಇದಕ್ಕೆ ಕೇಂದ್ರ ಸರಕಾರ ಹಣ ನೀಡಲು ಸಿದ್ಧವಿದ್ದು, ರಾಜ್ಯ ಸರಕಾರ ನಿವೇಶನ ನೀಡಲು ಮೀನಾಮೇಷ ಎಣಿಸುತ್ತಿದೆ.

- ಕೈಗಾರಿಕಾ ಕಾರ್ಮಿಕರಿಗೆ ಕೇಂದ್ರ ಸರಕಾರದ ಯೋಜನೆಗಳನ್ನು ಬಳಸಿ ಕೊಂಡು ಕೈಗಾರಿಕಾ ಪ್ರದೇಶದಲ್ಲೇ ವಸತಿ ಸೌಲಭ್ಯ ಕಲ್ಪಿಸಬೇಕು.

ಇದಕ್ಕೂ ಕೇಂದ್ರ ಸರಕಾರ ಹಣ ನೀಡುತ್ತದೆ. ರಾಜ್ಯ ಸರಕಾರ ಇದಕ್ಕೆ ಸೂಕ್ತ ಕ್ರಮ ಕೈಗೊಂಡು ಕಾರ್ಮಿಕ ಇಲಾಖೆ ಮೂಲಕ ಕಾರ್ಯಗತಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸರಕಾರ ಪ್ರೋತ್ಸಾಹಿಸಿದರೆ ಇನ್ನಷ್ಟು ಅಭಿವೃದ್ಧಿ:


ಮೈಸೂರಿನಲ್ಲಿ ಪ್ಯಾಕೇಂಜಿಂಗ್ ಇಂಡಸ್ಟ್ರೀ ಅದ್ಭುತವಾಗಿ ನಡೆಯುತ್ತಿದ್ದು, ಬಾಕ್ಸ್, ವೈರ್, ಟೈರ್ ಫ್ಯಾಕ್ಟರಿ, ಅಲ್ಲದೆ ಎಂಜಿನಿಯರಿಂಗ್ ಕ್ಷೇತ್ರವೂ ಅದ್ಭುತವಾಗಿದೆ. ಹೆಬ್ಬಾಳು, ಮೇಟಗಳ್ಳಿ, ಯಾದಗಿರಿ, ಕೂರ್ಗಳ್ಳಿ, ಹೂಟಗಳ್ಳಿಗಳಲ್ಲಿ ಇದಕ್ಕೆ ಸಂಬಂಧಪಟ್ಟ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ದೊಡ್ಡದೊಡ್ಡ ಸಂಸ್ಥೆಗಳಿಗೆ ಸಣ್ಣ ಹಾಗೂ ಮಧ್ಯಮ ಕಾರ್ಖಾನೆಗಳು ಸಾಕಷ್ಟು ಉತ್ಪನ್ನಗಳು ಪೂರೈಸುತ್ತಿದೆ. ಅದೇ ರೀತಿ ಹುಣಸೂರು, ಎಚ್.ಡಿ.ಕೋಟೆ, ನಂಜನಗೂಡು, ಕೊಳ್ಳೇಗಾಲ, ತಿ.ನರಸೀಪುರ ಸೇರಿದಂತೆ ಸಾಕಷ್ಟು ಕಡೆಯಿಂದ ಮಹಿಳೆ ಯರು ಮೈಸೂರು ಕೈಗಾರಿಕಾ ಪ್ರದೇಶಕ್ಕೆ ಉದ್ಯೋಗ ಅರಸಿ ನಿತ್ಯ ಬರುತ್ತಾರೆ. ಆದರೆ, ತಾಲ್ಲೂಕು ಮಟ್ಟದಲ್ಲೇ ಕೈಗಾರಿಕೆಗಳು ಉದ್ಭವಿಸಿದರೆ ಅವರು ಇಲ್ಲಿವರೆಗೂ ಬರುವುದು ತಪ್ಪುತ್ತದೆ ಜತೆಗೆ ಸ್ಥಳೀಯವಾಗಿ ಕೆಲಸ ದೊರೆಯುತ್ತದೆ ಎಂಬುದನ್ನು ಲಿಂಗರಾಜು ಅವರು ಪ್ರತಿಪಾದಿಸಿದ್ದಾರೆ.

ಬ್ಯಾಂಕ್‌ಗಳಿಂದ ತೊಂದರೆ ತಪ್ಪಿಸಿ


ಕೈಗಾರಿಕೆಗಳಿಗೆ ಬ್ಯಾಂಕ್‌ಗಳು ಸಾಕಷ್ಟು ತೊಂದರೆ ಕೊಡುತ್ತಿವೆ. ಕೊರೊನಾ ಸಂದರ್ಭದಲ್ಲಿ ಬಹುತೇಕ ಕೈಗಾರಿಕೆಗಳು ಸಮಸ್ಯೆಗೆ ಸಿಲುಕಿದ್ದರೂ ಕಷ್ಟಪಟ್ಟು ಮುಂದುವರಿಸಿಕೊಂಡು ಹೋಗಲಾಗುತ್ತಿದ್ದು, ಕಾರ್ಮಿಕರಿಗೂ ವೇತನ ನೀಡಲಾಗಿದೆ. ಆದರೆ, ಸಾಲ ನೀಡಿದ ಬ್ಯಾಂಕ್‌ಗಳು ಮಾತ್ರ ಸಮಯಾವಕಾಶ ನೀಡದೆ ರಿನಿವಲ್‌ಕೂಡ ಮಾಡುತ್ತಿಲ್ಲ, ಹಾಗಾಗಿ 'ಓಡಿ' ಕೂಡ ನೀಡುತ್ತಿಲ್ಲ ಕಾರ್ಖಾನೆಗೆ ಸಂಬಂಧಪಟ್ಟ ದಾಖಲೆಗಳು ಕೂಡ ದೊರೆಯುತ್ತಿಲ್ಲ. ಲೀಡ್ ಬ್ಯಾಂಕ್ ನವರಿಗೆ ಸಮಸ್ಯೆ ಬಗ್ಗೆ ತಿಳಿಸಲಾಗಿದೆ.

ಉದ್ದಿಮೆದಾರರಿಗೆ ಜಾಗ ನೀಡಿ

2013ರಿಂದ ಉದ್ದಿಮೆ ದಾರರಿಗೆ ಜಾಗ ದೊರೆಯುತ್ತಿಲ್ಲ ಎಂದು ಕೆಐಎಡಿಬಿಗೆ ಪತ್ರ ಬರೆಯಲಾಗಿದೆ. ಈ ಕುರಿತು ಈಗಿನ ಜಿಲ್ಲಾಧಿಕಾರಿ ರಾಜೇಂದ್ರ ಅವರಿಗೆ ಮನವಿ ಮಾಡಿದ್ದರು, ಅವರು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಅದರಲ್ಲೂ ಈಗ ಬೆಂಗಳೂರು–ಮೈಸೂರು ದಶಪಥ ಕಾಮಗಾರಿಯಾದ ಬಳಿಕ ಒಂದೂವರೆ ಗಂಟೆಯಲ್ಲಿ ಮೈಸೂರು ತಲುಪಬಹುದಾಗಿದೆ. ಹೀಗಾಗಿ ಬೆಂಗಳೂರಿನಿಂದ ಮೆಟಿರಿಯಲ್ ತರುವುದು ಇಂದು ದೊಡ್ಡ ಸಮಸ್ಯೆಯಾಗಿಲ್ಲ. ಜತೆಗೆ ವಿಮಾನ ಸೇವೆ, ಡಬಲ್ ಟ್ರ್ಯಾಕ್‌ನೊಂದಿಗೆ ಉತ್ತಮ ರೈಲು ಸಂಪರ್ಕ ಚೆನ್ನಾಗಿರುವುದರಿಂದ ಕೈಗಾರಿಕೆ ಅಭಿವೃದ್ಧಿಗೆ ಸಹಕಾರಿಯಾಗಿದೆ. ಆದರೆ, ಅಧಿಕಾರಿಗಳು ಇಚ್ಛಾಶಕ್ತಿಯಿಂದ ಕಾರ್ಯನಿರ್ವಹಿಸಬೇಕು. ಬರೀ ಲ್ಯಾಂಡ್ ಕೊಟ್ಟರೆ ಆಯ್ತು ಎಂಬ ಮನೋಭಾವ ಬಿಟ್ಟು ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.



ಕರ್ನಾಟಕದ ಏಳು ಆಸಕ್ತಿದಾಯಕ ಸಂಗತಿಗಳು



ದಕ್ಷಿಣ ಭಾರತದ ದೊಡ್ಡ ರಾಜ್ಯವಾದ ಕರ್ನಾಟಕ ಯಾವುದೇ ಅಚ್ಚರಿಗೂ ಕಡಿಮೆ ಇಲ್ಲ. ಹಳೆಯ ಸಂಸ್ಕೃತಿ ಸಂಪ್ರದಾಯ ಮತ್ತು ಪರಂಪರೆಗೆ ಜನಪ್ರಿಯವಾಗಿರುವ ಭಾರತದ ಕೆಲವು ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಐಟಿ ಹಬ್, ಶ್ರೀಗಂಧದ ಕಾಡುಗಳು, ಹಳೆಯ ಸ್ಮಾರಕಗಳು, ಪೂಜ್ಯ ಯಾತ್ರಾ ಸ್ಥಳಗಳು, ಅಸಂಖ್ಯಾತ ನೈಸರ್ಗಿಕ ಸ್ಥಳಗಳಿಗೆ ನೆಲೆಯಾಗಿರುವ ಕರ್ನಾಟಕ ಪ್ರತಿಯೊಂದು ಪ್ರವಾಸಕ್ಕೂ ಸಂಪೂರ್ಣ ಪ್ಯಾಕೇಜ್ ಆಗಿದೆ.

1. ಕಾಫಿಯ ಅತಿದೊಡ್ಡ ರಫ್ತುದಾರ: ಕರ್ನಾಟಕವು ದೇಶದ ಅತಿ ದೊಡ್ಡ ಕಾಫಿ ರಫ್ತುದಾರ ರಾಜ್ಯವಾಗಿದೆ. ಹಲವಾರು ಶತಮಾನಗಳ ಹಿಂದೆ, ಭಾರತದಲ್ಲಿ ಮೊದಲ ಬಾರಿಗೆ ಕರ್ನಾಟಕದ ಚಿಕ್ಕಮಗಳೂರಿನಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿತ್ತು. ಅಂದಿನಿಂದ ಕರ್ನಾಟಕದಲ್ಲಿ ಕಾಫಿ ತೋಟಗಳು ಸಾಮಾನ್ಯವಾಗಿದೆ. ಕರ್ನಾಟಕವು ಕಾಫಿಯನ್ನು ಅತಿದೊಡ್ಡ ರಫ್ತು ಮಾಡುವವರಷ್ಟೇ ಅಲ್ಲ, ಅತಿದೊಡ್ಡ ಗ್ರಾಹಕರಲ್ಲೂ ಒಂದಾಗಿದೆ. ಹೀಗಾಗಿ ಕಾಫಿ "ಕರ್ನಾಟಕ ರಾಜ್ಯ ಪಾನೀಯ" ಎಂದು ಹೇಳಬಹುದು.

2. ಹೆಚ್ಚಿನ ಸಂಖ್ಯೆಯ ಹುಲಿಗಳ ತಾಣ: ಕರ್ನಾಟಕವು ಅತಿಹೆಚ್ಚು ಅಭಯಾರಣ್ಯ ಮತ್ತು ರಾಷ್ಟ್ರೀಯ ಉದ್ಯಾನವನಗಳಿಗೆ ನೆಲೆಯಾಗಿದೆ. ಕರ್ನಾಟಕದಲ್ಲಿ ಹರಡಿರುವ ಪಶ್ಚಿಮ ಘಟ್ಟಗಳು ಭಾರತದ ಅತ್ಯಂತ ಜೀವ ವೈವಿಧ್ಯ ತಾಣಗಳಲ್ಲಿ ಒಂದಾಗಿದೆ ಆದ್ದರಿಂದ ಇದು ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹುಲಿಗಳನ್ನು ಉಳಿಸಿಕೊಳ್ಳುವುದರಲ್ಲಿ ಕರ್ನಾಟಕ ಯಶಸ್ವಿಯಾಗಿದೆ.

3. ಮೊದಲ ಖಾಸಗಿ ರೇಡಿಯೋ ಸ್ಟೇಷನ್: ಭಾರತದಲ್ಲಿ ಮೊದಲ ಖಾಸಗಿ ರೇಡಿಯೋ ಸ್ಟೇಷನ್ ಸ್ಥಾಪಿಸಿದ ರಾಜ್ಯ ಕರ್ನಾಟಕವಾಗಿದೆ. 2001ರಲ್ಲಿ ರೇಡಿಯೋ ಸಿಟಿ 91.1 ಎಫ್‌ಎಂ ಅನ್ನು ಮೊದಲ ಬಾರಿಗೆ ಬೆಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಇಂದು ಈ ರಾಷ್ಟ್ರೀಯ ಚಾನೆಲ್ ದೇಶಾದ್ಯಂತ ತನ್ನದೇ ಆದ 50ಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದೆ. ಇದು ನಿಜಕ್ಕೂ ಒಂದು ಸಾಧನೆ.

4. ಮೈಸೂರು ಅರಮನೆ: ಮೈಸೂರು ನಗರದ ಹೃದಯ ಭಾಗದಲ್ಲಿ ಮತ್ತು ವಿಶ್ವದ ಅತ್ಯಂತ ಜನಪ್ರಿಯ ರಾಜಪ್ರಭುತ್ವದ ಕಟ್ಟಡಗಳಲ್ಲಿ ಒಂದಾದ ಮೈಸೂರು ಅರಮನೆಯನ್ನು 19ನೇ ಶತಮಾನದಲ್ಲಿ ನಿರ್ಮಿಸಲಾಗಿತ್ತು. ಅಂದಿನಿಂದ ಇದು ಜಗತ್ತಿನಾದ್ಯಂತ ಪ್ರವಾಸಿಗರಿಗೆ ಪ್ರಮುಖ ಆಕರ್ಷಣೆಯಾಗಿದೆ. ಭಾರತದ ಬೇರೆಡೆ ನೀವು ಈ ರೀತಿಯ ಡಿಲಕ್ಸ್ ಅರಮನೆಯನ್ನು ಕಾಣಲು ಸಾಧ್ಯವಿಲ್ಲ. ಹೀಗಾಗಿ ರಾಜಪ್ರಭುತ್ವದ ಸೌಂದರ್ಯವನ್ನು ಕರ್ನಾಟಕದ ಹೆಮ್ಮೆ ಎಂದು ಕರೆಯುತ್ತಾರೆ.

5. ಭಾರತದ ರಾಷ್ಟ್ರಧ್ವಜಗಳನ್ನು ತಯಾರಿಸಲು ಅನುಮತಿ ಹೊಂದಿರುವ ಏಕೈಕ ರಾಜ್ಯ: ಭಾರತದ ರಾಷ್ಟ್ರಧ್ವಜಗಳು ಎಲ್ಲಿಂದ ಬರುತ್ತದೆ ಎಂದು ಯೋಚಿಸಿದ್ದೀರಾ? ಭಾರತದ ರಾಷ್ಟ್ರಧ್ವಜಗಳನ್ನು ತಯಾರಿಸುವ ಅನುಮತಿಯನ್ನು ಕರ್ನಾಟಕ ಪಡೆದುಕೊಂಡಿದೆ. ಧಾರವಾಡ ಜಿಲ್ಲೆಯ ಬೆಂಗೇರಿಯಲ್ಲಿರುವ "ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಸಂಯುಕ್ತ ಸಂಘವು" ಭಾರತದ ರಾಷ್ಟ್ರಧ್ವಜಗಳನ್ನು ಉತ್ಪಾದಿಸುವ ಅಧಿಕಾರ ಹೊಂದಿರುವ ಘಟಕವಾಗಿದೆ. ಈ ಘಟಕವನ್ನು 1950ರ ದಶಕದಲ್ಲಿ ಗಾಂಧಿಯರ ಗುಂಪು ಸ್ಥಾಪಿಸಿತ್ತು. ಇಂದು ಇದು ದೇಶಾದ್ಯಂತ ಧ್ವಜಗಳನ್ನು ಪೂರೈಸುತ್ತಿದೆ

6. ಭಾರತದಲ್ಲಿ ರಾಕೆಟ್ ಫಿರಂಗಿಗಳನ್ನು ತಯಾರಿಸಿದ ಮೊದಲ ರಾಜ್ಯ: ಮೈಸೂರು ಸಾಮ್ರಾಜ್ಯದ ಅತ್ಯಂತ ಶಕ್ತಿಶಾಲಿ ಆಡಳಿತಗಾರ ಟಿಪ್ಪು ಸುಲ್ತಾನ್, ರಾಕೆಟ್ ಫಿರಂಗಿಗಳನ್ನು ತಯಾರಿಸಿದ ಭಾರತದ ಮೊಟ್ಟ ಮೊದಲ ವ್ಯಕ್ತಿಯಾಗಿದ್ದಾರೆ. ಬ್ರಿಟಿಷ್ ಸೈನ್ಯದ ಮೇಲೆ ಆಕ್ರಮಣ ಮಾಡಲು ಮತ್ತು ತನ್ನ ರಾಜ್ಯದ ಸ್ವಾತಂತ್ರ್ಯವನ್ನು ಕಾಪಾಡಲು ಟಿಪ್ಪು ಸುಲ್ತಾನ್ ಫಿರಂಗಿಯನ್ನು ತಯಾರಿಸಿದ್ದರು.

7. ಐದು ನದಿಗಳ ಭೂಮಿ–ಬಿಜಾಪುರ: ಬಿಜಾಪುರವು ಐದು ನದಿಗಳ ಭೂಮಿಯಾಗಿದೆ. ಪ್ರಾಚೀನ ಪಟ್ಟಣಗಳ ಮೂಲಕ ಹರಿಯುವ ಪ್ರಮುಖ ನದಿಗಳಲ್ಲಿ ಡೋಣಿ ನದಿ, ಭೀಮಾ ನದಿ, ಕೃಷ್ಣ ನದಿ ಮತ್ತು ಸಿನಾ ನದಿ ಸೇರಿವೆ. ಕರ್ನಾಟಕದ ಖ್ಯಾತಿಯನ್ನು ಹೆಚ್ಚಿಸುವ ಬಿಜಾಪುರದ ಮತ್ತೊಂದು ಸಂಗತಿಯೆಂದರೆ ಬಿಜಾಪುರದ ಗೋಲ್ ಗುಮ್ಬಜ್. ಇದು ದೇಶದ ಅತಿ ದೊಡ್ಡ ಗುಮ್ಮಟವಾಗಿದ್ದು, ವಿಶ್ವದ ಎರಡನೇ ಅತಿದೊಡ್ಡ ಗುಮ್ಮಟವಿದೆ.


44 ನೇ
ವರ್ಷದ ಸಂಭ್ರಮ
ಕನ್ನಡ ನಾಡಿನ ಹೆಮ್ಮೆಯ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮೈಸೂರು ಮಿತ್ರ
ಚಿರಕಾಲ ಹೀಗೆ ಮಾಧ್ಯಮ
ಲೋಕದಲ್ಲಿ ಸೇವೆ ನೀಡುತ್ತಿರಲಿ
ಮೈಸೂರು ಮಿತ್ರ
44
ಎ.ಹೆಚ್.ವಿಶ್ವನಾಥ್
ವಿಧಾನ ಪರಿಷತ್ ಸದಸ್ಯರು
ಪೂರ್ವಜ್ ವಿಶ್ವನಾಥ್
ಕಾಂಗ್ರೆಸ್ ಮುಖಂಡರು


ಮೈಸೂರು ಮಿತ್ರ
44
44
ನೇ ವಸಂತಕ್ಕೆ ಕಾಲಿಡುತ್ತಿರುವ
ನಮ್ಮ 'ಮೈಸೂರು ಮಿತ್ರ' ಪತ್ರಿಕೆಗೆ
ವಾರ್ಷಿಕೋತ್ಸವದ
ಶುಭಾಶಯಗಳು
ಮಾವಿನಹಳ್ಳಿ ಎಸ್.ಸಿದ್ದೇಗೌಡ
ಕಾಂಗ್ರೆಸ್ ಅಭ್ಯರ್ಥಿ
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಪ್ರಕಟಣೆ: ಬಸವರಾಜು
ಎಪಿಎಂಸಿ ಮಾಜಿ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಮುಖಂಡರು

Make your child a Global Citizen!

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್

NSE **Nypunya** School of Excellence

A Premier CBSE & ICSE School

Dattagalli & R.T. Nagar - Mysuru

INTERNATIONAL STEMFIT AWARD WINNER
Charles Darwin University Australia



Mr. Raghu R
Chairman



Dr. Gururaj Karajagi
Academic Adviser

Pre KG to Class-10

FREE Books and Uniform



0821-2340041, 91080 02966, 99010 72527

ಆಮ್ ಆದ್ಮಿ ಪಾರ್ಟಿ

AAM AADMI PARTY



ಅರವಿಂದ್ ಕೇಜ್ರಿವಾಲ್
ಗೌರವಾನ್ವಿತ ಮುಖ್ಯಮಂತ್ರಿಗಳು, ದೆಹಲಿ

44TH ANNIVERSARY

ನಮ್ಮ ಮಿತ್ರ....
ಮೈಸೂರು ಮಿತ್ರ
ಪತ್ರಿಕಾ ಮಾಧ್ಯಮದಲ್ಲಿ
ಸದಾ ಹೀಗೆ ಬೆಳೆಯುತ್ತಿರಲಿ....



ಶ್ರೀಮತಿ ಧರ್ಮಶ್ರೀ
ಎಂಎಲ್‌ಎ ಅಭ್ಯರ್ಥಿ
ಆಮ್ ಆದ್ಮಿ ಪಕ್ಷ
ನರಸಿಂಹರಾಜ ವಿಧಾನಸಭಾ ಕ್ಷೇತ್ರ
ಮೈಸೂರು

GC's SPORTS MEDICINE CENTER & MULTISPECIALITY HOSPITAL



Dr. Girish Chandra R
MBBS, MS (TR & ORTHO)
MRCS (London), D. Ortho., Msc
Sports & Exercise Medicine-UK
Orthopaedic, Arthroscopic and
Sports Medicine Surgeon

Welcome to GC's Sports Medicine Center and Multispeciality Hospital. GC's Hospital is a 50 bedded multispecialty, tertiary care Hospital located at Vishweshwaranagar Industrial Suburb, Mysore. It has been set up to offer qualitative care to all its patients and enjoy the comforts of home while experiencing the safety and security of a hospital setting during your stay. Our team of caring experienced dedicated and highly qualified professionals will treat you like family while providing high-quality services. We are equipped with all modern facilities to deal with whatever condition the patient might be afflicted with, it doesn't matter how common or even how simple and complex the condition might be we cover them all. All clinical facilities of the hospital are supported by 24x7 services.

Dr. Girish Chandra R
He is specialized in Arthroscopy surgeries. He does Arthroscopic proceduces to knee, ligament injuries like ACL, PCL, MCL etc., Cartilage Defects, Shoulder-labral repairs, Recurrent, Dislocation of shoulder, Rotators cuff repairs, Ankle ligament injuries, Wrist ligament injuries etc. Knee replacement, Hip replacement, Elbow replacement, Shoulder & Reverse Shoulder replacement, Spine Surgery & all Sports related injuries.

ROTATOR CUFF TEAR

Shoulder pain is caused by:

- Overuse or injury of nearby tendons, such as the bicep muscles of the arms
- Broken shoulder bone
- Arthritis in the shoulder joint
- Dislocation of the shoulder
- Rotator cuff tear
- Adhesive per capsulitis
- Bursitis, which is inflammation of a fluid-filled sac (bursa) that normally protects the joint and helps it move smoothly
- Poor shoulder posture and mechanics
- Bone spurs in the shoulder area
- Nerve injury that leads to abnormal shoulder movement
- Sometimes, shoulder pain may be due to a problem in another area of the body, such as the neck or lungs. This is called referred pain. There is usually pain at rest and no worsening of pain when moving the shoulder.

Most often Shoulder pain are under treated because its been wrongly said frozen shoulder and treated for many months to years without improvement.

Any shoulder pain first need to be diagnosed properly and then if it treated in proper way can yield good results and cure the disease.

To do this you need to consult a doctor, clinically examined, and diagnosed radiologically either by X ray or Ultrasound scan or MRI scan.

The shoulder pain is

- Be described as a dull ache deep in the shoulder
- Disturb sleep
- Make it difficult to comb your hair or reach behind your back
- Be accompanied by arm weakness

RISK FACTORS FOR SHOULDER PAIN

- Age - The risk of a rotator cuff injury increases with age. Rotator cuff tears are most common in people older than 60.
- Some occupations- Jobs that require repetitive overhead arm motions, such as carpentry or house painting, can damage the rotator cuff over time.
- Sports - Some types of rotator cuff injuries are more common in people who participate in sports like baseball, tennis and weight-lifting.
- Family history - There of shoulder pains are common

- **Treatment**
- Conservative treatments — such as rest, ice pack and physical therapy — sometimes are all that's needed to recover from a rotator cuff injury. If your injury is severe, you might need surgery.
- **Therapy**
- Physical therapy is usually one of the first treatments suggested. Exercises tailored to the specific location of your rotator cuff injury can help restore flexibility and strength to your shoulder. Physical therapy is also an important part of the recovery process after rotator cuff surgery.
- **Injections**
- A steroid injection into the shoulder joint might be helpful, especially if the pain is interfering with sleep, daily activities or physical therapy. While such shots often provide temporarily relief, they also can weaken the tendon and reduce the success of future shoulder surgery.

SURGERY

Arthroscopic rotator cuff repair

Many different types of surgeries are available for rotator cuff injuries, including:

- **Arthroscopic tendon repair:** In this procedure, surgeons insert a tiny camera (arthroscope) and tools through small incisions to reattach the torn tendon to the bone. The arthroscopic procedure gives excellent results in all types of tears. In arthroscopic repair suture anchors are used. The rehabilitation, however, may be quicker if the procedure is done arthroscopically
- **Open tendon repair :** In some situations, an open tendon repair may be a better option. In these types of surgeries, your surgeon works through a larger incision to reattach the damaged tendon to the bone.
- **Tendon transfer:** If the torn tendon is too damaged to be reattached to the arm bone, surgeons may decide to use a nearby tendon as a replacement.
- **Shoulder replacement:** Massive rotator cuff injuries may require shoulder replacement surgery. To improve the artificial joint's stability, an innovative procedure (reverse shoulder arthroplasty) installs the ball part of the artificial joint onto the shoulder blade and the socket part onto the arm bone.
- **Shoulder rehabilitation:** Length of program: This shoulder conditioning program should be continued for 4 to 6 weeks, unless otherwise specified by your doctor or physical therapist. After your recovery, these exercises can be continued as a maintenance program for lifelong protection and health of your shoulders. Performing the exercises 2 to 3 days a week will maintain strength and range of motion in your shoulders.

ALL SPECIALITIES UNDER ONE ROOF

- 24x7 Trauma Care & Emergency
- ICU / MICU / NICU
- Orthopaedics & Sports Medicine
- Spine Surgery & Joint Replacement
- Emergency Medicine
- General Medicine
- Obstetrics & Gynaecology
- Pediatrics
- Gen. Surgery
- Urology
- Gastroenterology
- Neuro Surgery
- Neurology
- Dermatology & Cosmetology Surgery
- Plastic & Reconstructive Surgery
- Endoscopy and Colonoscopy
- Vascular Surgery
- Physiotherapy
- Digital X-Ray
- C T Scan
- Hi-Tec Laboratory
- Ultrasound & Doppler
- Cardiology (ECG, ECHO)
- Health Packages

HOME COLLECTION AVAILABLE
LAB FACILITIES AT YOUR DOOR STEP

24x7 SERVICES



GC's SPORTS MEDICINE CENTER & MULTISPECIALITY HOSPITAL

30/1, Near St. Thomas School, Vishweshwaranagar, Mysuru-08.

Ph: 0821-2480000 / 2 / 3 / 4 / 4000108 / 94498 24260 / 96119 75757

ಮಹಿಳಾ ಸ್ನೇಹಿ ಸಖಿ ಪಿಂಕ್ ಮತಗಟ್ಟೆ

●ಮೈಸೂರು ಜಿಲ್ಲೆಯಲ್ಲಿ ಒಟ್ಟು 55 ಮತಗಟ್ಟೆಗಳಿಗೆ ಗುಲಾಬಿ ಸ್ಪರ್ಶ ●ಜಿಲ್ಲೆಯ 11 ಕ್ಷೇತ್ರಗಳಲ್ಲಿ ತಲಾ 5 ಪಿಂಕ್ ಮತಗಟ್ಟೆ



●ಎಂ.ಬಿ.ಪವನ್‌ಮೂರ್ತಿ
ಮೊ.9738845134

ಮಹಿಳಾ ಸ್ನೇಹಿ ವಾತಾವರಣದೊಂದಿಗೆ ವಿಶೇಷವಾಗಿ ಸಜ್ಜುಗೊಳಿಸಿ ಮಹಿಳಾ ಸಮುದಾಯದ ಮತದಾನ ಪ್ರಮಾಣ ಹೆಚ್ಚಿಸುವ ಸದುದ್ದೇಶದ ಪರಿಕಲ್ಪನೆಯೇ ಸಖಿ ಪಿಂಕ್ ಮತಗಟ್ಟೆ. ಹೌದು, ಭಾರತ ಚುನಾವಣಾ ಆಯೋಗದ ಈ ವಿಶಿಷ್ಟ ಪರಿಕಲ್ಪನೆಯು ಹಲವು ಚುನಾವಣೆಯಲ್ಲಿ ಜಾರಿಗೊಳ್ಳುವ ಮೂಲಕ ಮಹಿಳೆಯರ ಮತದಾನಕ್ಕೆ ಉತ್ತೇಜನ ದೊರೆತಿದೆ.

ಚುನಾವಣೆಯನ್ನು ನಮ್ಮಲ್ಲಿ ಪ್ರಜಾಪ್ರಭುತ್ವದ ಹಬ್ಬ ಎಂದೇ ಬಣ್ಣಿಸಲಾಗುತ್ತದೆ. ಇದೀಗ ಕರ್ನಾಟಕ ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ದಿನಗಣನೆ ಆರಂಭವಾಗಿದ್ದು, ಇಡೀ ರಾಜ್ಯದಲ್ಲಿ ಚುನಾವಣಾ ಚಟುವಟಿಕೆಗಳು ಭರದಿಂದ ಸಾಗಿವೆ. ಅದೇ ರೀತಿ ಮೈಸೂರು ಜಿಲ್ಲೆಯಲ್ಲಿಯೂ ಮತದಾರ ಪ್ರಭುಗಳು ತಮ್ಮ ಹಕ್ಕು ಚಲಾಯಿಸುವ ಮತಗಟ್ಟೆಗಳನ್ನು ಸಜ್ಜುಗೊಳಿಸುವ ಪೂರ್ವ ಸಿದ್ಧತೆ ನಡೆದಿದೆ.

ಅದರಲ್ಲಿ ಮಹಿಳಾ ಸಮುದಾಯದ ಮುಕ್ತ ಮತದಾನಕ್ಕೆ ಉತ್ತೇಜನ ನೀಡಲು ಪಿಂಕ್ ಮತಗಟ್ಟೆಗಳನ್ನು ಸಜ್ಜುಗೊಳಿಸಲು ಈಗಾಗಲೇ ಜಿಲ್ಲೆಯ 11 ಕ್ಷೇತ್ರಗಳಲ್ಲಿ ಪ್ರತಿ ಕ್ಷೇತ್ರಕ್ಕೆ ಐದರಂತೆ 55 ಮತಗಟ್ಟೆಗಳಿಗೆ ಗುಲಾಬಿ ಸ್ಪರ್ಶ ನೀಡಲು ಮತಗಟ್ಟೆಗಳನ್ನು ಗುರುತಿಸಲಾಗಿದೆ. ಈ ಮತಗಟ್ಟೆಗಳಿಗೆ ನೀಡುವ ಸ್ವರೂಪ ವಿಶಿಷ್ಟ ಮತ್ತು ಆಕರ್ಷಕವಾಗಿರುತ್ತದೆ. ಈ ಮತಗಟ್ಟೆಗಳಲ್ಲಿ ಪ್ರೀಸೈಡಿಂಗ್ ಆಫೀಸರ್ (ಪಿಆರ್‌ಓ), ಅಸಿಸ್ಟೆಂಟ್ ಪ್ರಿಸೈಡಿಂಗ್ ಆಫೀಸರ್ (ಎಪಿಆರ್‌ಓ), ಪೋಲಿಂಗ್ ಆಫೀಸರ್ (ಪಿಓ) ಸೇರಿದಂತೆ ಎಲ್ಲಾ ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಮಹಿಳೆಯರೇ ಆಗಿರುತ್ತಾರೆ.

ವಿಶೇಷವಾಗಿ ಮತಗಟ್ಟೆ ಪಿಂಕ್ ಬಣ್ಣದೊಂದಿಗೆ ಕಂಗೊಳಿಸಲಿದ್ದು, ಪಿಂಕ್ ಬಣ್ಣದ ಸ್ವಾಗತ ಕಮಾನು ಸೇರಿದಂತೆ ಕಣ್ಮನ ಸೆಳೆಯುವಂತೆ ಪಿಂಕ್ ಮತಗಟ್ಟೆ ಸಿಂಗಾರಗೊಳ್ಳಲಿವೆ. ಆ ಮೂಲಕ ಮಹಿಳೆಯರು ಭಯ, ಒತ್ತಡವಿಲ್ಲದೆ ಮತಗಟ್ಟೆಗೆ ಬಂದು ಮತ ಚಲಾಯಿಸಲು ಅನುಕೂಲ ಆಗುವಂತೆ ಮಹಿಳಾ ಸ್ನೇಹಿ ವಾತಾವರಣ ಕಲ್ಪಿಸಲಾಗುತ್ತದೆ. ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಶೃಂಗಾರದಲ್ಲಿ ಒಂದಿಷ್ಟು ವ್ಯತ್ಯಾಸ ಆಗುವುದನ್ನು ಬಿಟ್ಟರೆ ಎಲ್ಲಾ 55 ಮತಗಟ್ಟೆಗಳಲ್ಲಿ ಪಿಂಕ್ ಬಣ್ಣ ಪ್ರಧಾನವಾಗಿ ಕಂಡು ಬರಲಿದೆ.

ಮಹಿಳಾ ಮತದಾರರಿಗೆ ವಿಶೇಷ ಆದ್ಯತೆ ನೀಡುವ ಈ ಮತಗಟ್ಟೆಗಳು ಮಹಿಳೆಯರಿಗೆ ಮಾತ್ರ ಸೀಮಿತವಲ್ಲ. ಆ ಮತಗಟ್ಟೆಯಲ್ಲಿ ಹೆಸರಿರುವ ಎಲ್ಲರೂ ಅಲ್ಲಿಯೇ ಮತದಾನ ಮಾಡಬೇಕು. ಅಂದರೆ ಪುರುಷರಿಗೂ ಇಲ್ಲಿ ಮತದಾನ ಮಾಡಲು ಅವಕಾಶ ಇದ್ದೇ ಇರುತ್ತದೆ.

ಪಿಂಕ್ ಸ್ಪರ್ಶ ನೀಡಲು ಗುರುತಿಸಿರುವ ಮತಗಟ್ಟೆಗಳು: ಕೃಷ್ಣರಾಜ ಕ್ಷೇತ್ರದಲ್ಲಿ ಶಾರದಾವಿಲಾಸ ಕಾಲೇಜು (ಮತಗಟ್ಟೆ ಸಂಖ್ಯೆ 123), ದೇವಯ್ಯನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (209), ವಿಶ್ವೇಶ್ವರನಗರ ಮಹರ್ಷಿ ಪಬ್ಲಿಕ್ ಸ್ಕೂಲ್ (15), ಜೆಪಿ ನಗರ ಜೆಎಸ್‌ಎಸ್ ಸೆಂಟ್ರಲ್ ಸ್ಕೂಲ್ (222), ಲಕ್ಷ್ಮೀಪುರಂ ಜೆಎಸ್‌ಎಸ್ ಹೈಸ್ಕೂಲ್ (127), **ಚಾಮರಾಜ ಕ್ಷೇತ್ರದಲ್ಲಿ** ಕುಂಬಾರಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (62/ರೂಂ ನಂ.2), ಕೈಲಾಸಪುರಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (194), ಮಂಜುನಾಥಪುರ ಎಕ್ಸ್ ಎಂಜಿನಿಯರ್ ಆಫೀಸ್ (106), ಮಂಚೇಗೌಡನಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (18), ಕುಂಬಾರಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (61/ರೂಂ ನಂ.1) ಮತಗಟ್ಟೆಗಳನ್ನು ಪಿಂಕ್ ಸ್ಪರ್ಶ ನೀಡಲು ಗುರುತಿಸಲಾಗಿದೆ.

ಅಂತೆಯೇ **ಎನ್‌ಆರ್ ಕ್ಷೇತ್ರದಲ್ಲಿ** ಶ್ರೀಕಂಠೇಶ್ವರ ವಿದ್ಯಾಸಂಸ್ಥೆ (171), ಗೌಸಿಯಾನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (180), ಉದಯಗಿರಿಯ ಸುಲ್ತಾನ ಶಾಹಿದ್ ಟೆಕ್ನಿಕಲ್ ಸ್ಕೂಲ್ (229), ರಾಜೇಂದ್ರ ನಗರ ಕುರಿಮಂಡಿ ಸಮುದಾಯ ಭವನ (46), ಗಾಯಿತ್ರಿಪುರಂ ಲೀಡ್ಸ್ ಕೇಂದ್ರೀಯ ವಿದ್ಯಾಲಯ ಸ್ಕೂಲ್ (152), **ಚಾಮುಂಡೇಶ್ವರಿ ಕ್ಷೇತ್ರದಲ್ಲಿ** ಚಾಮುಂಡಿಬೆಟ್ಟದ ಗ್ರಾಪಂ ಕಚೇರಿ (237), ಇಲವಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (33), ರಟ್ಟನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (18), ಬೆಳವಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (96), ಬೋಗಾದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (148), **ವರುಣಾ ಕ್ಷೇತ್ರದಲ್ಲಿ** ಕುಪ್ಪರವಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (199), ಹೊಸ ಕೋಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (146), ಪಿಲ್ಲಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (58), ಹಳೇಕೆಂಪಯ್ಯನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (68), ಸುತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (192) ಮತಗಟ್ಟೆಗಳಿಗೆ ಪಿಂಕ್ ಸ್ಪರ್ಶ ನೀಡಲಾಗುತ್ತಿದೆ.

ತಿ.ನರಸೀಪುರ ಕ್ಷೇತ್ರದಲ್ಲಿ ಬನ್ನೂರು ಲಯನ್ಸ್ ಇಂಗ್ಲಿಷ್ ಸ್ಕೂಲ್ (49), ಹನುಮನಾಳು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (30), ಮೂಗೂರು ಸರ್ಕಾರಿ ಪಿಯು ಕಾಲೇಜು (226), ತಲಕಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (202), ಹೊಸ ಹೆಮ್ಮಿಗೆ (181), **ನಂಜನಗೂಡು ಕ್ಷೇತ್ರದಲ್ಲಿ** ಹಲ್ಲರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (208), ಶಿರಮಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (105), ಕುರಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (176), ಕುಸುವಿನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (205), ನೇರಳೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (184), **ಹೆಚ್‌ಡಿ ಕೋಟೆ ಕ್ಷೇತ್ರದಲ್ಲಿ** ಹುಣಸೆಕೊಪ್ಪ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (165), ಮಾದಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (89), ಹೆಚ್‌ಡಿ ಕೋಟೆ ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (106), ಸರಗೂರು ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆ (194), ಹಳೆಯೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (242), **ಹುಣಸೂರು ಕ್ಷೇತ್ರದಲ್ಲಿ** ಹುಣಸೂರು ಪಟ್ಟಣದ ಬಾಲಕರ ಸರ್ಕಾರಿ ಪಿಯು ಕಾಲೇಜು (110), ಹುಣಸೂರು ಪಟ್ಟಣದ ಮಹಿಳೆಯರ ಸರ್ಕಾರಿ ಕಾಲೇಜು (117), ಮನುಗನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (80), ಬನ್ನಿಕುಪ್ಪೆ ಗ್ರಾಪಂ ಕಚೇರಿ (149), ಉಂಡವಾಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (35).

ಕೃಷ್ಣರಾಜನಗರ ಕ್ಷೇತ್ರದಲ್ಲಿ ಹೊಸ ಅಗ್ರಹಾರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (63), ಬ್ಯಾಡರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (223), ಸಾಲಿಗ್ರಾಮ ಪ್ರಥಮ ದರ್ಜೆ ಕಾಲೇಜು (74), ಚಂದಗಾಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (149), ಹಂಪಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (145), **ಪಿರಿಯಾಪಟ್ಟಣ ಕ್ಷೇತ್ರದಲ್ಲಿ** ಬೆಟ್ಟದಪುರ ಸರ್ಕಾರಿ ಪ್ರೌಢಶಾಲೆ (40), ಕಿತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (49), ಆಲನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (159), ರಾವಂದೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (94), ಕಣಗಾಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (2) ಮತಗಟ್ಟೆಗಳಿಗೆ ಪಿಂಕ್ ಸ್ಪರ್ಶ ನೀಡಲು ಗುರುತಿಸಲಾಗಿದೆ.

> "ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಆಯ್ದ ಮತಗಟ್ಟೆಗಳನ್ನು ಸಖಿ ಪಿಂಕ್ ಮತಗಟ್ಟೆಗಳಾಗಿ ರೂಪಿಸಲಾಗುತ್ತಿದೆ. ಮತದಾನದ ಶೇಕಡವಾರು ಪ್ರಮಾಣ ಹೆಚ್ಚಿಸುವುದು ಇದರ ಉದ್ದೇಶ. ಇಂತಹ ಮತಗಟ್ಟೆಗಳಲ್ಲಿ ಪ್ರಧಾನವಾಗಿ ಪಿಂಕ್ (ಗುಲಾಬಿ) ಬಣ್ಣ ಕಂಗೊಳಿಸಲಿದೆ. ಮತಗಟ್ಟೆ ಅಧಿಕಾರಿಗಳು ಸೇರಿದಂತೆ ಸಾಮಾನ್ಯವಾಗಿ ಇಲ್ಲಿ ಕಾರ್ಯನಿರ್ವಹಿಸುವ ಎಲ್ಲರೂ ಮಹಿಳೆಯರೇ ಆಗಿರುತ್ತಾರೆ. ಇದೇ ಮಾದರಿಯಲ್ಲಿ ವಿಶೇಷಚೇತನರ ಮತಗಟ್ಟೆ, ಯುವ ಮತದಾರರ ಮತಗಟ್ಟೆ, ವಿಷಯಾಧಾರಿತ ಮತಗಟ್ಟೆ, ಎಥ್ನಿಕ್ ಮತಗಟ್ಟೆಗಳಾಗಿಯೂ ಆಯ್ದ ಮತಗಟ್ಟೆಗಳಿಗೆ ವಿಶೇಷ ವಿನ್ಯಾಸ ಮಾಡಲಾಗುವುದು. ಅವುಗಳಲ್ಲಿ ಸಖಿ ಮತಗಟ್ಟೆ ಹೆಚ್ಚಿನ ಸಂಖ್ಯೆಯಲ್ಲಿ ಇರಲಿವೆ.
>
> -ಕೆ.ಎಂ.ಗಾಯಿತ್ರಿ, ಸಿಇಓ, ಮೈಸೂರು ಜಿಲ್ಲಾ ಪಂಚಾಯಿತಿ ಮತ್ತು ಅಧ್ಯಕ್ಷರು ಮೈಸೂರು ಜಿಲ್ಲಾ ಸ್ವೀಪ್ ಸಮಿತಿ






ಮತ 'ದಾನ' ಮಾಡದೆ, 'ಮಾರಾಟಕ್ಕಿಟ್ಟ' ಮತದಾರ



"1947 ರಿಂದ 1972ರವರೆಗೂ ತತ್ವ-ನಿಷ್ಠೆಗೆ ಬದ್ಧವಾಗಿ ಅಧಿಕಾರ ನಡೆಸಿದ ರಾಜಕಾರಣಿಗಳಿದ್ದರು. ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟ ವ್ಯವಸ್ಥೆಗೆ ಸೇರಿಸುವ "ಇನ್‌ಸ್ಟುಮೆಂಟ್ ಆಫ್ ಆಕ್ಸೆಷನ್" ದಾಖಲೆಗೆ ಕ್ರಿ.ಶ.1947ರ ಅಕ್ಟೋಬರ್.13ರಂದು ಸಹಿ ಮಾಡಿದ ಮೈಸೂರು ಮಹಾರಾಜ ಜಯಚಾಮ ರಾಜೇಂದ್ರ ಒಡೆಯರ್, ಕ್ರಿ.ಶ.1947ರ ಅಕ್ಟೋಬರ್.24ರ ವಿಜಯದಶಮಿ ದಿನದಂದು ತಮ್ಮ ಅಧಿಕೃತ ಅಂಬಾ ವಿಲಾಸ ಅರಮನೆಯ ದರ್ಬಾರ್ ಹಾಲ್ ನಲ್ಲಿ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ ಕೋಲಾರ ಜಿಲ್ಲೆ ಬಂಗಾರಪೇಟೆ ತಾಲೂಕಿನ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ ಅವರಿಗೆ ಪ್ರಮಾಣ ವಚನ ಬೋಧಿಸಿದರು.


ಹೆಚ್.ಸಿ. ದಾಸಪ್ಪ



ಕೆ.ಸಿ. ರೆಡ್ಡಿ


ಕೆ.ವಿ. ಶಂಕರೇಗೌಡ


ಕೆಂಗಲ್ ಹನುಮಂತಯ್ಯ


ನಿಜಲಿಂಗಪ್ಪ


ಹೆಚ್.ಕೆ. ವೀರಣ್ಣಗೌಡ



ಬೊಮ್ಮೇಗೌಡ


ಎಸ್.ಎಂ. ಕೃಷ್ಣ


ಡಿ. ದೇವರಾಜ ಅರಸು


ರಾಮಕೃಷ್ಣ ಹೆಗಡೆ

ಎಸ್.ಪ್ರಕಾಶ್ ಬಾಬು
ಮೊ: 98444-63930
Email: abumay26@gmail.com



ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಕಾಲ ಕಳೆದಂತೆ ಕೆಟ್ಟು ಹೋಗುತ್ತಿದೆ. ಕೆಟ್ಟವರೇ ಚುನಾವಣಾ ಕಣದಲ್ಲಿ ವಿಜೃಂಭಿಸುತ್ತಿರುವುದರಿಂದ ದೇಶದಲ್ಲಿ ಭ್ರಷ್ಟಾಚಾರ-ಸ್ವಜನ ಪಕ್ಷಪಾತ ಮೇರೆ ಮೀರುತ್ತಿದೆ. ಯಾವ ಸದುದ್ದೇಶದಿಂದ ಮಹಾತ್ಮ ಗಾಂಧೀಜಿಯಂಥವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರೋ, ಆ ಉದ್ದೇಶ ಹಾಳಾಗಿದೆ. ಸಮಾನತೆಯ ಹಕ್ಕು ಕಾಯ್ದಿರಿಸಿ ಸಂವಿಧಾನ ರಚಿಸಿಕೊಟ್ಟ ಡಾ.ಬಿ.ಆರ್. ಅಂಬೇಡ್ಕರ್‌ರಂಥವರ ಆಸೆ ಮಣ್ಣುಪಾಲಾಗುತ್ತಿದೆ. ಬ್ರಿಟಿಷರಿಂದ 76 ವರ್ಷಗಳ ಹಿಂದೆ ಪಡೆದ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಂಡಿದ್ದೇವೆಯೇ ಎಂಬ ಬಗ್ಗೆ ಯೋಚಿಸಿದರೂ ನಮಗೆ ನಿರಾಸೆಯಾಗುತ್ತದೆ. ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ ಎಂದು ಕರೆಸಿಕೊಳ್ಳೊ ಭಾರತದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಇದಕ್ಕೆಲ್ಲಾ ಕಾರಣ ನಮ್ಮ ಜನರಲ್ಲಿರುವ ಮಂಕುತನ. ಮತದಾನದ ಮಹತ್ವವನ್ನೇ ಅರಿಯದವರ ಕೈಗೆ ಪ್ರಜಾಪ್ರಭುತ್ವ ವ್ಯವಸ್ಥೆ ಕೊಟ್ಟರೆ ಯಾವ ರೀತಿ ದೇಶ ಹಾಳಾ ಗುತ್ತದೆ ಎಂಬುದಕ್ಕೆ ಇಂದಿನ ಭಾರತದ ಒಕ್ಕೂಟ ವ್ಯವಸ್ಥೆಯೇ ಸಾಕ್ಷಿ.

ಕರ್ನಾಟಕ ರಾಜ್ಯದಲ್ಲಿ ಈವರೆಗೆ 15 ವಿಧಾನಸಭಾ ಚುನಾವಣೆ ನಡೆದಿದೆ. ಈಗ ನಡೆಯುತ್ತಿರುವುದು 16ನೇ ವಿಧಾನಸಭಾ ಚುನಾವಣೆ. ಈಗಾಗಲೇ 23 ಮುಖ್ಯಮಂತ್ರಿಗಳು ಆಡಳಿತ ನಡೆಸಿದ್ದಾರೆ. ಸ್ವಾತಂತ್ರ್ಯಾನಂತರದ 75 ವರ್ಷಗಳನ್ನು 25 ವರ್ಷಗಳಂತೆ ಮೂರು ಭಾಗ ಮಾಡಿ ಕರ್ನಾಟಕ ರಾಜಕೀಯವನ್ನು ಅವಲೋಕಿಸಿ ನೋಡುವುದಾದರೆ 1947 ರಿಂದ 1972 ರವರೆಗೂ ಇದ್ದ ಮೊದಲ 25 ವರ್ಷ ತತ್ವ ನಿಷ್ಠಾ ರಾಜಕಾರಣಿಗಳಿದ್ದ ಅವಧಿ. 1972-1999 ಭ್ರಷ್ಟಾಚಾರ ಭುಗಿಲೆದ್ದ ಅವಧಿ. 1999-2023 ರವರೆಗೂ ಭ್ರಷ್ಟಾಚಾರದ ಪರಾಕಾಷ್ಠೆ ತಲುಪಿದ ಅವಧಿ. ಮೊದಲ ಎರಡು ಅವಧಿಯಲ್ಲಿ ರಾಜಕಾರಣಿಗಳಲ್ಲಷ್ಟೆ ಭ್ರಷ್ಟರು ಕಂಡು ಬರುತ್ತಿದ್ದರು. 1999ರ ನಂತರ ಮತದಾರರರೇ ಕಡು ಭ್ರಷ್ಟರಾದ ದುರಂತ ಕಾಣಿಸಿಕೊಳ್ಳತೊಡಗಿತು. 1947ರಿಂದ 1972ರ ಅವಧಿಯಲ್ಲಿ ಜನರೇ ಅಭ್ಯರ್ಥಿಗಳಿಗೆ ಚುನಾವಣಾ ಖರ್ಚಿಗೆ ಹಣ ಚಂದಾ ಎತ್ತಿ ಕೊಡುತ್ತಿದ್ದರು. 1972-1999ರವರೆಗೆ ಅಭ್ಯರ್ಥಿಗಳೇ ಚುನಾವಣಾ ವೆಚ್ಚ ಭರಿಸಬೇಕಾಯಿತು. ಆದರೆ 1999ರ ನಂತರ ಅಭ್ಯರ್ಥಿಗಳು ಚುನಾವಣಾ ಪ್ರಚಾರದ ವೆಚ್ಚ ಭರಿಸುವುದಲ್ಲದೆ, ಮತದಾರರಿಗೂ ಲಂಚ ನೀಡಿ ಮತ ಗಿಟ್ಟಿಸುವ ಕುತಂತ್ರಗಾರಿಕೆ ವ್ಯಾಪಕವಾಯಿತು. ಇದರಿಂದ ಪ್ರಸ್ತುತ ರಾಜಕೀಯ ವ್ಯವಸ್ಥೆ ಹಣವುಳ್ಳವರಿಗೆ ಮಾತ್ರ ಅನ್ವುವಂತಾಗಿದೆ. ಪ್ರಮುಖ ರಾಜಕೀಯ ಪಕ್ಷಗಳೂ, ಜಾತಿ-ಹಣ ನೋಡಿಯೇ ಪಕ್ಷದ ಟಿಕೆಟ್ ನೀಡುವ ದುರಂತ ಪರಿಸ್ಥಿತಿ ನಿರ್ಮಾಣವಾಗಿದೆ.

ತತ್ವ-ನಿಷ್ಠ ರಾಜಕಾರಣಿಗಳಿದ್ದ ಅವಧಿ 1947-72

1947 ರಿಂದ 1972ರವರೆಗೂ ತತ್ವ-ನಿಷ್ಠೆಗೆ ಬದ್ಧವಾಗಿ ಅಧಿಕಾರ ನಡೆಸಿದ ರಾಜಕಾರಣಿಗಳಿದ್ದರು. ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟ ವ್ಯವಸ್ಥೆಗೆ ಸೇರಿಸುವ "ಇನ್‌ಸ್ಟುಮೆಂಟ್ ಆಫ್ ಆಕ್ಸೆಷನ್" ದಾಖಲೆಗೆ ಕ್ರಿ.ಶ.1947ರ ಅಕ್ಟೋಬರ್.13ರಂದು ಸಹಿ ಮಾಡಿದ ಮೈಸೂರು ಮಹಾರಾಜ ಜಯಚಾಮ ರಾಜೇಂದ್ರ ಒಡೆಯರ್, ಕ್ರಿ.ಶ.1947ರ ಅಕ್ಟೋಬರ್.24ರ ವಿಜಯದಶಮಿ ದಿನದಂದು ತಮ್ಮ ಅಧಿಕೃತ ಅಂಬಾ ವಿಲಾಸ ಅರಮನೆಯ ದರ್ಬಾರ್ ಹಾಲ್ ನಲ್ಲಿ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ ಕೋಲಾರ ಜಿಲ್ಲೆ ಬಂಗಾರಪೇಟೆ ತಾಲೂಕಿನ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಅಂದು ಕೆ.ಸಿ.ರೆಡ್ಡಿ ಸಂಪುಟದಲ್ಲಿ ಹಣಕಾಸು ಮತ್ತು ಕೈಗಾರಿಕಾ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಎಚ್.ಸಿ.ದಾಸಪ್ಪನವರಿಗೆ ಅಂದು ಮುಖ್ಯಮಂತ್ರಿಯಾಗುವ ಎಲ್ಲಾ ಅರ್ಹತೆ ಇತ್ತು. 1938ರಲ್ಲೇ ವಿಧುರಾಶ್ವಥದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದ ಎಚ್.ಸಿ.ದಾಸಪ್ಪನವರಿಗೆ ಗಾಂಧೀಜಿ, ನೆಹರು, ವಲ್ಲಭ ಬಾಯಿ ಪಟೇಲ್ ಸೇರಿದಂತೆ ರಾಷ್ಟ್ರೀಯ ಕಾಂಗ್ರೆಸ್ ನಾಯಕರೆಲ್ಲರ ಬೆಂಬಲವಿತ್ತು. ಆದರೆ ಅಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು ಮುಖ್ಯಮಂತ್ರಿಯಾಗಲೆಂದು ದಾಸಪ್ಪನವರು ಘೋಷಿಸಿ, ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿಯಾಗಲು ಸಹಕರಿಸಿದರು. ಕೆಪಿಸಿಸಿ ಅಧ್ಯಕ್ಷರೇ ಮುಖ್ಯಮಂತ್ರಿಯಾಗುವ ಸಂಪ್ರದಾಯ ಕಾಂಗ್ರೆಸ್ ಪಕ್ಷದಲ್ಲಿ ಇದುವರೆಗೂ ಮುಂದುವರೆದುಕೊಂಡು ಬಂದಿದೆ. ತತ್ವ-ನಿಷ್ಠೆಗೆ ಹೆಸರಾದ ರಾಜಕಾರಣಿಗಳಲ್ಲಿ ಮಂಡ್ಯದ ಕೆ.ವಿ.ಶಂಕರೇಗೌಡರನ್ನು ಇಲ್ಲಿ ಹೆಸರಿಸಲೇ ಬೇಕು. ಕ್ರಿ.ಶ.1952ರ ಮಾರ್ಚ್ 26ರಂದು ನಡೆದ ಮೊದಲ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ನಗರದಿಂದ ಕೆ.ವಿ.ಶಂಕರೇಗೌಡರು ಆಯ್ಕೆಯಾಗಿದ್ದರು. ಮಂಡ್ಯದಲ್ಲಿ ಚುನಾವಣೆಗೆ ನಿಲ್ಲುವಂತೆ ಹುರಿದುಂಬಿಸಿ ಅವರಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದವರು ಕೆಂಗಲ್ ಹನುಮಂತಯ್ಯನವರು. ಆದರೆ, ಕೆ.ವಿ.ಶಂಕರೇಗೌಡರು ಯಾವತ್ತೂ ವ್ಯಕ್ತಿ ನಿಷ್ಠರಾಗಿರಲಿಲ್ಲ. ಪಕ್ಷ ನಿಷ್ಠರೂ ಆಗಿರಲಿಲ್ಲ. ಜನ ನಿಷ್ಠರಾಗಿದ್ದರು. ಕೆಟ್ಟದ್ದು ಕಂಡರೆ, ತಾವು ಕಾಂಗ್ರೆಸ್ ಆಡಳಿತ ಪಕ್ಷದ ಸದಸ್ಯ ಎಂಬುದನ್ನು ನೋಡದೆ ಸರ್ಕಾರದ ವಿರುದ್ಧ ಕಿಡಿಕಾರುತ್ತಿದ್ದರು. ಹೀಗಿರುವಾಗ, 1954ರ ಮಾರ್ಚ್ ತಿಂಗಳ ವಿಧಾನಸಭೆ ಅಧಿವೇಶನದಲ್ಲಿ ರಾಜ್ಯ ಭೂ ಕಂದಾಯದ ಬಗ್ಗೆ ಚರ್ಚೆ ನಡೆಯುತ್ತಿರುತ್ತದೆ. ಈ ಸಂದರ್ಭದಲ್ಲಿ ಕೆ.ವಿ.ಶಂಕರೇಗೌಡರು ಭಾವೋದ್ವೇಗದಿಂದ ಮಾತನಾಡುತ್ತಾ "ರೈತರ ಸಂಕಷ್ಟ ಅರಿಯದೆ ಭೂ ಕಂದಾಯ ಏರಿಸುವುದಾಗಲೀ, ಬಲವಂತವಾಗಿ ವಸೂಲಿ ಮಾಡುವುದಾಗಲೀ ಮಾಡಬಾರದು" ಅಂತ ಏರಿದ ಧ್ವನಿಯಲ್ಲಿ ಮಾತನಾಡುವಾಗ ಭಾವಾವೇಶದಲ್ಲಿ "ರೈತರಿಗೆ ಅನುಕೂಲ ಮಾಡಿಕೊಡಲು ಸಾಧ್ಯವಿಲ್ಲ ಎಂದಾದರೆ, ಕುರ್ಚಿಯಿಂದ ಕೆಳಗಿಳಿದು ನನಗೆ ವಹಿಸಿ, ಕ್ಷಣಾರ್ಧದಲ್ಲಿ ರೈತರ ಸಮಸ್ಯೆ ಬಗೆಹರಿಸುತ್ತೇನೆ" ಎಂದು ಅಬ್ಬರಿಸುತ್ತಾರೆ. ಇದು ವಿರೋಧ ಪಕ್ಷಗಳ ಮೆಚ್ಚುಗೆಗೆ ಪಾತ್ರವಾಗಿ, ಅವರೆಲ್ಲ ಮೇಜುಕುಟ್ಟಿ ಸ್ವಾಗತಿಸುತ್ತಾರೆ. ಇದರಿಂದ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಸದನದಲ್ಲಿ ಮುಜುಗರ ಅನುಭವಿಸಿದರೆ, ಕೆಂಗಲ್ ಹನುಮಂತಯ್ಯನವರ ವಿರೋಧಿ ಎಚ್.ಕೆ. ವೀರಣ್ಣಗೌಡರಿಗೆ ಆನಂದವಾಗುತ್ತದೆ. ಇದೇ ಅವಕಾಶವನ್ನು ಬಳಸಿಕೊಂಡ ಎಚ್.ಕೆ.ವೀರಣ್ಣಗೌಡರು ಸದನದಲ್ಲಿ ಕೆ.ವಿ.ಶಂಕರೇಗೌಡರ ವಿರುದ್ಧ ವಾಗ್ದಾಳಿ ನಡೆಸಿ ಅಪಮಾನಿಸುತ್ತಾರೆ. ಮನನೊಂದ ಕೆ.ವಿ.ಶಂಕರೇಗೌಡರು ಹಿಂದೆ-ಮುಂದೆ ಯೋಚಿಸದೆ, ತಕ್ಷಣವೇ ತಮ್ಮ ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡಿ ಹೊರಬರುತ್ತಾರೆ. ಈ ಕಠಿಣ ನಿರ್ಧಾರದಿಂದ ಕೆ.ವಿ.ಶಂಕರೇಗೌಡರು ಮತ್ತೆಂದೂ ವಿಧಾನಸಭಾ ಸದಸ್ಯರಾಗಲಿಲ್ಲ. 1966 ರಲ್ಲಿ ಸ್ಥಳೀಯ ಸಂಸ್ಥೆಗಳ ಸದಸ್ಯರಿಂದ ನಡೆವ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿ ನಿಜಲಿಂಗಪ್ಪ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿ ಉತ್ತಮ ಕೆಲಸ ಮಾಡಿದರು. 1984ರ ಲೋಕಸಭಾ ಚುನಾವಣೆಯಲ್ಲಿ ಜನತಾಪಕ್ಷದಿಂದ ಸ್ಪರ್ಧಿಸಿ, ಕಾಂಗ್ರೆಸ್‌ನ ಎಸ್.ಎಂ.ಕೃಷ್ಣ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದರು.

ಕೆ.ವಿ.ಶಂಕರೇಗೌಡರು 1954ರ ಮಾರ್ಚ್ ತಿಂಗಳಿನಲ್ಲಿ ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡಿದ ನಂತರ, ಅದೇ ವರ್ಷ ನಡೆದ ಮಂಡ್ಯ ಉಪ ಚುನಾವಣೆಯಲ್ಲಿ ತಮ್ಮ ಆಪ್ತಮಿತ್ರ ಗಾಣದಾಳು ಜಿ.ಎಸ್.ಬೊಮ್ಮೇಗೌಡ (1994ರಲ್ಲಿ ಕೆರಗೋಡು ಕ್ಷೇತ್ರದಿಂದ ಜನತಾದಳ ಶಾಸಕರಾಗಿದ್ದ ಜಿ.ಬಿ.ಶಿವಕುಮಾರ್ ತಂದೆ) ಅವರಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿ, ಗೆಲ್ಲಿಸಿದರು. ಇದೇ ಕ್ಷೇತ್ರಕ್ಕೆ 1957ರಲ್ಲಿ ಕರ್ನಾಟಕ ರಾಜಕಾರಣದ ಸಿಂಹ ಎನಿಸಿದ ಸಾಹುಕಾರ್ ಚೆನ್ನಯ್ಯ ಮುಖ್ಯಮಂತ್ರಿ ಆಗಬೇಕೆಂಬ ಆಸೆಯಿಂದ ಹಠಮಾಡಿ ಕಾಂಗ್ರೆಸ್‌ನಿಂದ ಟಿಕೆಟ್ ಪಡೆದರು. ಆದರೆ, ಪಕ್ಷೇತರ ಅಭ್ಯರ್ಥಿಯಾಗಿ ನಿಂತ ಜಿ.ಎಸ್.ಬೊಮ್ಮೇಗೌಡರು ಗೆಲ್ಲುತ್ತಾರೆ. ಇದರಿಂದ ಕುಪಿತರಾದ ಸಾಹುಕಾರ್ ಚೆನ್ನಯ್ಯ ತಮ್ಮ ಸೋಲಿಗೆ ಕಾರಣರಾದರೆಂದು ಆರೋಪಿಸಿ ಕೆ.ವಿ.ಶಂಕರೇಗೌಡ ಮತ್ತು ಎಚ್.ಕೆ.ವೀರಣ್ಣಗೌಡರನ್ನು ರಾಜಕೀಯವಾಗಿ ಮುಗಿಸಲು ಪ್ರಾರಂಭಿಸುತ್ತಾರೆ.

ಹೀಗೆ ಕರ್ನಾಟಕ ಪ್ರಜಾಪ್ರಭುತ್ವದ ಆರಂಭದಲ್ಲೇ ಕಾಣಿಸಿಕೊಂಡ ಸೇಡಿನ ರಾಜಕಾರಣ ಈಗಲೂ ನಿಂತಿಲ್ಲ. 1962ರಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಪರಿಗಣಿತರಾದ ಮದ್ದೂರು ಕ್ಷೇತ್ರದ ಎಚ್.ಕೆ.ವೀರಣ್ಣಗೌಡರನ್ನು ಪ್ರಜಾಸೋಷಿಯಲಿಸ್ಟ್ ಪಕ್ಷದ ಎಸ್.ಎಂ. ಕೃಷ್ಣ ಮೂಲಕ ಸೋಲಿಸುತ್ತಾರೆ. ಅತ್ತ ಉತ್ತರ ಕರ್ನಾಟಕದಲ್ಲಿ ಸ್ಪರ್ಧಿಸಿದ್ದ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಸಹ ಸೋಲುತ್ತಾರೆ. ಇದರಿಂದ ನಿಜಲಿಂಗಪ್ಪನವರು ಉಪ ಚುನಾವಣೆಯಲ್ಲಿ ಗೆದ್ದು ಬರುವವರೆಗೂ ಎಸ್.ಆರ್.ಕಂಠಿ ಮೂರು ತಿಂಗಳು ನಾಮಕಾವಸ್ಥೆ ಮುಖ್ಯಮಂತ್ರಿಯಾಗಿ ಮುಂದುವರೆದಿರುತ್ತಾರೆ.

ಚುನಾವಣಾ ವೆಚ್ಚ ಕೇವಲ 2 ಸಾವಿರ ರೂಪಾಯಿ

1952ರಲ್ಲಿ ಶ್ರೀರಂಗಪಟ್ಟಣದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಸಚಿವ ಹಾಗೂ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಕೆ.ಪುಟ್ಟಸ್ವಾಮಿ ಚುನಾವಣಾ ವೆಚ್ಚ ಎರಡು ಸಾವಿರ ರೂಪಾಯಿ ಕೂಡಾ ದಾಟಿರಲಿಲ್ಲ. ಹಳ್ಳಿಹಳ್ಳಿಗಳಲ್ಲಿ ಪ್ರಚಾರಕ್ಕೆ ಹೋದಾಗ ಊರಿನ ಮುಖಂಡರು ಸಂಗ್ರಹಿಸಿಕೊಟ್ಟ ಹಣ ಎರಡು ಸಾವಿರ ರೂಪಾಯಿಗಳಾದರೆ, ಖರ್ಚಾಗಿದ್ದು ಕೇವಲ ರೂ.1400 ಮಾತ್ರ, ಉಳಿದ ರೂ.600 ಅನ್ನು ತಮ್ಮ ಹುಟ್ಟೂರು ಅರಕೆರೆಯ ಸರ್ಕಾರಿ ಶಾಲಾ ಕಟ್ಟಡ ನಿರ್ಮಾಣಕ್ಕೆ ನೀಡಿದ್ದರಂತೆ. 1957 ರಿಂದ 1972ರ ಚುನಾವಣೆವರೆಗೂ ಸತತ ನಾಲ್ಕುಬಾರಿ ಚಾಮುಂಡೇಶ್ವರಿ ಕ್ಷೇತ್ರದಿಂದ ಗೆದ್ದ ಕೆ.ಪುಟ್ಟಸ್ವಾಮಿ, ಮುಂದೆ ಚುನಾವಣೆಗೆ ನಿಲ್ಲಲ್ಲ ಅಂತ ಹೇಳಿಬಿಟ್ಟಿದ್ದರಂತೆ. ವೀರೇಂದ್ರಪಾಟೀಲ್ ಸಂಪುಟದಲ್ಲಿ ಪೌರಾಡಳಿತ ಸಚಿವರಾಗಿದ್ದ ಕೆ.ಪುಟ್ಟಸ್ವಾಮಿಯಂಥವರೇ ಚುನಾವಣಾ ವೆಚ್ಚ ಭರಿಸಲು ಆಗಲ್ಲ, ಇನ್ನು ಮುಂದೆ ಚುನಾವಣೆಗೆ ನಿಲ್ಲಲ್ಲ ಎಂದಿದ್ದರೆಂದರೆ ಅದಾಗಲೇ, ಚುನಾವಣಾ ಭ್ರಷ್ಟಾಚಾರ 60ರ ದಶಕದಲ್ಲೇ ಮೊಳಕೆಯೊಡೆದಿದ್ದು ಗೋಚರವಾಗುತ್ತೆ. ಪ್ರಧಾನಿ ಮೊರಾರ್ಜಿ ದೇಸಾಯಿ ಒತ್ತಾಯದ ಮೇರೆಗೆ 1978ರಲ್ಲಿ ಮೊದಲ ಬಾರಿ ರಚಿತವಾದ ಚಾಮರಾಜಕ್ಷೇತ್ರದಲ್ಲಿ ಜನತಾಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದ ಕೆ.ಪುಟ್ಟಸ್ವಾಮಿ ಅವರು ಮೂರೇ ತಿಂಗಳಲ್ಲಿ ಹೃದಯಾಘಾತದಿಂದ ನಿಧನರಾಗಿದ್ದು, ಪ್ರಾಮಾಣಿಕ ರಾಜಕಾರಣಕ್ಕೆ ಬಾರೀ ಪೆಟ್ಟು ಎನ್ನಬಹುದು.

25 ಸಾವಿರ ಖರ್ಚು ಮಾಡದ ಹ್ಯಾಟ್ರಿಕ್ ಸಂಸದ

ಮೈಸೂರು ಲೋಕಸಭಾ ಕ್ಷೇತ್ರದ ಏಕೈಕ ಹ್ಯಾಟ್ರಿಕ್ ಲೋಕಸಭಾ ಸದಸ್ಯರೆಂದರೆ 1967-80ರವರೆಗೆ ಸಂಸದರಾಗಿದ್ದ ಎಚ್.ಡಿ.ತುಳಸೀದಾಸ್. ಇವರಿಗೆ ಕಾಂಗ್ರೆಸ್ ಪಕ್ಷದಿಂದ ಪ್ರಚಾರಕ್ಕೆಂದು ಒಂದು ಜೀಪು ಮತ್ತು 25ಸಾವಿರ ರೂಪಾಯಿ ಕೊಡಲಾಗುತ್ತಿತ್ತಂತೆ. ಪಕ್ಷಕೊಟ್ಟ 25 ಸಾವಿರ ರೂಪಾಯಿಯನ್ನೂ ಖರ್ಚು ಮಾಡದ ಎಚ್.ಡಿ.ತುಳಸೀದಾಸ್ ಅವರು, ತಾವು ದೆಹಲಿ ಪಾರ್ಲಿಮೆಂಟ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮೊದಲೇ ಪಕ್ಷದ ಕಚೇರಿಗೆ ಬಂದು ಖರ್ಚುವೆಚ್ಚದ ಪಟ್ಟಿಕೊಟ್ಟು..ಬಾಕಿ ಉಳಿದ ಹಣವನ್ನು ಹಿಂತಿರುಗಿಸುತ್ತಿದ್ದರಂತೆ.

ಕೆ.ಆರ್.ನಗರಕ್ಕೆ ರೈಲಿನಲ್ಲಿ ಬಂದ ಲೋಹಿಯಾ-ಜೆಪಿ

ಮೈಸೂರು ಜಿಲ್ಲೆಯ ಭತ್ತದ ನಾಡು ಎಂದೇ ಖ್ಯಾತವಾದ ಕೆ.ಆರ್.ನಗರಕ್ಕೆ ಸಮಾಜವಾದಿ ರಾಷ್ಟ್ರ ನಾಯಕರಾದ ರಾಮ್‌ಮನೋಹರ್ ಲೋಹಿಯಾ, ಜಯಪ್ರಕಾಶ್ ನಾರಾಯಣ್, ರಾಜ್ಯ ನಾಯಕರಾದ ಗೋಪಾಲಗೌಡ ಮತ್ತಿತರ ನಾಯಕರು ಕಾರು ಸಹ ಬಳಸದೆ ಮೈಸೂರಿನಿಂದ ಕೆ.ಆರ್.ನಗರಕ್ಕೆ ರೈಲಿನಲ್ಲೇ ಆಗಮಿಸಿದ್ದರಂತೆ. ಕೆ.ಆರ್.ನಗರ ವಿಧಾನಸಭಾಕ್ಷೇತ್ರದಲ್ಲಿ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿದ್ದ ಡಾ.ಕೆ.ಎಸ್. ಗೌಡಯ್ಯ (ಒಕ್ಕಲಿಗ ಜನಾಂಗದ ಮೊದಲ ವೈದ್ಯರೆಂಬ ಹೆಗ್ಗಳಿಕೆ ಹೊಂದಿದವರು ಮತ್ತು ಮಾಜಿ ಸಚಿವ ಎಸ್. ನಂಜಪ್ಪ ಅವರ ಅಣ್ಣ) ಪರ ಪ್ರಚಾರ ಮಾಡಿದ್ದರು. 1952 ಮತ್ತು 1957ರಲ್ಲಿ ಕಾಂಗ್ರೆಸ್‌ನ ಚನ್ನಬಸಪ್ಪ ವಿರುದ್ಧ ಸೋತರೂ, 1962ರಲ್ಲಿ ಅಂದು ಗೃಹ ಮಂತ್ರಿಯಾಗಿದ್ದ ಚನ್ನಬಸಪ್ಪ ವಿರುದ್ಧ ಪಕ್ಷೇತರರಾಗಿ ಗೆಲ್ಲುತ್ತಾರೆ. 1967ರಲ್ಲಿ ಕಾಂಗ್ರೆಸ್ ಪಕ್ಷದಿಂದ ನಿಂತ ಡಾ.ಕೆ.ಎಸ್. ಗೌಡಯ್ಯನವರಿಗೆ ಪಕ್ಷೇತರ ಅಭ್ಯರ್ಥಿ ಬಸವರಾಜು ವಿರುದ್ಧ ಸೋಲಾಗುತ್ತದೆ. ಇದರಿಂದ ಬೇಸರಗೊಂಡ ಡಾ.ಕೆ.ಎಸ್. ಗೌಡಯ್ಯನವರು ಜಾತಿ-ಹಣದ ಮೇಲೆ ನಡೆಯುವ ಚುನಾವಣೆಗಳೇ ತಮಗೆ ಬೇಡ ಅಂತ ರಾಜಕೀಯ ತೊರೆದು ವೈದ್ಯವೃತ್ತಿಯನ್ನು ಕೊನೆಗಾಲದವರೆಗೂ ಮುಂದುವರೆಸಿದ್ದರು.

ಶಾಸಕರ ಖರೀದಿ ವ್ಯಾಪಾರ

1947 ರಿಂದ 1972ರವರೆಗೂ ಮತದಾರರನ್ನು ಖರೀದಿಸುವ ಕುತಂತ್ರ ನಡೆಯುತ್ತಿದ್ದುದು, 1972ರ ನಂತರ ಸಂತೆಯಲ್ಲಿ ದನಗಳನ್ನು ಖರೀದಿಸಿದಂತೆ ಶಾಸಕರನ್ನು ಖರೀದಿಸಿ, ಸರ್ಕಾರ ಉಳಿಸುವ ಮತ್ತು ಉರುಳಿಸುವ ಕುತಂತ್ರ ಅವ್ಯಾಹತವಾಗಿ ನಡೆಯಿತು. ರಾಜ್ಯವನ್ನು ಅತೀ ಹೆಚ್ಚು ಕಾಲ ಆಳಿದ ದೇವರಾಜ ಅರಸು ಆಡಳಿತಾವಧಿಯಲ್ಲಿ ಶಾಸಕರನ್ನು ಮತ್ತು ವಿರೋಧ ಪಕ್ಷಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಎಲ್ಲಾ ರೀತಿಯ ಮಾರ್ಗ ಅನುಸರಿಸಿದರು. 1983ರಲ್ಲಿ ಕಾಂಗ್ರೆಸ್ಸೇತರ ಮುಖ್ಯಮಂತ್ರಿಯಾದ ರಾಮಕೃಷ್ಣ ಹೆಗ್ಡೆ ಮನೆಗೆ ಬಂದು, ರೌಡಿಗಳು ಬೆದರಿಸಿ ಹೋಗಿದ್ದರು ಎಂದರೆ, ರಾಜ್ಯದ ಸ್ಥಿತಿ ಹೇಗಿತ್ತು ಎಂಬುದನ್ನು ಊಹಿಸಬಹುದು. ಈ ಘಟನೆ ನಂತರ ಮುಖ್ಯಮಂತ್ರಿಯಾದ ರಾಮಕೃಷ್ಣ ಹೆಗ್ಡೆ ರಾಜ್ಯದ ಪೋಲೀಸ್ ಅಧಿಕಾರಿಗಳ ತುರ್ತು ಸಭೆ ಕರೆದು, 'ಕರ್ನಾಟಕದಲ್ಲಿ ಪೋಲೀಸರಿರಬೇಕು. ಇಲ್ಲವೇ ರೌಡಿಗಳಿರಬೇಕು. ಆಯ್ಕೆ ನಿಮಗೆ ಸೇರಿದ್ದು' ಅಂತ ಖಡಕ್ಕಾಗಿ ಎಚ್ಚರಿಕೆ ಕೊಟ್ಟಿದ್ದರು.



ಮೊಯ್ಲಿ ಟೇಪ್ ಹಗರಣ


1983ರಲ್ಲಿ ದೇಶಾದ್ಯಂತ ಕೋಲಾಹಲ ಎಬ್ಬಿಸಿದ ಮಾಜಿ ಹಣಕಾಸು ಸಚಿವ ಎಂ.ವೀರಪ್ಪಮೊಯ್ಲಿ ಮತ್ತು ಕೋಲಾರದ ಶಾಸಕ ಸಿ.ಭೈರೇಗೌಡರ ಸಂಭಾಷಣೆ ಟೇಪ್ ರೆಕಾರ್ಡ್ 'ಮೊಯ್ಲಿ ಟೇಪ್ ಹಗರಣ' ಎಂದೇ ಕುಖ್ಯಾತವಾಯಿತು. ನ್ಯಾಯಾಲಯದಲ್ಲಿ ಧ್ವನಿ ಅನುಕರಿಸಿ ಬೇರೆಯವರು ಮಾತಾಡಬಹುದು ಅಂತ ನ್ಯಾಯಾಧೀಶರು ಧ್ವನಿಮುದ್ರಿಕೆ ಸಾಕ್ಷ್ಯವನ್ನು ತಳ್ಳಿಹಾಕಿದರು. ಅಂದಿನ ಅಲ್ಪ ಸಂಖ್ಯಾತ ಮತ್ತು ಬಿಜೆಪಿ ಬೆಂಬಲಿತ ರಾಮಕೃಷ್ಣಹೆಗ್ಡೆ ಸರ್ಕಾರ ಉರುಳಿಸಲು ಎಂ.ವೀರಪ್ಪಮೊಯ್ಲಿ ಅವರು ಕೋಲಾರದ ಶಾಸಕ ಸಿ.ಭೈರೇಗೌಡರಿಗೆ ಹಣದ ಆಮಿಷ ಒಡ್ಡಿದ್ದರೆಂಬ ವಿವಾದ ಬಹಳ ಕಾಲ ಜನರ ಬಾಯಿಗೆ ಆಹಾರವಾಗಿತ್ತು.

ಶಾಸಕರ ಖರೀದಿ ವ್ಯವಹಾರ ನಡೆಯುತ್ತಿರುವುದು ನಿಜ ಎಂಬುದು ಸಾಕ್ಷೀಕರಿಸಿದ್ದು, ಪಕ್ಕದ ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಸರ್ಕಾರ ಉರುಳಿದಾಗ. 1984ರಲ್ಲಿ ಅಮೆರಿಕಾಗೆ ಶುಶ್ರೂಷೆಗೆಂದು ಎನ್.ಟಿ.ಆರ್. ಹೋಗಿಬರುವಷ್ಟರಲ್ಲಿ ಅವರ ಬಲಗೈ ಬಂಟರಾಗಿದ್ದ ನಾದೇಂಡ್ಲ ಭಾಸ್ಕರ್‌ರಾವ್ ತೆಲುಗುದೇಶಂನ ಶಾಸಕರ ಗುಂಪನ್ನು ತಮ್ಮ ಕಡೆ ಸೆಳೆದುಕೊಂಡು ಕಾಂಗ್ರೆಸ್ ಪಕ್ಷದ ಬೆಂಬಲದೊಂದಿಗೆ ಮುಖ್ಯಮಂತ್ರಿಯಾದರು. ಆಗ ಅಳಿದುಳಿದ ತೆಲುಗುದೇಶಂ ಶಾಸಕರನ್ನು ಕರ್ನಾಟಕಕ್ಕೆ ಕರೆಸಿಕೊಂಡ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆ ಮೈಸೂರಿನಲ್ಲಿ ಆಶ್ರಯ ನೀಡಿ ಎನ್.ಟಿ.ಆರ್ ಮತ್ತೆ ಮುಖ್ಯಮಂತ್ರಿಯಾಗುವಂತೆ ನೋಡಿಕೊಂಡಿದ್ದರು.

ಇಂಥ ಶಾಸಕರ ಖರೀದಿ ವ್ಯಾಪಾರದಿಂದ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಧಕ್ಕೆ ಬರುತ್ತೆ ಅಂತ 1985ರಲ್ಲಿ ಪ್ರಧಾನಿಯಾಗಿದ್ದ ರಾಜೀವ್‌ಗಾಂಧಿ 'ಪಕ್ಷಾಂತರ ನಿಷೇಧ' ಕಾಯ್ದೆ ಜಾರಿಗೆ ತಂದರು. ಆದರೆ, ಕಾನೂನಿನ ಕಣ್ಣಿಗೇ ಮಣ್ಣೆರೆಚುವ ಕುತಂತ್ರ ರಾಜಕಾರಣಿಗಳಿಗೆ ಸಿದ್ಧಿಸಿರುವುದರಿಂದ ಪ್ರತ್ಯೇಕ ಗುಂಪು ಕಟ್ಟಿಕೊಂಡು ಸರ್ಕಾರ ಉರುಳಿಸಿ, ಹೊಸ ಸರ್ಕಾರ ರಚಿಸುವ ಅವ್ಯಾಹತವಾಗಿ ಮುಂದುವರೆದಿದೆ. 2019ರಲ್ಲಿ ಎಚ್.ಡಿ.ಕುಮಾರಸ್ವಾಮಿ ಸರ್ಕಾರ ಬೆಂಬಲಿತ ಕಾಂಗ್ರೆಸ್ ಶಾಸಕರ ಸಾಮೂಹಿಕ ರಾಜಿನಾಮೆಯಿಂದ ಬಹುಮತ ಕಳೆದುಕೊಂಡು, ಬಿಜೆಪಿ ಅಧಿಕಾರಕ್ಕೆ ಬಂದಿತು. ಇಂಥ ಪ್ರಕರಣಗಳು 1999ರಿಂದ ಈಚೆಗೆ ದೇಶಾದ್ಯಂತ ಅವ್ಯಾಹತವಾಗಿ ಮುಂದುವರೆದಿದೆ. ಶಾಸಕರನ್ನು ತಮ್ಮ ಪರವಾಗಿ ಉಳಿಸಿಕೊಳ್ಳಲು ಪ್ರತಿ ವರ್ಷ ಕೋಟ್ಯಾಂತರ ರುಪಾಯಿ ಅನುದಾನ ನೀಡುವುದಲ್ಲದೆ, ಇತರೆ ಕಾಮಗಾರಿಯಲ್ಲು ಕಮಿಷನ್ ನೀಡುವ ಭ್ರಷ್ಟಾಚಾರದ ಕವಲು ತೆರೆದುಕೊಂಡಿದೆ. ಇದರಿಂದ ಯಾವುದೇ ಕಾಮಗಾರಿಯ ಗುಣಮಟ್ಟ ಅತ್ಯಂತ ಕಳಪೆಯದಾಗಿರುತ್ತೆ. 40 ಪರ್ಸೆಂಟ್ ವ್ಯವಹಾರ ಆರಂಭವಾಗಿ ದಶಕಗಳೇ ಕಳೆದಿವೆ. ವಾಸ್ತವವಾಗಿ ಈಗ ಶೇ.80ರಷ್ಟು ಕಮಿಷನ್ ನಡೆಯುತ್ತಿದೆ ಎಂಬ ಮಾಹಿತಿ ಇದೆ. ಕಾಮಗಾರಿ ವಿಳಂಬವಾದಂತೆ ಅದರ ವೆಚ್ಚ ಸಹ ಹೆಚ್ಚಿಸಿ, ಹಣ ಕಬಳಿಸುವ ಅಧಿಕಾರಿಗಳು ಮತ್ತು ರಾಜಕಾರಣಿಗಳು ಬಹಳಷ್ಟಿದ್ದಾರೆ.

ಸರ್ಕಾರದ ಬಜೆಟ್ ಹಿಗ್ಗುತ್ತಿದ್ದರೂ ಅಭಿವೃದ್ಧಿ ಪಥ ಬೆಳೆಯುತ್ತಿಲ್ಲ. 40 ವರ್ಷಗಳ ಹಿಂದೆ ರಾಮಕೃಷ್ಣ ಹೆಗ್ಡೆ ಕಾಲದಲ್ಲಿ ವಾರ್ಷಿಕ ಬಜೆಟ್ 10ಸಾವಿರ ಕೋಟಿ ರುಪಾಯಿ ಇದ್ದದ್ದು, ಈಗ 3ಲಕ್ಷಕೋಟಿ ರುಪಾಯಿಯತ್ತ ಸಾಗಿದೆ. ಇದರಲ್ಲಿ ಯೋಜನೇತರ ವೆಚ್ಚ ಕಡಿಮೆ ಮಾಡಿ ಯೋಜನಾವೆಚ್ಚ ಹೆಚ್ಚಿಸಿದರೆ ಹೆಚ್ಚು ಕಮಿಷನ್ ಪಡೆಯಬಹುದೆಂದು ನಷ್ಟದಲ್ಲಿರುವ ಸಂಸ್ಥೆಗಳೆಂದು ಸರ್ಕಾರಿ ಮತ್ತು ಅರೆ ಸರ್ಕಾರಿ ಕಾರ್ಖಾನೆಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ. ಇದರಿಂದ ಉದ್ಯೋಗ ಸೃಷ್ಟಿ ಕ್ಷೀಣಿಸಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆಧುನಿಕ ಕೃಷಿ ಪದ್ಧತಿಯಿಂದ ರೈತರ ಉತ್ಪಾದನಾ ವೆಚ್ಚ ಹೆಚ್ಚಾಗಿ, ಸಾಲಕ್ಕೆ ಸಿಲುಕಿದ ರೈತರು ಆತ್ಮಹತ್ಯೆ ಹಾದಿ ಹಿಡಿದಿದ್ದಾರೆ. ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಂದ ಕೌಟುಂಬಿಕ ಸಮಸ್ಯೆಗಳು ಹೆಚ್ಚಾಗಿ ಮನೆಮನೆಗಳಲ್ಲು ಅಶಾಂತಿ ತಾಂಡವವಾಡುತ್ತಿದೆ. ಸ್ವಾರ್ಥಕ್ಕಾಗಿ ಜಾತಿ ಮತ್ತು ಧರ್ಮಗಳ ಮಧ್ಯೆ ವಿಷ ಬೀಜಬಿತ್ತುತ್ತಿರುವುದರಿಂದ ಸಮಾಜದಲ್ಲಿ ಜನರ ನಡುವೆ ಉಸಿರು ಗಟ್ಟುವ ವಾತಾವರಣ ಸೃಷ್ಟಿಯಾಗಿದೆ. ಹೀಗೆ ದೇಶ ಮತ್ತು ರಾಜ್ಯಗಳ ಸಮಸ್ಯೆಗಳ ಸರಮಾಲೆಗೆ ಉತ್ತಮ ಜನಪ್ರತಿನಿಧಿಗಳನ್ನು ಆರಿಸದ ಜನರ ಮೂರ್ಖತನ ಕಾರಣವಾಗಿದೆ. ತಮ್ಮನ್ನ ಕಾಪಾಡು ಅಂತ ದೇವಸ್ಥಾನ, ಮಸೀದಿ, ಚರ್ಚ್‌ಗಳಲ್ಲಿ ನಿತ್ಯ ಪ್ರಾರ್ಥಿಸುವ ಜನ, "ರಾಜ ಪ್ರತ್ಯಕ್ಷ ದೇವತಾ"ಎಂಬುದನ್ನು ಕಾಪಾಡುವ ನಾಯಕನನ್ನು ಗುರುತಿಸಿ, ಆರಿಸಿದರೆ ಜನರು ನಿತ್ಯ ದೇವರಲ್ಲಿ ಮೊರೆ ಇಡುವ ತಮ್ಮ ಉದ್ಧಾರದ ಮಾಡು ಎನ್ನುವ ಪ್ರಾರ್ಥನೆ ಫಲಿಸಬಹುದು. ಈ ನಿಟ್ಟಿನಲ್ಲಿ 2023ರ 16 ನೇ ವಿಧಾನಸಭಾ ಚುನಾವಣೆ ಸಂದರ್ಭದಲ್ಲಾದರೂ ಮತದಾರ ಜಾತಿ-ಹಣ-ಪಕ್ಷ ಲೆಕ್ಕಿಸದೆ ಮೇ10 ಮತದಾನ ಮಾಡಬೇಕು.

ಪ್ರಜಾಪ್ರಭುತ್ವವೋ... ಪುರುಷ 'ಪ್ರಭುತ್ವವೋ...'


ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಕರ್ನಾಟಕ ವಿಧಾನಸಭೆಗೆ 16ನೇಯ ಬಾರಿ ಚುನಾವಣೆ ನಡೆಯಲು ವೇದಿಕೆ ಸಿದ್ಧವಾಗಿದೆ. ರಾಜ್ಯದ 224 ಕ್ಷೇತ್ರಗಳಿಗೆ, ರಾಜಕೀಯ ಪಕ್ಷಗಳು, ಬಹುತೇಕ ಕ್ಷೇತ್ರಗಳ ಸ್ಪರ್ಧಿಗಳ ಪಟ್ಟಿಗಳನ್ನು ಬಿಡುಗಡೆ ಮಾಡಿವೆ. ಇವು ಹೊರಬೀಳುತ್ತಿರುವ ಹಾಗೆಯೇ ಅವಕಾಶ ಸಿಗದ ಅನೇಕ ಅಭ್ಯರ್ಥಿಗಳಲ್ಲಿ ಅಸಮಾಧಾನ ಹೊರಬಿದ್ದಿದ್ದು ಅವರಲ್ಲಿ ಕೆಲವರು ಪಕ್ಷದಿಂದಲೇ ಹೊರಬಂದಿರುವಂಥ ಘಟನೆಗಳೂ ನಡೆದಿವೆ. ಪ್ರತಿ ಬಾರಿಯೂ ಅಭ್ಯಥಿಗಳ ಪಟ್ಟಿ ಪ್ರಕಟವಾಗಿ ನಿರೀಕ್ಷಿತ ಅವಕಾಶಗಳು ದೊರೆಯದೇ ಹೋದಾಗ ಪ್ರತಿಭಟನೆ ಹೊರಹೊಮ್ಮುವುದು ಚುನಾವಣಾ ರಾಜಕೀಯದ ಒಂದು ಅವಿಭಾಜ್ಯ ಅಂಗವಾಗಿ ಯಾವುದೋ ಕಾಲವಾಗಿ ಹೋಯಿತು. ಆದರೆ ದಿನೇ-ದಿನೆ ಹೊಸ-ಹೊಸ ರೂಪಗಳನ್ನು ತಾಳುತ್ತಾ ರಾಜೀನಾಮೆಯಿಂದ ಪಕ್ಷ ಬದಲಾವಣೆಯವರೆಗೂ ಈ ಅಸಮಾಧಾನ ಹೊರಬೀಳುತ್ತಿರುವುದನ್ನು ನೋಡಿದರೆ ಇದು ಕೆಲ ವ್ಯಕ್ತಿಗಳಿಗೆ ಅಧಿಕಾರ ದೊರೆಯುವ ಅಥವಾ ದೊರೆಯದಿರುವ ಹಾವು-ಏಣಿ ಆಟವೇ ಅಥವಾ ಪ್ರಜಾಪ್ರಭುತ್ವದ ಅತ್ಯಂತ ಪ್ರಬಲ ಶಕ್ತಿ ಎಂದು ನಾವಂದುಕೊಂಡಿರುವ ಚುನಾವಣೆಗಳು ಕೆಲವೇ ವ್ಯಕ್ತಿಗಳ ಕೈಯಲ್ಲಿರುವ ದಾಳಗಳೇ ಎನಿಸಲಾರಂಭಿಸಿದೆ.

ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರು ಚುನಾವಣೆಗಳನ್ನು ಪ್ರಜಾಪ್ರಭುತ್ವದ ಮೂಲ ಅಂಶಗಳಲ್ಲಿ ಒಂದೆಂದು ಪರಿಗಣಿಸಿದ್ದರು. ಮತದಾನ ಎನ್ನುವುದು ಸಾರ್ವತ್ರಿಕ ಹಕ್ಕಾಗಬೇಕೇ ಹೊರತು ಮೇಲ್ಜಾತಿ, ಮೇಲ್ವರ್ಗದ, ಪುರುಷರ, ಉಳ್ಳವರ ಕುಟುಂಬಗಳ ಸ್ವತ್ತಾಗಬಾರದು ಎಂಬ ಚಿಂತನೆ- ಆಚರಣೆಯನ್ನು ಎದುರಿಸಿ 'ಸರ್ವರಿಗೂ ಮತದಾನದ ಹಕ್ಕು'. ಎಂಬ ತತ್ವವನ್ನು ಪ್ರತಿಪಾದಿಸಿ ಅದನ್ನು ಸಾಕಾರ ಮಾಡಿದವರು ಅಂಬೇಡ್ಕರ್ ಅವರು. ಮತದಾನ ಪ್ರಕ್ರಿಯೆಯಲ್ಲಿ ಭಾಗಿಗಳಾಗುವುದು ಪ್ರಜೆಗಳಿಗೆ ರಾಜಕೀಯ ಶಿಕ್ಷಣವನ್ನು ನೀಡುವುದರ ಜೊತೆ ಜೊತೆಗೆ ಸಮಾಜದ ಅಂಚಿನಲ್ಲಿರುವ ದಮನಿತ ವರ್ಗಗಳಿಗೆ ಶೋಷಣೆಯಿಂದ ಹೊರ ಬರುವ ಮಾರ್ಗ ಎಂದು ಅವರು ನಂಬಿದ್ದರು. ಮತದಾನದ ಹಕ್ಕೇನೋ ಎಲ್ಲರಿಗೂ ಲಭ್ಯವಾಯಿತು. ಆದರೆ ಚುನಾವಣಾ ರಾಜಕಾರಣ ಎಂದಿಗೂ ಭಾರತದ ಸಾಮಾಜಿಕ, ಸಾಂಸ್ಕೃತಿಕ ವೈವಿಧ್ಯವನ್ನು ಒಳಗೊಳ್ಳುವ ಅನುಭವವಾಗಲಿಲ್ಲ

ಜನ ಪ್ರತಿನಿಧಿಗಳು- ಮತದಾರರ ಜವಾಬ್ದಾರಿ ಗಳೇನು?

ಸಾರ್ವಜನಿಕ ಜೀವನದ ಗುಣಮಟ್ಟವನ್ನು ಏರಿಸಿ, ಜನರ ಮೂಲಭೂತ ಅವಶ್ಯಕತೆಗಳನ್ನಾದರೂ ಪೂರೈಸಿ, ಕಾಲದಿಂದ ಕಾಲಕ್ಕೆ ತಾವು ಪ್ರತಿನಿಧಿಸುವ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸಿ, ಕ್ಷೇತ್ರದ ಅಭಿವೃದ್ಧಿಗೆ ಒಂದು ಪ್ರಗತಿಪರ ಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂಬುದನ್ನೇ ಜನ ಪ್ರತಿನಿಧಿಗಳಿಂದ ಮತದಾರರು ನಿರೀಕ್ಷಿಸುವುದು. ಆದರೆ ಚುನಾವಣೆಗಳು ಘೋಷಿತವಾದಾಗಿನಿಂದ ಇಂದಿನವರೆಗೂ ಅಭಿವೃದ್ಧಿಯ ಚರ್ಚೆಗಿಂತ ಪರಸ್ಪರ ದೋಷಾರೋಪಣೆಗಳೇ ಹೆಚ್ಚಾಗಿ ಕಂಡುಬರುತ್ತಿವೆ. ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳು ಯಾವುವು , ಇನ್ನೇನು ಆಗಬೇಕಾಗಿದೆ ಎನ್ನುವ ಚರ್ಚೆ ತೀರಾ ಗೌಣವಾಗಿದೆ ಎನ್ನಿಸುತ್ತಿದೆ.

ಎಲ್ಲೋ ಕೆಲ ವಲಯಗಳನ್ನು ಹೊರತುಪಡಿಸಿದರೆ ಮತದಾರರಿಂದಲೂ ವಿಶೇಷವಾಗಿ ಯುವಜನತೆಯಿಂದ ಪ್ರತಿನಿಧಿಗಳ ಚುನಾವಣಾ ನಡವಳಿಕೆಯನ್ನು ಕುರಿತಂತೆ ಯಾವ ಪ್ರತಿಕ್ರಿಯೆಗಳೂ ವ್ಯಕ್ತವಾಗುತ್ತಿಲ್ಲ. ಜನ ಪ್ರತಿನಿಧಿಗಳಿಂದ ನಮ್ಮ ನಿರೀಕ್ಷೆಗಳೇನು, ಎಷ್ಟು ಬಾರಿ ಅವರು ನಮ್ಮ ಬಳಿ ಬಂದು ನಮ್ಮ ಅಗತ್ಯಗಳನ್ನೂ, ಕುಂದು ಕೊರತೆಗಳನ್ನು ವಿಚಾರಿಸಿದ್ದಾರೆ. ಪ್ರಣಾಳಿಕೆಗಳನ್ನು ತಯಾರಿಸುವಾಗ ಅಥವಾ ಭರವಸೆಗಳನ್ನು ನೀಡುವಾಗ ಕ್ಷೇತ್ರದ ಜನರ ಅಭಿಪ್ರಾಯಗಳನ್ನು ಕೇಳಿದ್ದಾರೆಯೇ -ಇವೇ ಮುಂತಾದ ಪ್ರಶ್ನೆಗಳನ್ನು ಸಾರ್ವಜನಿಕ ವಲಯದಲ್ಲಿ ಎತ್ತಿ ಅಭ್ಯರ್ಥಿಗಳಿಂದ ಉತ್ತರಗಳಿಗೆ ಬೇಡಿಕೆಯನ್ನು ಇಟ್ಟಿರುವಂಥ ನಿದರ್ಶನಗಳು ತೀರಾ ಕಡಿಮೆ. ಕಳೆದ ಚುನಾವಣೆಯಲ್ಲಿ ಬಂದು ಮತ ಯಾಚಿಸಿದವರು ಮತ್ತೆ ಬರಲೇ ಇಲ್ಲ ಎಂದು ಖಾಸಗಿ ವಲಯದಲ್ಲಿ ಅಸಮಾಧಾನ ವ್ಯಕ್ತಪಡಿಸುತ್ತಾರೆಯೇ ಹೊರತು ಅಭ್ಯರ್ಥಿಗಳನ್ನು ನೇರವಾಗಿ ಎದುರಿಸಿ ಪ್ರಶ್ನೆಗಳನ್ನು ಕೇಳುವಂಥ ಚುನಾವಣಾ ಸಂಸ್ಕೃತಿ ನಮ್ಮಲ್ಲಿ ಇಲ್ಲದಿರುವುದೇ ಮತದಾರರ ಸೀಮಾಂತೀಕರಣಕ್ಕೆ ಮುಖ್ಯ ಕಾರಣ.

ಜನ ಸೇವೆ ಮಾಡಲು ರಾಜಕೀಯ ಅಧಿಕಾರ ಅನಿವಾರ್ಯವೇ?

ಕಳೆದ ಕೆಲ ದಿನಗಳ ವಿದ್ಯಮಾನಗಳನ್ನು ನೋಡಿದಾಗ ಮತದಾರಿಗೆ ಚುನಾವಣಾ ರಾಜಕಾರಣದಲ್ಲಿ ಏನಾದರೂ ಸ್ಥಾನ ಇದೆಯೇ? ಅಧಿಕಾರವನ್ನು ಪಡೆಯುವ ಅಥವಾ ಉಳಿಸಿಕೊಳ್ಳುವ ಹಗ್ಗ-ಜಗ್ಗಾಟದಲ್ಲಿ ತೊಡಗಿರುವ ರಾಜಕೀಯ ಪಕ್ಷಗಳು ಮತದಾರರ ಹಿತಾಸಕ್ತಿಗಳನ್ನು ಕಾಪಾಡುತ್ತವೆಂದು ಎನಿಸುತ್ತದೆಯೇ, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಹಕ್ಕನ್ನು ಸಂವಿಧಾನ ನೀಡಿರುವುದು ನಿಜವೇ. ಆದರೆ ರಾಜಕೀಯ ಅಧಿಕಾರ ನಮ್ಮ ಸ್ವತ್ತು ಎಂದು ಎಲ್ಲಿ ತಾನೇ ಹೇಳಿದೆ? ಪ್ರತಿ ಬಾರಿಯೂ ಚುನಾವಣೆಗಳು ಘೋಷಿತವಾದ ತಕ್ಷಣ ಈಗಾಗಲೇ ಆರಿಸಿ ಬಂದಿರುವ ಬಹುತೇಕ ಅಧಿಕಾರಾರೂಢ ವ್ಯಕ್ತಿಗಳು ತಾವು ಹೇಗೆ ಮತ್ತೊಮ್ಮೆ ಟಿಕೆಟ್ ಪಡೆದುಕೊಂಡು, ತಮ್ಮ ಸ್ಥಾನವನ್ನು ಹೇಗೆ ಉಳಿಸಿಕೊಳ್ಳಬೇಕು ಅಥವಾ ತಮ್ಮ ಆಪ್ತ ವಲಯದಲ್ಲಿ ಯಾರಿಗಾದರೂ (ಮಕ್ಕಳು, ಸಹೋದರರು ಅಥವಾ ನಿಕಟ ಬಂಧುಗಳು) ಆ ಸ್ಥಾನವನ್ನು ಕೊಡಿಸಬೇಕು ಎಂಬ ಆಲೋಚನೆಯಲ್ಲಿ ತೊಡಗಿ ಅದನ್ನು ಸಾಧಿಸಲು ಯಾವ-ಯಾವ ಮಾರ್ಗಗಳನ್ನು ಹುಡುಕಬೇಕು ಎಂಬ ಸಾಹಸದಲ್ಲಿ ತೊಡಗಿರುತ್ತಾರೆ. ಇವರಿಗೆ ಅಥವಾ ಆ ಸ್ಥಾನದ ಆಕಾಂಕ್ಷಿಗಳಿಗೆ ಜನರ ಬದುಕಿನ ಬವಣೆಗಳ ಬಗ್ಗೆ ಚಿಂತಿಸಲು ಸಮಯವೆಲ್ಲಿದೆ?



ಜನಪರವಾದಂಥ ಯೋಜನೆಗಳು, ಕಾರ್ಯನೀತಿಗಳು ಮತ್ತು ಕಾನೂನಾತ್ಮಕ ಕ್ರಮಗಳನ್ನು ಜಾರಿಗೆ ತರಲು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ವಿಧಾನ ಸಭೆ ಅಥವಾ ಸಂಸತ್ತಿನಲ್ಲಿ ಅಧಿಕಾರವನ್ನು ಪಡೆಯಬೇಕು ಎಂಬುದು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಒಂದು ನಿಯಮವೇ ಸರಿ. ಆದರೆ ಈ ಅಧಿಕಾರ ಪಡೆಯುವ ಪ್ರಕ್ರಿಯೆ ಸಮಾಜದ ಎಲ್ಲ ವರ್ಗಗಳನ್ನೂ ಒಳಗೊಳ್ಳುವ ವ್ಯವಸ್ಥೆಯಾಗಬೇಕೇ ಹೊರತು, ಅದು ಕೆಲವರ ವೈಯುಕ್ತಿಕ ಹಕ್ಕಲ್ಲ. ಸಂವಿಧಾನದ ಆಶಯವೂ ಇದೇ ಆಗಿತ್ತು. ಈ ಅಸಮಾನ ಸಮಾಜದಲ್ಲಿ ಬದಲಾವಣೆಯನ್ನು ತರಬೇಕಾದರೆ, ಅದು ವಿವಿಧ ಸ್ತರಗಳಲ್ಲಿ ಅಧಿಕಾರ ಹಂಚಿಕೆಯಾದಾಗ ಮಾತ್ರ ಸಾಧ್ಯ. ಆದರೆ ವಾಸ್ತವದಲ್ಲಿ ಹಾಗಾಗುತ್ತಿಲ್ಲ. ಕೆಲವೇ ವ್ಯಕ್ತಿಗಳ, ಕುಟುಂಬಗಳ, ಜಾತಿಗಳ ಅಥವಾ ಸಾಮಾಜಿಕ-ಆರ್ಥಿಕ-ರಾಜಕೀಯ ಅನುಕೂಲಗಳನ್ನು ಹೊಂದಿರುವ ವರ್ಗಗಳು ಮಾತ್ರ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ಭಾಗವಹಿಸುವ ಅವಕಾಶಗಳ ಸಿಂಹಪಾಲು ಪಡೆಯುತ್ತಿದ್ದಾರೆ.

ಸಂವಿಧಾನ ಕಂಡ ಅಧಿಕಾರದ ಮರು ಹಂಚಿಕೆಯ ಕನಸು ಕನಸಾಗಿಯೇ ಉಳಿದಿದೆ. ಹಣ ಮತ್ತು ಪ್ರಭಾವಿ ವಲಯದ ಸಂಪರ್ಕ- ಇವೆರಡೂ ಚುನಾವಣಾ ರಾಜಕೀಯದಲ್ಲಿ ಪ್ರವೇಶ ಪಡೆಯಲು ಅನಿವಾರ್ಯ ಎನ್ನುವಂಥ ಪರಿಸ್ಥಿತಿ ಸೃಷ್ಟಿಯಾಗಿದೆ. ವ್ಯಕ್ತಿ ಕೇಂದ್ರಿತ ರಾಜಕಾರಣ, ವಿಷಯ ಕೇಂದ್ರಿತ ರಾಜಕಾರಣವನ್ನು ಹಿಂದೆ ತಳ್ಳಿದೆ. ಅಧಿಕಾರಾರೂಢ ವ್ಯಕ್ತಿಗಳ-ವ್ಯವಸ್ಥೆಗಳ ಸಾಧನೆಗಳ ಆಧಾರದ ಮೇಲೆ ಚುನಾವಣೆಗಳು ಇಂದು ಎಷ್ಟು ಕ್ಷೇತ್ರಗಳಲ್ಲಿ ನಡೆಯುತ್ತಿವೆ?

ಬಹುತೇಕ ರಾಜಕೀಯ ಪ್ರವೇಶಾಕಾಂಕ್ಷಿಗಳು ಹೇಳುವುದು ನಾವು ಸಮಾಜ ಸೇವೆ ಮಾಡಲು ಈ ಅವಕಾಶವನ್ನು ಬಳಸುತ್ತೇವೆ ಎಂದೇ. ಹಾಗೆ ಮಾಡಿರುವವರು ನಮ್ಮ ನಡುವೆ ಇಲ್ಲವೇ ಇಲ್ಲವೆಂದಲ್ಲ. ಆದರೆ ಸಮಾಜ ಸೇವೆ ಮಾಡುವ ಮನಸ್ಸಿರುವ ಎಲ್ಲರಿಗೂ ರಾಜಕೀಯ ಪ್ರವೇಶಕ್ಕೆ ಅವಕಾಶವೂ ಇರುವುದಿಲ್ಲ, ಹಾಗೆ ಇರಬೇಕಾಗಿಯೂ ಇಲ್ಲ. ಜನಪರ ಕಾಳಜಿಗಳಿದ್ದರೆ ಯಾವ ಪ್ರಮಾಣದಲ್ಲಿಯಾದರೂ ಸಮಾಜ ಸೇವೆ ಮಾಡಬಹುದು ಎನ್ನುವ ಸರಳ ಸತ್ಯವನ್ನು ನಾವು ಮನಗಂಡರೆ ಸಾಕು.

ಜಾತಿ ಎಂಬ ಜಾಲ

ಜಾತಿಯೆನ್ನುವುದು ಭಾರತೀಯ ಸಮಾಜದ ಅಂತರಾಳದಲ್ಲಿ ಹಾಸುಹೊಕ್ಕಾಗಿದೆಯಷ್ಟೇ ಅಲ್ಲ, ಅನೇಕ ಭಾರತೀಯರ ಮನಸ್ಥಿತಿಯಲ್ಲಿಯೂ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿದೆ. ಇಂದಿಗೂ ಅನೇಕರು ತಮ್ಮನ್ನು ಗುರುತಿಸಿ ಕೊಳ್ಳುವುದು ಅಥವಾ ಇತರರನ್ನು, ಗುರುತಿಸುವುದು ಜಾತಿಯ ಮೂಲಕವೇ. ಈ ದೌರ್ಬಲ್ಯವನ್ನು, ಅಧಿಕಾರವನ್ನು ಪಡೆಯಲು ಚುನಾವಣಾ ರಾಜಕಾರಣ ಬಳಸಿಕೊಳ್ಳತ್ತದೆ. ಬಹುತೇಕ ಕ್ಷೇತ್ರಗಳಲ್ಲಿ ನಡೆಯುತ್ತಿರುವುದು ಜಾತಿಯ ಲೆಕ್ಕಾಚಾರಗಳೇ.

ವ್ಯಕ್ತಿಗಿಂತ ಜಾತಿ ಮುಖ್ಯ ಎಂಬ ಭಾವನೆ ಇಂದಿಗೂ ನಮ್ಮ ಸಮಾಜದಲ್ಲಿ ಭಯ ಹುಟ್ಟಿಸುವಂಥ ಪ್ರಮಾಣದಲ್ಲಿ ಪಸರಿಸುತ್ತಿದೆ. ಬಹುತೇಕ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ನಿರ್ಧರಿಸುವಂಥ ಅತ್ಯಂತ ಪ್ರಬಲ ನಿರ್ಧಾರವೆಂದರೆ ಆ ಕ್ಷೇತ್ರದ ಮತದಾರರ ಜಾತಿವಾರು ಜನಸಂಖ್ಯೆ. ಎಲ್ಲ ಪಕ್ಷಗಳೂ ಆಯಾ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವ ಜಾತಿಯ ಪ್ರತಿನಿಧಿಗಳನ್ನೇ ಆಯ್ಕೆ ಮಾಡುವುದು. ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿ ಒಂದೇ ಜಾತಿಯ ಹಿನ್ನೆಲೆಯಿಂದ ಬಂದಾಗ ಮತಗಳು ಹಂಚಿ ಹೋಗುವುದಂತೂ ಖಂಡಿತ. ಒಮ್ಮೊಮ್ಮೆ ಅರ್ಹ ಅಭ್ಯರ್ಥಿಗಳು ಸೋಲನ್ನು ಅನುಭವಿಸುವುದೂ ಉಂಟು.

ಜಾತ್ಯಾತೀತ ಸಮಾಜವನ್ನು ಕಟ್ಟುವ ಪ್ರಗತಿಪರ ಶಕ್ತಿಗಳ ಕನಸು ಎತ್ತ ಸಾಗುತ್ತಿದೆ? ಜಾತಿ ವ್ಯವಸ್ಥೆ ಸಮ ಸಮಾಜದ ನಿರ್ಮಾಣಕ್ಕೆ ಅತೀ ದೊಡ್ಡ ಕುತ್ತು. ಆದರೆ ಈ ಸಮಾಜದಲ್ಲಿ ಎಷ್ಟು ಮುಕ್ತವಾಗಿ ಜಾತಿಯ ಹೆಸರಿನಲ್ಲಿ ರಾಜಕೀಯ ವ್ಯವಹಾರಗಳು ನಡೆಯುತ್ತಿವೆ? 2023 ರ ರಾಜ್ಯ ಚುನಾವಣೆಗಳಲ್ಲೂ ಜಾತಿ ಪ್ರಬಲವಾಗಿ ತನ್ನ ಪ್ರಭಾವವನ್ನು ತೋರಿಸುತ್ತಿದೆ. ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಪ್ರಚಾರದವರೆಗೆ ಅನೇಕ ಮಠಗಳು, ಜಾತಿ ಸಂಘಟನೆಗಳು ಪ್ರತ್ಯಕ್ಷವಾಗಿ, ಇಲ್ಲ ಪರೋಕ್ಷವಾಗಿ ಒತ್ತಡ ಗುಂಪುಗಳಾಗಿ ಕೆಲಸ ಮಾಡುತ್ತಿವೆ.

ಈ ಬಗೆಯ ಜಾತಿ ಸಮೀಕರಣ ಸಮಾಜಕ್ಕೆ ನೀಡುತ್ತಿರುವ ಸಂದೇಶವೇನು? ವಿಶೇಷವಾಗಿ ಯುವ ಸಮುದಾಯ ಕಲಿಯುವ ಪಾಠಗಳಾದರೂ ಏನು? ಜಾತಿಯ ಜೊತೆ ಗುರುತಿಸಿಕೊಳ್ಳುವುದು ಬದುಕಲು, ಅವಕಾಶಗಳನ್ನು ಪಡೆಯಲು ಅನಿವಾರ್ಯವೆಂಬ ಹಂತಕ್ಕೆ ಅನೇಕರು ತಲುಪುತ್ತಿದ್ದಾರೆ ಎಂದರೆ, ನಮ್ಮ ಸಮಾಜದ ಭವಿಷ್ಯದ ಹೆಜ್ಜೆಗಳು ಯಾವ ದಿಕ್ಕಿನಲ್ಲಿ ಚಲಿಸುತ್ತವೆ? ಪ್ರಜ್ಞಾವಂತರಾದರೂ ಇಂಥ ವಿಚಾರಗಳತ್ತ ಗಮನ ಹರಿಸಿ, ಭವಿಷ್ಯದ ಪ್ರಜೆಗಳನ್ನು, ಮತದಾರರನ್ನು ಎಚ್ಚರಿಸುವ ಕೆಲಸ ಈಗಲಾದರೂ ಆಗಬೇಕಾಗಿದೆ.

ಪ್ರಜಾಪ್ರಭುತ್ವವೋ ಪುರುಷ ಪ್ರಭುತ್ವವೋ?

ಇತರ ಅನೇಕ ದೇಶಗಳಿಗೆ ಹೋಲಿಸಿದಾಗ ಭಾರತದ ಮಹಿಳೆಯರು ಮತದಾನದ ಹಕ್ಕನ್ನು ಪಡೆಯಲು ದೀರ್ಘ ಕಾಲಿಕ ಹೋರಾಟವೇನೂ ನಡೆಯಲಿಲ್ಲ.ಆದರೆ ಅವರ ಭಾಗವಹಿಸುವಿಕೆ ಮತ ಚಲಾಯಿಸಲು ಮಾತ್ರ ಸೀಮಿತವಾದಂತಿದೆ. ಮಹಿಳೆಯರಿಗೆ ಮೀಸಲಾತಿ ನೀಡುವ 73 ಮತ್ತು 74ನೇ ತಿದ್ದುಪಡಿಗಳಿಗೆ ನಾಂದಿ ಹಾಡಿದ ನಮ್ಮ ರಾಜ್ಯದಲ್ಲಿ ವಿಧಾನ ಸಭೆಯಲ್ಲಿ ಬರ ಬರುತ್ತಾ ಮಹಿಳೆಯರ ಪ್ರಾತಿನಿಧ್ಯ ಕಡಿಮೆಯಾಗುತ್ತಿದ್ದು, ಕರ್ನಾಟಕದ ಚುನಾವಣಾ ರಾಜಕಾರಣ ಪುರುಷ ಕೇಂದ್ರಿತವಾಗುತ್ತಿರುವುದಕ್ಕೆ ಸಾಕ್ಷಿ.

ಈ ಬಾರಿಯ ಚುನಾವಣೆಗಳಲ್ಲಿ ಇದುವರೆಗೂ ಪ್ರಕಟವಾಗಿರುವ ಮೂರು ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ಪಟ್ಟಿಯಲ್ಲಿ ಮಹಿಳೆಯರ ಪ್ರಮಾಣ ಶೇಕಡಾ ನಾಲ್ಕನ್ನೂ ದಾಟಿಲ್ಲ. ಇದು ನಮ್ಮ ಪ್ರಜಾಪ್ರಭುತ್ವ ಹೇಗೆ ಮಹಿಳೆಯರನ್ನು ಒಳಗೊಳ್ಳುವುದರಲ್ಲಿ ಸೋತಿದೆ ಎಂಬುದನ್ನು ತೋರಿಸುತ್ತಿದೆ. ಮಹಿಳೆಯರನ್ನು ಮತದಾರರನ್ನಾಗಿ, ಪ್ರಚಾರಕರನ್ನಾಗಿ ಬಳಸಿಕೊಂಡು, ಮಹಿಳೋದ್ಧಾರಕರಾಗಿ ತಮ್ಮನ್ನು ಬಿಂಬಿಸಿಕೊಳ್ಳುವ ಪುರುಷ ಮನಸ್ಸುಗಳು ಅಧಿಕಾರದ ಮರು ಹಂಚಿಕೆಯನ್ನು ಒಪ್ಪಿ ಕೊಳ್ಳಲು ತಯಾರಿಲ್ಲ. ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿಯನ್ನು ನೀಡಲು ಅಡ್ಡಿ ಹಾಕುತ್ತಿರುವವರಿಗೆ, ಈ ಮಸೂದೆ ಜಾರಿಗೆ ಬಂದರೆ ತಾವು ಅಧಿಕಾರವನ್ನು ಕಳೆದುಕೊಳ್ಳುವ ಭಯವಷ್ಟೇ. ಈ ಬಾರಿಯ ಕರ್ನಾಟಕದ ವಿಧಾನ ಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತಷ್ಟು ಇಳಿಮುಖವಾಗುವ ಎಲ್ಲ ಸೂಚನೆಗಳೂ ಈಗಾಗಲೇ ಹೊರಬಿದ್ದಿದ್ದು, ಪ್ರಜಾ ಪ್ರಭುತ್ವ ಪುರುಷ ಪ್ರಭುತ್ವವಾಗಿ ಪರಿವರ್ತಿತವಾಗುತ್ತಿದೆ.

ಇನ್ನೇನು ಒಂದು ತಿಂಗಳ ಒಳಗೆ ಚುನಾವಣೆಗಳು ನಡೆದು ಫಲಿತಾಂಶಗಳು ಘೋಷಣೆಯಾಗುತ್ತವೆ. ಇದುವರೆಗೂ ನಡೆದಿರುವ ಚುನಾವಣೆಗಳಿಗೂ 16ನೇ ಚುನಾವಣೆಗೂ ಹೆಚ್ಚಿನ ವ್ಯತ್ಯಾಸ ಕಾಣುತ್ತಿಲ್ಲ. ಈಗಲಾದರೂ ಮತದಾರರು ಜಾಗೃತರಾಗಿ ಮುಖ್ಯವಾಹಿನಿ ರಾಜಕಾರಣ ತಮ್ಮನ್ನು ಮತ್ತೊಮ್ಮೆ ಅಂಚಿಗೆ ತಳ್ಳದಿರುವಂತೆ ನೋಡಿಕೊಳ್ಳಬೇಕು.

ಒಗಟುಗಳು

- ಒಂದು ಹಣ್ಣಿಗೆ ಹನ್ನೆರಡು ತೊಳೆ ಮತ್ತೂ ಮೂವತ್ತು ಬೀಜ
- ಗುಂಡಾಕಾರ ಮೈ೦ಪೆಲ್ಲಾ ತೂತು
- ಬಂಗಾರದ ಗುಬ್ಬಿ ಬಾಲದಲ್ಲೇ ನೀರನ್ನು ಕುಡಿ೦ಯುತ್ತೆ
- ಒಂದು ಮರ , ಮರದಾಗ ಅಲ್ಲ, ಅಲ್ಲಿನಾಗ ಕೊಬ್ರಿ ಗುಂಡ
- ಅನ್ನ ಮಾಡಲಿಕ್ಕೆ ಬಾರದಂತಹ ಅಕ್ಕಿ 0ಯಾವುದು
- ಬೆಳ್ಳಿ ಬಟ್ಟಲಲ್ಲಿ ಮುತ್ತಿನ ಬಿಂದು
- ಲಟಪಟ ಲೇಡಿಗೆ ಒಂದೇ ಕಣ್ಣು
- ಹಸಿರು ಕೋಲಿಗೆ ಮುತ್ತಿನ ತುರಾಯಿ
- ಬಿಳಿ ಹುಲ್ಲಲ್ಲಿ ಕೆಂಪು ಕುರಿಮರಿ
- ಸೂಜಿ ಸಣ್ಣಕಾಗೆ ಬಣ್ಣ
- ಹೋದರು ಇರುತ್ತೆ ಬಂದರೂ ಕಾಡುತ್ತೆ.ಇದು ಏನು?
- ಆರು ಕಾಲಿನ ಆನೆ, ಆನೆ ತಿನ್ನುತ್ತೆ ನೀರು ಕುಡಿ೦ಯುಲ್ಲ
- ಊರಿಗೆಲ್ಲ ಒಂದೇ ಕಂಬಳಿ
- ಅಟ್ಟದ ಮೇಲೆ ಪುಟ್ಟ ಲಕ್ಷ್ಮಿ
- ಬತ್ತಿ ಮನೆ೦ಪೆಲ್ಲ ಬೆಳಕು
- ಕಣ್ಣಿಗೆ ಕಾಣೋದಿಲ್ಲ, ಕೈಗೆ ಸಿಗೋದಿಲ್ಲ
- ಕಣ್ಣಿಗೆ ಹತ್ತಿರ ಕಾಲಿಗೆ ದೂರ
- ಊಟಕ್ಕೆ ಮೊದಲು ನಾನು ಅಂತ ಬರುತ್ತೆ
- ಹಸಿರು ಮೈ ಹಳದಿ ಮೈ ಪೇಟೇಲಿ ಕುಳಿತು ಎಲ್ಲರನ್ನು ಕರೆ೦ಯುತ್ತೆ
- ಹುಲಿ೦ಯು ಚಿಕ್ಕಮ್ಮ , ಇಲಿ೦ಯು ಮುಕ್ಕಮ್ಮ
- ಅಂಕಡೊಂಕಿನ ಬಾವಿ ಹೊಕ್ಕು ನೋಡಿದ್ರೆ ಮುಕ್ಕ ನೀರಿಲ್ಲ
- ಕೆಂಪು ಕುದುರೆ ಕರಿ ತಡಿ ಒಬ್ಬ ಏರುತಾನೆ ಒಬ್ಬ ಇಳಿತಾನೆ
- ಮೂರೂ ಪಕ್ಷಿಗಳು ಗೂಡಿಗೆ ಹೋಗುವಾಗ ಬೇರೆ ಬೇರೆ ಬಣ್ಣ ಬರುವಾಗ ಬಣ್ಣ
- ಆಕಾಶದೊಳಗಿನ ಗಿಣಿ ಊಟದ ಹೊತ್ತಿಗೆ ರಾಣಿ
- ಎರಡು ಬಾವಿಗಳ ನಡುವೆ೦ಯೊಂದು ಸೇತುವೆ
- ತಲೆ ಇಲ್ಲ , ನಡು ಇಲ್ಲ , ಕೈಗಳಿದ್ದರು ಬೆರಳಿಲ್ಲ
- ತಿಂಡಿಗೆ ಕಡಿಮೆ ಇಲ್ಲ ,ತೀರ್ಥ ಕುಡಿದರೆ ಸಾವು
- ಒಬ್ಬಳು ಮುಲುಗಿದಳು, ಒಬ್ಬಳು ಕರಗಿದಳು , ಒಬ್ಬಳು ತೇಲ್ಬಿದಳು
- .ಹೋಗೋದು ಮುಳುಗೋದು ತರೋದು ಏನು?

ಇನ್ನು ಚರ್ಚೆ, ವರದಿ ಕಾನೂನು ಹಂತದಲ್ಲೇ 'ಚುನಾವಣಾ ಸುಧಾರಣೆಗಳು'


ಕೆ.ವಿ.ವಾಸು, ವಕೀಲರು ಮತ್ತು ನೋಟರಿ, 9341731661

ಇನ್ನೇನು ಕೆಲವೇ ದಿನಗಳಲ್ಲಿ ರಾಜ್ಯ ವಿಧಾನ ಸಭೆಗೆ ಚುನಾವಣೆ ನಡೆಯಲಿದೆ. ಈ ವರ್ಷಾಂತ್ಯದಲ್ಲಿ ಕೆಲವು ರಾಜ್ಯಗಳ ವಿಧಾನ ಸಭೆಗಳಿಗೂ ಚುನಾವಣೆ ನಡೆಯಲಿದ್ದು, ಮುಂದಿನ ವರ್ಷ ಲೋಕಸಭಾ ಚುನಾವಣೆ ನಡೆಯಲಿದೆ. ಈ ನಡುವೆ ಚುನಾವಣಾ ಸುಧಾರಣೆಗಳ ಬಗ್ಗೆ ಚರ್ಚೆ ಪ್ರಾರಂಭವಾಗಿದ್ದು, ಈ ಹಿನ್ನಲೆಯಲ್ಲಿ ಭಾರತೀಯ ಚುನಾವಣಾ ವ್ಯವಸ್ಥೆಯ ಬಗ್ಗೆ ಚರ್ಚಿಸುವುದು ಪ್ರಸ್ತುತವೆನಿಸುತ್ತದೆ.

ಭಾರತದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲು "ಕೇಂದ್ರ ಚುನಾವಣಾ ಆಯೋಗ" ಅಸ್ತಿತ್ವದಲ್ಲಿದ್ದು, ಪ್ರತಿಯೊಂದು ರಾಜ್ಯದಲ್ಲೂ "ರಾಜ್ಯ ಚುನಾವಣಾ ಆಯೋಗ" ಕಾರ್ಯ ನಿರ್ವಹಿಸುತ್ತಿವೆ. ಭಾರತೀಯ ಚುನಾವಣಾ ಆಯೋಗ ಒಂದು ಸಾಂವಿಧಾನಿಕ ಹಾಗೂ ಸ್ವಾಯತ್ತ ಸಂಸ್ಥೆಯಾಗಿದ್ದು ಇದು ಪ್ರಜಾಪ್ರತಿನಿಧಿ ಕಾಯ್ದೆ 1951ರ ಪ್ರಕಾರ ಕಾರ್ಯ ನಿರ್ವಹಿಸುತ್ತದೆ. ಪ್ರಾರಂಭದಲ್ಲಿ ಚುನಾವಣಾ ಆಯೋಗವು " ಭಾರತ ಮುಖ್ಯ ಚುನಾವಣಾಧಿಕಾರಿ' (Chief Election Commissioner) ಅಡಿಯಲ್ಲಿ ಕೆಲಸ ಮಾಡುತ್ತಿತ್ತು. 1989 ರ ನಂತರದಲ್ಲಿ ಚುನಾವಣಾ ಆಯೋಗ ಒಂದಕ್ಕಿಂತ ಹೆಚ್ಚು ಕಮೀಷನರ್‌ಗಳನ್ನು ಹೊಂದಿದ ಆಯೋಗವಾಗಿದೆ. ಅದೇ ರೀತಿ ಪ್ರತಿಯೊಂದು ರಾಜ್ಯದಲ್ಲೂ ಆಯಾ ರಾಜ್ಯಗಳ ಮುಖ್ಯ ಚುನಾವಣಾ ಆಯುಕ್ತರಿದ್ದು, ಇವರು ಕೇಂದ್ರ ಚುನಾವಣಾ ಆಯೋಗದ ನಿರ್ದೇಶನಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಾರೆ.

ಭಾರತೀಯ ಚುನಾವಣಾ ವ್ಯವಸ್ಥೆಯಲ್ಲಿ ಗಮನಾರ್ಹ ಸುಧಾರಣೆ ತಂದ ಕೀರ್ತಿ ದಿವಂಗತ ಟಿ.ಎನ್ ಶೇಷನ್ (1990-96) ರವರಿಗೆ ಸಲ್ಲುತ್ತದೆ. ಮತದಾರರ ಗುರುತಿನ ಚೀಟಿ ಸೇರಿದಂತೆ ಅವರು ಹಲವಾರು ಸುಧಾರಣಾ ಕ್ರಮಗಳನ್ನು ಜಾರಿಗೆ ತಂದರು. ಭ್ರಷ್ಟ ರಾಜಕಾರಿಣಿಗಳ ಪಾಲಿಗೆ ಅವರು ಸಿಂಹ ಸ್ವಪ್ನವಾಗಿದ್ದರು. ಆವರು ಇನ್ನೂ ಕೆಲವು ಕಾಲ ಅದೇ ಹುದ್ದೆಯಲ್ಲಿ ಮುಂದುವರೆದಿದ್ದರೆ, ನಮ್ಮ ಚುನಾವಣಾ ವ್ಯವಸ್ಥೆಯ ಕೊಳೆಯನ್ನು ಮತ್ತಷ್ಟು ಶುದ್ಧೀಕರಿಸಬಹುದಾಗಿತ್ತು. 2014 ರ ಲೋಕಸಭಾ ಚುನಾವಣೆಯಲ್ಲಿ ದೇಶದಲ್ಲಿ ಮೊದಲ ಬಾರಿಗೆ ವಿದ್ಯುನ್ಮಾನ ಚುನಾವಣಾ ಯಂತ್ರ (Electronic Voting Machine) ಅನ್ನು ಜಾರಿಗೆ ತರಲಾಯಿತು.

ಭಾರತದ ಮತದಾರರು ಚುನಾವಣೆಗಳ ಮೂಲಕ ತಮ್ಮ ಪ್ರತಿನಿಧಿಗಳನ್ನು ಗ್ರಾಮ ಪಂಚಾಯತಿ ಮಟ್ಟದಿಂದ ಹಿಡಿದು ಪಾರ್ಲಿಮೆಂಟ್ ವರೆಗೂ ಆರಿಸಿ ಕಳುಹಿಸುತ್ತಾರೆ ರಾಷ್ಟ್ರಪತಿ ಹಾಗೂ ಉಪ ರಾಷ್ಟ್ರಪತಿಗಳ ಚುನಾವಣೆಗಳನ್ನು ಸಹಾ ಕೇಂದ್ರೀಯ ಚುನಾವಣಾ ಆಯೋಗವೇ ನಡೆಸುತ್ತದೆ.



ಹೀಗಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಚುನಾವಣೆಗಳಿಗೆ ಇನ್ನಿಲ್ಲದ ಮಹತ್ವ ಲಭಿಸಿದೆ. ಆದರೆ, ಕಳೆದ ಹಲವಾರು ವರ್ಷಗಳಿಂದೀಚೆಗೆ ಸಾರ್ವತ್ರಿಕ ಚುನಾವಣೆಗಳು ಗಬ್ಬೆದ್ದು ಹೋಗಿವೆ. ಮತದಾರರಿಗೆ ಹಣ, ಹೆಂಡ, ಒಡವೆ, ವಸ್ತ್ರ ಮುಂತಾದ ಆಮಿಷಗಳನ್ನು ಒಡ್ಡಿ, ಮತ ಪಡೆಯುವ ಪ್ರವೃತ್ತಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಹಣ ಬಲ, ತೋಳ್ಬಲ, ಮುಂತಾದವು ಹೆಚ್ಚಿನ ಪಾತ್ರ ವಹಿಸುತ್ತಿವೆ. ಹಲವಾರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವಂತಹ ವ್ಯಕ್ತಿಗಳು ರಾಜಾ ರೋಷವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು ಬರುತ್ತಿದ್ದಾರೆ. 2008 ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸುಮಾರು 195 ಅಭ್ಯರ್ಥಿಗಳು ಕ್ರಿಮಿನಲ್ ಹಿನ್ನಲೆ ಹೊಂದಿದ್ದರೆ, ಇವರ ಸಂಖ್ಯೆ2013 ರ ಚುನಾವಣೆಯಲ್ಲಿ 334 ಕ್ಕೂ ಹಾಗೂ 2018 ರ ಚುನಾವಣೆಯಲ್ಲಿ 391ಕ್ಕೂ ಏರಿತು. 2014 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಇಂತಹ ಕ್ರಿಮಿನಲ್ ಹಿನ್ನಲೆ ಹೊಂದಿದ ಶೇ 26 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಈ ರೀತಿ ವಿಧಾನ ಸಭಾ ಹಾಗೂ ಲೋಕ ಸಭಾ ಚುನಾವಣೆಗಳಲ್ಲಿ ಕ್ರಿಮಿನಲ್‌ಗಳು ಸ್ಪರ್ಧಿಸುವುದಕ್ಕೆ ಕಡಿವಾಣ ಹಾಕಬೇಕಾಗಿದೆ.

"ಜಾತಿ" ಸಹಾ ಚುನಾವಣಾ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಚುನಾವಣಾ ಸಂಧರ್ಭಗಳಲ್ಲಿ ಅಕ್ರಮ ಹಣ ಅಥವಾ ಕಪ್ಪು ಹಣವನ್ನು ಎಗ್ಗಿಲ್ಲದೇ ಬಳಸಲಾಗುತ್ತದೆ. ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗವಹಿಸಲು ಜನರನ್ನು ದುಡ್ಡು ಕೊಟ್ಟು ಕರೆ ತರಲಾಗುತ್ತದೆ. ಹೀಗಾಗಿ ಭಾರತೀಯ ಚುನಾವಣಾ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆ ಆಗಬೇಕಾಗಿದೆ.

ಪ್ರಸ್ತುತ, ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸುವ ವ್ಯಕ್ತಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶವಿದೆ. ಆದರೆ, ಈ ನಿಯಮಕ್ಕೆ ತಿದ್ದುಪಡಿ ತಂದು ಯಾವುದೇ ಅಭ್ಯರ್ಥಿ ಒಂದಕ್ಕಿಂತ ಹೆಚ್ಚು ಕ್ಷೇತ್ರದಲ್ಲಿ ಸ್ಪರ್ಧಿಸಬಾರದೆಂಬ ನಿಯಮ ಜಾರಿಗೆ ತರಬೇಕು. ಇದರಿಂದ ಚುನಾವಣೆಗಳಲ್ಲಿ, ಶಿಸ್ತು, ಬದ್ಧತೆಗಳನ್ನು ನಿರೀಕ್ಷಿಸಬಹುದು.

ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ತಮ್ಮ ಸ್ಥಿರ ಮತ್ತು ಚರ ಆಸ್ತಿಗಳ ಬಗ್ಗೆ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಮಾಣ ಪತ್ರ ಸಲ್ಲಿಸಬೇಕು. ಬಹುತೇಕ ಪ್ರಸಂಗಗಳಲ್ಲಿ, ಅಭ್ಯರ್ಥಿಗಳು ಸುಳ್ಳು ಪ್ರಮಾಣ ಪತ್ರ ನೀಡಿ, " ರಾಮನ ಲೆಕ್ಕ" ಕೃಷ್ಣನ ಲೆಕ್ಕ" ತೋರಿಸುತ್ತಾರೆ. ಇಂತಹ ಆಸ್ತಿ ವಿವರಗಳ ಬಗ್ಗೆ ಕೂಲಂಕುಶ ತನಿಖೆ ನಡೆಸಿ, ತನಿಖೆಯಲ್ಲಿ ಅವರು ನೀಡಿರುವ ಆಸ್ತಿಪಾಸ್ತಿಗಳ ವಿವರ ತಪ್ಪು ಎಂದು ಕಂಡು ಬಂದರೆ ಅಂತಹ ಅಭ್ಯರ್ಥಿಗಳ ಹೆಚ್ಚುವರಿ ಆಸ್ತಿಗಳನ್ನು ರಾಜ್ಯ ಅಥವಾ ಕೇಂದ್ರ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವ ನಿಯಮವನ್ನು ಜಾರಿಗೆ ತರಬೇಕು.

ಯಾವುದೇ ಅಭ್ಯರ್ಥಿ ತನ್ನ ಜಾತಿಯ ಆಧಾರದ ಮೇಲೆ ಮತ ಕೇಳಿದರೆ, ಅಂತಹ ಅಭ್ಯರ್ಥಿಯನ್ನು ಅನರ್ಹಗೊಳಿಸಬೇಕು. ಚುನಾವಣಾ ಅಕ್ರಮಗಳಲ್ಲಿ ಭಾಗಿಯಾಗುವ ಅಭ್ಯರ್ಥಿಗಳನ್ನು ಕಡೆಯ ಪಕ್ಷ 10 ವರ್ಷಗಳ ಕಾಲ ಮುಂದೆ ನಡೆಯುವ ಯಾವ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ನಿಷೇಧ ಹೇರಬೇಕು.

ಈ ರೀತಿ ಭಾರತೀಯ ಚುನಾವಣಾ ವ್ಯವಸ್ಥೆಗೆ ಕಾಯಕಲ್ಪ ನೀಡಲು ಸಾಕಷ್ಟು ಸುಧಾರಣಾ ಕ್ರಮಗಳ ಅಗತ್ಯವಿದೆ. ಇಂತಹ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲು ಜನತಾ ಪ್ರಾತಿನಿಧ್ಯ ಕಾಯಿದೆಗೆ ಸೂಕ್ತ ತಿದ್ದುಪಡಿ ತರಬೇಕು. ಅಂದರೆ, ದೇಶದ ಸಂಸತ್ತು ಇದರ ಬಗ್ಗೆ ಗಮನ ಹರಿಸಬೇಕು. ಇಂತಹ ಕ್ರಾಂತಿಕಾರಿ ಮಸೂದೆಯನ್ನು ತರಲು ಪ್ರಬಲವಾದ ರಾಜಕೀಯ ಇಚ್ಛಾಶಕ್ತಿ ಇರಬೇಕು. ಅದೂ ಅಲ್ಲದೇ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷ ಮನಸ್ಸು ಮಾಡಬೇಕು. ಆದರೂ ಭವಿಷ್ಯದಲ್ಲಿ ಇಂತಹ ತಿದ್ದುಪಡಿ ಮಸೂದೆಯನ್ನು ಭಾರತದ ಸಂಸತ್ ಅಂಗೀಕರಿಸುತ್ತದೆ ಎಂಬ ಆಶಾಭಾವನೆ ನಮ್ಮದಾಗಿರಲಿ.


ಭಾರತ ಸಂವಿಧಾನದ 324 ರಿಂದ 329 ನೇ ವಿಧಿಗಳು ಚುನಾವಣೆಗಳ ಬಗ್ಗೆ ವಿವರಣೆ ಹೊಂದಿವೆ. ದೇಶದ ಪ್ರಥಮ ಚುನಾವಣಾ ಆಯುಕ್ತರಾಗಿ ಕುಮಾರ್ ಸೇನ್ ಸೇವೆ ಸಲ್ಲಿಸಿದ್ದಾರೆ. ಟಿ.ಎನ್ ಶೇಷನ್, ಪೆರಿ ಶಾಸ್ತ್ರಿ, ವಿ.ಎಸ್.ರಮಾದೇವಿ ಮುಂತಾದವರು ಈ ಪ್ರಮುಖ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಇದುವರೆಗೂ ಮುಖ್ಯ ಚುನಾಚಣಾ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ ಮಹನೀಯರು;

1.	ಸುಕುಮಾರ್ ಸೇನ್	21.03.1950 ರಿಂದ 19.12.1958 ವರೆಗೆ
2.	ಕೆ.ವಿ.ಕೆ. ಸುಂದರಮ್	20.12.1958 ರಿಂದ. 30.08.1967 ವರೆಗೆ
3.	ಎಸ್ ಪಿ ಸೇನ್ ವರ್ಮಾ	01.10.1967 ರಿಂದ 30.09.1972 ವರೆಗೆ
4.	ಡಾ. ನಾಗೇಂದ್ರ ಸಿಂಗ್	01.10.1972 ರಿಂದ 06.02.1973 ವರೆಗೆ
5.	ಟಿ. ಸ್ವಾಮಿನಾಥನ್	07.02.1973 ರಿಂದ17.06.1977 ವರೆಗೆ
6.	ಎಸ್ ಎಲ್ ಷಕ್ದರ್	18.06.1977 ರಿಂದ 17.06.1982 ವರೆಗೆ
7.	ಆರ್.ಕೆ.ತ್ರಿವೇಧಿ	18.06.1982 ರಿಂದ 31.12.1985 ವರೆಗೆ
8.	ಆರ್ ವಿ ಎಸ್ ಶಾಸ್ತ್ರಿ	01.01.1986 ರಿಂದ 25.11.1990 ವರೆಗೆ
9.	ಶ್ರೀಮತಿ ವಿ ಎಸ್ ರಮಾದೇವಿ	26.11.1990 ರಿಂದ 11.12.1990 ವರೆಗೆ
10.	ಟಿ ಎನ್ ಶೇಷನ್	12.12.1990 ರಿಂದ 11.12.1996 ವರೆಗೆ
11.	ಎಂ.ಎಸ್ ಗಿಲ್	12.12.1996 ರಿಂದ. 13.06.2001 ವರೆಗೆ
12.	ಎಂ.ಲಿಂಗ್ಡೋಹ್	14.06.2001 ರಿಂದ 07.02.2004 ವರೆಗೆ
13.	ಟಿ ಎಸ್ ಕೃಷ್ಣಮೂರ್ತಿ	08.02.2004 ರಿಂದ 15.05.2005 ವರೆಗೆ
14.	ಬಿ.ಬಿ.ಟಂಡನ್	16.05.2005 ರಿಂದ 29.06.2006 ವರೆಗೆ
15.	ಎನ್ ಗೋಪಾಲ ಸ್ವಾಮಿ	30.06.2006 ರಿಂದ 20.04..2009 ವರೆಗೆ
16	ನವೀನ್ ಚಾವ್ಲಾ	21.4.2009 ರಿಂದ 29.07.2010 ವರೆಗೆ
17.	ಎಸ್ ಖುರೇಷಿ	30.07.2010 ರಿಂದ. 10.06.2012 ವರೆಗೆ
18.	ವಿ ಎಸ್ ಸಂಪತ್	11.06.2012 ರಿಂದ 15.01.2015 ವರೆಗೆ
19	ಹೆಚ್ ಎಸ್ ಬ್ರಹ್ಮ	16.01.2015 ರಿಂದ 18.04.2015 ವರೆಗೆ
20.	ಡಾ.ನಾಸಿಮ್ ಜೈದಿ	19.94.2015 ರಿಂದ 05.07.2017 ವರೆಗೆ
21.	ಅಚಲ್ ಕುಮಾರ್ ಜ್ಯೋತಿ	06.07.2017 ರಿಂದ 22.01.2018 ವರೆಗೆ
22.	ಓಂ ಪ್ರಕಾಶ್ ರಾವತ್	23.01.2018 ರಿಂದ. 01.12.2018 ವರೆಗೆ
23.	ಸುನೀಲ್ ಅರೋರಾ	02.12.2018 ರಿಂದ 17.04.2021 ವರೆಗೆ
24.	ಸುಶೀಲ್ ಚಂದ್ರ	18.04.2021 ರಿಂದ. 14.05.2022 ವರೆಗೆ)

ಪ್ರಸ್ತುತ ರಾಜೀವ್ ಕುಮಾರ್ ದೇಶದ 25 ನೇ ಮುಖ್ಯ ಚುನಾವಣಾ ಆಯುಕ್ತರಾಗಿ 15.05.2022 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. 25ನೇ ಮುಖ್ಯ ಚುನಾವಣಾ ಆಯುಕ್ತರಾಗಿದ್ದಾರೆ. ಭಾರತದ ಮುಖ್ಯ ಚುನಾವಣಾ ಆಯುಕ್ತರ ಹುದ್ದೆ ಸಾಂವಿಧಾನಿಕ ಹುದ್ದೆಯಾಗಿದ್ದು, ಇವರನ್ನು ಮದ್ಯಭಾಗದಲ್ಲಿ ಸುಲಭವಾಗಿ ಹುದ್ದೆಯಿಂದ ವಜಾಗೊಳಿಸುವಂತಿಲ್ಲ. ಇವರ ವಿರುದ್ಧ ಲೋಕ ಸಭೆ ಮತ್ತು ರಾಜ್ಯಸಭೆಗಳ 2/3 ರಷ್ಟು ಸದಸ್ಯರು ಅವಿಶ್ವಾಸ ನಿರ್ಣಯವನ್ನು ಅಂಗೀಕರಿಸಿದಾಗ ಮಾತ್ರ ರಾಷ್ಟ್ರಪತಿಗಳು ಅಂತಹ ಮುಖ್ಯ ಚುನಾವಣಾ ಆಯುಕ್ತರನ್ನು ಹುದ್ದೆಯಿಂದ ವಜಾಗೊಳಿಸಬಹುದು. ಆದರೆ ಇದುವರೆಗೂ ನಮ್ಮ ದೇಶದಲ್ಲಿ ಯಾವುದೇ ಮುಖ್ಯ ಚುನಾವಣಾಧಿಕಾರಿಯನ್ನು ವಜಾ ಗೊಳಿಸಿದ ಉದಾಹರಣೆ ಇಲ್ಲ.

ಪ್ರಥಮ ಚುನಾವಣೆಯ ಸವಿನೆನಪು





ಡಾ.ಎಚ್.ವಿ.ನಾಗರಾಜ ರಾವ್
ಮೈಸೂರು

1947ರಲ್ಲಿ ಸ್ವಾತಂತ್ರ್ಯವನ್ನು ಗಳಿಸಿಕೊಂಡ ಮೇಲೆ ಭಾರತ ದೇಶವು ಸರ್ವ ತಂತ್ರ ಸ್ವತಂತ್ರ ಗಣರಾಜ್ಯವಾಯಿತು. ಸಂವಿಧಾನಕ್ಕೆ ಅನುಗುಣವಾಗಿ ಪ್ರಜಾ ಪ್ರಭುತ್ವವನ್ನು ಅಳವಡಿಸಿಕೊಂಡು ಸಾರ್ವತ್ರಿಕ ಚುನಾವಣೆಯ ಘೋಷಣೆಯನ್ನು ಮಾಡಲಾಯಿತು. ಸಮಗ್ರ ಭಾರತ ದೇಶದಲ್ಲಿ ಪ್ರಥಮ ಚುನಾವಣೆಯು 1952ರಲ್ಲಿ ನಡೆಯಿತು. ಆಗ ನಾನು ಹತ್ತು ವರ್ಷದ ಬಾಲಕ, ಪ್ರಾಥಮಿಕ ಶಾಲೆಯ ವಿದ್ಯಾರ್ಥಿ. ನಾನಿದ್ದದ್ದು ಅಂದಿನ ಕೋಲಾರ ಜಿಲ್ಲೆಯ (ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ) ಗುಡಿಬಂಡೆ ತಾಲೂಕಿನ ಸೋಮೇನಹಳ್ಳಿ ಎಂಬ ಗ್ರಾಮದಲ್ಲಿ. ಚುನಾವಣೆ ಘೋಷಣೆಯಾದ ಕೆಲವು ದಿನಗಳಲ್ಲಿ ನಮ್ಮ ಹಳ್ಳಿಗೂ ಒಬ್ಬಿಬ್ಬರು ಅಭ್ಯರ್ಥಿಗಳು ಪ್ರಚಾರ ಮಾಡಲು ಕಾರಿನಲ್ಲಿ ಬಂದಿದ್ದರು. ಹುಡುಗರಾದ ನಮಗೆ ಕಾರನ್ನು ನೋಡುವ, ಸಾಧ್ಯವಾದರೆ ಅದನ್ನು ಒಮ್ಮೆ ಮುಟ್ಟಿ ನೋಡುವ ಆಸೆ. ಅಭ್ಯರ್ಥಿಗಳು ಭಾಷಣ ಮಾಡಲಿಲ್ಲ. ಜನರಿಗೆ ಕೈ ಮುಗಿದು ಪಟೇಲರ ಮನೆಯೊಳಕ್ಕೆ ಹೋದರು. ಅಲ್ಲಿ ಅವರು ಏನು ಮಾತನಾಡಿಕೊಂಡರೋ ತಿಳಿಯದು. ಇಲ್ಲಿ ಕಾರನ್ನು ಡ್ರೈವರ್ ನೋಡಿಕೊಳ್ಳುತ್ತಿದ್ದ. ಅವನ ಕಣ್ಣಿಗೆ ಬೀಳದಂತೆ ಪ್ರತಿಯೊಬ್ಬ ಹುಡುಗನೂ ಕಾರನ್ನು ಒಂದು ಕ್ಷಣ ಮುಟ್ಟಿ ವಿಜಯವನ್ನು ಸಾಧಿಸಿದಂತೆ ಕೇಕೆ ಹಾಕಿ ಹೋಗುತ್ತಿದ್ದುದು ನನ್ನ ನೆನಪಿನಲ್ಲಿದೆ.

ಅದೇ ಮೊದಲನೆಯ ಚುನಾವಣೆಯಾದರೂ ಅಷ್ಟರಲ್ಲಾಗಲೇ ಅನೇಕ ಪಕ್ಷಗಳು ಹುಟ್ಟಿದ್ದವು. ಎಲ್ಲಾ ಕಡೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿದ್ದರು. ಅವರ ಚಿಹ್ನೆ ನೇಗಿಲನ್ನು ಹೊತ್ತ ಜೋಡೆತ್ತುಗಳು. ಇನ್ನೊಂದು ಪಕ್ಷ ಭಾರತೀಯ ಜನ ಸಂಘ. ಅದರ ಚಿಹ್ನೆ ದೀಪ. ಇಂತಹ ರಾಜಕೀಯ ಪಕ್ಷಗಳಿಗೆ ಸೇರದ ಸ್ವತಂತ್ರ ಅಭ್ಯರ್ಥಿಗಳೂ ಆಗ ಇದ್ದರು. ಅವರಿಗೆ ಗಾಡಿ, ಕೊಡೆ ಮುಂತಾದ ಗುರುತುಗಳನ್ನು ನೀಡಿದ್ದರೆಂದು ತೋರುತ್ತದೆ. ಆಗ ನಾವು ಕಂಡ ವಿಶೇಷವೆಂದರೆ ಒಬ್ಬ ಅಭ್ಯರ್ಥಿ ತನ್ನ ಪ್ರಚಾರಕ್ಕಾಗಿ ಹಾಡನ್ನು ಹಾಡಿಸಿ ರೆಕಾರ್ಡ್ ಮಾಡಿಸಿ ಧ್ವನಿವರ್ಧಕದಿಂದ ಎಲ್ಲರೂ ಕೇಳಿಸಿಕೊಳ್ಳುವಂತೆ ಮಾಡಿದ್ದ.


**"ಗೋಪಾಲಕೃಷ್ಣನಿಗೋಟು ಕೊಡಿ
ಜೆ.ಟಿ.ಗೋಪಾಲಕೃಷ್ಣನಿಗೋಟು ಕೊಡಿ"**

ಎಂಬ ಹಾಡನ್ನು ಕೇಳಿ ನಾವೆಲ್ಲ ರೋಮಾಂಚಿತರಾಗಿದ್ದೆವು. ಆಮೇಲೆ ಮತದಾನದ ಹಿಂದಿನ ದಿನ ನಮ್ಮೂರಿಗೆ ಒಂದು ಬಸ್ ಬಂತು. ಅದರಿಂದ ಐದು ಜನ ಇಳಿದರು. ಚುನಾವಣೆಗೆ ಬೇಕಾದ ಸಾಮಗ್ರಿಗಳನ್ನೆಲ್ಲಾ ಅವರು ತಂದಿದ್ದರೆಂದು ತೋರುತ್ತದೆ. ಅವರಿಗೆ ಊರಿನ ಮಧ್ಯದಲ್ಲಿದ್ದ ಚಾವಡಿಯ ಕಟ್ಟಡದಲ್ಲಿ ವಸತಿ. ಕೆಲವು ಚಾಪೆಗಳನ್ನು ಅವರಿಗೆ ಒದಗಿಸಲಾಗಿತ್ತು. ಪಟೇಲರೇ ಆ ಸಿಬ್ಬಂದಿಗೆ ಊಟ–ತಿಂಡಿಯ ವ್ಯವಸ್ಥೆ ಮಾಡಿದ್ದರು.

ಆ ಚುನಾವಣೆಯಲ್ಲಿ ವೋಟಿನ ಚೀಟಿಯನ್ನು ಮತದಾರರು ಒಂದೇ ಪೆಟ್ಟಿಗೆಯಲ್ಲಿ ಹಾಕುವ ವ್ಯವಸ್ಥೆ ಇರಲಿಲ್ಲ. ಎಷ್ಟು ಜನ ಅಭ್ಯರ್ಥಿಗಳಿದ್ದರೋ ಅಷ್ಟು ಪೆಟ್ಟಿಗೆಗಳಿರುತ್ತಿದ್ದುವು. ಆ ಪೆಟ್ಟಿಗೆಯ ಮೇಲೆ ಅಭ್ಯರ್ಥಿಯ ಚಿಹ್ನೆಯೂ, ಹೆಸರೂ ಇರುತ್ತಿತ್ತು. ಮತದಾರನು ತನಗೆ ಇಷ್ಟವಾದ ಅಭ್ಯರ್ಥಿಯ ಪೆಟ್ಟಿಗೆಯೊಳಕ್ಕೆ ಮತಚೀಟಿಯನ್ನು ಹಾಕಬೇಕಾಗಿತ್ತು. ಸಾಕಷ್ಟು ಜನರು ಮತದಾನದಲ್ಲಿ ಭಾಗವಹಿಸಿದ್ದರು. ಹಲವು ಹಳ್ಳಿಗಳ ಜನರು ನಮ್ಮೂರಿಗೆ ಬಂದು ಮತ ಹಾಕಿ ಹೋದರು. ಮತದಾನ ಮಾಡಿಸಲು ಬಂದಿದ್ದ ಅಧಿಕಾರಿಗಳಿಗೆ ಕಾಫಿಯನ್ನು ಕೊಡಲು ನಾನೂ ಒಮ್ಮೆ ಚಾವಡಿಯೊಳಕ್ಕೆ ಹೋಗಿ ನೇಗಿಲು ಹೊತ್ತಿದ್ದ ಜೋಡೆತ್ತು, ದೀಪ, ಆಲದಮರ, ಗಾಡಿ ಈ ಚಿತ್ರಗಳ ಅಂಟಿಸಿದ್ದ ವೋಟಿನ ಪೆಟ್ಟಿಗೆಗಳನ್ನು ನೋಡಿದ್ದೆ. ಆಮೇಲೆ ಮತಗಳ ಎಣಿಕೆಯಾಗಿ ಕಾಂಗ್ರೆಸ್ ಪಕ್ಷವೇ ಗೆಲುವನ್ನು ಸಾಧಿಸಿತೆಂದು ಹಿರಿಯರು ಮಾತನಾಡಿಕೊಂಡುದನ್ನೂ ಕೇಳಿದೆವು. ಇದಾದ ಐದು ವರ್ಷಗಳ ಅನಂತರ ಎರಡನೆಯ ಮಹಾ ಚುನಾವಣೆ ನಡೆದಾಗ ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿ ಗುಡಿಬಂಡೆಯಲ್ಲಿದ್ದೆ. ಚುನಾವಣೆ ಪ್ರಚಾರದ ಅಬ್ಬರ ಈಗ ಜೋರಾಗಿತ್ತು. ಎಲ್ಲೆಲ್ಲೂ ಅಭ್ಯರ್ಥಿಗಳ ಚಿತ್ರಗಳು, ಜಾಗವಿದ್ದಲ್ಲೆಲ್ಲಾ ಪೋಸ್ಟರ್‌ಗಳು, ಭಾಷಣಗಳ ಸರಮಾಲೆ. ಅಲ್ಲಿಗೂ ಮುಂದೆ ಮೈಸೂರಿಗೆ ನಾನು ಬಂದ ಮೇಲೆ ವೋಟನ್ನು ಹಾಕುವ ಹಕ್ಕು ದೊರೆತು ಚುನಾವಣೆಯಲ್ಲಿ ಭಾಗವಹಿಸುವುದು ಆರಂಭವಾಯಿತು. ಬೆರಳಿನ ಮೇಲೆ ಶಾಯಿಯ ಗುರುತನ್ನು ಹಾಕಿಸಿಕೊಳ್ಳುವುದು ಹೆಮ್ಮೆಯ ವಿಷಯವಾಯಿತು.

ನಾವೇನೋ ಹೋಗಿ ವೋಟು ಹಾಕಿ ಮತದಾನ ಮಾಡಿದೆವು ಎಂದು ಧನ್ಯಭಾವದಿಂದ ಬರುತ್ತೇವೆ. ಆದರೆ ಬೂತಿನಲ್ಲಿ ಕುಳಿತಿರುವ ಅಧಿಕಾರಿಗಳ ಕಷ್ಟ ನನಗೆ ತಿಳಿದಿರಲಿಲ್ಲ. ಆದರೆ ಒಂದು ಸಲ ಒಂದು ಬೂತಿನ ಪ್ರಿಸೈಡಿಂಗ್ ಆಫೀಸರ್ ಆಗಿ ಕರ್ತವ್ಯವನ್ನು ನಿರ್ವಹಿಸಲೇಬೇಕಾಗಿ ಬಂತು. ಇಂದು ಇರುವಂತಹ ಯಂತ್ರಗಳು ಆಗ ಇರಲಿಲ್ಲ. ಬ್ಯಾಲೆಟ್ ಪೇಪರ್, ಗುರುತು ಹಾಕುವ ಮೊಹರು. ಸಾಯಂಕಾಲ ಎಲ್ಲವನ್ನೂ ಒಪ್ಪಿಸುವವರೆಗೂ ಏನು ತಪ್ಪಾಗುವುದೋ ಎಂಬ ಆತಂಕ. ಅದೂ ಒಂದು ಮರೆಯಲಾಗದ ಅನುಭವ. ಯಾವ ತೊಂದರೆಯೂ ಆಗದಂತೆ ಆ ಕರ್ತವ್ಯವನ್ನೂ ಮಾಡಿ ಮುಗುಳು ನಕ್ಕಿದ್ದಾಯಿತು.

ಈಗ ಮತ್ತೊಮ್ಮೆ ಮತದಾನ ಮಾಡುವ ಸಂದರ್ಭ ಬಂದಿದೆ. ಇದನ್ನು ಪ್ರಜಾಪ್ರಭುತ್ವದ ಹಬ್ಬ ಎಂದು ಭಾವಿಸೋಣ. ಅಭ್ಯರ್ಥಿಗಳು ಸರ್ವಗುಣ ಸಂಪನ್ನರಾದ ಪರಿಪೂರ್ಣ ಮಾನವರಲ್ಲದಿರಬಹುದು. ಆದರೇನಂತೆ? ಅವರೂ ಎಷ್ಟೋ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಇದ್ದುದರಲ್ಲಿ ಉತ್ತಮರಾದವರಿಗೆ ಮತವನ್ನು ಕೊಡುವುದರಲ್ಲಿ ಹಿಂಜರಿಯಬಾರದು. ಯಾವ ಪ್ರಲೋಭನೆಗೂ ಒಳಗಾಗದೆ ಪಕ್ಷದ ತತ್ತ್ವಗಳನ್ನೂ, ವ್ಯಕ್ತಿಯ ಯೋಗ್ಯತೆಯನ್ನೂ ಆಲೋಚಿಸಿ ಮತದಾನವನ್ನು ಮಾಡೋಣ.





ಚಿತ್ರಕಲೆ ಚತುರ ಡಾ.ವಿಠ್ಠಲರೆಡ್ಡಿ ಚುಳಕಿ



ಚಿನ್ನದ ಪದಕ ಸಂದಿರುವ 'ಟ್ರಾಜಿಡಿ ಆಫ್ ವುಮೆನ್' ಪರಿಕಲ್ಪನೆಯ ಕಲಾಕೃತಿ

● ಎಂ.ಬಿ.ಪವನ್‌ಮೂರ್ತಿ

ಮಾನವನ ಪ್ರಾಚೀನ ಸಂಸ್ಕೃತಿ ಮತ್ತು ಸಂವಹನ ಕಲೆಯಲ್ಲಿ 'ಚಿತ್ರಕಲೆ'ಯೂ ಒಂದು. ಅಷ್ಟೇ ಅಲ್ಲದೆ, ಇದೊಂದು ಸಂವಹನದ ಸುಲಭ ಮಾಧ್ಯಮ. ಇಂದಿನ ತಂತ್ರಜ್ಞಾನ-ಡಿಜಿಟಲ್ ಯುಗದಲ್ಲಿ ಚಿತ್ರಕಲೆ ಹತ್ತುಹಲವು ಮಜಲುಗಳಲ್ಲಿ ಬೆಳೆದು ನಿಂತಿದೆ. ಇಂತಹ ಚಿತ್ರಕಲೆಯಲ್ಲಿ ವಿಶಿಷ್ಟ ಕೆಲಸ ಮಾಡುತ್ತಿರುವವರಲ್ಲಿ ಮೈಸೂರಿನ ಡಾ.ವಿಠ್ಠಲರೆಡ್ಡಿ ಎಫ್.ಚುಳಕಿ ಸಹ ಒಬ್ಬರು.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕು ಕಗದಾಳ ಎಂಬ ಗ್ರಾಮದಲ್ಲಿ 1969ರ ಜು.20ರಂದು ಜನಿಸಿದ ಇವರು ಇದೀಗ ಮೈಸೂರಿನಲ್ಲಿ ತಮ್ಮ ಕಲಾ ಸೇವೆ ಮುಂದುವರೆಸಿದ್ದಾರೆ. ಫಕೀರ ರೆಡ್ಡಿ ಮತ್ತು ಪದ್ಮಾವತಿ ದಂಪತಿ ಪುತ್ರರಾದ ಇವರು ತಮ್ಮ ಚಿತ್ರಕಲೆಯ ಕೌಶಲ್ಯದಿಂದ ಸಾಲು ಸಾಲು ಸಾಧನೆಯನ್ನೂ ಮಾಡಿದ್ದಾರೆ. ಶಾಲಾ ವ್ಯಾಸಂಗದ ನಂತರ 1991ರಲ್ಲಿ ದಾರವಾಡದ ಸರ್ಕಾರಿ ಕಲಾ ಶಾಲೆಯಲ್ಲಿ ಡಿಎಂಸಿ ಮುಗಿಸಿ, 1992ರಲ್ಲಿ ಹುಬ್ಬಳ್ಳಿಯ ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ ಕಲಾ ಡಿಪ್ಲೊಮಾ ಪಡೆದರು. 2017ರಲ್ಲಿ ಕಲಬುರ್ಗಿಯ ಗುಲ್ಬರ್ಗ ವಿವಿಯಲ್ಲಿ ಪಿಹೆಚ್‌ಡಿ ಪದವಿ ಗಳಿಸಿದರು.

ನಂತರ ಜಮಖಂಡಿಯ ಮಹೇಶ್ ಚಿತ್ರಕಲಾ ಮಹಾ ವಿದ್ಯಾಲಯದಲ್ಲಿ ಕಲಾ ಉಪನ್ಯಾಸಕ ಸೇವೆ ಆರಂಭಿಸಿದರು. ಆ ಬಳಿಕ ತಮ್ಮ ಕಲಾ ಪ್ರಪಂಚದ ಪಯಣದಲ್ಲಿ ತಮ್ಮ ಚಿತ್ರಕಲೆ ಚತುರತೆ ಮೆರೆದು, ಮುಂದುವರೆಸಿದ್ದಾರೆ. ಅವರ ಕಲಾ ಸೇವೆ-ಸಾಧನೆಗಾಗಿ ಹತ್ತಾರು ಪ್ರತಿಷ್ಠಿತ ಪ್ರಶಸ್ತಿಗಳೂ ಅವರಿಗೆ ಸಂದಿವೆ.

2002ರ ನವೆಂಬರ್‌ನಲ್ಲಿ ಜಾರ್ಖಂಡ್ ರಾಜ್ಯದಲ್ಲಿ ಕಲಂಕನ ಪ್ರಯಾಸ್ ವತಿಯಿಂದ ಹಮ್ಮಿಕೊಂಡಿದ್ದ ಎರಡನೇ ರಾಷ್ಟ್ರಮಟ್ಟದ ಕಲಾ ಪ್ರದರ್ಶನದಲ್ಲಿ ಪೇಂಟಿಂಗ್ ವಿಭಾಗದಲ್ಲಿ ವಿಠ್ಠಲರೆಡ್ಡಿ ಚುಳಕಿಯವರು ಚಿನ್ನದ ಪದಕಕ್ಕೆ ಭಾಜರಾದ ಹಿರಿಮೆ ಹೊಂದಿದ್ದಾರೆ. ಸದರಿ ಕಲಾ ಪ್ರದರ್ಶನಕ್ಕೆ ಅವರು ಕಳುಹಿಸಿದ್ದ 'ಟ್ರಾಜಿಡಿ ಆಫ್ ವುಮನ್' (ಮಹಿಳೆಯ ದುರಂತ ಜೀವನ)' ಪರಿಕಲ್ಪನೆಯ 'ಅಕ್ರಲಿಕ್ ಆನ್ ಪೇಪರ್' ಮಾಧ್ಯಮದ ಕಲಾಕೃತಿಗೆ ಚಿನ್ನದ ಪದಕ ಮತ್ತು ಪ್ರಶಸ್ತಿ ಪತ್ರ ಸಂದಿದೆ. ಈ ಕಲಾಕೃತಿಯಲ್ಲಿ ನೋವಿನ ಪ್ರತಿಮಾ ರೂಪಗಳೇ ಅಭಿವ್ಯಕ್ತಗೊಂಡಿರುವುದು ಗಮನಾರ್ಹ. ಮದ್ಯವ್ಯಸನದ ದುಷ್ಪರಿಣಾಮಗಳು ಇಲ್ಲಿ ಅನಾವರಣಗೊಂಡಿದ್ದು, ಮುಖ್ಯವಾಗಿ ಕುಟುಂಬ ಮಹಿಳೆಯು ಅನುಭವಿಸುವ ಯಾತನೆಯ ಚಿತ್ರಣ ಮನಸೆಳೆಯುತ್ತಿದೆ.

'ಚಿತ್ರಕಲೆ, ಪ್ರಾಚೀನ ಕಾಲದಿಂದಲೂ ಮಾನವ ಜೊತೆಗಿದೆ. ಅಕ್ಷರ ಜ್ಞಾನ ಇಲ್ಲದ ಸಂದರ್ಭದಲ್ಲಿ ಮಾನವನ ಸಂವಹನದಲ್ಲಿ ಮಹತ್ವದ ಕೊಡುಗೆ ನೀಡಿದೆ. ಪ್ರಸ್ತುತದಲ್ಲಿ ಹತ್ತು ಹಲವು ಆಯಾಮಗಳು ಚಿತ್ರಕಲೆಯಲ್ಲಿ ಹುಟ್ಟಿಕೊಂಡಿವೆ. 'ಭಾರತೀಯ ಶೈಲಿ' ಎಂದರೆ ಅದು ಸಾಂಪ್ರದಾಯಿಕ ಚಿತ್ರಕಲೆ. ಅದರಲ್ಲಿ ಮೈಸೂರು ಶೈಲಿ, ತಂಜಾವೂರು ಶೈಲಿ, ವಿಜಯನಗರ ಶೈಲಿ ಸೇರಿದಂತೆ ಅನೇಕ ವಿಧಗಳೂ ಉಂಟು. 'ನವ್ಯಶೈಲಿ' (ಮಾರ್ಡನ್ ಆರ್ಟ್) ಪ್ರಸ್ತುತ ಹೆಚ್ಚು ಪ್ರಸಿದ್ಧಿ ಪಡೆದಿದೆ. ಅದರಲ್ಲಿ ಕಂಪ್ಯೂಟರ್ ಆರ್ಟ್, ಗ್ರಾಫಿಕ್ ಆರ್ಟ್ ಮೊದಲಾದವನ್ನು ಕಾಣಬಹುದು. ಅಂದು ಬ್ರಿಟಿಷರು ದೇಶದ ವಿವಿಧೆಡೆ ನಾಲ್ಕು ಕಲಾ ಶಾಲೆಗಳನ್ನು ತೆರೆದು ಮಾರ್ಡನ್ ಆರ್ಟ್‌ಗೆ ಉತ್ತೇಜನ ನೀಡಿದರು. ಅದರ ಪರಿಣಾಮ ಅಲ್ಲಿಂದ ಈವರೆಗೆ ನವ್ಯಶೈಲಿ ಹೆಚ್ಚು ಪ್ರಸಿದ್ಧಿ ಹೊಂದಿದೆ. ಸಾಂಪ್ರದಾಯಿಕ ಚಿತ್ರಕಲೆಯನ್ನು ಮೀರಿ ಬೆಳೆದು ನಿಂತಿದೆ' ಎನ್ನುತ್ತಾರೆ ವಿಠ್ಠಲರೆಡ್ಡಿ.

ಸೃಜನಶೀಲ ಕಲಾಕೃತಿಗಳ ಬಗ್ಗೆ ಒಲವು ಹೊಂದಿದ್ದ ವಿಠ್ಠಲರೆಡ್ಡಿಯವರು ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ದೃಶ್ಯಕಲಾ ಕಾಲೇಜಿನಲ್ಲಿ ಕಲಾ ಉಪನ್ಯಾಸಕರಾಗಿ ಸೇರಿದ ಮೇಲೆ ತಮ್ಮ ಕಲಾಸಕ್ತಿಗೆ ಇವರ ಸಹೋದ್ಯೋಗಿ ಕಲಾವಿದ ಶಿವಕುಮಾರ್ ಬೆಂಬಲ ನೀಡಿದ್ದು ಇವರಿಗೆ ಮತ್ತಷ್ಟು ಸ್ಫೂರ್ತಿಯಾಯಿತು. ಈ ವೇಳೆ ಸಾಂಪ್ರದಾಯಕ ಚಿತ್ರಕಲಾಕೃತಿ, ಹೊಸ ಸಂಯೋಜನ ಶೀಲವಾದ ಕಲಾಕೃತಿಗಳ ರಚಿಸಿ ಗಮನ ಸೆಳೆದರು. ಭಾವಚಿತ್ರ ಶಿಬಿರ, ಜಲವರ್ಣ ಕಲಾ ಶಿಬಿರ (ಹಂಪಿ), ಲಿತೋಗ್ರಾಫ್ ಶಿಬಿರ (ಮೈಸೂರು), ದಕ್ಷಿಣ ವಲಯದ ಅಖಿಲ ಭಾರತ ಸಾಂಪ್ರದಾಯಿಕ ಚಿತ್ರಕಲಾ ಶಿಬಿರಗಳು ಇವರ ಪರಿಪಕ್ವತೆಗೆ ಪೋಷಕವಾದವು.

ಒನ್ ಮ್ಯಾನ್ ಶೋ: 2011ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕೊಚ್ಚಿನ್‌ನಲ್ಲಿ ಜೂ.4ರಿಂದ 8ರವರೆಗೆ ಏರ್ಪಡಿಸಿದ್ದ ವಿಠ್ಠಲರೆಡ್ಡಿಯವರು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಗಮನ ಸೆಳೆದಿತ್ತು. ಅಕ್ರಲಿಕ್ ಹಾಗೂ ತೈಲವರ್ಣದಲ್ಲಿ ಮೂಡಿದ್ದ 26 ಕಲಾಕೃತಿಗಳ ವರ್ಣ ಸಂಯೋಜನೆ ಮನ ಸೆಳೆಯುವಂತಿತ್ತು. ಇದರೊಂದಿಗೆ 1999ರಲ್ಲಿ ಮೈಸೂರಿನ ಕಲಾಮಂದಿರ, 2013ರಲ್ಲಿ ಮಹಾರಾಷ್ಟ್ರ ಪೂನಾದ ಶೈವಗಂಧರ್ವ ಹಾಲ್, 2015ರಲ್ಲಿ ಹುಬ್ಬಳ್ಳಿಯ ನಾರಾಯಣ್ ಆರ್ಟ್ ಗ್ಯಾಲರಿ ಹಾಗೂ ಇತ್ತೀಚಿಗೆ ದುಬೈನಲ್ಲಿ ನಡೆದ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದಲ್ಲಿ ಇವರು ಭಾಗವಹಿಸಿ ತಮ್ಮ ಕಲಾಪ್ರೌಡಿಮೆ ಮೆರೆದಿದ್ದಾರೆ.

2005ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಇವರಿಗೆ ಸಂದಿದೆ. ಇವರ ಅಕ್ರಲಿಕ್ ಮಾಧ್ಯಮದಿಂದ ನಿರ್ಮಿಸಿದ 'ಗೋಲ್ಡ್ ಅಂಡ್ ಹೆಡ್' ಎಂಬ ಕಲಾಕೃತಿಗೆ ಈ ಪ್ರಶಸ್ತಿ ಬಂದಿತು. ನಿಸರ್ಗ ಮತ್ತು ಮಾನವನ ಸಂಬಂಧ ವನ್ನು ಇಲ್ಲಿ ಅನಾವರಣ ಮಾಡಲಾಗಿದೆ. 1999ರಲ್ಲಿ ಬಿಸಿಎಂ ಇಲಾಖೆಯ ಅತ್ಯುತ್ತಮ ಕಲಾವಿದ ಪ್ರಶಸ್ತಿ, 1992ರಲ್ಲಿ ಕ್ಯಾಮ್ ಲೈನ್ ಪ್ರಶಸ್ತಿ, 1999ರಲ್ಲಿ ಕಾಲೇಜು ವಾರ್ಷಿಕ ಪ್ರಶಸ್ತಿ, 1996, 99, 2000, 2001, 2002 ಮತ್ತು 2017ರಲ್ಲಿ ಮೈಸೂರು ದಸರಾ ಪ್ರಶಸ್ತಿ, 2003ರಲ್ಲಿ 7ನೇ ಕರ್ನಾಟಕ ಕಲಾ ಮೇಳ ಪ್ರಶಸ್ತಿ, 2005 ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ, 2010ರಲ್ಲಿ 76ನೇ ಸಾಹಿತ್ಯ ಸಮ್ಮೇಳನ ಪ್ರಶಸ್ತಿ (ಗದಗ), 2016ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಫೆಲೋಶಿಪ್ (ಒಂದು ಲಕ್ಷ ರೂ. ನಗದು) ಸೇರಿದಂತೆ ಇನ್ನು ಹಲವು ಪ್ರಶಸ್ತಿ-ಪುರಸ್ಕಾರಗಳು ಇವರಿಗೆ ಸಂದಿವೆ.

ವಿಠ್ಠಲರೆಡ್ಡಿಯವರಿಗೆ ಅವರ ತಂದೆಯ ಮಿತ್ರ ಎಂ.ಎಸ್.ಹೂಗಾರ ಅವರಿಂದ ಕಲಾ ವ್ಯಾಸಂಗಕ್ಕೆ ಸಾಗಲು ಮಾರ್ಗದರ್ಶನ ಸಿಕ್ಕಿತು. ಪ್ರಸ್ತುತ ಮೈಸೂರಿನ ವಿಜಯನಗರದ ಶ್ರೀ ಕಲಾನಿ ಕೇತನ ದೃಶ್ಯಕಲಾ ಕಾಲೇಜಿನಲ್ಲಿ ಕಳೆದ 26 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. 2009ರಿಂದ 2013ರವರೆಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.








2005ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿಗೆ ಭಾಜನವಾದ 'ಗೋಲ್ಡ್ ಅಂಡ್ ಹೆಡ್' ಶೀರ್ಷಿಕೆಯ ಕಲಾಕೃತಿ



2003ರಲ್ಲಿ 7ನೇ ಕರ್ನಾಟಕ ಕಲಾ ಮೇಳ ಪ್ರಶಸ್ತಿಗೆ ಭಾಜನವಾದ ಕಲಾಕೃತಿ

ಬಣ್ಣಗಳೊಂದಿಗೆ ಬೆರೆಯುವ ಖುಷಿ ಎಷ್ಟು ಹಣ ಕೊಟ್ಟರೂ ಸಿಗುವುದಿಲ್ಲ



ಬಣ್ಣಗಳೊಂದಿಗೆ ಬೆರೆಯುವ ಖುಷಿ ಎಷ್ಟು ಹಣ ಕೊಟ್ಟರೂ ಸಿಗುವುದಿಲ್ಲ. ಚಿತ್ರಕಲೆಯಿಂದ ಜೀವನದಲ್ಲಿ ಎಲ್ಲವೂ ಸಿಕ್ಕಿದೆ. ಹೆಸರು, ಹಣ, ನೆಮ್ಮದಿಯೊಂದಿಗೆ ಬದುಕು ಬಣ್ಣಗಳೊಂದಿಗೆ ಸರಾಗವಾಗಿ ಸಾಗುತ್ತಿದೆ. 100ಕ್ಕೆ 100ರಷ್ಟು ಚಿತ್ರಕಲೆಯಲ್ಲಿ ತೃಪ್ತಿ ಕಂಡಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಬಹುತೇಕ ಜನತೆ ಸಮಯ ದೂಡುವುದೇ ಕಷ್ಟ ಎನ್ನುತ್ತಿದ್ದರು. ಆದರೆ ನನಗೆ ಆ ಸಂದರ್ಭದಲ್ಲಿ ಚಿತ್ರಕಲೆಯಲ್ಲಿ ನಿರತನಾಗಿ ಸಮಯವೇ ಸಾಲುತ್ತಿರಲಿಲ್ಲ ಎನ್ನುತ್ತಾರೆ ವಿಠ್ಠಲರೆಡ್ಡಿ.

ಅನೇಕ ಪದಗಳು, ಪುಟಗಳಲ್ಲಿ ಅಭಿವ್ಯಕ್ತಿಪಡಿಸುವುದನ್ನು ಒಂದು ರೇಖಾಚಿತ್ರದಲ್ಲಿ ಹೇಳಬಹುದು. ಅಷ್ಟು ಸುಲಭ ಮಾಧ್ಯಮ ಚಿತ್ರಕಲೆ. ನಾನು ಮೂಲತಃ ಸಾಂಪ್ರಾದಾಯಿಕ ಚಿತ್ರಕಲೆಯಲ್ಲಿ ಪರಿಣಿತಿ ಹೊಂದಿದ್ದೇನೆ. ಈ ಕಲೆಗೆ ಸಂಬಂಧಿಸಿದಂತೆ ಅನೇಕ ಶಿಬಿರಗಳಲ್ಲಿ ಮಾರ್ಗದರ್ಶಿಕನಾಗಿ ಕೆಲಸ ಮಾಡಿದ್ದೇನೆ. ಜಗನ್ಮೋಹನ ಅರಮನೆ ಕಲಾಕೃತಿಗಳ ಬಗ್ಗೆ ಅಧ್ಯಯನ ಮಾಡಿದ್ದೇನೆ. ಹಲವು ವರ್ಷಗಳಿಂದ 'ಮಾರ್ಡನ್ ಆರ್ಟ್'ನಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದೇನೆ. ಪ್ರಸ್ತುತ ಮಾರ್ಡನ್ ಆರ್ಟ್ ಹೆಚ್ಚು ಮುನ್ನೆಲೆಗೆ ಬಂದಿದೆ. ಎಂ.ಸಿ.ಚಟ್ಟಿಯವರು ನನ್ನ ಗುರುಗಳು ಎಂದು ವಿಠ್ಠಲರೆಡ್ಡಿ ಸ್ಮರಿಸುತ್ತಾರೆ.

ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ತೃತೀಯ ಲಿಂಗಿಗಳ ನಿರಾಸಕ್ತಿ

● ಮೈಸೂರು ಜಿಲ್ಲೆಯಲ್ಲಿ 1800 ಮಂದಿ ತೃತೀಯ ಲಿಂಗಿಗಳು ● ಮತಪಟ್ಟಿಯಲ್ಲಿ 223 ಮಂದಿ ಮಾತ್ರ ನೋಂದಣಿ ● ಜಿಲ್ಲಾಡಳಿತದ ಮನವೊಲಿಕೆ ಪ್ರಯತ್ನಕ್ಕೆ ಹಿನ್ನಡೆ ● ಗುರುತು ಪತ್ತೆಯಾಗುವ ಆತಂಕದಲ್ಲಿರುವ ತೃತೀಯ ಲಿಂಗಿಗಳು

ಎಂ.ಟಿ.ಯೋಗೇಶ್ ಕುಮಾರ್

ಸಮಾಜದಲ್ಲಿ ಸಮಾನತೆ ಬಯಸುವ ತೃತೀಯ ಲಿಂಗಿಗಳಿಗೆ ಸರ್ಕಾರ ಹಲವು ಸವಲತ್ತು ನೀಡಿದ್ದರೂ, ಅವರಲ್ಲಿರುವ ಹಿಂಜರಿಕೆ ಮಾತ್ರ ಇನ್ನೂ ದಟ್ಟವಾಗಿಯೇ ಬೇರೂರಿದೆ. ಈ ಬಾರಿ ಮತದಾನ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಜಿಲ್ಲಾಡಳಿತ ಕಾರ್ಯಕ್ರಮ ರೂಪಿಸಿದ್ದರೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಲು ನಿರಾಸಕ್ತಿ ಪ್ರದರ್ಶಿಸಿದ್ದಾರೆ.

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಜಿಲ್ಲಾಡಳಿತ ಹಲವು ಕಾರ್ಯಕ್ರಮ ರೂಪಿಸಿದ್ದು, ಈ ಸಂಬಂಧ ತೃತೀಯ ಲಿಂಗಿಗಳ ಸಂಘಟನೆಯ ಮುಖಂಡರು ಹಾಗೂ ಆ ಸಮುದಾಯ ಪ್ರತಿನಿಧಿಸುವ ಸಂಘಟನೆಗಳ ಮುಖಂಡರೊಂದಿಗೆ ಸಭೆ ನಡೆಸಿ, ತೃತೀಯ ಲಿಂಗಿಗಳು ಕಡ್ಡಾಯವಾಗಿ ಮತದಾನ ಮಾಡುವಂತೆ ಮನವರಿಕೆ ಮಾಡಿಕೊಡಲಾಗಿತ್ತು. ಅಲ್ಲದೆ, ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು, ತಿದ್ದುಪಡಿ ಮಾಡುವುದಕ್ಕೆ ಹಾಗೂ ಮತದಾರರ ಪಟ್ಟಿಯಲ್ಲಿ ತೃತೀಯ ಲಿಂಗಿ ಎಂದು ನಮೂದಿಸು ವುದಕ್ಕೂ ಅವಕಾಶ ನೀಡಲಾಗಿತ್ತು. ಆದರೆ ತೃತೀಯ ಲಿಂಗಿಗಳು ಇದರ ಬಗ್ಗೆ ಆಸಕ್ತಿ ತೋರುತ್ತಿಲ್ಲ.

ಮೈಸೂರು ಜಿಲ್ಲೆಯಲ್ಲಿ 1800ಕ್ಕೂ ಹೆಚ್ಚು ಮಂದಿ ತೃತೀಯ ಲಿಂಗಿಗಳಿರುವ ಮಾಹಿತಿ ಇದ್ದು, ಅವರಲ್ಲಿ 223 ಮಂದಿ ಮಾತ್ರ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಕಳೆದ ಚುನಾವಣೆಯಲ್ಲಿ ಬೆರಳಣಿಕೆಯಷ್ಟು ಮಂದಿ ಮಾತ್ರ ಹೆಸರು ನೋಂದಾಯಿಸಿಕೊಂಡಿದ್ದ ತೃತೀಯ ಲಿಂಗಿಗಳು ಈ ಬಾರಿ ಹಿಂಜರಿಕೆ ಬಿಟ್ಟು 223 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಮಾ.29ರಿಂದ ಏ.12ರವರೆಗೆ ನಡೆದ ಮತದಾರರ ಪಟ್ಟಿಗೆ ಹೆಸರು ಸೇರಿಸುವ ವಿಶೇಷ ಅಭಿಯಾನದಲ್ಲಿ ಚಾಮುಂಡೇಶ್ವರಿ, ಕೃಷ್ಣರಾಜ ಹಾಗೂ ಚಾಮರಾಜ ಕ್ಷೇತ್ರದಲ್ಲಿ ತಲಾ ಇಬ್ಬರು, ನರಸಿಂಹರಾಜ ಕ್ಷೇತ್ರದಲ್ಲಿ ಮೂವರು ಹಾಗೂ ವರುಣಾ ಕ್ಷೇತ್ರದಲ್ಲಿ ಒಬ್ಬರು ತೃತೀಯ ಲಿಂಗಗಳು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಂಡಿದ್ದಾರೆ. ಉಳಿದಂತೆ 1500ಕ್ಕೂ ಹೆಚ್ಚು ಮಂದಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳದೆ ದೂರವುಳಿದಿದ್ದಾರೆ.

ಎಲ್ಲೆಲ್ಲಿ ಎಷ್ಟು: ಮೈಸೂರು ಜಿಲ್ಲೆಯಲ್ಲಿರುವ 11 ವಿಧಾನಸಭಾ ಕ್ಷೇತ್ರಗಳಲ್ಲೂ ತೃತೀಯ ಲಿಂಗಿ ಮತದಾರರಿದ್ದಾರೆ. ಚಾಮರಾಜ ಕ್ಷೇತ್ರದಲ್ಲಿ ಹೆಚ್ಚು ತೃತೀಯ ಲಿಂಗಿ ಮತದಾರರು ನೋಂದಣಿ ಮಾಡಿಕೊಂಡಿದ್ದರೆ, ನಂಜನಗೂಡು ಕ್ಷೇತ್ರದಲ್ಲಿ ತೃತೀಯ ಲಿಂಗಿ ಮತದಾರರ ಸಂಖ್ಯೆ ಕಡಿಮೆ ಇದೆ. ಪ್ರಸ್ತುತ ನೋಂದಣಿ ಮಾಡಿಕೊಂಡಿರುವವರಲ್ಲಿ ಪಿರಿಯಾಪಟ್ಟಣ ಕ್ಷೇತ್ರದಲ್ಲಿ 7, ಕೆ.ಆರ್.ನಗರದಲ್ಲಿ 19, ಹುಣಸೂರಲ್ಲಿ 13, ಹೆಚ್.ಡಿ.ಕೋಟೆಯಲ್ಲಿ 11, ನಂಜನಗೂಡು ಕ್ಷೇತ್ರದಲ್ಲಿ 6, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 33, ಕೆ.ಆರ್.ಕ್ಷೇತ್ರದಲ್ಲಿ 27, ಚಾಮರಾಜ ಕ್ಷೇತ್ರದಲ್ಲಿ 31, ಎನ್.ಆರ್.ಕ್ಷೇತ್ರದಲ್ಲಿ 49, ವರುಣಾದಲ್ಲಿ 13 ಹಾಗೂ ಟಿ.ನರಸೀಪುರ ಕ್ಷೇತ್ರದಲ್ಲಿ 14 ತೃತೀಯ ಲಿಂಗಿ ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ.

ಭಯ ಪಡುತ್ತಾರೆ: ತೃತೀಯ ಲಿಂಗಿಗಳ 7 ರೈನ್ಬೋ ಸಂಸ್ಥೆಯ ಮುಖ್ಯಸ್ಥರಾದ ಪ್ರೀತಿ ಪ್ರಕಾಶ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಜಿಲ್ಲಾಡಳಿತ ತೃತೀಯ ಲಿಂಗಿಗಳು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಮನವೊಲಿಸಿದೆ. ಅಲ್ಲದೆ, ತೃತೀಯ ಲಿಂಗಿಗಳ ಸರ್ವೆ ನಡೆಸಿದೆ. ಜಿಲ್ಲೆಯಲ್ಲಿ 1800ಕ್ಕೂ ಹೆಚ್ಚು ಮಂದಿ ತೃತೀಯ ಲಿಂಗಿಗಳಿದ್ದಾರೆ. ಎಲ್ಲರಿಗೂ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದೇವೆ. ಆದರೆ, ಕೆಲವರು ಸಮಾಜದಲ್ಲಿ ನಮ್ಮನ್ನು ತೃತೀಯ ಲಿಂಗಿ ಎಂದು ಗುರುತಿಸಿ, ಚೇಡಿಸುತ್ತಾರೆ ಎಂಬ ಆತಂಕದಿಂದ ಮತದಾರರ ಪಟ್ಟಿಯಲ್ಲಿ ಲಿಂಗ ಬದಲಾವಣೆಯ ಮಾಹಿತಿ ನೀಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ತಿಳಿಸಿದರು.

ಹಿಂಜರಿಕೆ ಬಿಟ್ಟು ಮುಖ್ಯವಾಹಿನಿಗೆ ಬರಬೇಕು

ಇತ್ತೀಚಿನ ದಿನಗಳಲ್ಲಿ ತೃತೀಯ ಲಿಂಗಿಗಳು ಎಲ್ಲಾ ಕ್ಷೇತ್ರಗಳಲ್ಲೂ ಮುಂದೆ ಬರುತ್ತಿದ್ದಾರೆ. ಅವರನ್ನು ರೋಲ್ ಮಾಡೆಲ್‌ಗಳಾಗಿ ಸ್ವೀಕರಿಸಿ ಎಲ್ಲಾ ತೃತೀಯ ಲಿಂಗಿಗಳು ಹಿಂಜರಿಕೆ ಬಿಟ್ಟು ಮುಖ್ಯ ವಾಹಿನಿಗೆ ಬರಬೇಕು. ಮತದಾನ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಕೊಟ್ಟಿರುವ ಮತದಾನದ ಹಕ್ಕನ್ನು ಚಲಾಯಿಸಬೇಕು. ಈ ಕುರಿತು ಜಿಲ್ಲಾಡಳಿತ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಿ ಅರಿವು ಮೂಡಿಸುತ್ತಿದ್ದರೂ ಹಿಂಜರಿಯುವುದು ಸರಿಯಲ್ಲ. ಮುಂದಿನ ದಿನಗಳಲ್ಲಾದರೂ ಹಿಂಜರಿಕೆ, ಅಳುಕು ಬಿಟ್ಟು ಮತದಾನದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು. ಹೆಸರು ನೋಂದಣಿ ಮಾಡಿಕೊಂಡಿರುವ 223 ಮಂದಿಯಲ್ಲಿ ಎಲ್ಲರೂ ಮತದಾನ ಮಾಡಿ ತಮ್ಮ ಜವಾಬ್ದಾರಿ ಪ್ರದರ್ಶಿಸಬೇಕು.

- ಕೆ.ಆರ್.ಸೌಮ್ಯ
ಸಾಮಾಜಿಕ ಕಾರ್ಯಕರ್ತೆ



ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 16-4-2023



ಹಿರಿಯನಾದರೂ ಕಿರಿಯರ ಒಡನಾಟವಿದ್ದರೆ ಬದುಕು ಚೆಂದ...

ಮಿರ್ಲೆ ಚಂದ್ರಶೇಖರ
ಮೊ: 9916129654

ಹಿರಿಯನಾಗುವುದು ಹಣ ಗುಣಗಳಿಂದಲ್ಲ, ದೇಹಕ್ಕಾಗುವ ವಯಸ್ಸಿನಿಂದ. ಹಿರಿಯ ನಾಗರಿಕನಾಗುವುದು ಸಾಧನೆಯಲ್ಲದಿದ್ದರೂ ಅಲ್ಲಿಯವರೆಗೂ ಬದುಕುಳಿಯುವುದು ಮನುಷ್ಯ ಪಡೆದುಕೊಂಡ ವರವಾಗಿದೆ. ಅಪಘಾತ ಅಥವಾ ರೋಗರುಜಿನಗಳಿಂದ ಅಕಾಲಿಕ ಮರಣವಾಗುವುದು ಸಾಮಾನ್ಯ, ದುರ್ಘಟನೆಗಳಲ್ಲಿ ಸಾವನ್ನಪ್ಪುವುದಕ್ಕೆ ವಯಸ್ಸಿನ ಇತಿಮಿತಿ ಇರುವುದಿಲ್ಲ. ಆಗ ತಾನೆ ಜನಿಸಿದ ಶಿಶುವಿನಿಂದ ಹಿಡಿದು ಮಸಣ ಸೇರುವ ವಯಸ್ಸಿನವರೆಗೂ ಇರುತ್ತಾರೆ. ಸಾವನ್ನು ಜಯಿಸಿ ಹಿರಿಯ ನಾಗರಿಕನಾಗಿ ಶತಾಯುಷಿಗಳಾಗುವತ್ತ ನಡೆಯುವುದು ಅಂದುಕೊಂಡಷ್ಟು ಸುಲಭವಲ್ಲ. ಹಣ ಗುಣದಲ್ಲಿ ದೊಡ್ಡವರಾಗುವುದು ಬೇರೆ, ಇದಕ್ಕೆ ವಯಸ್ಸಿನ ಮಿತಿ ಇರುವುದಿಲ್ಲ.

ನೌಕರಿಯಲ್ಲಿದ್ದವರಿಗೆ ವಯಸ್ಸು ಅರವತ್ತು ದಾಟಿದರೆ ಪಿಂಚಣಿ, ವಿಮೆ, ಬ್ಯಾಂಕ್, ಮಕ್ಕಳ ಮದುವೆ, ಸಮವಯಸ್ಕರ ಸಾವುನೋವು, ಆರ್ಥಿಕ ಭದ್ರತೆ ಇಲ್ಲದವರಿಗೆ ಮುಂದೇನು ಎಂಬುದರ ಚಿಂತೆ, ಕೆಲಸವಿಲ್ಲದೆ ಕಾಲ ಕಳೆಯುವುದು ಹೇಗೆ?, ಹೀಗೆ ಚಿಂತೆಗಳ ಸರಮಾಲೆ. ಮುಪ್ಪು ಬಾರದಿರುವಂತೆ ಸಂಶೋದನೆ ನಡೆಸಿ ಯಶಸ್ವಿ ಆದ ಸಂಶೋದಕರು ಇಲ್ಲ, ಜೀವಿಗಳಿಗೆ ಮುಪ್ಪು ಒಂದು ದೊಡ್ಡ ರೋಗ, ಇದಕ್ಕೆ ಔಷಧ ಇಲ್ಲದಿದ್ದರೂ ಮುಪ್ಪಿನ ನೋವುಗಳಿಗೆ ತಾತ್ಕಾಲಿಕ ಶಮನಕ್ಕಾಗಿ ಔಷಧ ನೀಡುವ ವೈದ್ಯಕೀಯ ಲೋಕ ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಲಾಭದಾಯಕ ವಹಿವಾಟು ನಡೆಸುತ್ತಿದೆ. ಮನುಷ್ಯನ ದೈವದತ್ತವಾದ ಮುಪ್ಪು ವೈದ್ಯರಿಗೆ ವರದಾನ.

ಮುಪ್ಪು ಮತ್ತು ಸಾವನ್ನು ಯಾರೂ ತಡೆಯಲಾಗದು. ಸಾಯುವುದನ್ನು ತಡೆಯಲಾಗದಿರುವಾಗ ಮುಪ್ಪಿನಲ್ಲಿ ಚಿಂತಿಸಿ ಕೂರುವುದಕ್ಕಿಂತ ಇರುವ ಸಮಯವನ್ನು ಸಂತೋಷದಿಂದ ಕಳೆಯುವುದು ಒಳ್ಳೆಯದಲ್ಲವೆ?. ಸತ್ತವನು ಗಣ್ಯ ವ್ಯಕ್ತಿ ಆಗಿರಲಿ, ಬಂಧುವಾಗಿರಲಿ, ಆಪ್ತನಾಗಿರಲಿ ಯಾರೇ ಇರಲಿ ಸತ್ತ ಕೆಲವೇ ದಿನಗಳಲ್ಲಿ ಮರೆತುಬಿಡುತ್ತೇವೆ, ಹಾಗಿರುವಾಗ ಇರುವಷ್ಟು ಕಾಲ ಸಂಭ್ರಮಿಸಿ ಇತರರನ್ನು ಗೌರವಿಸಿ ಅವರೂ ಖುಷಿಯಾಗಿರುವಂತೆ ಬಿಡಿ.

ನಾನೂ ಸಹ ಹಿರಿಯ ನಾಗರಿಕನಾಗಿರುವುದರಿಂದ ಸಮಯವನ್ನು ಹರ್ಷಚಿತ್ತದಿಂದ ಕಳೆಯುವುದಕ್ಕೆ ಏನೆಲ್ಲಾ ಮಾರ್ಗಗಳು ಇವೆ ಎಂಬುದನ್ನು ಹುಡುಕುತ್ತಿರುತ್ತೇನೆ. ಹುಡುಕಾಟದಲ್ಲಿ ಕಂಡುಕೊಂಡ ಸತ್ಯವೆಂದರೆ ಸಮವಯಸ್ಸಿನ ಸ್ನೇಹಿತರೊಂದಿಗಿನ ಒಡನಾಟಕ್ಕಿಂತ ಮೊಮ್ಮಕ್ಕಳ ವಯಸ್ಸಿನ ಮಕ್ಕಳೊಂದಿಗೆ ಬೆರೆತರೆ ಸಿಗುವ ಆನಂದ ಅಪರಿಮಿತ. ಅವರು ನಮ್ಮದೇ ಮೊಮ್ಮಕ್ಕಳು ಅಥವಾ ನೆರೆಹೊರೆಯ ಮಕ್ಕಳಾದರೂ ಸರಿಯೇ ಅವರೊಳಗಿನ ಮುಗ್ದತೆಯಲ್ಲಿ ಭೇದವಿಲ್ಲ.

ಟಿ.ವಿ. ಮತ್ತು ಮೊಬೈಲ್‌ಗಳ ಹಾವಳಿಯಿಂದಾಗಿ ಈಗೀಗ ಮಕ್ಕಳಿಗೆ ದೊಡ್ಡವರಿಗಿಂತ ಜೀವ ಇಲ್ಲದ ಅವುಗಳೇ ಹೆಚ್ಚು ಪ್ರಿಯವಾಗಿವೆ. ಅವುಗಳಿಂದ ಬೇರ್ಪಡಿಸಿ ನಮ್ಮ ಒಡನಾಟಕ್ಕೆ ಕರೆತರುವುದು ಕಷ್ಟವೆನಿಸುತ್ತದೆ. ಅದು ಇದು ಆಸೆ ತೋರಿಸಿ ಪೂಸಿ ಹೊಡೆದು ತರುವುದರಲ್ಲಿ ಸಾಕುಸಾಕಾಗುತ್ತದೆ, ಇದರಲ್ಲಿ ಹಿರಿಯರ ಸ್ವಾರ್ಥದಷ್ಟೇ ಮಕ್ಕಳ ಬೆಳವಣಿಗೆಗೂ ಸಹಕಾರಿಯಾಗುವುದು.

ಮಕ್ಕಳೊಂದಿಗೆ ಮಾತನಾಡುವುದರಿಂದ ತಮ್ಮ ಯೌವನ ಕಾಲವನ್ನು ನೆನಪಿಸಿಕೊಳ್ಳುವರು ಹಾಗೂ ಆ ದಿನಗಳ ಕುರಿತು ಮಕ್ಕಳಿಗೆ ವಿವರಿಸಿ ಸಂಭ್ರಮಿಸುತ್ತಾರೆ, ಇಲ್ಲಿ ಬಿಸಿ ಚರ್ಚೆಗೆ ಅವಕಾಶವಿರುವುದಿಲ್ಲ ವಾಗ್ವಾದಗಳಿರುವುದಿಲ್ಲ, ಹಿರಿಯರು ಏನೇ ಹೇಳಿದರೂ ಊಂ.. ಗುಟ್ಟುತ್ತಾ ಮಧ್ಯ ಮಧ್ಯ 'ತಾತ ಅದು ಹೇಗಿರುತ್ತೆ?, ತಾತ ನೀವು ಹಾಗಿದ್ರ?, ತಾತ ನಿಮಗೆ ನಿಮ್ಮಪ್ಪ ಹೊಡೆಯುತ್ತಿರಲಿಲ್ಲವಾ?', ಹೀಗೆ ಅನೇಕ ಮುಗ್ದ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಉತ್ತರವನ್ನು ಕಂಡುಕೊಂಡು ಖುಷಿಪಡುವ ಪರಿಯ ಸೊಬಗು ಮಜಾ ಕೊಡುತ್ತವೆ. ಇದರಿಂದ ವೃದ್ದರ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸುಧಾರಿಸುತ್ತದೆ. ಕಲ್ಮಶಗಳಿಲ್ಲದ ಮಕ್ಕಳ ಮುಗ್ದ ಮನಸ್ಸುಗಳು ಹಿರಿಯರಿಗೆ ಖುಷಿ ಕೊಡುವುದು.

> **"ಮಕ್ಕಳೊಂದಿಗೆ ಮಾತನಾಡುವುದರಿಂದ ತಮ್ಮ ಯೌವನ ಕಾಲವನ್ನು ನೆನಪಿಸಿಕೊಳ್ಳುವರು ಹಾಗೂ ಆ ದಿನಗಳ ಕುರಿತು ಮಕ್ಕಳಿಗೆ ವಿವರಿಸಿ ಸಂಭ್ರಮಿಸುತ್ತಾರೆ, ಇಲ್ಲಿ ಬಿಸಿ ಚರ್ಚೆಗೆ ಅವಕಾಶವಿರುವುದಿಲ್ಲ ವಾಗ್ವಾದಗಳಿರುವುದಿಲ್ಲ, ಹಿರಿಯರು ಏನೇ ಹೇಳಿದರೂ ಊಂ.. ಗುಟ್ಟುತ್ತಾ ಮಧ್ಯ ಮಧ್ಯ 'ತಾತ ಅದು ಹೇಗಿರುತ್ತೆ?, ತಾತ ನೀವು ಹಾಗಿದ್ರ?, ತಾತ ನಿಮಗೆ ನಿಮ್ಮಪ್ಪ ಹೊಡೆಯುತ್ತಿರಲಿಲ್ಲವಾ?', ಹೀಗೆ ಅನೇಕ ಮುಗ್ದ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಉತ್ತರವನ್ನು ಕಂಡುಕೊಂಡು ಖುಷಿಪಡುವ ಪರಿಯ ಸೊಬಗು ಮಜಾ ಕೊಡುತ್ತವೆ. ಇದರಿಂದ ವೃದ್ದರ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸುಧಾರಿಸುತ್ತದೆ. ಕಲ್ಮಶಗಳಿಲ್ಲದ ಮಕ್ಕಳ ಮುಗ್ದ ಮನಸ್ಸುಗಳು ಹಿರಿಯರಿಗೆ ಖುಷಿ ಕೊಡುವುದು.**

ಹಿರಿಯರೊಂದಿಗಿನ ಒಡನಾಟದಲ್ಲಿ ಸೇರಿದ ಸ್ನೇಹಿತರಲ್ಲಿ ಕೆಲವರು ಯಾವಾಗಲೂ ತಮ್ಮ ನೋವುಗಳನ್ನು ವ್ಯಕ್ತಪಡಿಸುತ್ತಿರುತ್ತಾರೆ. ಮನೆಯಲ್ಲಿ ಮಕ್ಕಳು ತೋರುವ ನಿರ್ಲಕ್ಷ್ಯ, ಹೆಂಡತಿ ಇಲ್ಲದ ಬದುಕು, ಔಷಧೋಪಚಾರಗಳಲ್ಲಿನ ಕೊರತೆ ಇಲ್ಲವೇ ರಾಜಕೀಯ ಅಥವಾ ಇತರೆ ಅನಾವಶ್ಯಕ ವಿಷಯಗಳ ಚರ್ಚೆ, ಇವರಲ್ಲಿ ಮೊಂಡು ವಾದ ಮಂಡಿಸುವ ಒಂದಿಬ್ಬರು ಇದ್ದರೆ ಮುಗಿಯಿತು ಆ ದಿನದ ನೆಮ್ಮದಿ!, ಈ ಗುಂಪಿನಲ್ಲಿ ಇದ್ದಷ್ಟು ಸಮಯ ನಮಗೂ ಭಯ, ನೋವು ಹಾಗೂ ಬದುಕಿನ ಅಭದ್ರತೆ ಕಾಡುವುದು.

ಮಕ್ಕಳಿಗೆ ಹಿರಿಯರ ಸಾಂಗತ್ಯದಿಂದ ಸಾಮಾಜಿಕ ಹಾಗೂ ಭಾವನಾತ್ಮಕ ಸಂಬಂಧಗಳು ಸುಧಾರಿಸುತ್ತವೆ. ಅಧ್ಯಯನದ ಪ್ರಕಾರ ಶೇಕಡಾ 40ಕ್ಕಿಂತ ಹೆಚ್ಚು ಹಿರಿಯರಿಗೆ ಒಂಟಿತನ ಕಾಡುವುದಂತೆ, ವೃದ್ದರಿಗೆ ಮಕ್ಕಳ ಒಡನಾಟ ಒಂಟಿತನವನ್ನು ಹೋಗಲಾಡಿಸುವುದು.

ಇತ್ತೀಚಿನ ದಿನಗಳಲ್ಲಿ ಹಿಂದಿನ ತಲೆಮಾರಿನ ಹಿರಿಯರಿಗಿಂತ ವಿದ್ಯಾವಂತರು, ಸಮರ್ಥರು ಹಾಗೂ ಆರೋಗ್ಯವಂತರು ಆಗಿರುವ ಹಿರಿಯರಿದ್ದಾರೆ. ಇವರು ಇಂದಿನ ಪೀಳಿಗೆಯ ಮಕ್ಕಳ ಒಡನಾಟದಲ್ಲಿ ಇದ್ದರೆ ಭವಿಷ್ಯದಲ್ಲಿ ಉತ್ತಮ ನಾಗರಿಕರಾಗಲು ಉಪಯುಕ್ತವಾಗುವುದು, ದುರ್ದೈವವೆಂದರೆ ನಮ್ಮ ಜೀವನಶೈಲಿಯು ಕುಟುಂಬಗಳಲ್ಲಿ ಹಿರಿಯರನ್ನು ಪ್ರತ್ಯೇಕವಾಗಿಸುವ ವ್ಯವಸ್ಥೆಯಾಗಿಬಿಟ್ಟಿದೆ.

ಸಂಜೆಯಾಯಿತೆಂದರೆ ವಾಯುವಿಹಾರಕ್ಕೆಂದು ಪಾರ್ಕುಗಳಿಗೆ ಬರುವ ವೃದ್ದರನ್ನು ಗಮನಿಸುತ್ತಾ ಅವರೊಟ್ಟಿಗೆ ತುಸು ಸಮಯ ಕಳೆದರೆ ಜೀವನ ಇಷ್ಟೇನೇ!?, ಎಂದು ಅನ್ನಿಸುವುದು. ಆಸ್ಪತ್ರೆಗಳಿಗೆ ಭೇಟಿ ನೀಡಿ ಬೆಡ್ ಮೇಲೆ ನೋಡಿಕೊಳ್ಳುವವರು ಇಲ್ಲದೆ ಮಲಗಿರುವ ಮುದುಕರನ್ನು ನೋಡಿದರೆ ದುರಂತ ಬದುಕಿನ ಪರಿಚಯವಾಗಿ ಇಳಿವಯಸ್ಸಿನ ದಿನಗಳ ಶೋಚನೀಯ ಸ್ಥಿತಿಯ ಅರಿವು ಆಗುವುದುಂಟು.

ಬಾಲ್ಯ ಹಾಗೂ ಮುಪ್ಪು ಎರಡೂ ವಿಬಿನ್ನ ಹಂತಗಳಾಗಿವೆ. ಒಂದು ಕಲಿಯುತ್ತಾ ಬೆಳೆಯುವುದು ಮತ್ತೊಂದು ಕಲಿತಿದ್ದನ್ನು ಮರೆಯುತ್ತಾ ಕಡೆಗೊಮ್ಮೆ ಮರೆಯಾಗುವುದು. ಬಾಲ್ಯದ ಜೀವನ ಸುಂದರಮಯವಾಗಿದ್ದರೆ ಮುಪ್ಪಿನಲ್ಲಿ ಸುಖವಿಲ್ಲದೆ ಸಮಸ್ಯೆ ಹಾಗೂ ನೋವುಗಳಲ್ಲೇ ದಿನಗಳನ್ನು ಎಣಿಸಬೇಕಾಗುತ್ತದೆ. ಸಮಸ್ಯೆಗಳನ್ನೇ ಹಾಸಿ ಮಲಗಿರುವ ವೃದ್ದರೊಂದಿಗೆ ವೃದ್ದರು ಬೆರೆಯುವುದಕ್ಕಿಂತ ಲವಲೇಶವೂ ದ್ವೇಷಾಸೂಯೆಗಳಿಲ್ಲದ ಮಕ್ಕಳೊಂದಿಗೆ ಮಕ್ಕಳಾಗಿ ಸಮಯ ಕಳೆಯುವುದರಿಂದ ಜೀವಿತಾವಧಿಯನ್ನು ವೃದ್ದಿಸಿಕೊಳ್ಳಬಹುದಲ್ಲದೆ ಮನಸ್ಸು ಪ್ರಫುಲ್ಲವಾಗಿರುವ ಹಾಗೆ ಇರುವುದು. ಇದರಿಂದ ರಾತ್ರಿ ನೆಮ್ಮದಿಯ ನಿದ್ರೆಗೆ ಸಹಕಾರಿಯಾಗುವುದು.


ಯುವಕರು ಹಾಗೂ ಮಧ್ಯವಯಸ್ಕರು ತಿಳಿದುಕೊಳ್ಳಬೇಕಿದೆ 'ಮುಂದೆ ನಾವೂ ಸಹ ವೃದ್ದರಾಗುತ್ತೇವೆ' ಆಗ ನಮಗೂ ಆಸರೆ ಬೇಕಿದೆ ಗೌರವಿಸುವುದನ್ನು ಬಯಸುತ್ತೇವೆ. ಆಸರೆ ಮತ್ತು ಗೌರವಗಳನ್ನು ಬಯಸುವ ನೀವು ಈಗ ಏತಕ್ಕೆ ಇಳಿವಯಸ್ಸಿನವರನ್ನು ನಿರ್ಲಕ್ಷಿಸುವುದು?. ಹತ್ತಾರು ಮಕ್ಕಳನ್ನು ಹೆರುವ ಕಾಲದಲ್ಲಿ ಒಬ್ಬನಾದರೂ ಒಂದೊತ್ತು ಊಟ ಕೊಡುತ್ತಿದ್ದ. ಆದರೆ ಒಂದು ಅಥವಾ ಎರಡು ಮಕ್ಕಳು ಮಾತ್ರ ಇರುವ ಪ್ರಸ್ತುತ ಕಾಲದಲ್ಲಿ ಪರದೇಶದಲ್ಲಿ ಮಕ್ಕಳಿದ್ದರೆ ಸ್ವದೇಶದಲ್ಲಿ ವೃದ್ದರು ಅನಾಥ ಸ್ಥಿತಿಯಲ್ಲಿ ದಿನಗಳನ್ನು ಎಣಿಸುತ್ತಾ ಕಾಲನ ಕರೆಗೆ ಕಾಯುತ್ತಿರುತ್ತಾರೆ.

Treat elders as you would like to be treated when you are an elder yourself.

ಕಿರಿಯರು ಮುಂದೆ ಅವರೇ ಹಿರಿಯರಾಗಿ ಅವರನ್ನು ಹೇಗೆ ನಡೆಸಿಕೊಳ್ಳಬೇಕೆಂದು ಬಯಸುತ್ತಾರೋ ಹಾಗೆಯೇ ಅವರು ಕೂಡ ಹಿರಿಯರನ್ನು ನೋಡಿಕೊಳ್ಳಬೇಕಲ್ಲವೆ?. ಇದೊಂದು ರೀತಿಯ ಅತ್ತೆಸೊಸೆ ಸಮಸ್ಯೆ ಇದ್ದಂತೆ; ಸೊಸೆಯು ಅತ್ತೆಯಾದವಳು ತನ್ನನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಬಯಸುತ್ತಾಳೆ. ಆದರೆ ಮುಂದೆ ಅವಳೇ ಅತ್ತೆಯ ಸ್ಥಾನಕ್ಕೆ ಏರಿದಾಗ ತನ್ನ ಸೊಸೆಯನ್ನು ಮಗಳಂತೆ ನೋಡಿಕೊಳ್ಳುತ್ತಾಳೆಯೇ?.

ಇಂದು ಮನರಂಜನೆಗೆ ನಾನಾ ಮಾರ್ಗಗಳುಂಟು ಮನಸ್ಥಿತಿಗೆ ಒಪ್ಪುವುದನ್ನು ಆಯ್ಕೆ ಮಾಡಿಕೊಂಡು ಸಾಮರ್ಥ್ಯಕ್ಕೆ ಅನುಸಾರ ಸಮಾಜಸೇವೆಗೆ ಸಮಯ ಕೊಟ್ಟು ಇಳಿ ವಯಸ್ಸನ್ನು ಸಂಭ್ರಮಿಸಬೇಕು. ನಿಜವಾದ ಬದುಕು ಪ್ರಾರಂಭವಾಗುವುದು ನಿವೃತ್ತಿ ವಯಸ್ಸು ದಾಟಿದ ನಂತರವೇ!. ಸೇವೆಯೊಂದಿಗೆ ಆಧ್ಯಾತ್ಮದ ಕಡೆಗೆ ಮನಸ್ಸು ಕೊಡುವುದರಿಂದ ಬದುಕಿನ ಉದ್ದೇಶ ಅರ್ಥವಾಗುವುದು, ಆಧ್ಯಾತ್ಮದ ಚಿಂತನೆಗಳನ್ನು ಸಾಧುಸಂತರಿಂದ ಕೇಳುವುದರಿಂದ ಮನಸ್ಸು ತಿಳಿಯಾಗುವುದು, ಹುದುಗಿರುವ ನೋವುಗಳು ಇಲ್ಲವಾಗುವುದು.

ಇಲ್ಲಿ ಮತ್ತೊಂದು ತಿಳುವಳಿಕೆ ನಮಗಿರಬೇಕು ಆರ್ಥಿಕ ಭದ್ರತೆಯನ್ನು ದುಡಿಯುವ ವಯಸ್ಸಿನಲ್ಲೇ ಯೋಜಿಸಿ ಕಟ್ಟಿಕೊಳ್ಳಬೇಕು, ಅರವತ್ತಾದ ನಂತರ ಸಂಪಾದನೆಯ ರಿಸ್ಕ್ ತೆಗೆದುಕೊಂಡು ಇದ್ದದ್ದನ್ನು ಕಳೆದುಕೊಂಡು ತುತ್ತು ಅನ್ನಕ್ಕೂ ಪರಿತಪಿಸುವುದು ಬೇಡ. ನಿವೃತ್ತಿ ಬದುಕಿನ ಸಂಕೀರ್ಣತೆಯ ಕುರಿತಾಗಿ ಹೇಳುತ್ತಿದ್ದರೆ ಕೊನೆಮೊದಲಿರದು ಇಲ್ಲಿಗೇ ಸ್ಟಾಪ್ ಮಾಡಿ ಬನ್ನಿ ಮಕ್ಕಳೊಂದಿಗೆ ಬೆರೆತು ಈ ದಿನದ ಎಂಜಾಯ್‌ಮೆಂಟ್ ಮಾಡೋಣ. ಹಿರಿಯರೇ ಮಕ್ಕಳೊಂದಿಗೆ ಬೆರೆಯಿರಿ, ಬೆರೆತು ಮಗುವಂತಾಗಿ ಬಿಡಿ ನಿಮ್ಮೊಳಗಿನ ನೋವೆಲ್ಲಾ ನಿಮ್ಮ ಮುಗ್ದತೆಯಲ್ಲೇ ಕರಗಿಹೋಗಲಿ.




ವಾರಭವಿಷ್ಯ

16.4.2023 ರಿಂದ 22.4.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ಚಂದ್ರ, ಕುಂಭ, ಮೀನ, ಮೇಷ, ಕುಜ-ಮಿಥುನ, ಬುಧ-ಮೇಷ, ಗುರು-ಮೀನ, ಮೇಷ, ಶುಕ್ರ-ವೃಷಭ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಸ್ವಂತ ಕೆಲಸಗಳು ಸುಸೂತ್ರವಾಗಿ ನಡೆಯುವುದು. ಬಯಸಿದ್ದನ್ನು ಗಳಿಸಿಕೊಳ್ಳಲು ಗ್ರಹಾನುಕೂಲವಿದೆ. ನಿಮ್ಮ ರಾಶಿಯಲ್ಲಿ ಚತುಗ್ರಹ ಯೋಗ ಉಂಟಾಗಿದ್ದು ನಿಮ್ಮ ನಿರ್ಧಾರಗಳು ಗೊಂದಲಮಯವಾಗಿರುತ್ತದೆ. ಮಡದಿಯರ ಖುಷಿಗೆ ಶಾಪಿಂಗ್ ಜೋರಾಗುತ್ತದೆ. ಸರ್ಕಾರಿ ಕೆಲಸ ಕಾರ್ಯಗಳು ನಿಮ್ಮ ಅನುಕೂಲಕ್ಕೆ ಇಲ್ಲ. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗಾವಣೆ ಆಗುವುದು.

ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಬಂಧು-ಮಿತ್ರರ ಸಹಾಯದಿಂದ ಕೌಟುಂಬಿಕ ಸಮಸ್ಯೆಗಳ ಪರಿಹಾರವಾಗುವುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ. ಉತ್ತಮ ಬುದ್ಧಿಶಕ್ತಿಯ ಪ್ರದರ್ಶನ, ಪುಷ್ಪಹಾರಗಳಿಂದ ಸನ್ಮಾನ. ಕಾಲ-ಕರ್ಮಗಳು ಕೂಡಿ ಬಂದಿದ್ದು, ಆಸ್ತಿ-ಪಾಸ್ತಿ ಖರೀದಿಯು, ಯತ್ನ ಕಾರ್ಯಗಳಲ್ಲಿ ಯಶಸ್ಸು ಉಂಟಾಗುವುದು. ವಿಷಾಹಾರಗಳಿಂದ ಆರೋಗ್ಯ ವ್ಯತ್ಯಯ. ಪ್ರಯಾಣ ಸಮಯದಲ್ಲಿ ಆಪತ್ತು.

ಶ್ರೀ ದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2.



ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಉದ್ಯೋಗಾರ್ಥಿಗಳಿಗೆ ಸಂತಸದ ಸಮಾಚಾರ ಬರುವುದು. ರಾಜಕೀಯ ರಂಗದವರಿಗೆ ವಿರೋಧಿಗಳ ಉಪಟಳ. ವರಮಾನಕ್ಕಿಂತ ಖರ್ಚು ಹೆಚ್ಚಾಗುವುದರಿಂದ ತಾತ್ಕಾಲಿಕ ಸಾಲ ಮಾಡಬೇಕಾದ ಪರಿಸ್ಥಿತಿ. ಪಂಚಮಕೇತು ಸಂಚಾರ ಇರುವ ಕಾರಣ ದುಷ್ಟಜನರ ಸಹವಾಸದಿಂದ ಅಪಖ್ಯಾತಿಗೆ ಗುರಿಯಾಗುವಿರಿ. ಉತ್ತಮರ ಸಹವಾಸ ಹೂವಿನ ಜೊತೆ ನಾರುಸ್ವರ್ಗ ಸೇರಿತು ಎಂಬಂತೆ. ಶ್ರೀರಾಮ ರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9.



ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಅನಿರೀಕ್ಷಿತ ಮೂಲಗಳಿಂದ ಧನ ಸಂಚಯ. ಯುವಕರಿಗೆ ಉನ್ನತ ಅಧ್ಯಯನದಿಂದ ಕೀರ್ತಿ. ಹೊಸ ವ್ಯಾಪಾರ ಆರಂಭಿಸಲು ಮಾಡುವ ಸಾಲದ ಪ್ರಯತ್ನ ಫಲಿಸುವುದು. ವಿವಾಹಯೋಗ್ಯರಿಗೆ ಸೂಕ್ತ ಸಂಬಂಧಗಳು ಒದಗಿ ಬರಲಿವೆ. ದುಡುಕು ಮನೋವೃತ್ತಿಯಿಂದ ಅನವಶ್ಯಕ ತಪ್ಪುಗಳು ನಡೆದು ಹೋಗುವುದು. ಅನ್ಯಸ್ತ್ರೀಯರನ್ನು ಗೌರವದಿಂದ ಕಾಣಿ ಅನ್ಯಥಾ ತೊಂದರೆಗೆ ಗುರಿಯಾಗುವಿರಿ.

ಶ್ರೀದುರ್ಗಾಸ್ತುತಿ. ಶುಭ ಸಂಖ್ಯೆ-5.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸದ್ಯದಲ್ಲಿಯೇ ಜೀವನದಲ್ಲಿ ಗುರುತರವಾದ ಬದಲಾವಣೆಯನ್ನು ಕಾಣುವಿರಿ. ನಿಮ್ಮ ಸ್ವಂತ ಕೆಲಸಗಳನ್ನು ಆಜ್ಞಾಪೂರ್ವಕವಾಗಿ ಪೂರೈಸಿಕೊಳ್ಳುವಿರಿ. ಗೃಹದಲ್ಲಿ ಶುಭ ಸಮಾರಂಭಗಳು ನಡೆದೀತು. ಸಹೋದರರಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯ ನಿವಾರಣೆ ಆಗುವುದು. ಪತ್ನಿಗೆ ಅನಾರೋಗ್ಯವಾದೀತು, ಉದಾಸೀನ ಬೇಡಿ. ಸರ್ಕಾರಿ ಅಧಿಕಾರಿಗಳು ಕಾನೂನುಬಾಹಿರ ಕೆಲಸ ಮಾಡಿ ತೊಂದರೆಗೆ ಗುರಿಯಾಗುವಿರಿ.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-5.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ವ್ಯಾಪಾರ, ವಹಿವಾಟುಗಳು ಭರಾಟೆಯಿಂದ ಸಾಗುವುದು. ವೈವಾಹಿಕ ಜೀವನದಲ್ಲಿ ಹರ್ಷ ಉಲ್ಲಾಸಗಳು. ಉದ್ಯೋಗಾಕಾಂಕ್ಷಿಗಳಿಗೆ ಸುವಾರ್ತೆ ಬರುವುದು. ಶಿಕ್ಷಣ ಕ್ಷೇತ್ರದವ ರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ನೆರೆಹೊರೆಯಲ್ಲಿ ಅಕಾರಣವಾಗಿ ವಿರೋಧವನ್ನು ಎದುರಿಸಬೇಕಾಗುವುದು. ದೂರ ಪ್ರಯಾಣಗಳನ್ನು ತುಂಬಾ ಎಚ್ಚರಿಕೆಯಿಂದ ಮಾಡಬೇಕು. ಸ್ನಾಯು ಸೆಳೆತ ಕಾಡಬಹುದು.

ಶ್ರೀ ಶ್ರೀನಿವಾಸ ಉಪಾಸನೆ. ಶುಭ ಸಂಖ್ಯೆ-1.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಿಶ್ವಾಸಪಾತ್ರರ ಮಾರ್ಗದರ್ಶನದಿಂದ ಮನೆಯ ಕೆಲಸ ಕಾರ್ಯಗಳು ಸುಖಕರವಾಗಿ ಸಂಪನ್ನಗೊಳ್ಳುವುದು. ಜೊತೆಗೆ ಧನಾತ್ಮಕವಾಗಿ ಚಿಂತಿಸಿ ಸಾಧನೆಯ ದಾರಿ ತೆರೆದುಕೊಳ್ಳುವುದು. ಫ್ಯಾನ್ಸಿ ಸ್ಟೋರ್, ಗಿಫ್ಟ್ ಐಟಂ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಕೇತು-ರಾಹು ಪ್ರಭಾವದಿಂದ ಭಾವೋದ್ವೇಗಕ್ಕೆ ಒಳಗಾಗುವ ಸಾಧ್ಯತೆ ಇದ್ದು ಮನೆಯಲ್ಲಿಯೂ, ಹೊರಗೂ ಸಮಾಧಾನ ಚಿತ್ತರಾಗಿ ವ್ಯವಹರಿಸಿ.

ಶ್ರೀ ಜ್ವಾಲಮಾಲಿನಿ ತ್ರಿಪುರ ಸುಂದರಿ ದರ್ಶನ. ಶುಭ ಸಂಖ್ಯೆ-8.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಸಪ್ತಾಹದ ಆದಿಭಾಗಕ್ಕೆ ಮನೆಗೆ ನೆಂಟರಿಷ್ಟರ ಆಗಮನದಿಂದ ಹರುಷ, ಪ್ರಫುಲ್ಲತೆಗಳು, ವಯಸ್ಕರಿಗೆ ಉತ್ತಮ ಉದ್ಯೋಗಾವಕಾಶ ಹಾಗೂ ವೈವಾಹಿಕ ಭಾಗ್ಯವೂ ದೊರೆಯಲಿದೆ. ಭಚಕ್ರದಲ್ಲಿ ಉಂಟಾಗಲಿರುವ ಚತುಗ್ರಹಯೋಗ ನಿಮ್ಮ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡಲಿದೆ. ಯೋಚಿಸಿಯೇ ಮಾತನಾಡಿ, ಯೋಚಿಸಿದ್ದೆಲ್ಲವನ್ನೂ ಮಾತನಾಡಬೇಡಿ. ಅಕಾಲಿಕ ಭೋಜನದಿಂದ ಅಸ್ವಸ್ಥತೆ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-7.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ನಿಮ್ಮ ಹೊಸ ನಿರೀಕ್ಷೆಗಳು ಸಾಕಾರಗೊಳ್ಳಲು ನಿಮ್ಮ ಪರಿಶ್ರಮದ ಅಗತ್ಯವೂ ಇದೆ. ಗುರುಕೃಪೆಗೆ ಪಾತ್ರರಾಗುವ ಸಮಯ ಬಂದಿದೆ. ಹಳೆಯ ಸಾಲಗಳನ್ನು ತೀರಿಸಲು ಧನ ಶೇಖರಣೆಯಾಗುವುದು. ಮಾತು ಬಲ್ಲವ ಮಾಣಿಕ್ಯ ಗೆದ್ದ ಎಂಬಂತೆ ನಿಮ್ಮ ಮಾತು ಇರಲಿ. ನೆರೆಹೊರೆಯಲ್ಲಿ ಮನಸ್ತಾಪಗಳು ಉಂಟಾಗದಂತೆ ವ್ಯವಹರಿಸಿ. ಗೋವುಪಾಲಕರಿಗೂ, ಕ್ಷೀರೋತ್ಪನ್ನ ಮಾರಾಟಗಾರರಿಗೂ ಅಧಿಕ ಧನಲಾಭ.

ಶ್ರೀ ಶಿರಡಿ ಸಾಯಿಬಾಬಾ ಸೇವೆ. ಶುಭ ಸಂಖ್ಯೆ-3.



ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಮಾಡುವ ಕೆಲಸದಲ್ಲಿ ಪ್ರಾಮಾಣಿಕತೆ ಇರಲಿ. 'ಪ್ರಾರ್ಥನೆ ಮಾಡುವಾಗ ಪ್ರಸಾದದ ಚಿಂತೆ ಏಕೆ' ಎಂಬಂತೆ. ಚಂದ್ರಗ್ರಹ ಶುಭ ಗೋಚಾರ ಫಲವಾಗಿ ಏನನ್ನಾದರೂ ಸಾಧಿಸುವ ಮನೋಬಲ ದೊರಕುತ್ತದೆ. ಹೊಸ ಮಿತ್ರರ ಪರಿಚಯ ನಿಮ್ಮ ಅಭಿವೃದ್ಧಿಗೆ ಪೂರಕವಾಗಲಿದೆ. ಎಣ್ಣೆಕಾಳು ವ್ಯಾಪಾರಿಗಳಿಗೆ ಅಧಿಕ ಧನಲಾಭ. ಶತ್ರುಗಳು ನಿಮ್ಮ ಗುಟ್ಟನ್ನು ಅರಿಯುವರು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-6.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆದಿಗೆ ನಿಮ್ಮ ರಾಶಿಗೆ ಆಗಮಿಸುವ ಚಂದ್ರ ಹಾಗೂ ಗುರುವಿನ ಶುಭ ಸಂಚಾರದಿಂದ ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆಯೇನೂ ಕಾಣದು. ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಸನ್ಮಾನಕ್ಕೆ ಭಾಜನರಾಗುವಿರಿ. ಪುತ್ರ-ಪುತ್ರಿಯರ ಸಾಧನೆಯಿಂದ ಮನಸ್ಸಂತೋಷ. ಹೊಸ ಉದ್ಯಮ ಸ್ಥಾಪನೆಯಲ್ಲಿ ಪ್ರಗತಿ. ಶೇರು ಮಾರಾಟದಿಂದ ಆದಾಯದಲ್ಲಿ ಹೆಚ್ಚಳ. ವಾಯು ಪ್ರಕೋಪದಿಂದ ಆರೋಗ್ಯದಲ್ಲಿ ವ್ಯತ್ಯಯ.

ಶ್ರೀ ನಾರಾಯಣ ನಾಮಸ್ಮರಣೆ. ಶುಭ ಸಂಖ್ಯೆ-1.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


ಶುಭ ಬುಧನಿಂದ ಸಂದರ್ಭೋಚಿತ ಮಾತಿನಿಂದ ಕಾರ್ಯ ಸಾಧನೆ. ಲೆಕ್ಕ ಪರಿಶೋಧಕರಿಗೆ ಉತ್ತಮ ವರಮಾನ. ಶೇರು ವ್ಯವಹಾರಗಳಿಂದ ಲಾಭ. ನ್ಯಾಯಾಲಯ ವ್ಯವಹಾರಗಳಲ್ಲಿ ಜಯ. ಕಲಾಕ್ಷೇತ್ರದಲ್ಲಿರುವವರಿಗೆ ಸಂಘ-ಸಂಸ್ಥೆಗಳಿಂದ ಸನ್ಮಾನ. ಐಟಿ, ಬಿಟಿಯವರಿಗೆ ವರಮಾನದಲ್ಲಿ ಹೆಚ್ಚಳ. ರಾಜಕಾರಿಣಿಗಳಿಗೆ ನಿರಾಶೆಯ ಸನ್ನಿವೇಶ. ವಾಹನ ಚಾಲನೆ ವೇಳೆ ಸಂಚಾರಿ ನಿಯಮ ಪಾಲಿಸಿ, ದಂಡ ತಪ್ಪಿಸಿಕೊಳ್ಳಿ.

ಶ್ರೀ ದತ್ತ ಸ್ಮರಣೆ. ಶುಭ ಸಂಖ್ಯೆ-8

ಮಕ್ಕಳ ಚಿತ್ರಕಥೆ

'ದೇಶದ ಗೌರವ ಕಾಪಾಡುವ ಬಗ್ಗೆ ಚಿಂತಿತನಾಗಿದ್ದ ಪುಟ್ಟ ಬಾಲಕ'

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಮತ-ಮತದಾರ-ಮತದಾನ; ಅತೀ ಮುಖ್ಯವಾದುದು

■ ಮಣಿಕಂಠ ತ್ರಿಶಂಕರ್

ಮತದ ಮೌಲ್ಯ

ಸಂವಿಧಾನ ರಚನಾ ಮಂಡಳಿಯ ಸಭೆಯಲ್ಲಿ ತಮ್ಮ ಅಂತಿಮ ಭಾಷಣ ಮಾಡುವ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರಾಜಕಾರಣದಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಮತದಾನದ ಹಕ್ಕು ಹೊಂದಿರುತ್ತಾನೆ, ರಾಜಕೀಯ ಪಕ್ಷವನ್ನು ಕಟ್ಟುವ, ಪಕ್ಷಕ್ಕೆ ಸೇರುವ ಸ್ವಾತಂತ್ರ್ಯ ಹೊಂದಿರುತ್ತಾನೆ. ರಾಜಕಾರಣದಲ್ಲಿ ನಾವು ಒಬ್ಬ ವ್ಯಕ್ತಿಗೆ ಒಂದು ಮತ ಒಂದು ಮೌಲ್ಯ ಎಂಬ ತತ್ವವನ್ನು ಅನುಸರಿಸುತ್ತೇವೆ. ಆದರೆ ನಮ್ಮ ಸಾಮಾಜಿಕ- ಆರ್ಥಿಕ ಸಂರಚನೆಯ ಕಾರಣ ಒಬ್ಬ ವ್ಯಕ್ತಿಗೆ ಒಂದು ಮೌಲ್ಯವನ್ನು ಕಲ್ಪಿಸಲು ನಿರಾಕರಿಸುತ್ತೇವೆ ಎಂದು ಹೇಳಿರುವುದನ್ನು ಭಾರತದ ರಾಜಕೀಯ ಪಕ್ಷಗಳು, ನಾಯಕರು, ಸಾಮಾಜಿಕ ಕಾರ್ಯಕರ್ತರು, ಸಂಘಟನೆಗಳು ಮತ್ತು ವಿವಿಧ ಸಿದ್ಧಾಂತಗಳ ಅನುಯಾಯಿಗಳು ವರ್ಷಕ್ಕೆ ಕನಿಷ್ಠ ಎರಡು ಬಾರಿಯಾದರೂ ನೆನಪಿಸಿಕೊಳ್ಳುವುದು ವಾಡಿಕೆಯಾಗಿದೆ. ಪ್ರತಿಯೊಂದು ಚುನಾವಣೆಯ ಸಂದರ್ಭದಲ್ಲೂ ಸಾರ್ವಭೌಮ ಪ್ರಜೆಗಳು, ಆಳುವ ಸರ್ಕಾರಗಳನ್ನು ಆಯ್ಕೆ ಮಾಡಲು ಚಲಾಯಿಸುವ ಅಮೂಲ್ಯ ಮತದ ಮೌಲ್ಯ, ಪ್ರಾಮುಖ್ಯತೆ ಮತ್ತು ಪಾವಿತ್ರ್ಯತೆಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತವೆ.

ಮತದಾರ ಜಾಗೃತಿ ಅಭಿಯಾನಗಳು ವಿಭಿನ್ನ ಸ್ತರಗಳಲ್ಲಿ ನಡೆಯುತ್ತವೆ. ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಸಾಮಾಜಿಕ ಕಾರ್ಯಕರ್ತರು ಮತದಾರರಲ್ಲಿ ಜಾಗೃತಿ ಮೂಡಿಸುವ ಸಲುವಾಗಿಯೇ ವಿಶಿಷ್ಟ-ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದನ್ನು ಸಾಮಾನ್ಯವಾಗಿ ಗಮನಿಸಬಹುದು. ಪ್ರಜಾಪ್ರಭುತ್ವದ ಅಳಿವು-ಉಳಿವು ಮತದಾರರ ಜಾಗೃತ ಪ್ರಜ್ಞೆಯನ್ನೇ ಅವಲಂಬಿಸಿರುತ್ತದೆ ಎನ್ನುವುದನ್ನು ಇತಿಹಾಸ ಹಲವು ಸಂದರ್ಭಗಳಲ್ಲಿ ನಿರೂಪಿಸಿದೆ.

ಆಡಳಿತ ವ್ಯವಸ್ಥೆಯಲ್ಲಿ ಸದ್ದಿಲ್ಲದೆ ನುಸುಳುವ ಸರ್ವಾಧಿಕಾರಿ ಧೋರಣೆ ಮತ್ತು ವ್ಯವಸ್ಥೆಯ ಎಲ್ಲ ಹಂತಗಳಲ್ಲೂ ವ್ಯಾಪಿಸುವ ನಿರಂಕುಶಾಧಿಕಾರದ ಕುಡಿಗಳು ಇಡೀ ವ್ಯವಸ್ಥೆಯನ್ನೇ ಕ್ಯಾನ್ಸರ್ ಪೀಡಿತ ಜೀವಕೋಶದಂತೆ ಶಿಥಿಲವಾಗಿಸುತ್ತಲೇ ಇರುತ್ತವೆ. ಮೂಲತಃ ಸಾಮಾನ್ಯ ಜನತೆಯಲ್ಲಿ ಪ್ರಜಾಪ್ರಭುತ್ವ ಮತ್ತು ಮತದಾನದ ನಡುವೆ ಇರುವ ಸೂಕ್ಷ್ಮ ಸಂಬಂಧದ ಬಗ್ಗೆ ಅರಿವು ಮೂಡಿಸುವುದು ನಮ್ಮ ಇಂದಿನ ಆದ್ಯತೆಯಾಗಬೇಕಿದೆ. 18 ವರ್ಷಗಳನ್ನು ಪೂರೈಸುತ್ತಲೇ ಮತದಾರ ಎನಿಸಿಕೊಳ್ಳುವ ಪ್ರತಿಯೊಬ್ಬ ಪ್ರಜೆಗೂ ಪ್ರಥಮ ಮತದಾನ ಮಾಡುವ ಕ್ಷಣದಲ್ಲಿ ತನ್ನ ಸುತ್ತಲಿನ ಸಮಾಜವನ್ನು ಕಣ್ಣೆತ್ತಿ ನೋಡುವ ವ್ಯವದಾನ ಇರಬೇಕಾಗುತ್ತದೆ. ಮೊದಲ ಸಲ ಮತ ಚಲಾಯಿಸುವ ಮತದಾರ ತಾನು ನಿಂತ ನೆಲ, ತಾನು ರೂಪಿಸಿಕೊಂಡ ಬದುಕು ಮತ್ತು ತನ್ನ ಸುತ್ತ ಢಾಳಾಗಿ ಕಾಣುವ ಸಾಮಾನ್ಯ ಜನತೆಯ ವಾಸ್ತವ ಬದುಕು ಇವುಗಳನ್ನು ಗಮನಿಸದೆ ಹೋದರೆ, ಆ ವ್ಯಕ್ತಿಗೆ ಮತ ಮತ್ತು ಮತದಾನದ ಮೌಲ್ಯ ಅರ್ಥವಾಗಿಲ್ಲ ಎಂದೇ ಅರ್ಥ. ಸಂವಿಧಾನ ನೀಡಿರುವ ಎಲ್ಲ ಪ್ರಜಾಸತ್ತಾತ್ಮಕ ಹಕ್ಕುಗಳನ್ನೂ, ಸೌಲಭ್ಯಗಳನ್ನೂ ಬಳಸಿಕೊಂಡೇ ತಮ್ಮದೇ ಆದ ಹಿತಕರ ಗೂಡು ಕಟ್ಟಿಕೊಂಡಿರುವ ಸುಶಿಕ್ಷಿತರೂ ಸಹ ತಮ್ಮ ಪೂರ್ವ ಬದುಕಿನ, ಸಾಮಾಜಿಕ ಕಾಳಜಿ-ಕಳಕಳಿ ಮತ್ತು ಆಶಯಗಳನ್ನು ಮರೆತು, ಸರ್ವಾಧಿಕಾರ ಮತ್ತು ನಿರಂಕುಶಾಧಿಕಾರದ ಆಲೋಚನಾ ವಿಧಾನಗಳಿಗೆ ಬಲಿಯಾಗುತ್ತಿರುವುದನ್ನು ವರ್ತಮಾನದ ಸಂದರ್ಭದಲ್ಲಿ ವಿಷಾದದಿಂದಲೇ ಗಮನಿಸಬೇಕಿದೆ. ಹಿರಿಯ ಪೀಳಿಗೆಯು ಜಾತಿ, ಧರ್ಮ ಮತ್ತು ಸಾಮುದಾಯಿಕ ಅಸ್ಮಿತೆಗಳಿಗೆ ಬಲಿಯಾಗಿ ತಮ್ಮ ಮತದ ಮೌಲ್ಯವನ್ನು ಮರೆಯುತ್ತಿದ್ದರೆ ಮತ್ತೊಂದೆಡೆ ಯುವ ಸಮೂಹ ಭ್ರಮಾಧೀನತೆಗೆ ಬಲಿಯಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಮತದ ಮೌಲ್ಯ ಮತ್ತು ಅಪಮೌಲ್ಯ : ಮತದ ಮೌಲ್ಯ ಎಂದರೇನು, ಈ ಪ್ರಶ್ನೆ ಇಂದು ಪ್ರತಿಯೊಬ್ಬ ಶ್ರೀ ಸಾಮಾನ್ಯನನ್ನೂ ಕಾಡಬೇಕಿದೆ. ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯವೇ ಅಂತಿಮ ಎಂದಾದಲ್ಲಿ ಈ ಜನಾಭಿಪ್ರಾಯಕ್ಕೆ ತನ್ನದೇ ಆದ ಸ್ವಾಯತ್ತತೆಯೂ ಇರಬೇಕಲ್ಲವೇ?. ಈ ಸ್ವಾಯತ್ತತೆ ಮೂಡುವುದಾದರೂ ಹೇಗೆ? ಜನತೆಯಲ್ಲಿ ಸ್ವಂತ ಆಲೋಚನೆ, ಚಿಂತನೆ ಮತ್ತು ಅಭಿವ್ಯಕ್ತಿಯ ನೆಲೆಗಳು ಸ್ಪಷ್ಟವಾದಾಗ ಮಾತ್ರ ಇದು ಸಾಧ್ಯ. ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಜಾತಿ, ಧರ್ಮ ಮತ್ತು ಪ್ರಾದೇಶಿಕ ಅಸ್ಮಿತೆಗಳನ್ನೇ ಮಾರುಕಟ್ಟೆಯ ತಂತ್ರಗಳಂತೆ ಬಳಸಿಕೊಂಡು ಈ ಸ್ವಾಯತ್ತತೆಯ ನೆಲೆಗಳನ್ನು ಭ್ರಷ್ಟಗೊಳಿಸುತ್ತಿರುತ್ತವೆ. ಈ ತಂತ್ರಗಾರಿಕೆಯನ್ನೇ ಪ್ರಜೆಗಳು ಪ್ರತಿ ಚುನಾ ವಣೆಯ ಸಂದರ್ಭದಲ್ಲಿ ಎಸೆಯಲಾಗುವ ತುಣುಕುಗಳ, ಪೊಳ್ಳು ಆಶ್ವಾಸನೆಗಳ, ಮಾಯಾ ನಗರಿಗಳ ಮತ್ತು ಭವಿಷ್ಯದ ಭ್ರಮೆಗಳ ನಡುವೆ ಕಾಣುತ್ತಿರುತ್ತಾರೆ. 75 ವರ್ಷಗಳಿಂದಲೂ ಇದೇ ಪರಂಪರೆಯನ್ನು ಮತದಾರ ರಾದ ನಾವು ಪೋಷಿಸುತ್ತಲೂ ಬಂದಿದ್ದೇವೆ ಅಲ್ಲವೇ ?

ಈ ಸನ್ನಿವೇಶದಲ್ಲಿ ನಮಗೆ ಮತದ ಮೌಲ್ಯ ಮುಖ್ಯವಾಗುತ್ತದೆ. ನಾವು ಚಲಾಯಿಸುವ ಮತ ಯಾರನ್ನು ಆಯ್ಕೆ ಮಾಡಲು ನೆರವಾಗುತ್ತದೆ ಎನ್ನುವುದಕ್ಕಿಂತಲೂ, ಆಯ್ಕೆಯಾ ಗುವ ವ್ಯಕ್ತಿ ಅಥವಾ ಪಕ್ಷ ನಮ್ಮ ಹಾಗೂ ಸುತ್ತಲಿನ ಸಮಾಜದ ದೈನಂದಿನ ಬದುಕಿಗೆ ಯಾವ ರೀತಿಯಲ್ಲಿ ಸ್ಪಂದಿಸಬಹುದು ಎಂಬ ಪ್ರಶ್ನೆ ನಮ್ಮನ್ನು ಕಾಡಬೇಕಿದೆ.

ಸರ್ವರಿಗೂ ಶಿಕ್ಷಣ ಎಂಬ ಉದಾತ್ತ ಘೋಷಣೆಯೊಂದಿಗೆ ವಾಜಪೇಯಿ ಸರ್ಕಾರ ಜಾರಿಗೊಳಿಸಿದ ಸರ್ವಶಿಕ್ಷಣ ಅಭಿಯಾನ ಎಷ್ಟರ ಮಟ್ಟಿಗೆ ಸಮಸ್ತ ಪ್ರಜೆಗಳಿಗೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿದೆ ಎಂಬ ಪ್ರಶ್ನೆ ನಮ್ಮನ್ನು ಕಾಡದೆ ಹೋದರೆ, ನಮಗೆ ಮತದ ಮೌಲ್ಯ ಅರಿವಾಗಿಲ್ಲ ಎಂದೇ ಅರ್ಥೈಸಬೇಕಾಗುತ್ತದೆ. ಹಸಿವು, ಬಡತನ, ಅನಕ್ಷರತೆ, ಅನೈರ್ಮಲ್ಯ, ಅನಾರೋಗ್ಯ ಮತ್ತು ನಿರುದ್ಯೋಗ-ಈ ಸಮಸ್ಯೆಗಳು ನಮ್ಮ ಸುತ್ತಲಿನ ಬೀದಿಗಳಲ್ಲೇ ತಾಂಡವಾಡುತ್ತಿರುವುದಕ್ಕೆ ಕಾರಣಗಳಾದರೂ ಏನು ಎಂಬ ಯೋಚಿಸುವ ವ್ಯವಧಾನವನ್ನು ಬೆಳೆಸಿಕೊಂಡರೆ ಮಾತ್ರವೇ ತಾನು ಚಲಾಯಿಸುವ ಪ್ರತಿಯೊಂದು ಮತದ ಮೌಲ್ಯವೂ ಮತದಾರನಿಗೆ ಅರ್ಥವಾಗುತ್ತದೆ.



“ ಮತದ ಮೌಲ್ಯ ಎಂದರೇನು, ಈ ಪ್ರಶ್ನೆ ಇಂದು ಪ್ರತಿಯೊಬ್ಬ ಶ್ರೀ ಸಾಮಾನ್ಯನನ್ನೂ ಕಾಡಬೇಕಿದೆ. ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯವೇ ಅಂತಿಮ ಎಂದಾದಲ್ಲಿ ಈ ಜನಾಭಿಪ್ರಾಯಕ್ಕೆ ತನ್ನದೇ ಆದ ಸ್ವಾಯತ್ತತೆಯೂ ಇರಬೇಕಲ್ಲವೇ?. ಈ ಸ್ವಾಯತ್ತತೆ ಮೂಡುವುದಾದರೂ ಹೇಗೆ? ಜನತೆಯಲ್ಲಿ ಸ್ವಂತ ಆಲೋಚನೆ, ಚಿಂತನೆ ಮತ್ತು ಅಭಿವ್ಯಕ್ತಿಯ ನೆಲೆಗಳು ಸ್ಪಷ್ಟವಾದಾಗ ಮಾತ್ರ ಇದು ಸಾಧ್ಯ. ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಜಾತಿ, ಧರ್ಮ ಮತ್ತು ಪ್ರಾದೇಶಿಕ ಅಸ್ಮಿತೆಗಳನ್ನೇ ಮಾರುಕಟ್ಟೆಯ ತಂತ್ರಗಳಂತೆ ಬಳಸಿಕೊಂಡು ಈ ಸ್ವಾಯತ್ತತೆಯ ನೆಲೆಗಳನ್ನು ಭ್ರಷ್ಟಗೊಳಿಸುತ್ತಿರುತ್ತವೆ. ಈ ತಂತ್ರಗಾರಿಕೆಯನ್ನೇ ಪ್ರಜೆಗಳು ಪ್ರತಿ ಚುನಾವಣೆಯ ಸಂದರ್ಭದಲ್ಲಿ ಎಸೆಯಲಾಗುವ ತುಣುಕುಗಳ, ಪೊಳ್ಳು ಆಶ್ವಾಸನೆಗಳ, ಮಾಯಾ ನಗರಿಗಳ ಮತ್ತು ಭವಿಷ್ಯದ ಭ್ರಮೆಗಳ ನಡುವೆ ಕಾಣುತ್ತಿರುತ್ತಾರೆ. 75 ವರ್ಷಗಳಿಂದಲೂ ಇದೇ ಪರಂಪರೆಯನ್ನು ಮತದಾರರಾದ ನಾವು ಪೋಷಿಸುತ್ತಲೂ ಬಂದಿದ್ದೇವೆ ಅಲ್ಲವೇ?

ಇದನ್ನು ಅರ್ಥಮಾಡಿಸುವ ಜವಾಬ್ದಾರಿ ಯಾರದು: ಮತದಾರ ಜಾಗೃತಿ ಎನ್ನುವ ಪರಿಕಲ್ಪನೆಯಲ್ಲಿ ಮೊಳೆಯುವ ಚಿಂತನೆಗಳಿಗೆ ಈ ಪ್ರಶ್ನೆಯೇ ಬುನಾದಿಯಾಗಬೇಕು. ಮತ-ಮತದಾರ ಮತ್ತು ಮತದಾನ ಈ ಮೂರೂ ವಿದ್ಯಮಾನಗಳ ಮೌಲ್ಯ ಅರ್ಥವಾಗಬೇಕಾದರೆ ಮೊದಲು ನಮಗೆ ಸಂವಿಧಾನದ ಆಶಯಗಳ ಅರಿವು ಅಗತ್ಯವಾಗಿ ಇರಬೇಕು. ಸಂವಿಧಾನವನ್ನು ಅರಿಯುವುದಕ್ಕೂ, ಸಾಂವಿಧಾನಿಕ ಆಶಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೂ ನಡುವೆ ಇರುವ ಸೂಕ್ಷ್ಮ ವ್ಯತ್ಯಾಸವನ್ನೂ ನಾವು ಅರಿತಿರಬೇಕು. ಏಕೆಂದರೆ ಪ್ರಸ್ತುತ ಸಂದರ್ಭದಲ್ಲಿ ನಾವೇ ನೋಡುತ್ತಿರುವಂತೆ, ಸಂವಿಧಾನದ ಚೌಕಟ್ಟಿನ ಒಳಗೇ ಈ ಆಶಯಗಳನ್ನು ಉಲ್ಲಂಘಿಸುವ ಕಾಯ್ದೆ ಕಾನೂನುಗಳು ಜಾರಿಯಾಗುತ್ತಿವೆ. ಹಾಗಾಗಿ ಮತದ ಮೌಲ್ಯವನ್ನು ಅಳೆಯಲು ಮಾಪನವಾಗಿ ಬಳಕೆಯಾಗಬೇಕಿರುವುದು ಸಂವಿಧಾನದ ಆಶಯಗಳು. ಇದನ್ನು ಉಲ್ಲಂಘಿಸಲು ನೆರವಾಗುವ ಪ್ರತಿಯೊಂದು ಮತವೂ ತನ್ನ ವಾಸ್ತವಿಕ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಹಾಗಾಗಿ ಮತದ ಮೌಲ್ಯ ಎಂದಾಗ ನಮಗೆ ಅಪಮೌಲೀಕರಣಕ್ಕೊಳಗಾಗುತ್ತಿರುವ ಶ್ರೀಸಾಮಾನ್ಯರ, ಸುಶಿಕ್ಷಿತರ ಮತಗಳು ಕಂಡುಬರುತ್ತವೆ. ತಮ್ಮ ಬದುಕು ರೂಪಿಸಿಕೊಳ್ಳಲು ಹಕ್ಕೊತ್ತಾಯಗಳಿಗಾಗಿ ಆಶ್ರಯಿಸುವ ಸೈದ್ಧಾಂತಿಕ ನೆಲೆಗಳನ್ನು ಚುನಾವಣೆಗಳ ಸಂದರ್ಭದಲ್ಲಿ ಧಿಕ್ಕರಿಸಿ, ಅದೇ ಹಕ್ಕುಗಳನ್ನು ಕಸಿದುಕೊಳ್ಳುವ ಪಕ್ಷಗಳಿಗೆ ಮತ ನೀಡುವ ಈ ಪ್ರಜ್ಞಾವಂತ ಮತದಾರರಲ್ಲಿ ಜಾಗೃತಿ ಮೂಡಿಸುವುದು ಆದ್ಯತೆಯೂ ಆಗಬೇಕಿದೆ. ಸಂವಿಧಾನದ ಆಶಯದಂತೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಅಡಿಪಾಯದ ಮೇಲೆ 75 ವರ್ಷಗಳ ಕಾಲ ಕೋಟ್ಯಂತರ ಜನರ ಪರಿಶ್ರಮದೊಂದಿಗೆ ನಿರ್ಮಿತವಾಗಿರುವ ಪ್ರಜಾಸತ್ತಾತ್ಮಕ ಭಾರತವನ್ನು ರಕ್ಷಿಸುವುದೆಂದರೆ ಸಾಂವಿ ಧಾನಿಕ ಆಶಯಗಳಾದ ಭ್ರಾತೃತ್ವ, ಸೌಹಾರ್ದತೆ ಮತ್ತು ಬಹುತ್ವವನ್ನು ಕಾಪಾಡುವುದೇ ಆಗಿದೆ. ಮತದಾರರಲ್ಲಿ ಜಾಗೃತಿ ಮೂಡಿಸುವುದೆಂದರೆ ಈ ಆಶಯಗಳನ್ನು ಸಾಕಾರಗೊಳಿಸುವ ವೇದಿಕೆ ನಿರ್ಮಿಸುವುದೇ ಆಗಿರುತ್ತದೆ. ಜನರು ಚಲಾಯಿಸುವ ಮತದ ಸ್ವಾಯತ್ತತೆ, ಮತದಾರನ ಸ್ವಂತಿಕೆ ಮತ್ತು ಮತದಾನದ ಪಾವಿತ್ರ್ಯತೆ ಈ ಮೂರೂ ವಿದ್ಯಮಾನಗಳನ್ನು ಆರಂಭದಲ್ಲಿ ಉಲ್ಲೇಖಿಸಿರುವ ಅಂಬೇಡ್ಕರ್ ಅವರ ಮಾತುಗಳ ಚೌಕಟ್ಟಿನೊಳಗಿಟ್ಟು ನೋಡಿದಾಗ ನಮಗೆ ಪ್ರತಿಯೊಂದು ಮತದ ಮೌಲ್ಯವನ್ನು ಅಳೆಯುವ ಮಾನದಂಡಗಳೂ ಸ್ಪಷ್ಟವಾಗುತ್ತವೆ. ಮತದಾರ ಜಾಗೃತಿಯ ಕಾರ್ಯಸೂಚಿಯಾಗಿ ನಾವು ಈ ಮಾನ ದಂಡಗಳನ್ನೇ ಅನುಸರಿಸಬೇಕಿದೆ. ಆಗಲೇ ಪ್ರಜಾಪ್ರಭುತ್ವದ ನೆಲೆಗಳನ್ನು ಸಂರಕ್ಷಿಸಲು ಸಾಧ್ಯ.